BROWEN BOOK ONLY

TEXT CUT WITHIN
THE BOOK ONLY

TEXT FLY WITHIN
THE BOOK ONLY

TEXT PROBLEM
WITHIN THE
BOOK ONLY

UNIVERSAL
LIBRARY
OU_198993
UNIVERSAL
LIBRARY

K83
G47Sct

K 2282

ఠాగూర్.

(గోరా-సండయ్యా సర్మగారు

**OSMANIA UNIVERSITY LIBRARY**

Call No. K83 G17 Accession No. K2282

Author

Title

This book should be returned on or before the date last marked below.

0·6·57

1961

20 JAN

# ಶೌರ್ಯ--ಸಂಜೀವನ.

ಅಥವಾ

# (ಸತ್ತ್ವಸಾರ,)

ರಜಪೂತರ ಐತಿಹಾಸಿಕ ಕಾದಂಬರಿ

೪ ನೆಯದು.

೧೯೩೩

ಲೇಖಕರು
ವೆ. ತಿ. ಗಳಗನಾಥರು.

— ಬೆಲೆ ೧-೮-೦ —

ಗಳಗನಾಥ ಸುರಸ ಗ್ರಂಥಮಾಲೆ ಧಾರವಾಡ.

ಪ್ರಕಾಶಕರು

ಎಸ್. ಎಂ. ಜೋಶಿ.

ಗಳಗನಾಥ ಸುರಸ ಗ್ರಂಥಮಾಲಾ ಧಾರವಾಡ.

ಮೊದಲನೆಯ ಮುದ್ರಣ ೧೯೧೫

ಎರಡನೆಯ ಮುದ್ರಣ

ಮೂರನೆಯ ಮುದ್ರಣ ೧೯೩೫

( ಈ ಪುಸ್ತಕದ ಎಲ್ಲ ಒಡೆತನವು ಪ್ರಕಾಶಕರಿಗೆ ಸೇರಿದೆ. )

ಮುದ್ರಕರು

ಎಸ್. ಎಂ. ಜೋಶಿ.

ಗಳಗನಾಥ ಮುದ್ರಣಾಲಯ ಧಾರವಾಡ.

# ಪ್ರಸ್ತಾವನೆ.

ಧರ್ಮವು ಹಿಂದೂ ಜನರ ಪ್ರಾಣವು. ಅಂತೇ ಧರ್ಮಸ್ವಾತಂತ್ರ್ಯವನ್ನೊದಗಿಸಿಕೊಡುವ ರಾಜನನ್ನು ಅವರು "ನಾವಿಷ್ಣುಃ ಪೃಥಿವೀಪತಿಃ" ಎಂಬ ಮನುವಿನ ಉಕ್ತಿಯಂತೆ, ದೇವರೆಂದು ಭಾವಿಸಿ, ರಾಜನಿಷ್ಠೆಯಿಂದ ನಡಕೊಳ್ಳುತ್ತ ಬಂದಿರುವರು. ಅವರ ಈ ಸ್ವಾಭಾವಿಕ ಧರ್ಮವು ನಮ್ಮ ಸರಕಾರದ ಪ್ರಜೆಗಳೆನಿಸಿಕೊಳ್ಳುವ ಯಾವತ್ತು ಕನ್ನಡಿಗರಸ್ಮರಣಕ್ಕೆ ಈಗ ಉಜ್ವಲವಾಗಿ ಬರಲವಶ್ಯವೆಂದು ತಿಳಿದು, "ಸತ್ವಸಾರ"ವೆಂಬ ಹೆಸರಿನ ಈ ಕಾದಂಬರಿಯನ್ನು ಬುದ್ಧಿಪೂರ್ವಕವಾಗಿ ಬರೆದಿರುತ್ತದೆ. ರಾಜ-ಪ್ರಜೆಗಳಿಬ್ಬರೂ ಏಕಜೀವರಾಗಿ, ತಮ್ಮ ಗೌರವಕ್ಕೆ ಭಂಗವನ್ನುಂಟು ಮಾಡುವ ಪ್ರಬಲ ಶತ್ರುವಿನೊಡನೆ ನಷ್ಟ-ಕಷ್ಟಗಳನ್ನು ಲೆಕ್ಕಿಸದೆ, ಕಾದಿ ಜಯಹೊಂದಿದ ಉದಾಹರಣವನ್ನು ಈ ಕಾದಂಬರಿಯಲ್ಲಿ ಕಾಣಬಹುದು. ರಾಣಾಪ್ರತಾಪಸಿಂಹನ ಸಲುವಾಗಿ ಮೇವಾಡದ ಪ್ರಜೆಗಳೂ, ಮೇವಾಡದ ಪ್ರಜೆಗಳ ಸಲುವಾಗಿ ರಾಣಾ ಪ್ರತಾಪಸಿಂಹನೂ ಪಟ್ಟ ಕಷ್ಟವು, ಸಂಸ್ಮರಣೀಯವಾದದ್ದೇ ಸರಿ. ಅವರಿಬ್ಬರು ಪರಸ್ಪರರ ಸಲುವಾಗಿ ಮಾಡಿದ ಸ್ವಾರ್ಥತ್ಯಾಗವು ಅನುಕರಣೀಯವಾದದ್ದೇ ಸರಿ. ಮಹಾರಾಣಾ ಪ್ರತಾಪಸಿಂಹನು ನಿರಾಧಾರನಾಗಿ ಆಶೆದೊರೆದು ಪರಮದುಃಖದಿಂದ ದೇಶಾಂತರಕ್ಕೆ ಹೊರಟಾಗ, ಆತನ ಮಂತ್ರಿಯಾದ ಭಾಮಾನು ಆಯಾಚಿತವಾಗಿ ತನ್ನ ಅರಸನಿಗೆ ಸರ್ವಸ್ವವ ಅರ್ಪಿಸಿದ್ದನ್ನು ನೋಡಿ, ಯಾವಸ್ವಾಮಿಭಕ್ತನ ಹೃದಯವು ಉಕ್ಕಿಬರಲಿಕ್ಕಿಲ್ಲ! ಇಂಥ ಪವಿತ್ರ ರಾಜನಿಷ್ಠೆಯುಳ್ಳ ಪ್ರಜೆಗಳೇ ಪ್ರಜೆಗಳು!

ಸರಕಾರದ ಅಧೀನದಲ್ಲಿರುವ ನಮಗೆ, ಪ್ರತಾಪನ ಪ್ರಜೆಗಳಂತೆ ದೇಶತ್ಯಾಗಮಾಡುವ ಪ್ರಸಂಗಬರಲಾರದು. ಪ್ರಸಂಗಬಂದಲ್ಲಿ ನಮ್ಮ ಸಲುವಾಗಿ ನಾವು ಪ್ರತಾಪನ ಪ್ರಜೆಗಳಿಗಿಂತಲೂ ಹೆಚ್ಚು ಕಷ್ಟಪಡಲಿಕ್ಕೆ ಸಿದ್ಧರಾಗಿರುವದು

ಪ್ರಜೆಗಳ ಧರ್ಮವೆಂಬದನ್ನು ನಾವು ನೆನಪಿನಲ್ಲಿಡಬೇಕು. ನಮ್ಮ ದೇಶದ ಶಾಂತತೆಯ ಸಲುವಾಗಿ ಬಹುಜನರ ಪ್ರಾಣಾಹುತಿಯು ಪ್ರತಿನಿತ್ಯ ಆಗುತ್ತಿರುವದನ್ನೂ, ಧನವ್ಯಯವು ನೀರಿನಹಾಗೆ ಒಂದೇಸವನೆ ನಡೆದಿರುವದನ್ನೂ ಸ್ಮರಿಸಿ, ನಾವು ಸರಕಾರಕ್ಕೆ ಸಹಾಯಮಾಡಲು ಸದಾ ಸಿದ್ಧರಾಗಿರಬೇಕು!!

ಈ ಕಾದಂಬರಿಗೆ ಬೇಕಾಗುವ ಮೂಲಧನವನ್ನೂ, ಕರ್ನಲ್ ಟಾಡ್ ಸಾಹೇಬರವರ "ರಾಜಸ್ಥಾನದ ಇತಿಹಾಸ" "ಜೀವನಸಂಧ್ಯಾ" "ಹಳದೀ ಘಾಟದಯುದ್ಧ" ಎಂಬ ಮೂರು ಮಹಾರಾಷ್ಟ್ರ ಪುಸ್ತಕಗಳೊಳಗಿಂದ ಸಂಪಾದಿಸಿರುತ್ತದೆ. ಪ್ರಸಂಗದಲ್ಲಿ ವಾಚಕರಿಗೆ ಸದ್ಬೋಧಕ್ಕೆ ಆಸ್ಪದವು ದೊರೆಯಬೇಕೆಂದು, ಪ್ರತಾಪಸಿಂಹನಲ್ಲಿದ್ದ ಸತ್ವವನ್ನು ಸಾತ್ವಿಕೆಯೆಂತಲೂ, ಆತನು ಆಚರಿಸಿದ ತಪಸ್ಸನ್ನು ತಪೋಧನನೆಂತಲೂ ಕರೆದು, ಆ ಎರಡು ಕಾಲ್ಪನಿಕ ಪಾತ್ರಗಳ ದಾಂಪತ್ಯವನ್ನು ಪ್ರಧಾನ ಪಾತ್ರಗಳಾಗಿಯೋಜಿಸಿರುತ್ತದೆ. ಇದರ ಹೊರತು ಇತಿಹಾಸಕ್ಕೆ ವಿರುದ್ಧವಾದ ಸಂಗತಿಯು, ಈ ಕಾದಂಬರಿಯಲ್ಲಿ ಬಹುತರ ವರ್ಣಿಸಲ್ಪಟ್ಟಿಲ್ಲವೆಂದು ಹೇಳಲಿಕ್ಕೆ ಬಾಧಕವಿಲ್ಲ. ಈ ಕಾದಂಬರಿಯಿಂದ ಸುನೀತಿಗೆ ಬಹುಮಟ್ಟಿಗೆ ಆಸ್ಪದವು ದೊರೆಯಬಹುದೆಂದು ಲೇಖಕನು ನಂಬಿರುತ್ತಾನೆ. ಕಾದಂಬರಿಯ ಯೋಗದಿಂದ ಆಗಬಹುದಾದ ಮನೋರಂಜನವೂ ಇದರಿಂದ ಆಗುವದೆಂದು ಆತನು ತಿಳಿದಿರುವನು, ಈ ಎಲ್ಲದರ ಅನುಭವವನ್ನು ಪಡೆಯುವದು ವಾಚಕರ ಕೆಲಸವು. "ಕ್ರಿಯಾಸಿದ್ಧಿಃ ಸತ್ತ್ವೇಭವತಿಮಹತಾಂ ನೋಪಕರಣೇ" ಎಂಬ ಉಕ್ತಿಯಂತೆ, ಮಹಾತ್ಮರ ಸತ್ವದಿಂದಲ್ಲದೆ, ಕೇವಲ ದ್ರವ್ಯಾದಿ ಉಪಕರಣಗಳಿಂದ ಕಾರ್ಯವಾಗುವದಿಲ್ಲೆಂತಲೂ, ಸತ್ವವನ್ನು ಕಾಯ್ದುಕೊಳ್ಳುವವನು ಸದಾ ತಪಸ್ವಿಯಾಗಿರಬೇಕೆಂತಲೂ, ವಾಚಕರು ಕೆಲಮಟ್ಟಿಗಾದರೂ ಅರಿತುಕೊಂಡರೆ, ಲೇಖಕನ ಶ್ರಮದ ಸಾರ್ಥಕವಾದಂತಾಗುವದು. ಅಂಥ ಸುಯೋಗವನ್ನು ಸದ್ಗುರುವು ತಂದುಕೊಡಲಿ!

ಆನಂದವನ ಅಗಡಿ. ಕನ್ನಡಿಗರ ಸೇವಕ

ತಾ. ೮—೫—೧೫ ವೆ. ತಿ. ಗಳಗನಾಥ

# ಶೌರ್ಯ-ಸಂಜೀವನ.

ಅಥವಾ

## ಸತ್ವಸಾರ,

೧ನೆಯ ಪ್ರಕರಣ

## ಪೂರ್ವವೃತ್ತ.

ಭಾಗ್ಯಶಾಲಿಯಾದ ಭರತಖಂಡದಲ್ಲಿ ಈವೊತ್ತಿನ ವರೆಗೆ ಅನೇಕ ಕ್ಷತ್ರಿಯವಂಶಗಳು ಉದಯಹೊಂದಿದ್ದರೂ, ಅವು ಒಂದಿಲ್ಲೊಂದು ಕಾರಣದಿಂದ ಹೆಚ್ಚು ಕಡಿಮೆ ಕಲಂಕಿತವಾಗಿರುತ್ತವೆ; ಆದರೆ ಮೇವಾಡದ 'ಸಿಸೋದಿಯಾ' ಕ್ಷತ್ರಿಯ ವಂಶವು ಮಾತ್ರ ಸರ್ವಥಾ ನಿಷ್ಕಲಂಕವಾಗಿರುವದು. ಅಂತೇ ಅದರ ಕೀರ್ತಿಧ್ವನಿಯು ಇಂದಿಗೂ ಜಗತ್ತಿನಲ್ಲಿ ಎಲ್ಲ ಕಡೆಗೆ ಕೇಳುತ್ತಿರುವದು. ಈ ಪವಿತ್ರ ವಂಶವು ಶ್ರೀ ಸೂರ್ಯನಾರಾಯಣನಿಂದ ಆರಂಭವಾಗಿದ್ದು, ಅದು "ಇಕ್ಷ್ವಾಕುವಂಶ" "ರಘುವಂಶ" ಎಂಬ ಹೆಸರುಗಳಿಂದ ಜಗಪ್ರಸಿದ್ಧವಾಗಿರುತ್ತದೆ. ಇಕ್ಷ್ವಾಕುವಿನಿಂದ ಐವತ್ತೆಂಟನೆಯ ತಲೆಯವನು ಶ್ರೀ ರಾಮಚಂದ್ರನು. ಆ ಅವತಾರಿಕ ಪ್ರಭುವಿನ ಇತಿಹಾಸ ಗ್ರಂಥವಾದ ಶ್ರೀಮದ್ರಾಮಾಯಣದ ಹೆಸರನ್ನು ಯಾವ ಭಾರತೀಯನು ಕೇಳಿರುವದಿಲ್ಲ?

ಆ ಶ್ರೀರಾಮನಿಂದ ೭೯ ತಲೆಗಳಾದ ಮೇಲೆ ಬಾಪ್ಪಾರಾವಳನೆಂಬ ಮಹಾ ಪ್ರತಾಪಿಯು ಕ್ರಿ. ಶ. ೭೫೩ನೇ ಇಸ್ವಿಯ ಸುಮಾರಿನಲ್ಲಿ ಆಗಿಹೋದನು. ಈತನು ತೀರ ಹೀನ ಸ್ಥಿತಿಯಿಂದ ಉತ್ಕರ್ಷವನ್ನು ಹೊಂದಿದನು. ಈ ವೀರನು ಚಿತೋಡದ ರಾಜ್ಯವನ್ನು ಸಂಪಾದಿಸಿದ್ದಲ್ಲದೆ, ಇರಾಣ—ತುರಾಣ—ಇಸ್ಪಹಾನ—ಕಂದಹಾರ—ಕಾಶ್ಮೀರ ಮೊದಲಾದ ಹಲವು ದೇಶಗಳನ್ನು ಗೆದ್ದಿದ್ದನು. ಈತನು ತಾನು ಸೋಲಿಸಿದ ಅರಸರ ಒಬ್ಬೊಬ್ಬ : ಮಗಳನ್ನು ಲಗ್ನವಾಗಿದ್ದನು. ಈತನಿಗೆ ಹಿಂದು—ಮುಸಲ್ಮಾನ ಹೆಂಡಿರಿಂದ ಕೂಡಿ, ಒಟ್ಟಿಗೆ ೧೩೦ ಮಂದಿ ಗಂಡುಮಕ್ಕಳಿದ್ದರು. ಅವರಲ್ಲಿ ೯೮ ಮಂದಿ ಹಿಂದೂರಾಣಿಯರಿಂದಲೂ, ೩೨ ಮಂದಿ ಮುಸಲ್ಮಾನ ರಾಣಿಯರಿಂದಲೂ ಹುಟ್ಟಿದ್ದರು. ಹಿಂದೂ ರಾಜಪುತ್ರರಿಗೆಲ್ಲ “ಸೂರ್ಯವಂಶಿಯ ಅಗ್ನ್ಯುಪಾಸಕರೆ”ಂಬ ಹೆಸರು ಇತ್ತು. ಮುಸಲ್ಮಾನ ರಾಜಪುತ್ರರನ್ನು “ನೈರ್ಷೆಯ ಪಠಾಣ”ರೆಂದು ಕರೆಯುತ್ತಿದ್ದರು. ಆ ಮುಸಲ್ಮಾನ ರಾಜಪುತ್ರರು ತಮ್ಮ ತಾಯಂದಿರ ಹೆಸರಿನಿಂದ ಬೇರೆ ಬೇರೆ ಜಾತಿಗಳನ್ನು ಬೇರೆ ಬೇರೆ ಕಡೆಯಲ್ಲಿ ಸ್ಥಾಪಿಸಿದರು.

ಬಾಪ್ಪಾರಾವಳನು ನೂರುವರ್ಷ ಬಾಳಿ ಮರಣಹೊಂದಿದನು. ಈ ನರವೀರನಿಗೆ “ಹಿಂದುಕಾ ಸೂರಜ” (ಹಿಂದುಗಳ ಸೂರ್ಯ) “ರಾಜಗುರು” “ಚಕವಾ” (ಚಕ್ರವರ್ತಿ) ಎಂಬ ಹೆಸರುಗಳಿದ್ದವು. ಶಿವಾಜಿಮಹಾರಾಜನು ಈ ಬಾಪ್ಪಾರಾವಳನ ವಂಶಜನೆಂದು ಗೊತ್ತಾಗಿದೆ. ಈ ಬಾಪ್ಪಾನ ವಂಶದಲ್ಲಿ ಸದ್ಗುಣಿಗಳೂ, ನಿಸ್ಪೃಹಿಗಳೂ, ಆದ ಬಹುಜನ ರಾಜಪುತ್ರರು ಆಗಿಹೋದರು. ಅವರಲ್ಲಿ ಉದಾಹರಣಾರ್ಥವಾಗಿ ‘ಚೋಂಡಾ’ ಎಂಬವನ ಸೌಜನ್ಯವನ್ನು ಹೇಳುವಾ. ಆತನು ಭಿಷ್ಮಾಚಾರ್ಯರಂತೆ ತನ್ನ ವೃದ್ಧ ತಂದೆಯ ಲಗ್ನದ ಸಲುವಾಗಿ ತನ್ನ ರಾಜ್ಯಾಧಿಕಾರದ ಹಕ್ಕನ್ನು ಬಿಟ್ಟುಕೊಟ್ಟು, ತನ್ನ ಮಲ ತಮ್ಮನಾದ “ಮೋಕಲ”ನೆಂಬ ಐದುವರ್ಷದ ರಾಜಪುತ್ರನನ್ನು ಪಟ್ಟಕ್ಕೆ ಕುಳ್ಳಿರಿಸಿ, ಆತನ ಹೆಸರಿನಿಂದ ನಿಸ್ಪೃಹನಾಗಿ ರಾಜ್ಯವಾಳಹತ್ತಿದನು. ಇದು ಮುಂದೆ ಆತನ ಮಲತಾಯಿಯ ಮನಸ್ಸಿಗೆ ಬಾರದ್ದರಿಂದ, ಚೋಂಡಾನು ನಿರ್ಮಾತ್ಸರ್ಯದಿಂದ ದೇಶತ್ಯಾಗಮಾಡಿ ಹೊರಟುಹೋದನು. ಕೆಲವು ದಿವಸಗಳ ಮೇಲೆ ಆತನ ಮಲತಾಯಿಗೆ ಆಕೆಯ ತವರಮನೆಯಿಂದ ಮಹಾ ಸಂಕಟವು ಒದಗಲು, ಆಕೆಯು ಚೋಂಡಾನಿಗೆ

ಸಹಾಯ ಮಾಡಬೇಕೆಂದು ಹೇಳಿ ಕಳಿಸಿದಳು. ಆಗ ಚೋಂಡಾನು ಹಿಂದಿನ ಯಾವ ಮಾತನ್ನೂ ಮನಸ್ಸಿನಲ್ಲಿ ಹಿಡಿಯದೆ, ಮಲತಾಯಿಯ ಬಳಿಗೆ ಹೋಗಿ, ಆಕೆಯ ಸಂಕಟವನ್ನು ದೂರಮಾಡಿ, ತಮ್ಮನು ದೊಡ್ಡವನಾಗುವ ವರೆಗೆ ನಿಸ್ಪೃಹದಿಂದ ಮತ್ತೆ ರಾಜ್ಯವಾಳಿದನು. ಆ ಮೇಲೆ ಆ ಮಾತಾ-ಪಿತೃ ಭಕ್ತನು ತಾಯಿಯ ಅಪ್ಪಣೆಯನ್ನು ಪಡೆದು, ಎರಡನೆಯ ಕಡೆಗೆ ಹೋರಟುಹೋಗಿ, ತನಗಾಗಿ ಹೊಸದೊಂದು ಸಂಸ್ಥಾನವನ್ನು ಸ್ಥಾಪಿಸಿ ಕೊಂಡನು.

ಈ ಮೇರೆಗೆ ಬಾಪ್ಪಾರಾವಳನ ವಂಶಜರು ಮಹಾ ಪ್ರತಾಪಿಗಳೂ, ಸದ್ಗುಣಮಂಡಿತರೂ ಆಗಿದ್ದರಲ್ಲದೆ, ಕೆಲವರು ವಿದ್ವಾಂಸರೂ, ಕವಿಗಳೂ, ಭಗವದ್ಭಕ್ತರೂ ಆಗಿದ್ದರು. ಶೂರನಾದ ಕುಂಭೋ ರಾಣಾನು ರಸಿಕ ಕವಿಯು, ಮೇಲೆ ಭಗವದ್ಭಕ್ತನು. ಆತನ ಹೆಂಡತಿಯಾದ ಮೀರಾಬಾಯಿ ಯೆಂಬವಳಂತೂ ಮಹಾ ಭಗವದ್ಭಕ್ತಳು. ಆಕೆಯ ಕೀರ್ತಿಯು ಭರತ ಖಂಡದಲ್ಲೆಲ್ಲ ಈವೊತ್ತಿಗೂ ಪ್ರಸಿದ್ಧವಾಗಿರುವದು. ಇದೇ ಮೇರೆಗೆ ಹಮ್ಮೀರ ಸಂಗರಾಜರಂಥ ಪ್ರಸಿದ್ಧ ರಣಶೂರರೂ, ಸಜ್ಜನಸಿಂಹನಂಥ ಪಿತೃಭಕ್ತರೂ ಬಾಪ್ಪಾರಾವಳನ ವಂಶದಲ್ಲಿ ಬಹು ಜನರಾದರು. ಈ ಪೂಜ್ಯವಾದ ಮನೆ ತನದಲ್ಲಿ ಗುಣಹೀನರು, ಅಪವಾದದಂತೆ ಬಹು ಸ್ವಲ್ಪ ಜನರಾದರೆಂದು ಹೇಳಬಹುದು. ಅವರಲ್ಲಿ ಬಾಪ್ಪಾರಾವಳನಿಂದ ೪೨ನೆಯ ತಲೆಯವನು, ಅಥವಾ ಇಕ್ಷ್ವಾಕುವಿನಿಂದ ೧೪೦ನೆಯ ತಲೆಯವನಾದ ಸಂಗರಾಜಪುತ್ರ ಉದಯಸಿಂಗನೇ ಮುಖ್ಯನು. ಬಾಪ್ಪಾರಾವಳನ ವಂಶದಲ್ಲಿ ಯಶಶ್ಚಂದ್ರಮ ನಿಗೆ ಕಲಂಕರೂಪವಾಗಿ ಒಪ್ಪುವ ಈ ಉದಯಸಿಂಗನು ತೀರ ಹೇಡಿಯಾಗಿ ದ್ದನು. ದಿಲ್ಲಿಯ ಪ್ರಸಿದ್ಧ ಅಕಬರ ಬಾದಶಹನ ಸಂಗಡ ಹೋರಾಡುವ ಪ್ರಸಂಗವು ಆತನಿಗೆ ಒದಗಿದ್ದರಿಂದಂತು, ಆತನ ಹೇಡಿತನವು ಹೆಚ್ಚು ನಿಚ್ಚಳ ವಾಗಿ ಕಂಡಿತೆಂದು ಹೇಳಬಹುದು. ಅಕಬರನೂ ಉದಯಸಿಂಗನೂ ಓರಿಗೆ ಯವರಾಗಿದ್ದರು. ಅಕಬರನು ಎರಡುಸಾರೆ ಚಿತ್ತೂರನ್ನು ಮುತ್ತಿದನು. ಆಗ ಉದಯಸಿಂಗನು ಹೇಡಿತನದಿಂದ ಓಡಿಹೋದರೂ, ಆತನ ಪಕ್ಷದ ರಜಪೂತ ಸರದಾರರು ಚಿತ್ತೂರ ಸಂರಕ್ಷಣಕ್ಕಾಗಿ ಶೌರ್ಯದಿಂದ ಹೋರಾಡಿ ದರು; ಆದರೆ ಅಕಬರ ಬಾದಶಹನ ಮುಂದೆ ಅವರ ಆಟವು ನಡೆಯಲಿಲ್ಲ.

ಉದೇಸಿಂಗನ ಪಲಾಯನದ ಸಂಗಡಲೇ ಚಿತ್ತೂರಿನ ಶೋಭಾ-ಕೀರ್ತಿಗಳೆಂಬ ಇಬ್ಬರು ಸ್ತ್ರೀಯರು ವಿಧವೆಯರಾದರೆಂದು ಜನರು ಅನ್ನಹತ್ತಿದರು. ಬಾದಶಹನು ಕಡೆಗೆ ಚಿತ್ತೂರ ಕೋಟೆಯನ್ನು ತಕ್ಕೊಂಡನು.

ಉದೇಸಿಂಗನ ಹೇಡಿತನದಿಂದ, ರಜಪೂತ ಸ್ಥಾನದ ಬೇರೆ ಸಂಸ್ಥಾನಿಕರ ಪ್ರೇಮವು ಮೇವಾಡದ ಮನೆತನದ ಮೇಲೆ ಕಡಿಮೆಯಾಗಹತ್ತಿತು. ಅತ್ತ ಅಕಬರನಂಥ ಅಲೌಕಿಕ ಯೋಗ್ಯತೆಯ ಬಾದಶಹನು ಸಾಮೋಪಚಾರ-ಅಧಿಕಾರದ ಆಶೆ-ಬೆದರಿಕೆ ಇವುಗಳ ಯೋಗದಿಂದ ಒಬ್ಬೊಬ್ಬರಂತೆ ರಜಪೂತ ಸಂಸ್ಥಾನಿಕರನ್ನು ತನ್ನ ಕಡೆಗೆ ಜಗ್ಗಿಕೊಳ್ಳಹತ್ತಿದನು. ಎಷ್ಟೋ ರಜಪೂತ ಸಂಸ್ಥಾನಿಕರು ಅಭಿಮಾನದೊರೆದು, ತಮ್ಮ ಮನೆತನದ ಕನ್ನಿಕೆಯರನ್ನು ಅಕಬರ ಬಾದಶಹನ ಮನೆತನಕ್ಕೆ ಕೊಟ್ಟು ಶರೀರ ಸಂಬಂಧ ಮಾಡಿದರು. ಹೀಗಾಗಿ ಉದೇಸಿಂಗನಿಗೆ ಮನುಷ್ಯ ಬಲವು ಕಡಿಮೆಯಾಯಿತು. ಆತನು ಚಿತ್ತೂರನ್ನು ಬಿಟ್ಟು ಓಡಿಹೋದ ಮೇಲೆ ಉದೇಪುರದಲ್ಲಿ ಇರಹತ್ತಿದನು. ಮುಂದೆ ನಾಲ್ಕು ವರ್ಷಗಳ ಮೇಲೆ ಆತನು 'ಗೋಗುಂಡಾ' ಎಂಬ ಊರಲ್ಲಿ ಫಾಲ್ಗುಣ ಪೌರ್ಣಿಮೆಯ ದಿವಸ ಮರಣ ಹೊಂದಿದನು. ಆಗ ಅವನಿಗೆ ೪೨ ವರ್ಷಗಳಾಗಿದ್ದವು. ಆತನಿಗೆ ೨೫ ಮಂದಿ ಮಕ್ಕಳಿದ್ದರು. ಉದೇಸಿಂಗನ ತರುವಾಯ, ಆತನು ಸಾಯುವಾಗ ಹೇಳಿದಂತೆ ಜಗಮಲ್ಲನೆಂಬ ರಾಜಪುತ್ರನು ಪಟ್ಟವೇರಿದನು. ಅರಸನು ಮರಣಹೊಂದಲು, ಆತನ ಕುಟುಂಬದಲ್ಲಿ ಸೂತಕ ಮಾಡದೆ ಹೊಸ ಅರಸನ ರಾಜ್ಯಾರೋಹಣ ಸಮಾರಂಭ ನಡಿಸುವದು ರಜಪೂತರ ಸಾಂಪ್ರದಾಯವಿರುತ್ತದೆ. ಅದರಂತೆ ಉದೇಸಿಂಗನ ಶವವನ್ನು ಸ್ಮಶಾನಕ್ಕೆ ಒಯ್ದು ದಹನ ಕ್ರಿಯೆಯನ್ನು ನಡೆಸಿರಲು, ಇತ್ತ ರಾಜಮಂದಿರದಲ್ಲಿ ಜಗಮಲ್ಲನನ್ನು ಪಟ್ಟಕ್ಕೆ ಕುಳ್ಳಿರಿಸುವ ಸಮಾರಂಭವು ನಡೆದಿತ್ತು; ಆದರೆ ಹಿರಿಯ ಮಗನಿಗೆ ಪಟ್ಟವಾಗಬೇಕೆಂಬ ರಜಪೂತರ ವಂಶಪರಂಪರಾಗತ ಸಾಂಪ್ರದಾಯದಂತೆಯೂ, ಧರ್ಮಶಾಸ್ತ್ರದಂತೆಯೂ ಜಗಮಲ್ಲನು ಪಟ್ಟಕ್ಕೆ ಕುಳಿತುಕೊಳ್ಳುವದು ನ್ಯಾಯವಾಗಿದ್ದಿಲ್ಲ; ಆದ್ದರಿಂದ ಮುಖ್ಯ ಮುಖ್ಯ ರಜಪೂತ ಸರದಾರರೂ, ಪ್ರಜೆಗಳೂ ಅಸಮಾಧಾನಪಟ್ಟು, ಹಿರಿಯ ಮಗನಾದ ಪ್ರತಾಪಸಿಂಹನು ಉದೇಪುರದ ಸಿಂಹಾಸನವೇರಬೇಕೆಂದು ಇಚ್ಛಿಸಹತ್ತಿದರು; ಆದರೆ ಪ್ರತಾಪನು ತಂದೆಯ ಇಚ್ಛೆಗೆ

ವಿರುದ್ಧವಾಗಿ ನಡೆಯಲಿಚ್ಛಿಸದೆ, ಅಶ್ವಾರೂಢನಾಗಿ ಉದೇಪುರದಿಂದ ಹೊರಟು ಹೋಗಹತ್ತಿದನು.

ಹೀಗಿರುವಾಗ ಚಂದಾವತ ಕೃಷ್ಣರಾವುತನೂ, ಗ್ವಾಲ್ಹೇರದ ಪದಭ್ರಷ್ಟ ರಾಜನಾದ ರಾಮಸಾತುವರನೂ ಪ್ರತಾಪಸಿಂಹನನ್ನು ಅಡ್ಡಗಟ್ಟಿದರು. ಕೃಷ್ಣರಾವುತನು ವಿನಯದಿಂದ ಪ್ರತಾಪಸಿಂಹನನ್ನು ಕುರಿತು—ಮೇವಾಡದ ಕುಲದೀಪಕರಾದ ಮಹಾ ಪ್ರಭುಗಳೇ, ತಾವು ದೀನರಾಗಿ ಈ ದರಿದ್ರ ವೇಷ ದಿಂದ ಎತ್ತ ಕಡೆಗೆ ಸಾಗಿರುವಿರಿ? ನಾವು ಬದುಕಿರುವವರೆಗೆ ಸಿಂಹದ ಪಾಲನ್ನು ನರಿಗೆ ಮುಟ್ಟಗೊಡಲಾರೆವು. ಈವೊತ್ತಿನಿಂದ ತಮ್ಮನ್ನು ನಾವು ಮಹಾರಾಜರೆಂದು ಕರೆಯುವೆವು. ಮಹಾರಾಜರೇ, ಬೇಗನೆ ಹಿಂದಿರು ಗಿರಿ; ಒಮ್ಮೆ ಮೇವಾಡದ ಸಿಂಹಾಸನವನ್ನೇರಿ, ಯಾವತ್ತು ಸಾಮಂತ ರನ್ನೂ, ಸರದಾರರನ್ನೂ, ಪ್ರಜೆಗಳನ್ನೂ ಸಂತೋಷಗೊಳಿಸಿರಿ. ಮೇವಾಡ ವನ್ನು ಅನಾಥವಾಗಿ ಮಾಡಿ ಹೋಗುವದು ಸರಿಯಲ್ಲ, ಅನ್ನಲು ಪ್ರತಾಪನು ಆಶ್ಚರ್ಯದಿಂದ ಕೃಷ್ಣರಾವುತನನ್ನು ಕುರಿತು—ಸರದಾರಶ್ರೇಷ್ಠರೇ, ನಿಮ್ಮ ಈ ಮಾತುಗಳನ್ನು ಕೇಳಿ ನನಗೆ ಬಹಳ ಆಶ್ಚರ್ಯವಾಗಿದೆ. ನನ್ನ ತಂದೆಯ ಇಚ್ಛೆಯಂತೆ ನನ್ನ ಬಂಧುವಾದ ಜಗಮಲ್ಲನು ಸಿಂಹಾಸನವೇರಿರಲು, ನಾನು ಮಹಾರಾಜನೆನಿಸಿಕೊಳ್ಳುವ ಬಗೆ ಹ್ಯಾಗೆ? ಗೃಹಕಲಹದಿಂದ ಸಿಸೋದಿಯಾ ಕುಲಕ್ಕೆ ಕಲಂಕವನ್ನುಂಟು ಮಾಡಬಹುದೋ? ಸಿಸೋದಿಯರಿಗೆ ತಂದೆಯ ಆಜ್ಞೆಗಿಂತಲೂ ಸಿಂಹಾಸನವು ಪ್ರಿಯವಲ್ಲ. ಹೋಗಿರಿ, ನೀವೆಲ್ಲರೂ ಸ್ವಾಮಿಭಕ್ತಿಯಿಂದ ಜಗಮಲ್ಲನನ್ನು ಸೇವಿಸಿ, ನಮ್ಮ ಪವಿತ್ರ ಕುಲದ ಗೌರವ ವನ್ನು ಕಾಯ್ದುಕೊಳ್ಳಿರಿ, ಎಂದು ಹೇಳಿದನು. ಅದಕ್ಕೆ ಕೃಷ್ಣರಾವುತನು— "ಮಹಾ ಪ್ರಭುಗಳೇ, ತಮ್ಮ ಅಪ್ಪಣೆಯನ್ನು ನಾವು ಮನ್ನಿಸದೆ ಬದಲು ಮಾತಾಡುವ ಬಗ್ಗೆ ಕ್ಷಮಿಸಬೇಕು. ಉದಯಸಿಂಗ ಮಹಾರಾಣಾನವರು ನಿಮ್ಮ ತಾಯಿಂದಿರಾದ ಸೋನಿಗಡದ ರಾಜಕನ್ನೆಯವರನ್ನು ಲಗ್ನವಾಗುವ ಕಾಲಕ್ಕೆ ಅವರ ಹೊಟ್ಟೆಯಲ್ಲಿ ಹುಟ್ಟುವ ಕುಮಾರನಿಗೇ ಪಟ್ಟಗಟ್ಟುವೆವೆಂದು ವಚನ ಕೊಟ್ಟಿದ್ದಾರೆ. ಆದರಂತೆ ತಾವು ಆ ಮಾತೆಯವರ ಉದರದಲ್ಲಿ ಜನಿ ಸಿದವರಿರುವದರಿಂದ ತಂದೆಯ ವಚನದಂತೆ ಪಟ್ಟಕ್ಕೆ ಬಾಧ್ಯಸ್ಥರಾಗಿರುವಿರ ಲ್ಲದೆ, ಮಹಾರಾಣಾನವರ ಜ್ಯೇಷ್ಠಪುತ್ರರೂ ಆಗಿರುತ್ತೀರಿ. ಮಹಾರಾಣಾ

ನವರು ಮರಣಕಾಲದಲ್ಲಿ ಮೋಹಪರವಶರಾಗಿ ಕೊಟ್ಟ ಅಪ್ಪಣೆಗಿಂತ, ಅವರು ಪ್ರೌಢಾವಸ್ಥೆಯಲ್ಲಿವಿಚಾರಪೂರ್ವಕವಾಗಿ ಕೊಟ್ಟ ವಚನವು ಮಹತ್ವದ್ದಾಗಿರುತ್ತದೆ. ತಂದೆಯ ಈ ಮಹತ್ವದ ವಚನವನ್ನು ಪಾಲಿಸುವದು ಅವಶ್ಯವೆಂಬ ಮಾತನ್ನು ಶ್ರೀ ರಾಮಚಂದ್ರನ ವಂಶಜರಾದ ತಮಗೆ ನಾವು ಹೇಳಲವಶ್ಯವಿಲ್ಲ. ಪುತ್ರರಾದ ನಿಮ್ಮ ಹಾಗು ಸೇವಕರಾದ ನಮ್ಮ ಸಾರಾಸಾರ ವಿಚಾರವನ್ನು ಪರೀಕ್ಷಿಸುವದಕ್ಕಾಗಿಯೇ ಮಹಾರಾಣಾನವರು ತಮ್ಮ ವಚನವನ್ನು ತಿರುಗಿಸಿರಬಹುದು. ಮಹಾಪ್ರಭೋ, ಮಹಾರಾಣಾನವರ ಪೂರ್ವದ ವಚನವನ್ನು ಪಾಲಿಸಿ, ಧರ್ಮಶಾಸ್ತ್ರಕ್ಕೆ ಒಪ್ಪಿಗೆಯಾಗುವಂತೆ ನಡೆದು, ಮೇವಾಡವನ್ನು ಉದ್ಧರಿಸಬೇಕು. ಅಕಬರ ಬಾದಶಹನಂಥ ಬಲಾಢ್ಯ ಯವನನಿಗೆ ಎದುರಾಗಲಿಕ್ಕೆ ಪ್ರತಾಪಸಿಂಹನಂಥ ಪ್ರತಾಪಿಯೇ ಬೇಕಾಗಿರುವದು; ಆದ್ದರಿಂದ ಪ್ರಭುಗಳೇ, ತಂದೆಯ ಪೂರ್ವದ ವಚನವನ್ನು ಲಕ್ಷಿಸಿರಿ, ಮೇವಾಡದ ಉದ್ಧಾರವನ್ನು ಯೋಚಿಸಿರಿ, ನಮ್ಮೆಲ್ಲರನ್ನು ಸಮಾಧಾನಬಡಿಸುವ ಮನಸ್ಸು ಮಾಡಿರಿ. ಪ್ರಭುಗಳು ಮೇವಾಡದ ಸಿಂಹಾಸನವನ್ನು ಅಲಂಕರಿಸಿದರೆ ಮಾತ್ರ ಇವೆಲ್ಲ ಸಾಧಿಸುವವು. ಧರ್ಮಕ್ಕೂ, ಶಾಸ್ತ್ರಕ್ಕೂ, ಕುಲಾಚಾರಕ್ಕೂ ವಿರುದ್ಧವಾಗಿ ಆಚರಿಸಿದ ಕೃತ್ಯವು ಎಂದಿಗೂ ಯಶಸ್ವಿಯಾಗಲಾರದು. ಒಂದು ಪಕ್ಷದಲ್ಲಿ ಪ್ರಭುಗಳ ಸಿಂಹಾಸನಾರೋಹಣದ ಕಾರ್ಯಕ್ಕೆ ವಿಘ್ನವೊದಗಿದರೆ, ಅದನ್ನು ಸೇವಕರಾದ ನಾವು ನೋಡಿಕೊಳ್ಳುವೆವು. ವೀರ ರಜಪೂತ ಸೈನ್ಯವು ಪ್ರಭುಗಳ ಸೇವೆಗೆ ಸಿದ್ಧವಾಗಿದೆ. ಇನ್ನು ವಿಲಂಬವೇಕೆ? ಪ್ರಭುಗಳು ದಯಮಾಡಿಸಬೇಕು, ಎಂದು ನುಡಿದು, ರಾವುತನು ಪ್ರತಾಪಸಿಂಹನ ಕುದುರೆಯನ್ನು ತಿರುಗಿಸಲು, ಅವನು ಅದಕ್ಕೆ ಒಪ್ಪಿಕೊಂಡು ರಾಜಧಾನಿಯ ಕಡೆಗೆ ಬಂದನು.

ಇತ್ತ ಒಂದುದಿನ ಜಗಮಲ್ಲನು ರಾಜ್ಯಲಕ್ಷ್ಮಿಯ ಮದದಿಂದ ಉನ್ಮತ್ತನಾಗಿ ತನ್ನ ಸರದಾರರಿಂದಲೂ, ಸಹಚರರಿಂದಲೂ ಕೂಡಿ ಸಿಂಹಾಸನಾರೂಢನಾಗಿ ರಾಜವೈಭವವನ್ನು ಭೋಗಿಸುತ್ತಲಿದ್ದನು. ಅಷ್ಟರಲ್ಲಿ ಉದಾರಾಂತಃಕರಣದ ಚಂದಾವತಕೃಷ್ಣನು ಪ್ರತಾಪಸಿಂಹನನ್ನು ಕರಕೊಂಡು ರಾಜ ಸಭೆಯನ್ನು ಪ್ರವೇಶಿಸಿದನು. ಅದನ್ನು ನೋಡಿ ಜಗಮಲ್ಲನ ಆನಂದಕ್ಕೆ ಆಕಸ್ಮಿಕ ವಿಘ್ನವುಂಟಾದಂತಾಯಿತು. ಚಂದಾವತಕೃಷ್ಣನ ಧೀರವೂ,

ಗಂಭೀರವೂ, ನಿಶ್ಚಯಯುಕ್ತವೂ ಆದ ಮುಖಮುದ್ರೆಯನ್ನು ನೋಡಿ ಜಗಮಲ್ಲನು ಬೆದರಿದನು. ಆಗ ತೇಜಸ್ವಿಯಾದ ಚಂದಾವತನು ಮೆಲ್ಲಮೆಲ್ಲನೆ ಸಿಂಹಾಸನದ ಬಳಿಗೆ ಹೋಗಿ, ಗಂಭೀರ ಸ್ವರದಿಂದ ಜಗಮಲ್ಲನನ್ನು ಕುರಿತು—ಕುಮಾರ, ಇನ್ನೂ ತಾವು ಎಷ್ಟು ಭ್ರಮೆಯಲ್ಲಿರುವಿರಲ್ಲ! ಸಿಂಹಾಸನಾರೂಢರಾಗಿದ್ದ ತಮ್ಮನ್ನು "ಕುಮಾರ" ಎಂದು ಉದ್ಧಟತನದಿಂದ ಕರೆದದ್ದಕ್ಕಾಗಿ ತಾವು ನನ್ನನ್ನು ಕ್ಷಮಿಸಬೇಕು. ಹಾಗೆ ಕರೆಯದಿದ್ದರೆ ತಮ್ಮ ಭ್ರಮೆಯು ನಿವಾರಣವಾಗುವಂತೆ ಇಲ್ಲ. ಈ ಸಿಂಹಾಸನವು ತಮ್ಮದಲ್ಲ, ಸಿಂಹಾಸನದ ನಿಜವಾದ ಹಕ್ಕುದಾರರು ಪ್ರತಾಪಸಿಂಗ ಮಹಾರಾಜರಿರುತ್ತಾರೆ; ಆದ್ದರಿಂದ ದಯಮಾಡಿ ಸಿಂಹಾಸನದಿಂದ ಇಳಿದು, ಅದನ್ನು ಮಹಾರಾಣಾ ಪ್ರತಾಪಸಿಂಹರವರಿಗೆ ಒಪ್ಪಿಸಬೇಕೆಂದು ವಿನಯದಿಂದ ಪ್ರಾರ್ಥಿಸುವೆನು, ಎಂದು ನುಡಿದು, ಜಗಮಲ್ಲನ ಮುಖವನ್ನು ನೋಡುತ್ತ ನಿಂತುಕೊಂಡನು. ಜಗಮಲ್ಲನು ಕೂಡಲೆ ಸಿಂಹಾಸನದಿಂದ ಇಳಿದಿದ್ದರೆ, ತನ್ನ ಗೌರವವನ್ನು ಕಾಯ್ದುಕೊಂಡಂತೆ ಆಗುತ್ತಿತ್ತು; ಆದರೆ ರಾಜ್ಯಲೋಭವು ಕೆಟ್ಟದಲ್ಲವೆ? ಆತನ ಮಂತ್ರಿಮಂಡಲದವರಾದರೂ ಬುದ್ಧಿವಂತರಾಗಿದ್ದರೆ, ಸದುಪದೇಶದಿಂದ ಜಗಮಲ್ಲನನ್ನು ಸಿಂಹಾಸನದಿಂದ ಇಳಿಸಬಹುದಾಗಿತ್ತು. ಆದರೆ ಜಗಮಲ್ಲನು ತಾನಾಗಿಯೇ ಸಿಂಹಾಸನದಿಂದ ಇಳಿಯಲಿಲ್ಲ; ಹಾಗೆ ಮಾಡಲಿಕ್ಕೆ ಅವನ ಮಂತ್ರಿಮಂಡಲವೂ ಆತನಿಗೆ ಸೂಚಿಸಲಿಲ್ಲ. ಇದರ ಮೇಲಿಂದ ಚಂದಾವತಕೃಷ್ಣನ ನಿಜವಾದ ಯೋಗ್ಯತೆಯ ಪರೀಕ್ಷೆಯು ಅವರಿಗಾಗಿದ್ದಿಲ್ಲವೆಂತಲೇ ಹೇಳಬೇಕಾಗುವದು. ತನ್ನ ಪ್ರಾರ್ಥನೆಯನ್ನು ನಡಿಸದೆ ಜಗಮಲ್ಲನು ಸಿಂಹಾಸನದ ಮೇಲೆ ಕುಳಿತಿರುವದನ್ನು ನೋಡಿ, ಕಾರ್ಯಕುಶಲನಾದ ಧೀರ ಚಂದಾವತನು, ತಿರುಗಿ ಮಾತಾಡದೆ ಮಹಾ ಧೈರ್ಯದಿಂದ ಜಗಮಲ್ಲನ ಎರಡೂ ಕೈಗಳನ್ನು ಹಿಡಿದು ಆತನನ್ನು ಸಿಂಹಾಸನದಿಂದ ಕೆಳಗಿಳಿದನು. ಆ ಮೇಲೆ ವಿನಯದಿಂದ ಆತನು ಪ್ರತಾಪಸಿಂಹನ ಬಲಹಸ್ತವನ್ನು ಹಿಡಿದು, ಆತನನ್ನು ಭಕ್ತಿಯಿಂದ ಸಿಂಹಾಸನದ ಮೇಲೆ ಕುಳ್ಳಿರಿಸಿದನು. ಆಗ ಜಗಮಲ್ಲನೂ, ಆತನ ಮಂತ್ರಿಗಳೂ ದಂಗುಬಡಿದು ಸುಮ್ಮನೆ ನಿಂತುಕೊಂಡಿದ್ದರು. ಚಂದಾವತನು ರಾಜಮುಕುಟವನ್ನು ತನ್ನ ಕೈಮುಟ್ಟಿ ಪ್ರತಾಪನ ತಲೆಗಿಟ್ಟು, ಆತನ ಟೊಂಕಕ್ಕೆ ಖಡ್ಗವನ್ನು ಕಟ್ಟಿ,

ಮೊಣಕಾಲೂರಿ ಭೂಮಿಗೆ ತಲೆಹಚ್ಚಿ, ಮೂರುಸಾರೆ ಅಭಿವಂದಿಸಿ, ಪ್ರತಾಪ ಸಿಂಹನನ್ನು ಕುರಿತು—“ಮೇವಾಡಾಧಿಪತಿಗಳಿಗೆ ಜಯವಾಗಲಿ, ಮಹಾ ರಾಣಾ ಪ್ರತಾಪಸಿಂಹರಿಗೆ ಜಯವಾಗಲಿ, ಕ್ಷತ್ರಿಯ ಕುಲಪ್ರಸೂತರಿಗೆ ಜಯ ವಾಗಲಿ” ಎಂದು ಮೂರುಸಾರೆ ಜಯಘೋಷಮಾಡಿದನು. ಕೂಡಲೆ ಸಭೆ ಯಲ್ಲಿಯೂ, ಸಭಾಗೃಹದ ಹೊರಗೆ ಸಜ್ಜಾಗಿ ನಿಂತಿದ್ದ ಚಂದಾವತನ ಸೈನ್ಯ ದಲ್ಲಿಯೂ ಪ್ರಚಂಡವಾದ ಜಯನಾದವುಂಟಾಗಿ, ಅದರಿಂದ ಪೃಥ್ವಿಯೂ, ದಶದಿಕ್ಕುಗಳೂ ಕಂಪಿಸತೊಡಗಿದವು. ಆಗ ಸೇವಕರು ಜಗಮಲ್ಲನ ಮೇಲೆ ಹಿಡಿದಿದ್ದ ಛತ್ರವನ್ನು ಪ್ರತಾಪಸಿಂಹನ ಮೇಲೆ ಹಿಡಿದರು; ಜಗಮಲ್ಲನಿಗೆ ಬೀಸುತ್ತಿದ್ದ ಚಾಮರಗಳಿಂದ ಪ್ರತಾಪಸಿಂಹನನ್ನು ಬೀಸಹತ್ತಿದರು; ಜಗ ಮಲ್ಲನನ್ನು ಸ್ತುತಿಸುತ್ತಿದ್ದ ವಂದಿಮಾಗಧರು ಪ್ರತಾಪಸಿಂಹನನ್ನು ಸ್ತುತಿಸಹ ತ್ತಿದರು. ಈ ಮೇರೆಗೆ ಆಕಸ್ಮಿಕವಾಗಿ ಒದಗಿದ ಅದ್ಭುತ ಪ್ರಸಂಗದ ರಭ ಸದಲ್ಲಿ ಎಲ್ಲರೂ ಪ್ರತಾಪಸಿಂಹನನ್ನು ಓಲಯಿಸಹತ್ತಿದ್ದರಲ್ಲಿ ಆಶ್ಚರ್ಯವಿಲ್ಲ. ಆದರ ಓಘದಲ್ಲಿ ಪ್ರತ್ಯಕ್ಷ ಜಗಮಲ್ಲನೂ ಕೂಡ ಪ್ರತಾಪಸಿಂಹನ ಹೆಸರಿ ನಿಂದ ಜಯಘೋಷ ಮಾಡಿದನು!

ಕೆಲವು ವೇಳೆಯವರೆಗೆ ಸಭೆಯು ಸ್ತಬ್ಧವಾಗಿತ್ತು. ತನ್ನ ಮನೋ ರಥವು ಪೂರ್ಣವಾದದ್ದರಿಂದ ಆನಂದ ಪರವಶನಾಗಿದ್ದ ಚಂದಾವತಕೃಷ್ಣನೂ ಕೆಲವು ಹೊತ್ತು ಸುಮ್ಮನೆ ನಿಂತುಕೊಂಡನು. ಆ ಮೇಲೆ ಆತನು ಜಗಮಲ್ಲ ನನ್ನು ಕುರಿತು ವಿನಯದಿಂದ—ಕುಮಾರ! ಈ ಸೇವಕನ ಅಪರಾಧವನ್ನು ಕ್ಷಮಿಸಬೇಕು. ನಾವು ಧರ್ಮಶಾಸ್ತ್ರವನ್ನೂ, ಲೋಕಾಚಾರವನ್ನೂ ಪೂರ್ಣ ವಾಗಿ ವಿಚಾರಿಸಿ, ಸ್ವರ್ಗಸ್ಥ ಮಹಾರಾಣಾ ಉದಯಸಿಂಗ ಮಹಾರಾಜರವರ ಪೂರ್ವದತ್ತ ವಚನದಂತೆ ಸಿಂಹಾಸನವನ್ನು ಅವರ ಜ್ಯೇಷ್ಠ ಪುತ್ರರಿಗೆ ಅರ್ಪಿ ಸಿದ್ದೇವೆ. ಪ್ರತಾಪಸಿಂಹ ಮಹಾರಾಜರೇ ಈ ಸಿಂಹಾಸನವನ್ನು ಅಲಂಕರಿಸ ಲಿಕ್ಕೆ ಯೋಗ್ಯರಿದ್ದಾರೆ, ಎಂದು ನುಡಿದು, ಪ್ರತಾಪಸಿಂಹನನ್ನು ಕುರಿತು— “ಕ್ಷತ್ರಿಯ ಕುಲತಿಲಕ ಮಹಾರಾಜರೇ, ಚಿತ್ತೂರನ್ನು ಉದ್ಧರಿಸುವ ಕಾರ್ಯವು ತಮ್ಮಿಂದ ಸಾಧಿಸುವದೆಂದು ನಾವೆಲ್ಲರೂ ನಂಬಿದ್ದೇವೆ. ನಾನು ನನ್ನ ಕೈಮುಟ್ಟಿ ನಿಮ್ಮ ಟೊಂಕಕ್ಕೆ ಕಟ್ಟಿದ ಖಡ್ಗವು ಚಿತ್ತೂರ ಅಧಿದೇವಿಯ ಕೈಯೊಳಗಿನದಿರುತ್ತದೆ. ದುಷ್ಟರಾದ ಯವನರು ಚಿತ್ತೂರನ್ನು ಸ್ವಾಧೀನ

ಪಡಿಸಿಕೊಂಡು–ವೀರ ರಜಪೂತರು ಜೀವದಿಂದಿರಲು–ದೇವಿಯ ಮಂದಿರವನ್ನು ಭ್ರಷ್ಟಪಡಿಸಿ ಮೂರ್ತಿಯನ್ನು ಚೂರು ಚೂರು ಮಾಡಿದರು! ಯವನರು ನಡಿಸಿರುವ ಈ ಪ್ರಲಯವನ್ನು ಕುಗ್ಗಿಸಿ, ಅವರನ್ನು ದಂಡಿಸುವ ಕಠಿಣ ಕಾರ್ಯವು ತಮ್ಮಿಂದಲೇ ಆಗುವದೆಂದು ನಂಬಿರುವೆವು. ಹಾಯ್ ಹಾಯ್! ಮಾತೇ, ಭವಾನೀ, ಏನು ನಿನ್ನ ಅವಸ್ಥೆಯು! ಎಂದು ನುಡಿಯುವಾಗ ರಾವುತನ ಕಂಠವು ಬಿಗಿದು ನೇತ್ರಗಳಿಂದ ಅಶ್ರುಗಳು ಉದುರಿದವು. ಆಗ ಸಭಿಕರ ಮುಖಮಂಡಲಗಳು ಕೋಪಾಗ್ನಿಯಿಂದ ಕೆಂಪಾದವು; ಪ್ರತಾಪಸಿಂಹನ ಕೆಂಪಡರಿದ ಕಣ್ಣುಗಳಿಂದ ಕಿಡಿಗಳು ಹಾರುತ್ತಿರುವಂತೆ ತೋರಿತು. ಆತನ ಸರ್ವಾಂಗವು ಕ್ರೋಧದಿಂದ ಕಂಪಿಸತೊಡಗಿತು. ಆತನು ತನ್ನ ಖಡ್ಗವನ್ನು ಒರೆಯಿಂದ ಹಿರಿದು ಚಂದಾವತಕೃಷ್ಣನನ್ನು ಒಮ್ಮೆ ತೀವ್ರ ದೃಷ್ಟಿಯಿಂದ ನೋಡಿದನು. ಆಗ ರಾವುತನು ಪುನಃ ಪ್ರತಾಪಸಿಂಹನನ್ನು ಕುರಿತು—ಮಹಾ ಪ್ರಭೋ, ನಾನು ಇಂದು ಭವಾನಿಯ ಖಡ್ಗವನ್ನು ಅಲಂಕಾರಕ್ಕಾಗಿ ನಿಮ್ಮ ಟೊಂಕಕ್ಕೆ ಕಟ್ಟಿರುವದಿಲ್ಲ; ವಿಲಾಸ ಸುಖವನ್ನು ಭೋಗಿಸುವದಕ್ಕಾಗಿ ನಿಮ್ಮನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿರುವದಿಲ್ಲ. ಈ ಖಡ್ಗವನ್ನು ಧರಿಸಿದ ನಿಮ್ಮ ಪೂರ್ವಜರು ಚಿತ್ತೂರಿನ ಉದ್ಧಾರಕ್ಕಾಗಿ ಪ್ರತಿಜ್ಞೆಮಾಡಿ ಯಥಾಶಕ್ತಿ ತಮ್ಮ ಪ್ರತಿಜ್ಞೆಯನ್ನು ಪೂರ್ಣಮಾಡುತ್ತ ಬಂದಿರುವರು. ಚಿತ್ತೂರ ಸ್ವಾತಂತ್ರ್ಯ ರಕ್ಷಣಕ್ಕಾಗಿ ಒಬ್ಬರಹಿಂದೆ ಒಬ್ಬರಂತೆ ಲಖಮಸಿ ರಾಣಾನ ೧೧ ಜನ ರಾಜಪುತ್ರರು ಸಿಂಹಾಸನವೇರಿ ಶೌರ್ಯದಿಂದ ಕಾದಿ, ರಣಭೂಮಿಗೆ ಬಲಿಯಾಗಿರುವರು. ಪದ್ಮಿನಿಯಂಥ ಲೋಕಸುಂದರಿಯರೂ, ಪತಿವ್ರತೆಯರೂ, ಆದ ಸ್ತ್ರೀಯರು ಸಹಸ್ರಸಂಖ್ಯಾಕರಾಗಿ ಚಿತ್ತೂರ ಸಲುವಾಗಿ ಅಗ್ನಿನಾರಾಯಣನಿಗೆ ಆಹುತಿಯಾಗಿರುವರು. ಒಟ್ಟಿಗೆ ಚಿತ್ತೂರಸಲುವಾಗಿ ಮೂರುಸಾರೆ 'ಜೋಹಾರ'ವೆಂಬ ಈ ಭಯಂಕರ ಕಾರ್ಯವು ನೆರವೇರಿಸಲ್ಪಟ್ಟಿತು! ನಿಮ್ಮ ಪೂರ್ವಜರು ಚಿತ್ತೂರಸಲುವಾಗಿ ಆ ಪುಣ್ಯ ಭೂಮಿಗೆ ರಕ್ತದ ಕಾಲಿವೆಗಳನ್ನು ಹರಿಸಿರುವರು; ಆದರೆ ಆ ಸ್ವರ್ಗತುಲ್ಯವಾದ ಚಿತ್ತೂರು , ದುರ್ದೈವದಿಂದ ಸದ್ಯಕ್ಕೆ ಯವನರ ಕೈಸೇರಿರುವದು! ಅದು ಹ್ಯಾಗೆ ಸೇರಿತೆಂಬದನ್ನು ಮಾತ್ರ ನಾನು ಬಾಯಿಬಿಚ್ಚಿ ಹೇಳಲಾರೆನು. ಮಹಾರಾಣಾ ಪ್ರತಾಪಸಿಂಹಜೀ, ನೀವು ವ್ರತಸ್ಥರಾಗಿ ಘೋರ

ತಪಶ್ಚರ್ಯವನ್ನು ಮಾಡಿ ದುಷ್ಟ ಯವನರ ಕೈಯಿಂದ ರಾಜಸ್ಥಾನವನ್ನು ಬಿಡಿಸಿಕೊಂಡು, ಚಿತ್ತೂರ ವೈಧವ್ಯವನ್ನು ನಷ್ಟಪಡಿಸಿರಿ. ಅಂದರೆ ಈ ಚಂದಾವತಕೃಷ್ಣನು ಉದ್ದಾಮತನದಿಂದ ನಿಮ್ಮನ್ನು ಸಿಂಹಾಸನದಮೇಲೆ ಕುಳ್ಳಿರಿಸಿದ್ದರ ಸಾರ್ಥಕವಾಗುವದು. ಮಹಾಪ್ರಭೋ, ವಿಲಾಸಭೋಗವು ಸಿಸೋದಿಯಾ ವಂಶಕ್ಕೆ ಬಹುತರ ಇಲ್ಲವೆಂತಲೇ ಹೇಳಬೇಕಾಗುವದು. ಸದ್ಯಕ್ಕಂತು ಅದರ ಆಶೆಯನ್ನು ತೀರ ಬಿಡಬೇಕಾಗಿರುವದು. ಆ ಪವಿತ್ರ ಕುಲವು ತನ್ನ ಪರಿಶುದ್ಧತೆಯನ್ನೂ, ಗೌರವವನ್ನೂ, ಸ್ವಾತಂತ್ರ್ಯವನ್ನೂ ಕಾಯ್ದುಕೊಳ್ಳುವದಕ್ಕಾಗಿ ವಿರಕ್ತಿಯಿಂದ ಘೋರ ತಪಶ್ಚರ್ಯವನ್ನು ಮಾಡಬೇಕಾಗಿರುವದು. ಇದಕ್ಕಾಗಿಯೇ ಪ್ರತಾಪಸಿಂಹರವರ ಅವತಾರ ವಾಗಿರುವದೆಂದು ಈಗ ನನ್ನ ಮನೋದೇವತೆಯು ಹೇಳುತ್ತಿರುವದು! ನಿಮ್ಮ ಕೊರಳಿಗೆ ಬಿದ್ದಿರುವ ಈ ಮಹಾಕಾರ್ಯವನ್ನು ಸಾಧಿಸಿ ಸ್ವರ್ಗಸ್ಥ ವೀರ ಪಿತೃಕುಲವನ್ನು ಸಂತೋಷಪಡಿಸುವದಕ್ಕಾಗಿ ಈ ರಾಜಕುಮಾರ ಪರಿವಾರವು ಮಾತ್ಸರ್ಯವನ್ನು ಬದಿಗೊತ್ತಿ ನಿಮಗೆ ಸಹಾಯ ಮಾಡಬೇ ಕಾಗಿರುವದು. ಮಹಾಪ್ರಭೋ, ಮುಂದೆ ಪ್ರಸಂಗವು ಹೀಗೆಯೇ ಬರಬಹು ದೆಂಬದನ್ನು ನಾನಾದರೂ ಈಗ ಹ್ಯಾಗೆ ಹೇಳಬೇಕು? ಉದೇಪುರದ ರಾಣಾನು ಸಿಂಹಾಸನಾರೂಢನಾಗಿ ರಾಜ್ಯಸುಖವನ್ನು ಭೋಗಿಸುವನೋ, ಅಥವಾ ಸ್ವಾತಂತ್ರ್ಯ ರಕ್ಷಣಕ್ಕಾಗಿ ಅಕಬರ ಬಾದಶಹನೊಡನೆ ಕಾದುತ್ತ ಅಡವಡವಿ ತಿರುಗುವನೋ, ಎಂಬದನ್ನು ಏಕಲಿಂಗೇಶ್ವರನೇ ಬಲ್ಲನು!

ಈ ಮೇರೆಗೆ ನುಡಿದ ಚಂದಾವತಕೃಷ್ಣನ ಮಾತುಗಳನ್ನು ಕೇಳಿ, ಜಗ ಮಲ್ಲನು ಶುದ್ಧಾಂತಃಕರಣದಿಂದ ಆತನನ್ನು ಕುರಿತು—ವೀರ ಶಿರೋಮ ಣಿಯೇ, ನೀನು ಉದ್ದಾಮತನದಿಂದ ಪ್ರತಾಪಸಿಂಹ ರಾಣಾನವರನ್ನು ಸಿಂಹಾಸನದ ಮೇಲೆ ಕುಳ್ಳಿರಿಸಿದೆನೆನ್ನಬೇಡ. ವಿವೇಕಿಯಾದ ನಿನ್ನ ಈ ಕೃತಿಯಿಂದ ಮೇವಾಡದ ಕೀರ್ತಿಯ ಅಭಿವೃದ್ಧಿಯೇ ಆಗುವದು. ಸದ್ಯದ ಭಯಂಕರ ಸ್ಥಿತಿಯಲ್ಲಿ ಉದೇಪುರದ ಸಿಂಹಾಸನವೇರುವಷ್ಟು ಸತ್ವವೂ, ಪ್ರತಾಪವೂ ನನ್ನಲ್ಲಿರುವದಿಲ್ಲ; ಆದರೆ ಅನಾಯಾಸವಾಗಿ ಪ್ರಾಪ್ತವಾದ ರಾಜ್ಯ ಲಕ್ಷ್ಮಿಯ ಮದದಿಂದ ನಾನು ಈ ಮಾತನ್ನು ತಿಳಿಯದಾಗಿದ್ದೆನು. ಅಂಥ ಪ್ರಸಂಗದಲ್ಲಿ ನೀನು ನನ್ನನ್ನು ಎಚ್ಚರಗೊಳಿಸಿ ಮೇವಾಡದ ಉದ್ಧಾರದ

ಮಾರ್ಗವನ್ನು ತೋರಿಸಿ ಕೊಟ್ಟಿದ್ದರಿಂದ, ನಾನೊಬ್ಬನೇ ಏಕೆ, ರಾಜಸ್ಥಾನವೇ ನಿನಗೆ ಕೃತಜ್ಞವಾಗಬೇಕಾಗುವದು. ಚಂದಾವತಕೃಷ್ಣ, ನೀನು ನಿನ್ನ ಕೆಲಸವನ್ನು ಸಮಯವರಿತು ಮಾಡಿದೆ; ಮುಂದೆ ಮರಣಪರ್ಯಂತ ನಿನ್ನ ಕರ್ತವ್ಯವನ್ನು ಮಾಡಲು ಸಿದ್ಧನಾಗಿರುವೆ; ಆದರೆ ಸಿಂಹಾಸನಸ್ಥ ಮಹಾ ರಾಣಾನೂ, ಆತನ ಬಂಧುವರ್ಗವೆನಿಸುವ ನಾವೂ, ಮಾಡತಕ್ಕ ಕಾರ್ಯವು ಇನ್ನು ಮೇಲೆ ಇರುವದು. ನಿಸ್ಪೃಹಿಯೂ, ಮೇವಾಡದ ಸಿಂಹಾಸನಾಭಿಮಾನಿಯೂ ಆದ ನಿನ್ನ ಮೇಲೆ ಯಾವ ಬಗೆಯ ದೋಷವನ್ನೂ ಆರೋಪಿಸದೆ, ನಾನು ಸಂತೋಷದಿಂದ ಸಿಂಹಾಸನವನ್ನು ಅಣ್ಣನಿಗೆ ಬಿಟ್ಟು ಕೊಟ್ಟು ಆತನನ್ನು ಸೇವಿಸಿ, ಜನ್ಮದ ಸಾರ್ಥಕ್ಯವನ್ನು ಮಾಡಿಕೊಳ್ಳುವೆನು, ಎಂದು ನುಡಿದು, ಪ್ರತಾಪಸಿಂಹನನ್ನು ಕುರಿತು ವಿನಯದಿಂದ—"ಮಹಾ ಪ್ರಭುವೇ, ಅಗ್ರಜಾ, ನೀನು ಶ್ರೀ ರಾಮಚಂದ್ರನ ವಂಶದಲ್ಲಿ ಜನಿಸಿದ್ದು ಸಾರ್ಥಕವಾಯಿತು; ಯಾಕಂದರೆ, ಶ್ರೀ ರಾಮನು ತಂದೆಯ ವಚನವನ್ನು ಪಾಲಿಸುವದಕ್ಕಾಗಿ ಭರತನಿಗೆ ಸಿಂಹಾಸನವನ್ನು ಬಿಟ್ಟು ಕೊಟ್ಟು ಅರಣ್ಯಕ್ಕೆ ತೆರಳಿದಂತೆ ನೀನು ನನಗೆ ಸಿಂಹಾಸನವನ್ನು ಒಪ್ಪಿಸಿ ದೇಶಾಂತರಕ್ಕೆ ತೆರಳಿದೆ! ಆದರೆ ನಾನು ಮಾತ್ರ ಮಹಾತ್ಮನಾದ ಭರತನಂತೆ ನಿನಗೆ ರಾಜ್ಯವನ್ನು ಒಪ್ಪಿಸುವ ಎತ್ತುಗಡೆ ಮಾಡದೆ, ಕುಲಕಂಟಕನಾಗಿ ಸಿಂಹಾಸನವೇರಿದೆನು. ನೀನು ಚಂದಾವತನ ವಿನಂತಿಯನ್ನು ಮನ್ನಿಸಿ ದೇಶಹಿತಕ್ಕಾಗಿ ಸಿಂಹಾಸನವನ್ನು ಏರದಿದ್ದರೆ, ಮೇವಾಡದ ಗೌರವವು ನಿಶ್ಚಯವಾಗಿ ನಷ್ಟವಾಗುತ್ತಿತ್ತೆಂದು ರಾಜ್ಯಮದವಿಳಿದ ನಾನು ಈಗ ಸ್ಪಷ್ಟವಾಗಿ ಹೇಳುತ್ತೇನೆ. ಅಪರಾಧಿಯಾದ ಈ ಬಂಧುವು ಈಗ ಕ್ಷಮೆಯನ್ನು ಯಾಚಿಸುತ್ತಿರುವನು. ಅನುಗ್ರಹಿಸಿ, ಆತನನ್ನು ಸೇವಕ ವರ್ಗದಲ್ಲಿ ಸೇರಿಸಿಕೊಳ್ಳಬೇಕು, ಎಂದು ನುಡಿಯಲು, ಸಭೆಯು ಸ್ತಬ್ಧವಾಯಿತು. ಪ್ರತಾಪಸಿಂಹನ ಮನಸ್ಸಿನಲ್ಲಿ ಕ್ರಮವಾಗಿ ಉತ್ಪನ್ನವಾಗುತ್ತ ಬಂದಿದ್ದ ಸ್ವಾಭಿಮಾನ, ಸ್ವಕುಲಾಭಿಮಾನ, ಶತ್ರುಸಂತಾಪ, ಬಂಧುಪ್ರೇಮ ಮೊದಲಾದ ಮನೋವಿಕಾರ ತರಂಗಗಳು ಬೆಳೆದು, ತಮ್ಮ ಅವಶೇಷವಿಟ್ಟು ಅಳಿಯುತ್ತಿರಲು, ಆತನ ಸ್ಥಿತಿಯು ವಿಲಕ್ಷಣವಾಯಿತು. ಆತನ ಮುಖದಲ್ಲಿ ಅಲೌಕಿಕ ತೇಜಸ್ಸೂ, ಗಾಂಭೀರ್ಯವೂ ಪ್ರಕಟವಾದವು. ಆತನು ತನ್ನ ಬಂಧುವನ್ನು ವಾತ್ಸಲ್ಯದಿಂದ ನೋಡುತ್ತ

ಗದ್ಗದ ಕಂಠನಾಗಿ ಸಿಂಹಾಸನದಿಂದ ಎದ್ದು, ಆತನನ್ನು ತನ್ನ ಬಳಿಯಲ್ಲಿ ಕುಳ್ಳಿರಿಸಿಕೊಳ್ಳಹೋದನು; ಆದರೆ ಜಗಮಲ್ಲನು ಅದಕ್ಕೆ ಒಪ್ಪದೆ, ಬಳಿಯಲ್ಲಿದ್ದ ಆಸನದಲ್ಲಿ ವಿನಯದಿಂದ ಕುಳಿತುಕೊಂಡನು. ಸಭಿಕರು ಪ್ರತಾಪನ ಬಂಧುವಾತ್ಸಲ್ಯವನ್ನೂ, ಜಗಮಲ್ಲನ ಭಕ್ತಿಯನ್ನೂ ನೋಡಿ ಪ್ರೇಮಾಶ್ರುಗಳನ್ನು ಉದುರಿಸಿದರು. ಆಗ ಎಲ್ಲರ ಹೃದಯಗಳೂ ಸದ್ಭಾವನೆಯಿಂದ ಪರಿಪೂರ್ಣವಾಗಿದ್ದವು!

೨ನೆಯ ಪ್ರಕರಣ

# ತ ಪೋ ದೀ ಕ್ಷೆ.

ಹೀಗೆ ಸದ್ಭಾವನೆಯಿಂದ ಪರಿಪೂರ್ಣವಾಗಿರುವ ಸಭೆಯಲ್ಲಿ ಸಿಂಹಾಸನಾರೂಢನಾಗಿದ್ದ ಪ್ರತಾಪಸಿಂಹನ ತೇಜೋಮೂರ್ತಿಯು ಅತ್ಯಂತ ಪ್ರೇಕ್ಷಣೀಯವಾಗಿತ್ತು. ಪ್ರತಾಪಿಯೂ, ತರುಣನೂ ಆದ ತಮ್ಮ ನೂತನ ರಾಜನನ್ನು ನೋಡಿ ದರ್ಬಾರದೊಳಗಿನ ರಜಪೂತ ವೀರರಿಗೆ ಬಹಳ ಸಂತೋಷವಾಯಿತು. ಪ್ರತಾಪನ ವ್ಯೈಕಟ್ಟೂ ನಿಲುವಿಕೆಯೂ ಮಧ್ಯಮ ತರದವು; ಆದರೂ ಆತನು ಒಳ್ಳೇ ಬಲಿಷ್ಠನಿದ್ದನು. ಆತನ ಗೌರವರ್ಣವೂ, ವಿಶಾಲ ನೇತ್ರಗಳೂ ಆತನ ಯಾವತ್ತು ಪೂರ್ವಜರಂತೆ ಚಿತ್ತಾಕರ್ಷಕವಾಗಿದ್ದವು. ಶ್ರೀ ರಾಮಚಂದ್ರನ ವಂಶಜನೆಂಬ ಗೌರವದಿಂದಲೂ, ಆ ಗೌರವಕ್ಕೆ ಒಪ್ಪುವ ವಂಶಪರಂಪರಾಗತವಾದ ವೀರ್ಯ-ಶೌರ್ಯ-ಧೈರ್ಯಾದ್ಯನೇಕ ಸದ್ಗುಣಗಳಿಂದಲೂ, ಪ್ರತಾಪನು ಯಾವತ್ತು ರಜಪೂತಸ್ಥಾನದ ಪರಮಾದರಕ್ಕೆ ಪಾತ್ರನಾಗಿದ್ದನು. ಪ್ರತಾಪನ ಅಂದಿನ ಉಡಿಗೆ-ತೊಡಿಗೆಗಳು ತೀರ ಸಾಧಾರಣವಾಗಿದ್ದವು. ದರ್ಬಾರದೊಳಗಿನ ವೀರರಾದರೂ ಬಡತನಸ್ಥಿತಿಯುವರೇ ಆಗಿದ್ದರು. ಐಶ್ವರ್ಯ ಸಂಪನ್ನನೂ, ಡಾಂಭಿಕತನಕ್ಕೆ ಮೆಚ್ಚಿದವನೂ ಆದ ಬಡಿವಾರದ ಅರಸನ ದರ್ಬಾರದಂತೆ, ಶೃಂಗರಿಸಿದ ನಾಮಧಾರಿ ವೀರರ ತಂಡದಿಂದ ಪ್ರತಾಪನ ದರ್ಬಾರವು ಸಂದಣಿತವಾಗಿದ್ದಿಲ್ಲ; ಅದು ಕೆಚ್ಚೆದೆಯ ಬಹು ಸ್ವಲ್ಪ ಜನ ವೀರರಿಂದ ಪ್ರಕಾಶಿತವಾಗಿತ್ತು. ಹಾಲಿರುವತನಕ ಕರುವು ತಾಯಿಯನ್ನು ಆಶ್ರಯಿಸುವಂತೆ, ವೈಭವ ಸಂಪನ್ನನಾದ ರಾಜನನ್ನು ಸ್ವಾರ್ಥಪರಾಯಣರು ಮುತ್ತುವದು

ಆಶ್ಚರ್ಯವಲ್ಲ. ಉದೇಪುರದ ಅರಸರು ಈಗಿನ ಕಾಲದಲ್ಲಿ ಬಡವರಾಗಿದ್ದ ದರಿಂದ, ಸ್ವಾರ್ಥಪರಾಯಣರಾದ ರಜಪೂತ ಸಂಸ್ಥಾನಿಕರು ಅಭಿಮಾನ ಶೂನ್ಯರಾಗಿ ಅವರನ್ನು ಬಿಟ್ಟುಹೋಗಿ, ವೈಭವಶಾಲಿಯಾದ ಅಕಬರನನ್ನು ಆಶ್ರಯಿಸಿ ತಮ್ಮ ವೈಭವವನ್ನು ಹೆಚ್ಚಿಸಿಕೊಳ್ಳುತ್ತಲಿದ್ದರು. ರಜಪೂತರನ್ನು ತನ್ನ ಬಲೆಯೊಳಗೆ ಎಳಕೊಳ್ಳುವ ಗುಟ್ಟನ್ನು ಅಕಬರನು ಚನ್ನಾಗಿ ಅರಿತಿದ್ದನು. ಆ ಗುಟ್ಟು, ಅಕಬರನ ಪೂರ್ವಜರಿಗೆ ಗೊತ್ತಾಗದ್ದರಿಂದ ಅವರು ಹಿಂದುಸ್ಥಾನದಲ್ಲಿ ಸಾಮ್ರಾಜ್ಯವನ್ನು ಸ್ಥಾಪಿಸಲು ಸಮರ್ಥರಾಗಲಿಲ್ಲ; ಅದರಂತೆ ಅಕಬರನ ಮುಂದಿನ ಸಂತತಿಯವರು ಆ ಗುಟ್ಟನ್ನು ಅರಿಯದ್ದರಿಂದ, ಅಕಬರನು ಸ್ಥಾಪಿಸಿದ ಸಾಮ್ರಾಜ್ಯವನ್ನು ಕಾಯ್ದುಕೊಳ್ಳಲು ಅವರು ಸಮರ್ಥರಾಗಲಿಲ್ಲ. ಅಭಿಮಾನಿಗಳಾದ ಒಬ್ಬೊಬ್ಬರೇ ರಜಪೂತ ಸಂಸ್ಥಾನಿಕರು ಅಕಬರನ ಸವಿಮಾತಿಗೆ ಮರುಳಾಗಿ, ಇಲ್ಲವೆ ಅವನು ಕೊಡುವ ಅಧಿಕಾರಕ್ಕೆ ಮನಸ್ಸು ಸೋತು, ಅಥವಾ ಆತನು ಹೊಸದಾಗಿ ಕೊಡಲೊಪ್ಪಿದ ರಾಜ್ಯಕ್ಕೆ ಆಶೆಪಟ್ಟು, ಆತನ ಮಾಂಡಲಿಕರಾಗುತ್ತಲಿದ್ದರು. ಇಂಥ ಪ್ರಸಂಗದಲ್ಲಿ ಉದೇಪುರದ ಬಡ ರಾಣಾನನ್ನು ಬಹು ಸ್ವಲ್ಪ ಜನರು ಆಶ್ರಯಿಸಿದ್ದರಲ್ಲಿ ಆಶ್ಚರ್ಯವೇನು? ಅವರಲ್ಲಿ, ಅದೇ ಸಿಂಹಾಸನದ ಹಕ್ಕನ್ನು ಬಿಟ್ಟುಕೊಟ್ಟಿದ್ದ ಜಗಮಲ್ಲನೂ, ಗ್ವಾಲ್ಹೇರದ ಪದಭ್ರಷ್ಟರಾಜನಾದ ರಾಮಸಾಹುವರನೂ, ಚಂದಾವತಕೃಷ್ಣರಾವುತನೂ, ಝಾಲಾವಂಶೀಯನಾದ ಮಾನಾ ಎಂಬ ಹೆಸರಿನ ರಾಜನೂ, ಪ್ರತಾಪನ ಇನ್ನೊಬ್ಬ ಬಂಧುವಾದ ಜಯಮಲ್ಲನ ಮಕ್ಕಳೂ, ಚೊಂಡಾವಂಶಿಯ ಪಟ್ಟಾರಾಜನ ಮಕ್ಕಳೂ, ದೇಲವಾಡದ ಠಾಕೂರರೂ ಪ್ರಮುಖರಾಗಿದ್ದರು. ಇವರಲ್ಲದೆ ಅಭಿಮಾನಿಗಳಾದ ಎಷ್ಟೋ ಸಣ್ಣ ಸಣ್ಣ ಠಾಕೂರರು ಪ್ರತಾಪಸಿಂಹನ ದರ್ಬಾರದಲ್ಲಿ ಕುಳಿತುಕೊಂಡಿದ್ದರು. ಪ್ರತಾಪನ ದರ್ಬಾರವು ಬಡತನದ ಮೂಲಕ ಹೇಡಿಗಳಿಗೆ ತೇಜೋಹೀನವಾಗಿ ತೋರುತ್ತಿದ್ದರೂ, ಕ್ಷಾತ್ರತೇಜದಿಂದ ಅದು ವೀರರ ಕಣ್ಣುಗಳನ್ನು ಕುಕ್ಕುತ್ತಿತ್ತೆಂದು ಹೇಳಬಹುದು. ಆ ದರ್ಬಾರದೊಳಗಿನ ವೀರರ ಹೃದಯಗಳು ಸ್ವಾಮಿಭಕ್ತಿ, ಸ್ವಾಭಿಮಾನ, ಸ್ವಕುಲಾಭಿಮಾನ, ಸ್ವಧರ್ಮಾಭಿಮಾನ, ಸ್ವದೇಶಾಭಿಮಾನ ಮೊದಲಾದ ಪವಿತ್ರ ಗುಣಗಳಿಂದ ಪರಿಪೂರ್ಣವಾಗಿದ್ದವು. ಈ ಗುಣಪರಿಪೂರ್ಣತೆಯೆಂಬ ಸಮಾನ ಧರ್ಮದ

ಮೂಲಕ ಅವರ ಅಂತಃಕರಣಗಳಲ್ಲಿ ಐಕ್ಯಭಾವವು ಉತ್ಪನ್ನವಾಗಿತ್ತು. ಅವರಲ್ಲಿ ಒಬ್ಬನು ಮತ್ತೊಬ್ಬನ ಸಲುವಾಗಿ ಪ್ರಾಣಕೊಡಲಿಕ್ಕೆ ಸಹ ಹಿಂದು ಮುಂದು ನೋಡುವಹಾಗಿದ್ದಿಲ್ಲ.

ಹೀಗೆ ಕ್ಷಾತ್ರಧರ್ಮವೇ ಬೇರೆ ಬೇರೆ ರೂಪಗಳಿಂದ ಕಂಗೊಳಿಸ ವಂತೆ, ದರ್ಬಾರದಲ್ಲಿ ಕುಳಿತುಕೊಂಡಿದ್ದ ಆ ವೀರರು ಪ್ರತಾಪನ ಮೇಲಿನ ಪೂಜ್ಯಬುದ್ಧಿಯಿಂದ ಮೌನವನ್ನು ತಾಳಿ, ಆತನ ಮುಖದಿಂದ ಯಾವ ಮಾತುಗಳು ಹೊರಡುವವೋ, ಎಂದು ಹಾದಿಯು ನೋಡುತ್ತಿರಲು, ಪ್ರತಾಪ ಸಿಂಹನು ಅವರನ್ನು ಕುರಿತು—ವೀರಶಿರೋಮಣಿಗಳೇ, ಕೇವಲ ಸ್ವಾಮಿ ಭಕ್ತಿಯಿಂದ ಉದೇಪುರದ ಸಿಂಹಾಸನವನ್ನು ಓಲಯಿಸುವ ನಿಮ್ಮ ಔದಾರ್ಯಕ್ಕಾಗಿ ನಾನು ಕೃತಜ್ಞನಾಗಿದ್ದೇನೆ. ಬಂಧುವಾದ ಜಗಮಲ್ಲ ಕುಮಾರನ ಸೌಜನ್ಯ, ಚಂದಾವತಕೃಷ್ಣನೇ ಮೊದಲಾದ ನಿಮ್ಮೆಲ್ಲರ ನಿಸ್ಪೃಹತೆ, ಇವುಗಳಿಂದ ನಾನು ಅತ್ಯಂತ ನಮ್ರನಾಗಿರುವೆನು. ವೈಭವಶಾಲಿಯಾದ ಅಕಬರ ಬಾದಶಹನು ತನ್ನ ಪಕ್ಷವನ್ನು ವಹಿಸಿದರೆ ಬೇಕಾದದ್ದನ್ನು ಕೊಡುವ ಹಾಗಿರಲು, ನೀವು ಅದಕ್ಕೆ ಮನಸ್ಸು ಮಾಡದೆ, ರಜಪೂತ ಕುಲಾಭಿಮಾನ ದಿಂದ ನನ್ನನ್ನು ಆಶ್ರಯಿಸಿದ್ದು ಶ್ಲಾಘನೀಯವು. ನಿಮ್ಮಂಥ ವೀರರ ಸಂಖ್ಯೆಯು ಅಲ್ಪವಿದ್ದರೂ ನಿಮ್ಮಲ್ಲಿಯ ಸತ್ವವು ಮಹತ್ತರವಾಗಿರುವದು. ವೀರರೇ ಅಕಬರನು ಚಿತ್ತೂರನ್ನು ಮುತ್ತಿದಾಗ ನನ್ನ ತಂದೆಯಾದ ಉದೇಸಿಂಗ ರಾಣಾನವರು ಚಿತ್ತೂರಿಂದ ಹೊರಟುಹೋಗಲು, ನಿಮ್ಮ ವಂಶಜರು ತೋರಿಸಿದ ಪರಾಕ್ರಮವನ್ನು ಶತ್ರುವಾದ ಅಕಬರನೂ ಹೊಗಳಿರುವನೆಂದ ಬಳಿಕ, ಈಗ ನಾನು ಅದನ್ನು ಮತ್ತೆ ಹೊಗಳುವದೇಕೆ? ಆದರೆ ನಿಮ್ಮ ಪ್ರತಾಪಶಾಲಿಗಳಾದ ಪೂರ್ವಜರ ಚರಿತ್ರ ಶ್ರವಣದಿಂದ ಪ್ರತಾಪದ ವೃದ್ಧಿಯಾಗುವಕಾರಣ, ಈಗ ನಾವೆಲ್ಲರೂ ಅದನ್ನು ಸ್ಮರಿಸುವದು ಯೋಗ್ಯವಾಗಿರುವದು. ನಮ್ಮ ಆ ಪೂರ್ವಜರಲ್ಲಿ ಒಬ್ಬಿಬ್ಬರ ಚರಿತ್ರವನ್ನು ಈಗ ನೆನಪಿಗೆ ತಂದುಕೊಂಡು ನಮ್ಮ ಕ್ಷಾತ್ರಧರ್ಮವನ್ನು ಜಾಗ್ರತ ಮಾಡಿಕೊಳ್ಳೋಣ. ಬೆದನೂರ ಜಯಮಲ್ಲನ, ಹಾಗು ಕೇಳಿವ್ಯಾದ ಪಟ್ಟಾನ ವಿಷಯವಾಗಿ ಶತ್ರುವಾದ ಅಕಬರನು ಪೂಜ್ಯಬುದ್ಧಿಯನ್ನು ತಾಳಿ, ಅವರಿಬ್ಬರ ಮೂರ್ತಿಗಳನ್ನು ಮಾಡಿಸಿ, ತನ್ನ ಅರಮನೆಯಲ್ಲಿ ಇಡಿಸಿರುವನು! ಇವರ ಪರಾಕ್ರ

ಮವು ಅಸಾಧಾರಣವಾದದ್ದು. ಚಿತ್ತೂರ ಪೂರ್ವದ್ವಾರವ ರಕ್ಷಿಸುವ ಭಾರ ವನ್ನು ವಹಿಸಿದ ಪಟ್ಟಾನ ವಯಸ್ಸು ಹದಿನಾರೇ ವರ್ಷದ್ದಿತ್ತು. ಆತನ ತಂದೆಯು ಯುದ್ಧದಲ್ಲಿ ಅದೇ ಮರಣಹೊಂದಿದ್ದನು. ಈ ಪ್ರಸಂಗದಲ್ಲಿ ಪಟ್ಟಾನ ತಾಯಿಯು ತನ್ನ ಮಗನು ನಿರಾಶೆಯನ್ನು ತಾಳಬಾರದೆಂದು ಯೋಚಿಸಿ, ಮಗನನ್ನು ಕುರಿತು—ಬಾಳಾ, ಪಟ್ಟಾ, ಉದಾಸೀನನಾಗ ಬೇಡ; ಚಿತ್ತೂರನ್ನು ರಕ್ಷಿಸುವಾಗ ನಮ್ಮ ನಿರ್ವಂಶವಾದರೂ ಚಿಂತೆಯಿಲ್ಲ; ಸಮರ ಭೂಮಿಯಿಂದ ಕಾಲ್ದೆಗೆಯಬೇಡ, ಎಂದು ಹೇಳಿ, ತನ್ನ ಸೊಸೆ ಯನ್ನು ಕರಕೊಂಡು ಖಡ್ಗವನ್ನು ಧರಿಸಿ, ತನ್ನ ಸೈನ್ಯದವರಿಗೆ ಉತ್ತೇಜನ ಕೊಡಹತ್ತಿದಳು. ಆಗಿನ ರಜಪೂತರ ಕ್ಷಾತ್ರತೇಜಸ್ಸನ್ನು ವರ್ಣಿಸುವದು ಅಸಾಧ್ಯವೇ ಸರಿ. ಪಟ್ಟಾನ ಪರಾಕ್ರಮವನ್ನು ನೋಡಿ ಅಕಬರನು ಬಟ್ಟು ಕಚ್ಚಿದನು. ಹೀಗೆ ಪಟ್ಟಾನೂ, ಜಯಮಲ್ಲನೂ ಶೌರ್ಯದಿಂದ ಕಾದು ತ್ತಿರುವಾಗ, ಜಯಮಲ್ಲನು ತೋಫಿನ ಗುಂಡು ತಾಕಿ ಮರಣಹೊಂದಿದನು. ಆಗ ಪಟ್ಟಾನೇ ಮೊದಲಾದ ನಿಮ್ಮ ಶೂರ ಪೂರ್ವಜರು, ಇನ್ನು ಚಿತ್ತೂರ ಸಂರಕ್ಷಣವಾಗದೆಂದು ತಿಳಿದು, ಜಯದ ಆಶೆಯನ್ನು ಬಿಟ್ಟು, ಜೋಹಾರ ಮಾಡುವ ಇಚ್ಛೆಯನ್ನು ಪ್ರಕಟಮಾಡಿದರು. ಕೂಡಲೆ ಎಂಟುಸಾವಿರ ರಜ ಪೂತರು ಜೋಹಾರದ ತಾಂಬೂಲವನ್ನು ಸ್ವೀಕರಿಸಿ, ಕೇಶರವರ್ಣದ ಉಡಪು ತೊಡಪುಗಳನ್ನು ಧರಿಸಿ, ಚಿತ್ತೂರ ಕೋಟೆಯ ಬಾಗಿಲವನ್ನು ತೆರೆದು ಶತ್ರು ಗಳ ಮೇಲೆ ಬಿದ್ದರು. ಆಗಿನ ರಜಪೂತ ವೀರರ ವೀರಾವೇಶವನ್ನು ವರ್ಣಿಸ ಲಸಾಧ್ಯವು. ಅವರು ತಮ್ಮ ಅಳವಿನೊಳಗೆ ಸಿಕ್ಕ ಮೊಗಲರನ್ನು ತುಂಡ ರಿಸಿ ಎಲ್ಲರೂ ಸಮರದೇವತೆಗೆ ಬಲಿಯಾಗಲು, ಅಕಬರನಿಗೆ ಚಿತ್ತೂರ ಕೋಟೆಯು ಸಿಕ್ಕಿತು. ಅಲ್ಲಿ ಆ ಮೊಗಲ ಬಾದಶಹನು ಮಾಡಿದ ಅನರ್ಥ ವನ್ನು ನೆನಪಿಗೆ ತಂದುಕೊಂಡರೆ ಸರ್ವಾಂಗವು ತಪ್ತವಾಗುತ್ತದೆ. ವೀರರೇ, ಆ ಪಾಷಾಣಹೃದಯದ ಮೊಗಲ ಬಾದಶಹನ ಸೈನಿಕರು ಚಿತ್ತೂರೊಳಗಿನ ಗಂಡಸರನ್ನೂ, ಹೆಂಗಸರನ್ನೂ ಎಗ್ಗಿಲ್ಲದೆ ತುಂಡರಿಸಿದರು. ಆಗ ಚಿತ್ತೂರ ಕೋಟೆಯಲ್ಲಿ ಮೂವತ್ತುಸಾವಿರ ರಜಪೂತರ ಸಂಹಾರವಾಯಿತು! ಇಷ್ಟ ರಿಂದಲೇ ದುಷ್ಟ ಅಕಬರನು ತೃಪ್ತನಾಗಲಿಲ್ಲ. ಆ ಯವನನು ರಾಣಾನ ವಂಶದವರ ಮೇಲೆ ತನ್ನ ಖಡ್ಗವನ್ನು ಪ್ರಯೋಗಿಸಿದನು. ಆಗ ಒಂಬತ್ತು

ಮಂದಿ ರಾಣಿಯುವರೂ, ಐವರು ರಾಜಕನ್ಯೆಯರೂ, ಇಬ್ಬರು ಚಿಕ್ಕ ರಾಜ ಪುತ್ರರೂ, ಸರದಾರರ ಹೆಂಡಿರೂ, ರಾಣಾನ ಆಪ್ತೇಷ್ಟರೂ ಕೂಡಿ ನೂರಾ ಇಪ್ಪತ್ತೈದು ಜನರು ದುಷ್ಟ ಮೊಗಲರ ಖಡ್ಗಕ್ಕೆ ಬಲಿಯಾದರು. ವೀರಾಗ್ರಣಿ ಗಳೇ, ಮೊಗಲರು ಮಾಡಿದ ಈ ಭಯಂಕರ ಕೊಲೆಯ ಸೇಡನ್ನು ನಾವು ತೀರಿಸಿಕೊಳ್ಳಬಾರದೇನು? ಅವಶ್ಯವಾಗಿ ತೀರಿಸಿಕೊಳ್ಳತಕ್ಕದ್ದು. ಅಕ ಬರನು ಹೀಗೆ ಹಿಂಸಕ ಪಶುವೃತ್ತಿಯ ಕಾರ್ಯವನ್ನು ಮಾಡಿದ ಮೇಲೆ, ಧರ್ಮಾಭಿಮಾನದಿಂದ ದೇವಾಲಯಗಳನ್ನೂ, ಅರಮನೆಗಳನ್ನೂ, ಬೇರೆ ದೊಡ್ಡ ದೊಡ್ಡ ಮಂದಿರಗಳನ್ನೂ ನೆಲಸಮಮಾಡಿ, ತನ್ನ ಗುರುತಿಗಾಗಿ ಅಲ್ಲಲ್ಲಿ ಮಸೀದೆಗಳನ್ನು ಕಟ್ಟಿಸಿದನು. ಚಿತ್ತೂರ ಗ್ರಾಮ ದೇವತೆಯ ಗುಡಿಯ ಸ್ಥಿತಿಯಾದರೂ ಹೀಗೆಯೇ ಆಗಿ, ಅಲ್ಲಿಯ ನಗಾರೆಗಳು, ನೌಬ ತ್ತುಗಳು, ಸಮೆಗಳು, ಆಭರಣಗಳು, ಗುಡಿಯ ಬಾಗಿಲುಗಳು ಮೊದಲಾದ ಪದಾರ್ಥಗಳು ಆಗ್ರಾಕ್ಕೆ ಕಳಿಸಲ್ಪಟ್ಟವು. ಹಾಯ್ ಹಾಯ್! ಇದು ಎಂಥ ಅನರ್ಥವು! ಎಂಥ ನೀಚತನವು!! ಇಂಥ ಅಧಮ ಮೊಗಲರಿಗೆ ರಘು ವಂಶದ ರಜಪೂತರು-ಬಾಪ್ಪಾರಾವಳನ ಸಂತತಿಯ ರಜಪೂತರು-ಸಂಗ ರಾಜನ ಹೆಸರುಹೇಳುವ ರಜಪೂತರು ತಲೆಬಾಗಿಸಬಹುದೊ? ಅಭಿಮಾನ ಪುರಸ್ಸರವಾಗಿ ನಿಮ್ಮಿಂದ ಈ ಸಿಂಹಾಸನದ ಮೇಲೆ ಕುಳ್ಳಿರಿಸಲ್ಪಟ್ಟಿದ್ದ ನೂತನ ರಾಜನಾದ ಪ್ರತಾಪಸಿಂಹನು ಈ ಮಾತಿನ ವಿಚಾರವನ್ನು ಅವಶ್ಯ ವಾಗಿ ಮಾಡುವನು.

ಈ ಮೇರೆಗೆ ನುಡಿಯುವಾಗ ಪ್ರತಾಪನ ಕಂಠವು ಬಿಗಿದು ನೇತ್ರಗಳು ಅಶ್ರುಪೂರ್ಣವಾದವು. ಎಷ್ಟು ಪ್ರಯತ್ನಮಾಡಿದರೂ ಆತನ ಮುಖದಿಂದ ಶಬ್ದಗಳು ಹೊರಡದಾದವು. ಕೆಲವು ಹೊತ್ತಿನ ಮೇಲೆ ಆತನು ಗದ್ಗದಸ್ವರ ದಿಂದ ಮತ್ತೆ ತನ್ನ ವೀರ ಪರಿವಾರವನ್ನು ಕುರಿತು—ಎಲೈ ಸೂರ್ಯ-ಚಂದ್ರ ವಂಶಜರಾದ ಕ್ಷತ್ರಿಯ ವೀರರೇ, ಈ ಪ್ರತಾಪನು ನಿಮ್ಮ ಸಮ್ಮುಖದಲ್ಲಿ ನುಡಿ ಯುವ ಅಂತಃಸ್ಫೂರ್ತಿಯ ಮಾತುಗಳನ್ನು ಕೇಳಿರಿ. ಬಾಪ್ಪಾರಾವಳನ ವಂಶಜನಾದ ನಾನು, ಶತ್ರುಗಳಿಗೆ ಶರಣುಹೋಗಿ ಅವರಮುಂದೆ ತಲೆಬಾ ಗಿಸಿ, ನನ್ನ ಪರಮ ಅಭಿಮಾನಶಾಲಿಯಾದ ಸಿಸೋದಿಯಾ ಕುಲವನ್ನು ಸರ್ವಥಾ ಕೆಡಿಸುವದಿಲ್ಲ. ಈ ಅಧಮತನವು ಕಾಲತ್ರಯದಲ್ಲಿಯೂ ಪ್ರತಾಪ

ನಿಂದ ಆಗಲಾರದು. ಉದೇಪುರದ ಸ್ವಾತಂತ್ರ್ಯರಕ್ಷಣದ ಈ ಕಠಿಣಕಾರ್ಯ ದಲ್ಲಿ ನನ್ನ ರಾಜ್ಯ ಕೋಶಗಳು ಹಾಳಾಗಲಿ, ಸಹಾಯಕರು ತೊಲಗಿಹೋಗಲಿ, ಆಪ್ತೇಷ್ಟರು ಅಳಿಯಲಿ; ಆದರೆ ಪ್ರತಾಪನು ತನ್ನಮುಷ್ಟಿಗೆ ಸತ್ವವನ್ನು ಕಾಯ್ದುಕೊಂಡು, ಬದುಕಿರುವವರೆಗೆ ಉದೇಪುರದ ಸ್ವಾತಂತ್ರ್ಯ ರಕ್ಷಣಕ್ಕಾಗಿ ಹೆಣಗುವನು! ದೇಶಬಾಂಧವರೇ, ಈಗಿನ ವಿಪನ್ನಸ್ಥಿತಿಯಲ್ಲಿ ನನಗೆ ಸಹಾಯಮಾಡಿರೆಂದು ನಿಮ್ಮಂಥ ವೀರ ಸಂತತಿಗೂ ಕೂಡ ಹೇಳಲಿಕ್ಕೆ ನನಗೆ ಸಂಕೋಚವಾಗುತ್ತದೆ. ಮಹಾ ಬಲಾಢ್ಯನೂ, ಪ್ರತಾಪಶಾಲಿಯೂ, ವೈಭವ ಸಂಪನ್ನನೂ ಆದ ಅಕಬರ ಬಾದಶಹನೆತ್ತ? ಚಿತ್ತೂರಂಥ ಅಭಿಮಾನಾಸ್ಪದ ರಾಜಧಾನಿಯನ್ನು ಕಳಕೊಂಡದ್ದರಿಂದ ತೇಜೋಹೀನನೂ, ತನ್ನ ಸಹಾಯಕರೆಲ್ಲ ತೊಲಗಿಹೋಗಿ ಅಕಬರನನ್ನು ಕೂಡಹತ್ತಿದ್ದರಿಂದ ದುರ್ಬಲನೂ, ಧನಸಂಚಯದ ಮಾರ್ಗಗಳೆಲ್ಲ ವೈರಿಗಳ ಕೈಸೇರಿದ್ದರಿಂದ ದರಿದ್ರನೂ ಆದ ಸಂತಾಪದಗ್ಧ ಹೃದಯದ ಪ್ರತಾಪಸಿಂಹ ರಾಣಾನೆತ್ತ? ರಜಪೂತ ವೀರರು ಯಾವ ಆಶೆಯಿಂದ ಉದೇಪುರದ ರಾಣಾನನ್ನು ಈಗ ಆಶ್ರಯಿಸಬೇಕು? ಯಾವ ಸುಖವನ್ನು ಸುರಕೊಳ್ಳಲಿಕ್ಕೆ ಅವರು ಪ್ರತಾಪನ ಬೆನ್ನು ಹತ್ತಬೇಕು? ಆದರೆ ವೀರರೇ, ಈವೂತ್ತಿನವರೆಗೆ ಉದೇಪುರದ ಸ್ನೇಹಿತರೆನಿಸಿಕೊಂಡಿದ್ದ, ವೀರಶಿರೋಮಣಿಗಳೆಂದು ಪ್ರಸಿದ್ಧರಾಗಿದ್ದ, ಮಾರವಾಡ, ಅಂಬೇರ, ಬಿಕಾನೇರ, ಬುಂದಿ ಮೊದಲಾದ ರಜಪೂತ ಸಂಸ್ಥಾನಿಕರು ಪರಂಪರಾಗತ ಪದ್ಧತಿಯಂತೆ, ರಜಪೂತರ ಸ್ವಾತಂತ್ರ್ಯರಕ್ಷಣದ ಕಾರ್ಯದಲ್ಲಿ ನನಗೆ ಸಹಾಯ ಮಾಡುವರೆಂಬ ಬಲವಾದ ಆಶೆಯು ಇರುತ್ತದೆ. ಆ ಆಶೆಯ ಬಲದಿಂದಲೂ, ಕೇವಲ ರಜಪೂತ ಕುಲಾಭಿಮಾನದಿಂದ ಜೀವದ ಹಂಗುದೊರೆದು ನನ್ನನ್ನು ಪ್ರತ್ಯಕ್ಷವಾಗಿ ಕೂಡಿಕೊಂಡಿರುವ ನಿಮ್ಮೆಲ್ಲರ ಪರಾಕ್ರಮದ ಬಲದಿಂದಲೂ, ನಾನು ಚಿತ್ತೂರ ಕೋಟೆಯನ್ನು ಮೊಗಲರಿಂದ ಕಸಿದುಕೊಳ್ಳುವ ಯತ್ನಮಾಡುವೆನು. ಅಕಬರನು ಬೇಕಾದಷ್ಟು ಶೂರನಿರಲಿ, ಆತನ ಸೈನ್ಯವು ಬೇಕಾದಷ್ಟು ದೊಡ್ಡದಿರಲಿ, ಆತನ ರಾಜ್ಯವು ಬೇಕಾದಷ್ಟು ವಿಸ್ತಾರವಾಗಿರಲಿ, ಅದರೆ ಸ್ವಾತಂತ್ರ್ಯದ ಸಲುವಾಗಿ ಒಕ್ಕಟ್ಟಾಗಿ ಕಾದುವ ರಜಪೂತರ ವ್ಯೂಹವನ್ನು ಭೇದಿಸುವದು ಆತನಿಗೆ ಶಕ್ಯವಾಗಲಾರದು. ರಜಪೂತರ ಶೌರ್ಯಕ್ಕೂ, ಅವರ ನಿರ್ಧಾರದ ಪ್ರಯ

ತ್ನಕ್ಕೂ ಈಡಾಗುವದು ಸರ್ವಸಾಧಾರಣ ಕೆಲಸವಲ್ಲ. ಇಲ್ಲಿಗೆ ಮೇವಾಡದ ಅರಿಷ್ಟ ಕಾಲವು ಸಮಾಪ್ತವಾಗುವ ಯೋಗವಿರುವದರಿಂದ ನನ್ನ ಪ್ರಯತ್ನಕ್ಕೆ ನಿಶ್ಚಯವಾಗಿ ಯಶಸ್ಸು ಬರುವದು. ಶೂರರೇ, ಸುಮ್ಮನೆ ಎಷ್ಟು ಮಾತಾಡಿದರೇನು? ನನ್ನ ಹೃದಯವನ್ನೆಲ್ಲ ನಿಮ್ಮ ಮುಂದೆ ಬಿಚ್ಚಿ ಇಟ್ಟಿದ್ದೇನೆ. ಉದೇಪುರದ ಅಭಿಮಾನಿಗಳ ಮುಂದೆ ಇದಕ್ಕೂ ಹೆಚ್ಚಿನ ಮಾತುಗಳನ್ನು ನಾನು ಆಡಲಾರೆನು.

ಪ್ರತಾಪಸಿಂಹನ ಸ್ಫೂರ್ತಿಜನಕವಾದ ಈ ಮಾತುಗಳನ್ನು ಕೇಳಿ, ದರ್ಬಾರದೊಳಗಿನ ರಜಪೂತ ವೀರರ ಹೃದಯಗಳು ಉಕ್ಕಿಬಂದವು. ಪರಾಕ್ರಮದ ಸ್ಫೂರ್ತಿಯಿಂದ ಅವರ ಮೈಗಳು ಉಬ್ಬಿ ರೋಮಾಂಚನಗಳು ಉತ್ಪನ್ನವಾದವು. ಎಲ್ಲ ವೀರರೂ ಏಕಸಮಯಾವಚ್ಛೇದದಿಂದ ಗ್ವಾಲ್ಹೇರದ ಪದಭ್ರಷ್ಟ ರಾಜನಾದ ರಾಮಸಾತುವರನ ಕಡೆಗೆ ನೋಡಲು, ಆತನು ಎದ್ದು ನಿಂತು, ಬಹುಮಾನ ಪೂರ್ವಕವಾಗಿ ಪ್ರತಾಪಸಿಂಹನನ್ನು ಕುರಿತು—

—ರಾಣಾಜಿಯವರೇ, ಕುಲದೀಪಕರಾದ ತಮ್ಮಂಥ ಪ್ರತಾಪಿಗಳ ದೃಢನಿಶ್ಚಯದ ಪ್ರಯತ್ನವು ವ್ಯರ್ಥವಾಗಬಹುದೇ ? ತಮ್ಮಂಥ ರಣಶೂರರ ಸಂಗ್ರಾಮ ಪಾಂಡಿತ್ಯದಿಂದ ಉತ್ತೇಜಿತರಾಗಿ, ಧನ್ಯತೆಯಿಂದ ತಮ್ಮೆದುರಿಗೆ ತಮ್ಮ ತಮ್ಮ ಪರಾಕ್ರಮದ ಬಣತಿಯನ್ನು ತೋರಿಸಿ ಕೃತಕೃತ್ಯರಾಗುವದಕ್ಕಿಂತ ಹೆಚ್ಚಿನ ಪ್ರಯೋಜನವು ರಜಪೂತವೀರರಿಗೆ ಬೇರೆ ಯಾವದಿರುವದು? ನನ್ನ ದೇಹವಂತು ಉದೇಪುರದ ಸೇವೆಯಲ್ಲಿ ಸವಿದು ಹೋಗತಕ್ಕದ್ದೇ ಸರಿ. ಅಕಬರನ ಅಜ್ಜನಾದ ಬಾಬರನು ನನ್ನನ್ನು ಗ್ವಾಲ್ಹೇರದಿಂದ ಹೊರಹೊರಡಿಸಿದಾಗಿನಿಂದ, ಈ ದೇಹವು ಉದೇಪುರದ ಉಪ್ಪನ್ನು ಉಂಡಿರುತ್ತದೆ. ಬಾಬರನ ಮೊಮ್ಮಗನಾದ ಅಕಬರನ ವಿರುದ್ಧವಾಗಿ ಕಾದಿ, ಸಾಧಿಸಿದರೆ ಸೇಡು ತೀರಿಸಿಕೊಳ್ಳುವುದು-ಸಾಧಿಸದಿದ್ದರೆ ರಣಭೂಮಿಯಲ್ಲಿ ದೇಹವಿಡುವದು ಇವು ನನ್ನ ಕಟ್ಟಕಡೆಯ ಕೆಲಸಗಳಾಗಿರುವವು. ರಾಣಾಜೀ, ನಿಮ್ಮ ದರ್ಬಾರದಲ್ಲಿ ಕೂಡಿರುವ ಈ ವೀರರು ಸಾಮಾನ್ಯರಲ್ಲ. ಇವರ ಭೀಮ ಪರಾಕ್ರಮವು ರಾಣಾನವರಿಗೆ ಸಮರಭೂಮಿಯಲ್ಲಿ ಗೊತ್ತಾಗುವದು. ಕ್ಷುದ್ರವಾದ ಸ್ವಾರ್ಥಕ್ಕೆ ಮನಸ್ಸುಮಾಡುವ ಹೇಸಿ ಜನರು ರಾಣಾನ ದರ್ಬಾರದಲ್ಲಿ ಕೂಡುತ್ತಿರುವದಿಲ್ಲ. ಜೀವಿತವನ್ನು ತೃಣಕ್ಕೆ ಸಮಾನವೆಂದು ಬಗೆದು,

ಸ್ವಾಮಿಭಕ್ತಿ ಪ್ರೇರಿತರಾಗಿ, ಕ್ಷಾತ್ರತೇಜಸ್ಸಿಗೆ ಕುಂದು ಬಾರದಂತೆ ಸ್ವಾಮಿ ಕಾರ್ಯದಲ್ಲಿಯೇ ತಮ್ಮ ದೇಹವನ್ನು ಅರ್ಪಿಸಲು ನಿಶ್ಚಯವನ್ನು ಮಾಡಿದ ಅಚ್ಚ ರಜಪೂತ ರಕ್ತದ ವೀರರು ಇಲ್ಲಿ ಕೂಡಿರುತ್ತಾರೆ. ಇಂಥ ಒಬ್ಬರ ಸತ್ವಕ್ಕೆ ಎಷ್ಟು ಸಾವಿರ ಜನರ ಸತ್ವವು ಈಡಾದೀತು? ಉತ್ತರ ಗೋಗ್ರಹಣ ದಲ್ಲಿ ಒಬ್ಬ ಅರ್ಜುನನು ಕೌರವ ಸೈನ್ಯವನ್ನು ಇಳಿಗೊರಗಿಸಿದ್ದು ಸತ್ವಬಲ ದಿಂದಲ್ಲವೆ? ಒಬ್ಬ ಅಭಿಮನ್ಯು ಕುಮಾರನು ಚಕ್ರವ್ಯೂಹವನ್ನು ಭೇದಿಸಿ ಹೋಗಿ, ದ್ರೋಣ–ಕರ್ಣರಂಥ ವೀರಾಗ್ರಣಿಗಳ ಸತ್ವವನ್ನು ಭಂಗಗೊಳಿ ಸಿದ್ದು, ತನ್ನ ಉಜ್ವಲ ಸತ್ವಬಲದಿಂದಲ್ಲವೆ? ಅಕಬರನ ಆಶ್ರಯವನ್ನು ಪಡೆದ ರಜಪೂತರ ಸತ್ವವು, ಸ್ವಾರ್ಥಾಭಿಲಾಷೆಯ ಮೂಲಕ ನಷ್ಟವಾಗಿರುವ ದರಿಂದ, ಅವರು ನಮ್ಮ ಝಾಲಾವಂಶಿಯನಾದ ಮಾನಾರಾಜನಂಥ ವೀರಾ ಗ್ರಣಿಯನ್ನು ಸರಿಗಟ್ಟಲಾರರು. ಮೂರ್ತಿಮಂತ ಪ್ರತಾಪವೇ, ರಾಣಾಜೀ, ಇತ್ತ ಕುಳಿತಿರುವ ವೀರಶಿರೋಮಣಿಗಳಾದ ಚೊಂಡಾವಂಶಿಯ ಪಟ್ಟಾ ರಾಜನ ಪುತ್ರರನ್ನು ನೋಡಿರಿ. ಅದರಂತೆ ಚಿತ್ತೂರ ಸಂರಕ್ಷಣಮಾಡುತ್ತ ಧಾರಾತೀರ್ಥದಲ್ಲಿ ಪತನಹೊಂದಿ, ಯುದ್ಧದ ಪರಿಸಮಾಪ್ತಿಯನ್ನುಮಾಡಿದ ಮಹಾ ಪ್ರತಾಪಶಾಲಿಯಾದ ಬೇದನೂರ ಜಯಮಲ್ಲನ ಪ್ರತಾಪಿಗಳಾದ ಪುತ್ರರ ಪ್ರತಾಪವನ್ನು ಮನಸ್ಸಿನಲ್ಲಿ ತಂದುಕೊಳ್ಳಿರಿ. ಚಂದಾವತಕೃಷ್ಣನ ಪರಾಕ್ರಮವನ್ನು ನಾನು ವರ್ಣಿಸಬೇಕೆ? ಶತ್ರುಸಮೂಹವನ್ನು ಹೊಕ್ಕು ರಣಸಾಹಸದಿಂದ ಶತ್ರುಗಳ ತಲೆಗಳನ್ನು ತುಂಡರಿಸುವ ಈ ಉಳಿದ ರಜಪೂತ ವೀರರು ತಮ್ಮ ಸಲುವಾಗಿ ಪ್ರಾಣಕೊಡಲು ಸಿದ್ಧರಾಗಿರುವರು. ಅಂದ ಬಳಿಕ, ಮೇವಾಡದ ಪೂಜ್ಯ ಸಿಂಹಾಸನವೇರಿದ ಮಹಾ ರಾಣಾನವರಿಗೆ ಸಹಾಯದ ಚಿಂತೆಯೇಕೆ? ಏಕಲಿಂಗೇಶ್ವರನ ಕೃಪೆಯಿಂದ ರಾಣಾನವರ ಪ್ರಯತ್ನಕ್ಕೆ ಯಶಸ್ಸು ಬರಲೇಬೇಕು. ವೀರಮಣಿ ಪ್ರತಾಪಸಿಂಹರವರು ಸಹಾಯಕ್ಕಾಗಿ ನಮ್ಮನ್ನು ಬಾಯಿಬಿಚ್ಚಿ ಕರೆಯುವ ಕಾರಣವಿಲ್ಲ; ಅವರ ಭಾಗ್ಯಶಾಲಿಯಾದ ಅಭಿಮಾನಶಾಲಿತ್ವದ ಪ್ರತಾಪವೇ ನಮ್ಮ ಮನಸ್ಸನ್ನು ಜಗ್ಗಿಕೊಂಡು ಬಿಟ್ಟಿದೆ. ಮಹಾ ರಾಣಾನವರು ಯಾವ ಕಾರಣದಿಂದಲೂ ಮನಸ್ಸಿಗೆ ಅಸಮಾಧಾನ ಮಾಡಿಕೊಳ್ಳಲಾಗದು; ಆದರೆ ಸ್ವಾರ್ಥಪರರಾದ ಮೇವಾಡ, ಅಂಬೇರ. ಬಿಕಾನೇರ ಮೊದಲಾದ ಸಂಸ್ಥಾನಗಳ ರಜಪೂತರು

ಪ್ರಸಂಗದಲ್ಲಿ ರಾಣಾನವರಿಗೆ ಸಹಾಯಮಾಡಬಹುದೆಂಬಂತೆ ನನಗೆ ತೋರು ವದಿಲ್ಲ. ಅಂತರಂಗದಿಂದ ಅವರೆಲ್ಲರು ಅಕಬರನನ್ನು ಕೂಡಿರುವರು; ಆದ್ದ ರಿಂದ ಮಹಾರಾಣಾನವರು ಅವರ ಸಹಾಯವನ್ನು ನಂಬದೆ, ಸ್ವಾತಂತ್ರ್ಯರಕ್ಷ ಣದ ಕಾರ್ಯವನ್ನು ಆರಂಭಿಸತಕ್ಕದ್ದು.

ರಾಮಸಾತುವರನ ಈ ಮಾತುಗಳನ್ನು ಕೇಳಿ ದರ್ಬಾರದೊಳಗಿನ ಸರ ದಾರರು ಉತ್ಸಾಹಗೊಂಡು, ಅಕಬರನೊಡನೆ ಯುದ್ಧವನ್ನು ಆರಂಭಿಸಲೇ ಬೇಕೆಂದು ಪ್ರತಾಪಸಿಂಹನಿಗೆ ಆಗ್ರಹದಿಂದ ಹೇಳಿದರು. ಅವರಲ್ಲಿ ಝಾಲಾ ವಂಶೀಯನಾದ ಮಾನಾ ರಾಜನು ಎದ್ದುನಿಂತು—ಕುಲಭೂಷಣರಾದ ರಾಣಾಜಿಯವರೇ, ರಜಪೂತರ ದುರ್ದೈವದಿಂದ ಉದೇಪುರದ ಯಶಶ್ಚಂದ್ರ ಮನನ್ನು, ಮಧ್ಯದಲ್ಲಿ ಯವನರೂಪವಾದ ದುಷ್ಟ ರಾಹುವು ಆಕ್ರಮಿಸಿತು. ಈಗ ತಮ್ಮ ಯೋಗದಿಂದ ಆ ಯಶಶ್ಚಂದ್ರಮನು ಪುನಃ ಪ್ರಕಾಶಿಸಲಿ. ತಮ್ಮ ಅಗಾಧವಾದ ಸತ್ವದಿಂದ ರಜಪೂತರ ಪ್ರತಾಪಾಂಕುರವು ಅಭಿವೃದ್ಧ ವಾಗಿ, ಅದು ಅಕಬರನಂಥ ಪ್ರಬಲ ಸಾರ್ವಭೌಮನ ಯಶೋಂಬುಧಿಯು ಘಾತಕವಾದ ಉಕ್ಕನ್ನು ತಡಿದು ನಿಲ್ಲಿಸಲಿ! ಮಹಾರಾಣಾ ಪ್ರತಾಪಸಿಂಹ, ನಿಮ್ಮ ಸಹಾಯಕ ವರ್ಗವು ಚಿಕ್ಕದೆಂದು ಅಂದೇಶಪಡಲಾಗದು. ತಮ್ಮ ಪ್ರಭಾವಕ್ಕೆ ಲುಬ್ಧರಾಗಿ, ಬರಬರುತ್ತ ರಜಪೂತರ ತಂಡವು ತಮ್ಮನ್ನು ಕೂಡ ಬಹುದು. ಎಲ್ಲರನ್ನು ಒಟ್ಟುಗೂಡಿಸಿ ನಡೆಸಿಕೊಳ್ಳುವ ಯೋಗ್ಯನಾದ ಪುರ ಸ್ಕರ್ತೃವು ಇಲ್ಲದ್ದರಿಂದಲೇ ಸದ್ಯಕ್ಕೆ ರಜಪೂತ ಸಮಾಜವು ಕಟ್ಟುಹರಿದ ಕಟ್ಟೆ ಗೆಯ ಹೊರೆಯಂತಾಗಿದೆ. ಈಗ ಮಹಾಪ್ರಭುಗಳಾದ ತಾವಿರುವಿರಿ, ಜಗ ಮಲ್ಲ ಕುಮಾರರಿರುವರು, ರಾಮಸಾತುವರನಿರುವನು, ಚಂದಾವತಕೃಷ್ಣ ನಿರುವನು, ಈ ರಜಪೂತ ವೀರ ತಂಡವಿರುವದು, ನಾನಿರುವೆನು ಅಂದ ಬಳಿಕ ಬಾದಶಹನೊಡನೆ ಯುದ್ಧವನ್ನು ಹೂಡುವದಕ್ಕೆ ಹೆದರುವದೇಕೆ? ಎಲೈ ಪ್ರಿಯಬಾಂಧವರಾದ ವೀರ ಶಿರೋಮಣಿಗಳೇ, ಪ್ರತಾಪಶಾಲಿಗಳಾದ ರಾಣಾ ಪ್ರತಾಪಸಿಂಹರವರ ಹಿತಕ್ಕಾಗಿ ನಿಮ್ಮ ಖಡ್ಗಗಳು ಹೊರಬೀಳುವವ ಲ್ಲವೆ? ಜಂಗುತಿನ್ನಹತ್ತಿರುವ ವಿಜಯಶಾಲಿಗಳಾದ ನಿಮ್ಮ ಖಡ್ಗಗಳು, ಮೊಗಲರ ರಕ್ತದಿಂದ ಸ್ನಾನಮಾಡಿ ಚಿತ್ರಿತವಾಗಲಿ, ಅನ್ನಲು, ಆ ದರ್ಬಾರ ದೊಳಗಿನ ವೀರರ ಖಡ್ಗಗಳು ಸರಸರನೆ ಸಪ್ಪಳಮಾಡುತ್ತ ಒರೆಗಳಿಂದ ಹೊರ

ಬಿದ್ದವು. ಆಗಿನ ಆ ವೀರರ ವೀರಶ್ರೀಯೂ, ಖಡ್ಗಗಳ ಹೊಳಪೂ, ಅಲ್ಲಿ ತತ್ಕಾಲದಲ್ಲಿ ಉತ್ಪನ್ನವಾದ ಮೊಗಲರ ವಿಷಯದ ಸಂತಾಪವೂ ಪ್ರತಾಪ ಸಿಂಹನನ್ನು ಸಂತೋಷಗೊಳಿಸಿದವು. ಆಗ ಆ ವೀರಸಿರೋಮಣಿಯೂ ತನ್ನ ಖಡ್ಗವನ್ನು ಒರೆಯಿಂದ ಹಿರಿಯಲು ಮಾನಾರಾಜನು ತನ್ನ ಖಡ್ಗವನ್ನು ಒರೆಯಿಂದ ಹಿರಿದನು. ಆಗ ವೀರ ಪರಿವಾರದಲ್ಲಿ ವಿಚಿತ್ರವಾದ ಆವೇಶದ ಸಂಚಾರವಾಗಿತ್ತು. ನಿಶ್ಶಬ್ದವಾದ ಆ ದರ್ಬಾರದಲ್ಲಿ ಸಮರದೇವತೆಯು ಅಮೂರ್ತವಾಗಿ ಪ್ರಕಟವಾಗಿ, ತನ್ನ ಪರಮ ಭಕ್ತ ಪರಿವಾರವನ್ನು ಅಭಿವಂದಿಸುವಂತೆ ತೋರುತ್ತಿತ್ತು. ಅಂತೇ ಯುದ್ಧದ ಸ್ಮರಣದಿಂದ ಆ ಕ್ಷತ್ರಿಯ ವೀರರ ಮೈಗಳು ಉಬ್ಬಿ, ತೊಟ್ಟ ಅಂಗಿಗಳು ಬಿಗಿಯಹತ್ತಿದವು. ಅಷ್ಟರಲ್ಲಿ ಪ್ರತಾಪಸಿಂಹನು ಗಾಂಭೀರ್ಯದಿಂದ ದರ್ಬಾರದೊಳಗಿನ ವೀರರನ್ನುದ್ದೇಶಿಸಿ—ಎಲೈ ಭರತಖಂಡದ ಶಾಶ್ವತಾಲಂಕಾರವಾದ ಕ್ಷಾತ್ರಧರ್ಮದ ಪವಿತ್ರಾಂಕುರಗಳೇ, ನಿಮ್ಮನ್ನು ವಿಜಯಲಕ್ಷ್ಮಿಯು ಓಲಯಿಸಲಿ, ವೀರ ಸ್ವರ್ಗಾಂಗನೆಯರು ನಿಮ್ಮ ಕೊರಳಲ್ಲಿ ಮಾಲೆಯನ್ನು ಹಾಕಲಿ, ಸ್ವರ್ಗಸ್ಥ ಶೂರ ಪೂರ್ವಜ ಪರಿವಾರವು ನಿಮ್ಮ ಪ್ರತಾಪವನ್ನು ನೋಡಿ ಆನಂದಿಸಲಿ. ನಿಮ್ಮಂಥ ಪ್ರತಾಪಿಗಳ ಸಹಾಯದಿಂದ ಪರಿಪೂರ್ಣನಾದ ನಾನು, ಅಕಬರನೊಡನೆ ಯುದ್ಧವನ್ನು ಆರಂಭಿಸಲಿಕ್ಕೆ ಇನ್ನು ತಡಮಾಡಲಾರೆನು. ಅಲ್ಲಿಯವರೆಗೆ ನಿಮ್ಮ ಖಡ್ಗಗಳು ಒರೆಗಂಡು, ವಿಶ್ರಾಂತಿಯನ್ನು ಹೊಂದಲಿ. ಇಂದಿನ ದರ್ಬಾರದ ಪರಿಸಮಾಪ್ತಿಯು ಶೂರರಿಗೆ ಸ್ಫೂರ್ತಿದಾಯಕವಾದದ್ದರಿಂದ, ನಿಮ್ಮ ರಾಣಾನಿಗೆ ಪರಮಾನಂದವಾಗಿದೆ, ಎಂದು ನುಡಿದು, ಪ್ರತಾಪಸಿಂಹನು ಖಡ್ಗವನ್ನು ಒರೆಗಾಣಿಸುತ್ತ ಸಿಂಹಾಸನದಿಂದ ಎದ್ದನು. ಕೂಡಲೆ ಯಾವತ್ತು ರಜಪೂತ ವೀರರು ತಮ್ಮ ತಮ್ಮ ಖಡ್ಗಗಳನ್ನು ಒರೆಗಾಣಿಸುತ್ತ ಎದ್ದು ನಿಂತು, ವಿನಯದಿಂದ ರಾಣಾನನ್ನು ವಂದಿಸಿ, ತಮ್ಮ ತಮ್ಮ ಸ್ಥಳಗಳಿಗೆ ಹೊರಟುಹೋದರು.

ಪ್ರತಾಪನು ತನ್ನ ತಂದೆಯಾದ ಉದೇಸಿಂಗನಂತೆ ಹೇಡಿಯಾಗಿದ್ದರೆ, ತನ್ನ ವಿಪನ್ನಸ್ಥಿತಿಗೆ ಬೆದರಿ, ಅಕಬರನಿಗೆ ಶರಣುಹೋಗಿ, ತನ್ನ ಮನೆತನದ ಕೀರ್ತಿಗೆ ಕಲಂಕವನ್ನುಂಟುಮಾಡುತ್ತಿದ್ದನು; ಆದರೆ ಜನ್ಮತಃ ಗುಣಶೀಲ ಸಂಪನ್ನನಾಗಿದ್ದ ಆ ಪ್ರತಾಪಿಯು ತನ್ನ ಪೂರ್ವಜರ ಅಲೌಕಿಕ ಚರಿತ್ರ

ಗಳನ್ನು ಓದಿ, ಭಾಟರ ಮುಖದಿಂದ ಅವರ ಉತ್ತೇಜಕವಾದ ಸ್ತುತಿ-ಪಾಠ ಗಳನ್ನು ಕೇಳಿ ಸ್ಫೂರ್ತಿಗೊಂಡಿದ್ದನು. ತಾನು ಬಾಪ್ಪಾರಾವಳನ ವಂಶಜನು, ಸಂಗರಾಜನ ಮೊಮ್ಮಗನು, ಪ್ರತ್ಯಕ್ಷ ಶ್ರೀರಾಮಚಂದ್ರನ ಸಂಬಂಧವು ತನ್ನ ಕುಲಕ್ಕೆ ಇರುವದು, ತಾನು ಸೂರ್ಯವಂಶದ ಕ್ಷತ್ರಿಯನು, ಎಂಬ ಅಭಿ ಮಾನವು ಆತನಲ್ಲಿ ನೆಲೆಯೂರಿ ನಿಂತಿತ್ತು. ರಜಪೂತಕುಲದ ವಿಷಯವಾಗಿ ತನ್ನ ಹೃದಯದಲ್ಲಿದ್ದ ಉತ್ಕಟವಾದ ಅಭಿಮಾನವು, ಬೇರೆ ರಜಪೂತಸಂಸ್ಥಾ ನಿಕರ ಹೃದಯದಲ್ಲಿಯೂ ಇರುವದೆಂದು, ಆ ಸರಳ ಹೃದಯದ ತರುಣ ವೀರನು ಭಾವಿಸಿದ್ದನು. ತಾನು ಕರೆಯುವದೊಂದೇ ತಡ, ಎಲ್ಲ ರಜಪೂತ ಸಂಸ್ಥಾನಿಕರು ತನ್ನನ್ನು ಕೂಡುವರೆಂತಲೂ, ಅವರ ಸಹಾಯದಿಂದ ಅಕ ಬರಬಾದಶಹನನ್ನು ಹಿಂದಕ್ಕೆ ದೂಡಿ, ರಜಪೂತಸ್ಥಾನದ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಬಹುದೆಂತಲೂ ಆ ಶುದ್ಧಾಂತಃಕರಣದ ರಾಣಾನು ನಂಬಿ ದ್ದನು. ಆತನಿಗೆ ಇನ್ನೂ ಜಗತ್ತಿನ ಅನುಭವವು ಆಗತಕ್ಕಷ್ಟು ಆಗಿದ್ದಿಲ್ಲ; ಆದ್ದರಿಂದ ತನ್ನ ಕಾರ್ಯಕ್ಕೆ ಅನುಕೂಲವಾದ ಸಂಗತಿಗಳೇ ಆತನ ಕಣ್ಣಿಗೆ ಕಟ್ಟಿ, ಅವುಗಳನ್ನು ಚಿಂತಿಸುವ ಉಬ್ಬಿನಲ್ಲಿ ಪ್ರತಿಕೂಲ ಸಂಗತಿಗಳನ್ನು ಆತನು ಮರೆಯುತ್ತಿದ್ದನು. ತಾರುಣ್ಯದಲ್ಲಿ ಗರಡಿಯ ಸಾಧಕದಿಂದ ಮನು ಷ್ಯನ ಶರೀರವು ದೃಢವಾಗಿ ಬಲವು ಹೆಚ್ಚುವಂತೆ, ಆ ತಾರುಣ್ಯದಲ್ಲಿ ಪ್ರಾಪ್ತ ವಾಗುವ ಆಪತ್ತು, ಕ್ಲೇಶ, ಚಿಂತೆ, ಶೋಕ ಇವುಗಳಿಂದ ಮನಸ್ಸು ದೃಢ ವಾಗಿ ಅದರ ಬಲವೂ ಹೆಚ್ಚುತ್ತದೆ. ಪ್ರತಾಪನು ಗರಡಿಯ ಸಾಧಕದಿಂದ ತನ್ನ ಶರೀರ ಬಲವನ್ನು ಹೆಚ್ಚಿಸಿಕೊಂಡಿದ್ದರೂ, ಮಾನಸಿಕ ತಾಪಗಳಿಂದ ಆತನ ಮನಸ್ಸು ಇನ್ನೂ ದೃಢವಾಗಿದ್ದಿಲ್ಲ. ತಂದೆಯು ವೈಭವವನ್ನು ಕಳ ಕೊಂಡು ಬಡವನಾದದ್ದೊಂದು ಪ್ರತಾಪಸಿಂಹನ ಪ್ರಗತಿಗೆ ಅನುಕೂಲ ವಾಯಿತು. ಅಕಬರಬಾದಶಹನಂಥ ಅತ್ಯಂತ ಪ್ರಬಲನಾದ ವೈರಿಯು ಯುದ್ಧಕ್ಕೆ ಸನ್ನದ್ಧನಾಗಿರುವಾಗ ಸಿಂಹಾಸನವೇರಿದ್ದರಿಂದ, ಸ್ವಾತಂತ್ರ್ಯ ಪ್ರಿಯನಾದ ಪ್ರತಾಪನು ತಾನಾಗಿ ಬಗೆಬಗೆಯ ಸಂಕಟಗಳನ್ನು ಕರೆದು ಕೊಂಡಂತಾಯಿತು. ಈ ಸಂಕಟಗಳಿಂದಲೇ ಪ್ರತಾಪನ ಮಾನಸಿಕಬಲವು ಹೆಚ್ಚುತ್ತಹೋಯಿತು. ಅದು ಹೆಚ್ಚುತ್ತಹೋದಂತೆ ಆತನು ದೃಢಪ್ರತಿಜ್ಞ ನಾಗಿ ಮಹಾತಪಸ್ವಿಯಂತೆ ತೇಜೋವಂತನಾದನು. ಚಿಂತೆ, ಕ್ಲೇಶ,

ವಿಪತ್ತು ಇವುಗಳಂಥ ಉತ್ತಮ ಶಿಕ್ಷಕರು ಮನಸ್ಸನ್ನು ಉತ್ಕೃಷ್ಟರೀತಿಯಿಂದ ತಿದ್ದಲಿಕ್ಕೆ ಅನ್ಯರು ದೊರೆಯಲಾರರು; ಮನಸ್ಸಿನ ದೌರ್ಬಲ್ಯರೋಗವನ್ನು ದೂರಮಾಡಲಿಕ್ಕೆ ಇವುಗಳಂಥ ಉತ್ತಮ ವೈದ್ಯರು ಮತ್ತೊಬ್ಬರು ದೊರೆಯಲಾರರು. ಕಂಬಾರನು ಸುತ್ತಿಗೆಯ ಪೆಟ್ಟುಗಳಿಂದ ಕಬ್ಬಿಣಕ್ಕೆ ಆಕಾರವನ್ನುಂಟುಮಾಡುವಂತೆ, ಚಿಂತಾ-ಸಂಕಟಗಳು ಮನುಷ್ಯನ ಹೃದಯದಮೇಲೆ ನಿರ್ದಯದಿಂದ ಆಘಾತವಗಾಡಿ, ಮನಸ್ಸನ್ನು ಸದೃಢವಾಗಿ ಮಾಡುತ್ತವೆ. ಈ ಪ್ರಸಂಗದಲ್ಲಿ ಮನುಷ್ಯನು ಹೃದಯದ್ರಾವಕ ಆರ್ತಸ್ವರದಿಂದ ಎಷ್ಟು ಬೇಡಿಕೊಂಡರೂ, ಆ ಚಿಂತಾ-ಕ್ಲೇಶ-ಸಂಕಟರೂಪರಾದ ಕಮ್ಮಾರರಿಗೆ ಅಂತಃಕರಣವು ಹುಟ್ಟುವದಿಲ್ಲ. ಒಂದೇ ಸವನೆ ಅವರು ಪೆಟ್ಟುಗಳನ್ನು ಹಾಕುತ್ತಲೇ ಇರುವರು. ಇದರಿಂದ ಕಡೆಗೆ ನಮ್ಮ ಮನಸ್ಸು ಸಿದ್ಧವಾಗುವದು; ಅದರ ದೃಢತ್ವವು ಹೆಚ್ಚುವದು; ಪ್ರವೃತ್ತಿಗಳು ದೃಢವಾಗುವವು; ಪ್ರತಿಜ್ಞೆಗಳು ಪರ್ವತದಂತೆ ಸ್ಥಿರವಾಗುವವು. ಬಾಲ್ಯದಿಂದ ಅಚ್ಚೆಯಿಂದ ಬೆಳೆದವರೂ, ಎರಡನೆಯವರ ಪರಿಶ್ರಮದಿಂದಲೂ ಪ್ರಯತ್ನದಿಂದಲೂ ದೊಡ್ಡವರಾದವರೂ, ಚಿಂತೆಯ ಸ್ಪರ್ಶವಾಗದವರೂ, ಆಪತ್ತು-ಕ್ಲೇಶಗಳ ಅನುಭವವಿಲ್ಲದವರೂ ಎಂದೂ ದೃಢಮನಸ್ಸಿನವರಾಗಲಾರರು; ಅವರ ಪ್ರತಿಜ್ಞೆಯು ಸ್ಥಿರವಾಗರಾರದು; ಅವರಿಂದ ಮಹತ್ಕಾರ್ಯಗಳು ಸರ್ವಥಾ ಸಾಧಿಸಲಾರವು. ಶಿವಾಜಿ, ಅಕಬರ, ಹೈದರ, ಕ್ಲೈವರಂಥ ಅಲೌಕಿಕ ಪುರುಷರು ಚಿಕ್ಕಂದಿನಲ್ಲಿ ಕಷ್ಟಪಟ್ಟವರಾದ್ದರಿಂದಲೇ ಮುಂದೆ ಅವರು ಮಹತ್ಕಾರ್ಯಗಳನ್ನು ಮಾಡಿದರು. ಹೀಗೆ ಕಷ್ಟಗಳಪರಂಪರೆಯಿಂದ ಸಿದ್ಧರಾದ ಮಹಾಪುರುಷರಲ್ಲಿ ಪ್ರತಾಪಸಿಂಹನನ್ನು ಮುಖ್ಯತ್ವೇನ ಗಣನೆಮಾಡಬಹುದೆಂಬದನ್ನು ಇನ್ನು ಮುಂದೆ ಹೆಜ್ಜೆಹೆಜ್ಜೆಗೆ ವಾಚಕರು ಕಂಡುಕೊಳ್ಳಬಹುದು. ತೇಜಸ್ವಿಯಾದ ಪ್ರತಾಪಸಿಂಹನು ಮೇವಾಡದ ಪಟ್ಟವನ್ನು ಏರಿದ ದಿವಸವೇ ಘೋರ ತಪೋದೀಕ್ಷೆಯನ್ನು ಹೊಂದಿದನೆಂದು ಹೇಳಬಹುದು!

೩ನೆಯ ಪ್ರಕರಣ

# ಬ್ರಹ್ಮಹತ್ಯೆ.

ವಿಜಯಾದಶಮಿಯ ಸಂಭ್ರಮದ ದಿವಸವು; ಅರವಲೀ ಪರ್ವತದ ಕಂದರದಲ್ಲಿರುವ ಉದೇಪುರದ ನೆರೆಯ ಅರಣ್ಯವು ಸಂದಟಿತವಾದ ವೃಕ್ಷಗಳಿಂದ ಅತ್ಯಂತ ಗಹನವಾಗಿದೆ; ಒಣಗಿದ ಎಲೆಗಳು ಉದುರಿ ಅಲ್ಲಲ್ಲಿ ದಟ್ಟವಾಗಿ ಬಿದ್ದಿರಲು, ಬೇಟೆಯಾಡುವದಕ್ಕಾಗಿ ಬಂದಿದ್ದ ರಜಪೂತವೀರರ ವೇಗದಸಂಚಾರದಿಂದ ಅಲ್ಲಿ ಸರಸರ ಸಪ್ಪಳವಾಗತೊಡಗಿದೆ; ಪಶು-ಮೃಗಗಳನ್ನು ಕೊಲ್ಲುವದಕ್ಕಾಗಿ ಅರಣ್ಯದತುಂಬ ಹಬ್ಬಿ ಹರಿಬಿದ್ದಿದ್ದ ರಜಪೂತರ ಸಿಂಹನಾದದ ಪ್ರತಿಧ್ವನಿಗಳಿಂದ, ಅರವಲೀ ಪರ್ವತದ ಗಾಂಭೀರ್ಯವು ಹೆಚ್ಚುತ್ತಲಿದೆ; ಕೆಲವರು ಮೃಗಗಳನ್ನು ಬೆನ್ನಟ್ಟುತ್ತಲಿದ್ದಾರೆ; ಕೆಲವರು ಅವನ್ನು ಹೊಡೆದು ಕೆಡವುತ್ತಲಿದ್ದಾರೆ; ಕೆಲವರು ನೆಲಕ್ಕೆ ಬಿದ್ದ ಮೃಗಗಳನ್ನು ಎಳೆದು ತರುತ್ತಲಿದ್ದಾರೆ; ಕೆಲವರು ಹುಲಿ-ಸಿಂಹ ಮೊದಲಾದ ಕ್ರೂರಮೃಗಗಳ ನಖಪಂಜರದ ಹೊಡತದಿಂದ ಛಿನ್ನವಿಚ್ಛಿನ್ನರಾಗಿ, ಆ ಮೃಗಗಳು ರಕ್ತ ಹೀರಿದ್ದರಿಂದ ಪ್ರಾಣಗಳನ್ನು ಬಿಡುತ್ತಲಿದ್ದಾರೆ. ಕೆಲವರು ಬಲೆಗಳಲ್ಲಿ ಬಿದ್ದಿದ್ದ ಮೃಗಗಳನ್ನು ಕೊಂದು ಅವನ್ನು ಬಲೆಗಳಿಂದ ಹೊರಗೆ ಎಳೆಯುತ್ತಲಿದ್ದಾರೆ. ಕಾಡಹಂದಿಗಳು ಸಾಯಲಾರದೆ ಒದ್ದಾಡುತ್ತಿರಲು, ಕೆಲವರು ಅವುಗಳ ಮೈಮೇಲಿನ ಕೂದಲುಗಳನ್ನು ಕಿತ್ತಿಕೊಳ್ಳುತ್ತಲಿದ್ದಾರೆ; ಕೆಲವರು ಬೇಟೆಯಾಡಿ ದಣಿದು, ಗಿಡದ ಬುಡದಲ್ಲಿ ಕುಳಿತು, ತಮ್ಮತಮ್ಮ ಪೌರುಷವನ್ನು ವರ್ಣಿಸುತ್ತ, ಪರಸ್ಪರ ವಿನೋದಮಾಡುತ್ತಲಿದ್ದಾರೆ; ಅತ್ತ ಕೆಲವರು ಬೇಟೆಯ ಆವೇಶದಿಂದ ಮೈಮೇಲೆ ಎಚ್ಚರಿಲ್ಲದೆ, ವ್ಯಾಘ್ರಾದಿ ಭಯಂಕರ ಮೃಗಗಳ ಮೇಲೆ

ಬೀಳತೊಡಗಿದ್ದಾರೆ. ಅಂಥ ಸಮಯದಲ್ಲಿ ಪ್ರತಾಪಸಿಂಹನು ಶಕ್ತಿಸಿಂಹ ನೆಂಬ ತನ್ನ ತಮ್ಮನೊಡನೆ ಒಂದು ಭಯಂಕರವಾದ ಕಾಡಹಂದಿಯನ್ನು ಬೆನ್ನಟ್ಟಿ, ಗಹನವಾದ ಅರಣ್ಯವನ್ನು ಪ್ರವೇಶಿಸಿದನು. ಆ ಕಾಡಮೃಗವು ಪ್ರಾಣಭಯದಿಂದ ಓಡಹತ್ತಿತು; ಆದರೆ ಅದರ ಆಯುಷ್ಯವು ತೀರಿದ್ದರಿಂದ ಅದು ಆ ಉಭಯ ಬಂಧುಗಳ ಕೈಯೊಳಗಿಂದ ಹ್ಯಾಗೆ ಪಾರಾಗಿ ಹೋಗ ಬೇಕು? ಆ ಇಬ್ಬರು ಶೂರರೂ ತಮ್ಮ ತಮ್ಮ ಧನುಷ್ಯಗಳಲ್ಲಿ ಬಾಣಗಳನ್ನು ತೊಟ್ಟು, ಗುರಿ ನೋಡಿ, ಹಂದಿಗೆ ಹೊಡೆದರು. ಆ ಎರಡು ಬಾಣಗಳಲ್ಲಿ ಯಾರದೋ ಒಂದು ಬಾಣವು ಸುಯ್‌ಗುಟ್ಟುತ್ತ ಹಂದಿಯ ಮಸ್ತಕದಲ್ಲಿ ಸೇರಲು, ಆ ಕ್ರೂರಮೃಗವು ನೆಲಕ್ಕೆ ಬಿದ್ದು ಅರಕ್ಷಣದಲ್ಲಿ ಪ್ರಾಣಬಿಟ್ಟಿತು. ಆಗ ಅವರಿಬ್ಬರು ಬಂಧುಗಳು ತಮ್ಮ ಸೇವಕರೊಡನೆ ಆ ಹಂದಿ ಬಿದ್ದಲ್ಲಿಗೆ ಬಂದರು. ಆಗ ಶಕ್ತಿಸಿಂಹನ ಒಬ್ಬ ಪ್ರೀತಿಯ ಸೇವಕನು ಆನಂದದಿಂದ ತನ್ನ ಒಡೆಯನನ್ನು ಉದ್ದೇಶಿಸಿ—ಅಹಹ! ನಮ್ಮ ಕುಮಾರ ಶ್ರೇಷ್ಠರ ಧನು ರ್ವಿದ್ಯೆಯ ಪ್ರವೀಣತೆಯನ್ನೇನು ವರ್ಣಿಸಬೇಕು! ಇವರು ಒಂದೇ ಬಾಣ ದಿಂದ ಇಂಥ ಪ್ರಚಂಡಪ್ರಾಣಿಯ ಸಂಹಾರ ಮಾಡಿದರು. ಇದರ ಹೆಸರು ಧನುರ್ವಿದ್ಯೆಯು! ಅನ್ನಲು, ತನ್ನ ಬಾಣದಿಂದ ಈ ಹಂದಿಯು ಬಿತ್ತೆಂದು ಅಭಿಮಾನಪಡುತ್ತಿದ್ದ ಪ್ರತಾಪಸಿಂಹನು , ಆ ಸೇವಕನನ್ನು ಸ್ವಲ್ಪ ಸಿಟ್ಟಿನಿಂದ ನೋಡಿದನು. ತನ್ನಮೇಲೆ ಮಹಾರಾಣಾನವರು ಸಿಟ್ಟಾದದ್ದನ್ನು ನೋಡಿ ಸೇವಕನ ಎದೆಯೊಡೆದು ನೀರಾಯಿತು- ಅವನು ಮುಖವೆತ್ತಿ ಪ್ರತಾಪಸಿಂ ಹನ ಕಡೆಗೆ ನೋಡಲಾರದೆ, ಸುಮ್ಮನೆ ಭೂಮಿಯನ್ನು ನೋಡುತ್ತನಿಂತು ಕೊಂಡನು. ತನ್ನ ಸೇವಕನ ಮಾತಿನಿಂದ ಪ್ರತಾಪಸಿಂಹನು ಸಿಟ್ಟಾದದ್ದನ್ನು ಶಕ್ತಿಸಿಂಹನು ಕೂಡಲೆ ಗೊತ್ತುಹಿಡಿದನು. ತನ್ನ ಸೇವಕನ ಮಾತು ಸತ್ಯ ವಾದದ್ದೆಂದು ತೋರಿಸುವದಕ್ಕಾಗಿ ಆತನು, ಅತ್ಯಾನಂದದಿಂದ ತನ್ನ ಸೇವಕ ನನ್ನು ಕುರಿತು—ಭೃತ್ಯಶ್ರೇಷ್ಠನೇ, ಈ ಮಾತಿನವಿಷಯವಾಗಿ ವ್ಯರ್ಥವಾದ ವಿವಾದಮಾಡುವದೇಕೆ? ಇಗೋ, ಇನ್ನೊಮ್ಮೆ ನೋಡು ನನ್ನ ಧನುರ್ವಿ ದ್ಯೆಯ ಚಾತುರ್ಯವನ್ನು, ಎಂದು ನುಡಿದು, ಹತ್ತರದ ಅರಳಿಯಗಿಡದೊಳ ಗಿನ ಒಂದು ಕೊಂಬೆಯೊಳಗಿನ ಹತ್ತು ಎಲೆಗಳನ್ನು ಒಂದೊಂದು ಬಾಣ ಪ್ರಯೋಗದಿಂದ ಹಾರಿಸಿದನು! ಹಾರಿಹೋದ ಎಲೆಗಳ ತುಂಬುಗಳಷ್ಟೇ

ಉಳಿದಿದ್ದವು. ಅದನ್ನು ನೋಡಿ ಆತನ ಸೇವಕನು ಒಡೆಯನನ್ನು ಬಹಳ ವಾಗಿ ಸ್ತುತಿಸಿದನು. ಇದರಿಂದ ಪ್ರತಾಪನ ಸಿಟ್ಟು ಮತ್ತಿಷ್ಟು ಹೆಚ್ಚಾಯಿತು. ತನ್ನ ಬಂಧುವು ಬುದ್ಧಿಪೂರ್ವಕವಾಗಿ ತನ್ನ ಅಪಮಾನಮಾಡುವನೆಂಬ ಭಾವನೆಯಿಂದ ಆತನು ಸಂತಾಪಗೊಂಡನು. ಇಬ್ಬರ ಬಾಣಗಳು ಒಂದೇಸವನೆ ಇದ್ದದ್ದರಿಂದ, ಯಾರಬಾಣದಿಂದ ಆ ಹಂದಿಯು ಸತ್ತಿತೆಂಬದನ್ನು ನಿರ್ಣಯಿಸಲಿಕ್ಕೆ ಬರುವಹಾಗಿದ್ದಿಲ್ಲ. ಪ್ರತಾಪನ ಹೃದಯದಲ್ಲಿ ಏಕಸಮಯಾವಚ್ಛೇದದಿಂದ ಅಭಿಮಾನ ಕ್ರೋಧಗಳೆರಡೂ ಉತ್ಪನ್ನವಾಗಿ, ಆತನ ಹೃದಯವು ದಗ್ಧವಾಗಹತ್ತಿತು. ಆತನು ಬಂಧುವನ್ನು ಕುರಿತು--

ಪ್ರತಾಪಸಿಂಹ--ಹೀಗೆ ನೀನು ವೃಥಾಭಿಮಾನವನ್ನು ಪ್ರಕಟಿಸುವದು ಸರಿಯಲ್ಲ! ಇದು ನೀಚರ ಕೆಲಸವು. ಸಿಸೋದಿಯಾ ಕುಲದಲ್ಲಿ ಹುಟ್ಟಿದ ಪವಿತ್ರ ಪುರುಷನಿಗೆ ವೃಥಾಭಿಮಾನವು ಒಪ್ಪುವದಿಲ್ಲ.

ಶಕ್ತಿಸಿಂಹ—ಅಂಣಾ, ತಮ್ಮಮುಖದಿಂದ ಇಂಥ ಅಪ್ರಯೋಜಕ ಶಬ್ದಗಳು ಹೊರಟಾವೆಂದು ನಾನು ಕನಸು ಮನಸುಗಳಲ್ಲಿ ಕೂಡ ಎಣಿಸಿದ್ದಿಲ್ಲ. ಈ ಹಂದಿಯು ನನ್ನಬಾಣದಿಂದ ಸತ್ತಿರುವದು; ಅಂದಬಳಿಕ ನಾನು ಅಭಿಮಾನಪಡುವದು ವ್ಯರ್ಥವು ಹ್ಯಾಗೆ?

ಪ್ರತಾಪಸಿಂಹ—ಈ ಹಂದಿಯು ನೆಲಕ್ಕೆ ಬಿದ್ದದ್ದು ನನ್ನ ಬಾಣದಿಂದ! ಅಂದಬಳಿಕ ನಿನ್ನ ಅಭಿಮಾನವು ವ್ಯರ್ಥವಾದದ್ದೇ ಸರಿ.

ಪ್ರತಾಪನ ಈ ಮಾತುಗಳನ್ನು ಕೇಳಿ ಶಕ್ತಿಸಿಂಹನು ಸಂತಾಪಗೊಂಡು—"ಅಂಣಾ, ಇದು ನಿನ್ನ ಭ್ರಾಂತಿಯು, ಹಂದಿಯು ನನ್ನ ಬಾಣದಿಂದಲೇ ನೆಲಕ್ಕೆ ಬಿದ್ದಿರುವದು" ಎಂದು ನುಡಿದು, ಸಂತಾಪದ ಭರದಲ್ಲಿ ತನ್ನ ಕೈಯೊಳಗಿನ ಖಡ್ಗದಿಂದ ಹತ್ತರದ ಒಂದು ಬಂಡೆಗೆ ಹೊಡೆದನು. ಆಗ ಆ ಬಂಡೆಗಲ್ಲಿನ ಪೆಣಿಕೆಗಳು ಹಾರಿ, ಚೂರುಗಳು ಸುತ್ತುಮುತ್ತು ಸಿಡಿದವು. ಶಕ್ತಿಸಿಂಹನ ಈ ಉದ್ಧಟತನವನ್ನು ನೋಡಿ, ಪ್ರತಾಪಸಿಂಹನ ಕಂಣುಗಳು ಕೆಂಪಾದವು. ಆತನು ಶಕ್ತಿಸಿಂಹನನ್ನು ಅಂಜಿಸುವ ಉದ್ದೇಶದಿಂದ—ಶಕ್ತಿಸಿಂಹ! ನನ್ನ ಕಂಣೆದುರಿಗೆ ಇಷ್ಟು ಉದ್ಧಟತನವೆ? ಇನ್ನು ಮೇಲಾದರೂ ಮನಸ್ಸನ್ನು ಬಿಗಿಹಿಡಿ. ಇಲ್ಲದಿದ್ದರೆ ನನ್ನ ಖಡ್ಗಕ್ಕೂ ನಿನಗೂ ಗಂಟು ಇರುತ್ತದೆ. ಇಂಥ ಅಪಮಾನಕಾರಕವಾದ ಕೃತ್ಯವನ್ನು

ಯಾರ ಎದುರಿಗೆ ಮಾಡಿದೆಯೆಂಬದರ ಎಚ್ಚರವಿರಲಿ. ಇನ್ನೊಮ್ಮೆ ಹೇಳು ತ್ತೇನೆ, ಇನ್ನು ಮೇಲಾದರೂ ವಿಚಾರದಿಂದ ನಡೆ.

ಮಾತಾಡುತ್ತಾಡುತ್ತ ಇಬ್ಬರೂ ಅಭಿಮಾನಕ್ಕೊಳಗಾದರು. ಅವರ ಸಿಟ್ಟು ಹೊಟ್ಟೆಯಲ್ಲಿ ಹಿಡಿಸದಾಯಿತು. ಶಕ್ತಿಸಿಂಹನು ಅಂಣನೆಂಬ ಗೌರವ ವನ್ನೂ, ಉದೇಪುರದ ಮಹಾರಾಣಾನೆಂಬ ಪೂಜ್ಯ ಭಾವವನ್ನೂ ಮರೆತು, ಎಲ್ಲರ ಎದುರಿಗೆ ಪ್ರತಾಪಸಿಂಹನನ್ನು ಕುರಿತು—ಮನುಷ್ಯನಿಗೆ ಅಧಿಕಾರವೂ, ಐಶ್ವರ್ಯವೂ ಪ್ರಾಪ್ತವಾದವೆಂದರೆ ಒಂದು ಪ್ರಕಾರದ ಅನಿವಾರ್ಯವಾದ ಅಭಿಮಾನವು ಆತನಲ್ಲಿ ಉತ್ಪನ್ನವಾಗುತ್ತಿರುತ್ತದೆ. ಅಭಿಮಾನದ ಮದದಲ್ಲಿ ಅವನು ಮಾಡಬಾರದ ಕೆಲಸವನ್ನು ಮಾಡುವನು; ಆದರೆ ಅಂಥ ಅಭಿಮಾ ನವು ಪ್ರತಾಪಾನ್ವಿತರಾದ ಪ್ರತಾಪಸಿಂಹ ಮಹಾರಾಜರಲ್ಲಿ—ಮೇವಾಡದ ನೂತನ ಮಹಾರಾಣಾನವರಲ್ಲಿ ಉತ್ಪನ್ನವಾಗಿರುವದು ಯೋಗ್ಯವಲ್ಲ, ಅನ್ನಲು, ಈ ಮಾತುಗಳು ಪ್ರತಾಪನ ಹೃದಯದಲ್ಲಿ ನಟ್ಟು ಬಾಧಿಸಹತ್ತಿ ದವು. ಆತನು ಕೆಂಪಡರಿದ ಕಣ್ಣುಗಳಿಂದ ಶಕ್ತಿಸಿಂಹನನ್ನು ನೋಡುತ್ತ— ಸಾಕು, ಬಾಯಿಮುಚ್ಚು! ಶಕ್ತಿಸಿಂಹ, ಇನ್ನು ನಿನ್ನ ಮಾತುಗಳನ್ನು ಮುಗಿಸು. ಅಮರ್ಯಾದೆಯು ಪರಮಾವಧಿಯಾಯಿತು. ಇನ್ನು ನಾನು ಸಮಾಧಾನ ಮಾಡಿಕೊಳ್ಳಲಾರೆನು. ಎಲೈ ಉದ್ಧಟನಾದ ಬಂಧುವೆ, ಇನ್ನು ನೀನು ಮರಣಕ್ಕೆ ಸಿದ್ಧನಾಗು. ಇಂದು ಭ್ರಾತೃಶೋಣಿತದಿಂದ ನನ್ನ ಈ ಖಡ್ಗವು ಚಿತ್ರಿತವಾಗುವ ಯೋಗವಿದ್ದಂತೆ ತೋರುತ್ತದೆ, ಎಂದು ನುಡಿದು, ತನ್ನ ಖಡ್ಗವನ್ನು ಒರೆಯಿಂದ ಹಿರಿದನು. ಅದನ್ನು ನೋಡಿ ಶಕ್ತಿಸಿಂಹನ ವೈ ಮೇಲಿನ ಎಚ್ಚರವು ತಪ್ಪಿತು. ಆತನು ಸ್ಥಳ—ಕಾಲ—ಮರ್ಯಾದೆಗಳ ವಿಚಾರವನ್ನೇನೂ ಮಾಡದೆ, ಅತಿ ಸಾಹಸದಿಂದ ತನ್ನ ಖಡ್ಗವನ್ನು ಒರೆ ಯಿಂದ ಹಿರಿಯುತ್ತ—ಒಬ್ಬ ಕ್ಷತ್ರಿಯನು ತನ್ನಂಥ ಮತ್ತೊಬ್ಬ ಕ್ಷತ್ರಿಯನಿಗೆ ಮರಣದ ಭಯವನ್ನು ತೋರಿಸುವದು ಹಾಸ್ಯಾಸ್ಪದವೇ ಸರಿ. ಬಂಧುವೇ, ನಾನು ಮರಣಕ್ಕೆ ಹೆದರುವೆನೆಂದು ತಿಳಿದಿರುವಿಯಾ? ನನ್ನ ಸ್ವಭಾವದ, ಹಾಗು ಪರಾಕ್ರಮದ ಪರಿಚಯವು ನಿನಗೆ ಇರುತ್ತದಷ್ಟೇ? ನಾವು ಚಿಕ್ಕವರಿ ದ್ದಾಗಿನ ಒಂದು ಪ್ರಸಂಗವನ್ನು ನೆನಪು ಮಾಡಿಕೊಂಡರೆ, ನಿನಗೆ ನಿನ್ನ ತಮ್ಮನ ಯೋಗ್ಯತೆಯ ಸ್ಮರಣವು ಪುನಃ ಆಗಬಹುದು. ಮಹಾರಾಜನೇ,

ಒಮ್ಮೆ ತಂದೆಯ ಸಮಕ್ಷ ನಮ್ಮಿಬ್ಬರ ಶಸ್ತ್ರ ವಿದ್ಯೆಯ ಪರೀಕ್ಷೆಯು ನಡೆದಿರುವಾಗ, ಹಾಸ್ಯವಿನೋದದಲ್ಲಿ ನಾನು ನನ್ನದೊಂದು ಕೈಬೆರಳನ್ನು ಖಡ್ಗದಿಂದ ಚಟ್ಟನೆ ತುಂಡರಿಸಿಕೊಂಡದ್ದನ್ನು ನೀನು ಮರತೆಯೋ? ಚಿಕ್ಕಂದಿನಿಂದಲೇ ಶೌರ್ಯವನ್ನು ಪ್ರಕಟಿಸುತ್ತ ಬಂದ ರಜಪೂತವೀರನು, ತಾರುಣ್ಯದಲ್ಲಿ ಸತ್ಯಕ್ಕಾಗಿ ಕಾದಲಿಕ್ಕೆ ಬೆದರಬಹುದೊ? ಪ್ರಭುವೇ, ನಾನು ಮರಣಕ್ಕೆ ಸಿದ್ಧನಾಗಿದ್ದೇನೆ, ಜೀವದ ಹಂಗು ನನಗಿಲ್ಲ. ನಿಮ್ಮ ಇಚ್ಛೆಯಿದ್ದರೆ ಯುದ್ಧದಿಂದ ನಮ್ಮಿಬ್ಬರ ವಾದದ ನಿರ್ಣಯವನ್ನು ಮಾಡಿಕೊಳ್ಳೋಣ! ಎಂದು ಆವೇಶದಿಂದ ನುಡಿದನು.

ನಿಮಿಷಾರ್ಧದಲ್ಲಿ ಅವರಿಬ್ಬರು ಬಂಧುಗಳು ಒಬ್ಬರ ಪ್ರಾಣವನ್ನೊಬ್ಬರು ಹೀರುವದಕ್ಕಾಗಿ ಒಬ್ಬರ ಮೇಲೊಬ್ಬರು ಏರಿಹೋದರು. ಆ ಕಾಲದ ಅವರ ಭಯಂಕರ ಮುಖಮುದ್ರೆಯನ್ನು ನೋಡಿ ಎಲ್ಲ ಸರದಾರರು ಮೂಢರಾಗಿ ಏನೂ ತಿಳಿಯದೆ ಸುಮ್ಮನೆ ನಿಂತುಕೊಂಡರು. ಈ ಅರಿಷ್ಟನಿವಾರಣಾರ್ಥವಾಗಿ ಎಲ್ಲರೂ ಮನಸ್ಸಿನಲ್ಲಿ ತಮ್ಮ ತಮ್ಮ ಇಷ್ಟ ದೇವತೆಗಳನ್ನು ಪ್ರಾರ್ಥಿಸತೊಡಗಿದರು. ಅಷ್ಟರಲ್ಲಿ ಒಬ್ಬ ವೀರಪುರುಷನು, ಈ ಅನಿಷ್ಟ ಪ್ರಸಂಗವನ್ನು ನಿಲ್ಲಿಸುವದಕ್ಕಾಗಿ ತನ್ನ ಜೀವದ ಹಂಗುದೊರೆದು ಆ ಬಂಧುಗಳ ಬಳಿಗೆ ಬಂದನು. ಆತನ ನಿಶ್ಚಯಯುಕ್ತವಾದ ಗಂಭೀರ ಮುದ್ರೆಯನ್ನು ನೋಡಿ, ಎಲ್ಲ ಸರದಾರರೂ ಹಿಂದಕ್ಕೆ ಸರಿದು, ಆತನಿಗೆ ಹಾದಿಯನ್ನು ಬಿಟ್ಟು, ಆತನನ್ನು ಎವೆಯಿಕ್ಕದೆ ನೋಡುತ್ತ ನಿಂತುಕೊಂಡರು. ಆ ವೀರ ಪುರುಷನು ಖಡ್ಗಪಾಣಿಗಳಾದ ಆ ಉಭಯ ಬಂಧುಗಳ ಮಧ್ಯದಲ್ಲಿ ನಿಂತುಕೊಂಡು, ಅವರನ್ನು ಕುರಿತು—ವಿಚಾರಮಾಡಿರಿ! ಸ್ವಲ್ಪವಾದರೂ ಧೈರ್ಯತಾಳಿರಿ! ಹೀಗೆ ಅಡ್ಡಹಾದಿಯನ್ನು ಹಿಡಿದು ಅಪಕೀರ್ತಿಗೆ ಗುರಿಯಾಗಬೇಡಿರಿ, ನಿಮಗೆ ಜಗದೀಶನ ಆಣೆಯಿರುತ್ತದೆ. ಪರಸ್ಪರರ ಪ್ರಾಣಹರಣಕ್ಕಾಗಿ ನೀವು ನಿಶ್ಚಯಿಸಿರುವಂತೆ, ರಾಜಕುಲದ ಹಿತವನ್ನು ಸಾಧಿಸುವದಕ್ಕಾಗಿಯೂ, ಮೇವಾಡದ ಕಲ್ಯಾಣವನ್ನು ಚಿಂತಿಸುವದಕ್ಕಾಗಿಯೂ ನಾನೂ ನಿಶ್ಚಯಮಾಡಿರುತ್ತೇನೆ. ನಿಮ್ಮಲ್ಲಿ ಒಬ್ಬರಾದರೂ ಈ ದೀನ ಬ್ರಾಹ್ಮಣನ ಮಾತನ್ನು ಕೇಳುವದಿಲ್ಲವೆ? ನಿಮ್ಮ ಸಂತಾಪವು ಸ್ವಲ್ಪವಾದರೂ ಕಡಿಮೆಯಾಗಲೊಲ್ಲದಲ್ಲ! ನಿಮ್ಮ ಅವಿಚಾರದ ಕೃತಿಯಿಂದ, ನಿಮ್ಮ

ಮಾತೃಭೂಮಿಯು ಭವಿಷತ್ಕಾಲದಲ್ಲಿ ಎಂಥ ಸಂಕಟಕ್ಕೆ ಗುರಿಯಾಗಬೇಕಾದೀತೆಂಬದನ್ನು ಕುರಿತು ಸ್ವಲ್ಪವಾದರೂ ವಿಚಾರಮಾಡಿರುವಿರಾ? ನೀವಿಬ್ಬರು ವ್ಯರ್ಥವಾದ ಅಭಿಮಾನಕ್ಕೊಳಗಾಗಿ ದುಷ್ಕೃತ್ಯವನ್ನು ಮಾಡಲಿಕ್ಕೆ ಸಿದ್ಧರಾಗಿರುತ್ತೀರೆಂದು ನಾನಂತೂ ಈಗ ಸ್ಪಷ್ಟವಾಗಿ ಹೇಳುತ್ತೇನೆ. ಇದರ ಮೇಲೆ ನಿಮ್ಮ ಇಚ್ಛೆಯು! ಉಪದೇಶಮಾಡುವ ನನ್ನ ಕರ್ತವ್ಯವನ್ನು ನಾನು ಮಾಡಿದ್ದೇನೆ. ರಾಜಪುರೋಹಿತರಾದ ನಾವು, ರಾಜನ ಕಲ್ಯಾಣಕ್ಕಾಗಿ ಪ್ರಾಣವನ್ನಾದರೂ ಅರ್ಪಿಸುವದು ನಮ್ಮ ವಂಶಪರಂಪರಾಗತ ಕರ್ತವ್ಯವಾಗಿರುತ್ತದೆ. ಮಹಾರಾಜರೇ, ನನ್ನ ಮಾತನ್ನು ನಡಿಸುವದು ಬಿಡುವದು ತಮ್ಮ ಇಚ್ಛೆಯನ್ನು ಅವಲಂಬಿಸಿರುವದು.

ಪುರೋಹಿತನ ಈ ಮಾತುಗಳನ್ನು ಕೇಳಿ, ಪ್ರತಾಪಸಿಂಹನು ವಿನಯದಿಂದ—ಸ್ವಾಮಿ, ಕ್ಷಮಿಸಿರಿ. ವಿಚಾರಮಾಡಲಿಕ್ಕೂ, ಉಪದೇಶವನ್ನು ಗ್ರಹಿಸಲಿಕ್ಕೂ ಈಗ ಸಮಯವು ಉಳಿದಿರುವದಿಲ್ಲ. ಸ್ವಲ್ಪ ತಡೆಯಿರಿ. ಈ ಕಾರ್ಯವಾದ ಮೇಲೆ ಚರಣಕ್ಕೆರಗುವೆನು. ಈ ವೃಥಾಭಿಮಾನಿಯಾದ ಡಾಂಭಿಕನ—ಎಂದು ನುಡಿದು, ಪ್ರತಾಪನು ಬಂಧುವಿನ ಮೇಲೆ ಖಡ್ಗವನ್ನು ಎತ್ತಿದನು. ಆಗ ಶಕ್ತಿಸಿಂಹನು—ಹೌದು, ನಾನು ಮಿಥ್ಯಾಭಿಮಾನಿಯು, ಡಾಂಭಿಕನು. ಆದರೆ ತಾವೂ ಮಿಥ್ಯಾಭಿಮಾನಿಗಳೂ, ಡಾಂಭಿಕರೂ ಇರುವಿರೆಂಬದು ನಿಜವಷ್ಟೇ ಎಂದು ನುಡಿದು, ಯುದ್ಧಕ್ಕೆ ಸಿದ್ಧನಾದನು. ಇಬ್ಬರೂ ಬಂಧುಗಳು ಶಸ್ತ್ರವಿದ್ಯೆಯಲ್ಲಿ ಮಹಾ ನಿಪುಣರಿದ್ದದರಿಂದ, ಜಯಾಪಜಯಗಳು ಯಾರನ್ನು ಆಶ್ರಯಿಸುವವೆಂಬದನ್ನು ಹೇಳುವಹಾಗಿದ್ದಿಲ್ಲ. ಪ್ರಸಂಗ ಬಂದಲ್ಲಿ ಒಬ್ಬರು, ಇಲ್ಲವೆ ಇಬ್ಬರೂ ರಣಭೂಮಿಯಲ್ಲಿ ದೇಹವನ್ನಿಡಬಹುದಾಗಿತ್ತು. ಇದನ್ನು ನೆನಿಸಿ ಎಲ್ಲ ಸರದಾರರೂ ಭಯಭೀತರಾಗಿ ನಿಂತುಕೊಂಡಿದ್ದರು. ಆಗ ರಾಜಪುರೋಹಿತನು ಶಕ್ತಿಸಿಂಹನನ್ನು ಕುರಿತು—ಕುಮಾರ! ನೀವಾದರೂ ನನ್ನ ಪ್ರಾರ್ಥನೆಯನ್ನು ಮನ್ನಿಸಿ ಶಾಂತರಾಗಿರಿ, ಎಂದು ಅಂಗಲಾಚಿ ಬೇಡಿಕೊಂಡನು. ಅದಕ್ಕೆ ಶಕ್ತಿಸಿಂಹನು ಗಹಗಹಿಸಿ ನಗುತ್ತ—ಸ್ವಾಮಿ, ಇದೊಂದು ಪ್ರಸಂಗದಲ್ಲಿ ತಾವು ನನ್ನನ್ನು ತಡೆಯಬಾರದು, ಹಿಂದಕ್ಕೆ ಸರಿಯಬೇಕು. ನನ್ನ ಮಾನಖಂಡನ ಮಾಡಿದ ಈ ಜ್ಯೇಷ್ಠ ಬಂಧುವಿನ ಪ್ರಾಣಹರಣ ಮಾಡಿದಾಗಲೇ ನನಗೆ ಸಮಾಧಾನವಾಗುವದು.

ಅಲ್ಲಿಯವರೆಗೆ ನಾನು ಶಾಂತವಾಗಲಾರೆನು, ಎಂದು ನುಡಿದನು. ಆ ಬಂಧುಗಳಲ್ಲಿ ಘೋರವಾದ ಯುದ್ಧವು ಆರಂಭವಾಯಿತು. "ವಿನಾಶಕಾಲೇ ವಿಪರೀತಬುದ್ಧಿಃ" ಎಂಬಂತೆ, ಉದೇಪುರದ ರಾಣಾನಿಗೆ ಒದಗಬೇಕಾಗಿದ್ದ ಹಲವು ಸಂಕಟಗಳ ಪೂರ್ವಚಿಹ್ನಕ್ಕಾಗಿ, ಬ್ರಹ್ಮಹತ್ಯೆಯ ಮಹಾಪಾತಕವು ಈಗ ಅವರಿಗೆ ಒದಗುವ ಯೋಗವಿತ್ತು; ಆದ್ದರಿಂದಲೇ ಅವರಿಬ್ಬರು ಬಂಧುಗಳು ತಮ್ಮ ಕುಲಪುರೋಹಿತರ ಮಾತು ಕೇಳದೆ ಹಟಹಿಡಿದರು. ವ್ಯವಹಾರದಲ್ಲಿಯಾದರೂ ಬುದ್ಧಿಹೇಳುವವರ ಕೂಡ ನಾವು ದುರಭಿಮಾನದಿಂದ ಹೀಗೆಯೇ ಗುದ್ದಾಡುತ್ತೇವೆಂಬದನ್ನು ವಾಚಕರು ನೆನಪಿನಲ್ಲಿಟ್ಟು, ವಿಚಾರದಿಂದ ನಡೆಯಬೇಕು. ಮಹಾಪುರುಷನಾದ ರಾಜಪುರೋಹಿತನು ಅವರಿಬ್ಬರು ವೀರರ ನಡುವೆ ನಿಂತುಕೊಂಡು, ಗಟ್ಟಿಯಾಗಿ ಒದರಿ—"ರಾಜಪುತ್ರವೀರರೇ, ಹಾಗಾದರೆ ನೀವು ನನ್ನ ಮಾತು ಕೇಳುವದಿಲ್ಲವೆ? ನಿಮ್ಮ ಇಚ್ಛೆಯು! ಇನ್ನು ನಾನು ನನ್ನ ಕರ್ತವ್ಯದ ಕೊನೆಯ ಭಾಗವನ್ನು ಪೂರ್ಣ ಮಾಡುವೆನು. ಎಲೈ ಆಕಾಶಸ್ಥ ದೇವತೆಗಳೇ, ವಸುಂಧರೆಯೇ, ದಿಕ್ಪಾಲಕರೇ, ಕುಲಸ್ವಾಮಿಯಾದ ಏಕಲಿಂಗೇಶ್ವರನೇ ಇನ್ನು ಮೇಲೆ ನೀವೆಲ್ಲರೂ ಈ ರಾಜಬಂಧುಗಳ ಸಂರಕ್ಷಣ ಮಾಡಿರಿ! ರಾಜವಂಶದ ಕಲ್ಯಾಣಮಾಡಿರಿ!! ಸಿಸೋದಿಯಾ ಕುಲದ ರಾಜಪುತ್ರರನ್ನು ಅಖಂಡವಾಗಿ ರಕ್ಷಿಸಿರಿ!!! ಇವರಿಬ್ಬರು ಬದುಕಿದ್ದರೆ, ಇಂದಿಲ್ಲ ನಾಳೆಯಾದರೂ ಇವರು ಮೊಗಲರ ದವಡೆಯೊಳಗಿಂದ ಮೇವಾಡ ದೇಶವನ್ನು ಬಿಡಿಸಿಕೊಂಡಾರು; ಪುನಃ ದೇಶದ ಸ್ವಾತಂತ್ರ್ಯವನ್ನು ಕಾಯ್ದುಕೊಂಡು ರಜಪೂತರ ಹೆಸರನ್ನು ಅಜರಾಮರವಾಗಿ ಮಾಡಿಯಾರು; ಆದರೆ ಭ್ರಾತೃದ್ರೋಹದಿಂದ ಮಾತ್ರ ಯಾರ ಕಲ್ಯಾಣವೂ ಆಗುವಹಾಗಿಲ್ಲ; ಆದ್ದರಿಂದ ಇವರ ಭ್ರಾತೃದ್ರೋಹರೂಪವಾದ ಅಗ್ನಿಯು ಈ ಬ್ರಾಹ್ಮಣನ ರಕ್ತಸಿಂಚನದಿಂದ ಶಾಂತವಾಗಲಿ. ಹೇ ದಯಾಘನನಾದ ಪರಮೇಶ್ವರನೇ," ಎಂದು ನುಡಿದು, ಆ ಬ್ರಾಹ್ಮಣನು ಖಡ್ಗವನ್ನು ತನ್ನ ಹೃದಯದಲ್ಲಿ ಚುಚ್ಚಿಕೊಂಡು ಪ್ರಾಣತ್ಯಾಗ ಮಾಡಿದನು. ಕೂಡಲೆ ಬ್ರಾಹ್ಮಣನ ಉಷ್ಣ ರಕ್ತವು ಚಿಲ್ಲೆಂದು ಚಿಮ್ಮಿ, ಇಬ್ಬರು ಬಂಧುಗಳ ಮೈಮೇಲೆ ಸಿಡಿದು, ಅವರ ಉಡಿಗೆ-ತೊಡಿಗೆಗಳು ರಕ್ತಮಯವಾದವು. ರಕ್ತಪ್ರವಾಹವು ಹರಿಯಹತ್ತಿತು. ಆಗ ಅವರು ಎಚ್ಚತ್ತು—ಹಾಯ್

ಹಾಯ್! ನಮ್ಮ ಸಲುವಾಗಿ ಈ ಬ್ರಾಹ್ಮಣನು ಆತ್ಮಹತ್ಯವನ್ನು ಮಾಡಿಕೊಂಡನಲ್ಲ! ಇವನು ಅಂಥಯಿಂಥವನಲ್ಲ! ಧರ್ಮಪರಾಯಣನು, ಶಾಸ್ತ್ರಜ್ಞನು, ಉದಾರಚಿತ್ತನು, ಸ್ವಾಮಿನಿಷ್ಠನು. ಇಂಥವನ ರಕ್ತದಿಂದ ನಮ್ಮ ಶರೀರಗಳು ಕಲಂಕಿತವಾದದ್ದು ಯೋಗ್ಯವಾಗಲಿಲ್ಲ! ಎಂಬಿವೇ ಮೊದಲಾದ ಹಲವು ವಿಚಾರಗಳು ಆ ಬಂಧುಗಳ ಮನಸ್ಸಿನಲ್ಲಿ ಉತ್ಪನ್ನವಾದವು.

ಈ ಹೃದಯದ್ರಾವಕವಾದ ಶೋಚನಿಯ ಪ್ರಸಂಗದ ಭಯಂಕರತೆಯು ಬರಬರುತ್ತ ಆ ಬಂಧುಗಳ ಮನಸ್ಸಿಗೆ ನಡಲು, ಅವರ ಕೈಯೊಳಗಿನ ಖಡ್ಗಗಳು ತಾವಾಗಿಯೇ ಕಳಚಿಬಿದ್ದವು. ಅವರ ನೇತ್ರಗಳು ಅಶ್ರುಪೂರ್ಣವಾದವು. ತಲೆಗೇರಿದ ಅವರ ಸಿಟ್ಟು ಪೂರಾ ಇಳಿದು ಹೋಯಿತು. ತಮ್ಮ ದುಷ್ಕೃತ್ಯದಸಲುವಾಗಿ ಅವರಿಗೆ ಪಶ್ಚಾತ್ತಾಪವಾಯಿತು. ಅವರು ಕೆಲವು ವೇಳೆಯವರೆಗೆ ಪಾಷಾಣದ ಮೂರ್ತಿಗಳಂತೆ ಸ್ತಬ್ಧವಾಗಿ ನಿಂತುಬಿಟ್ಟರು. ಆ ಮೃತ ಬ್ರಾಹ್ಮಣನ ಶರೀರವನ್ನು ಎವೆಯಿಕ್ಕದೆ ನೋಡುತ್ತ ಅವರಿಬ್ಬರು ಮನಸ್ಸಿನಲ್ಲಿ ತಮ್ಮನ್ನು ಧಿಕ್ಕರಿಸಿಕೊಳ್ಳಹತ್ತಿದರು. ಮುಂದೆ ಪ್ರತಾಪಸಿಂಹನು ಬ್ರಾಹ್ಮಣನ ದಹನ ಕ್ರಿಯೆಯನ್ನು ಯಥಾಸಾಂಗವಾಗಿ ಮಾಡಿಸಿ, ಆತನ ಸ್ವಾಮಿನಿಷ್ಠೆಯ, ಹಾಗು ಶಿಷ್ಯವಾತ್ಸಲ್ಯದ ಸಂಸ್ಮರಣಾರ್ಥವಾಗಿ ಆತನು ಮರಣಹೊಂದಿದ ಸ್ಥಳದಲ್ಲಿ ಒಂದು ಸಮಾಧಿ ಸ್ತಂಭವನ್ನು ಕಟ್ಟಿ, ಅದರ ಮೇಲೆ ಆತನ ಸಂಕ್ಷಿಪ್ತ ಚರಿತ್ರವನ್ನು ಬರೆಸಿದನು; ಮತ್ತು ಆ ಬ್ರಾಹ್ಮಣನ ಕುಟುಂಬದ ನಿರ್ವಾಹಕ್ಕಾಗಿ ವರ್ಷಾಶನವನ್ನು ಹಾಕಿಕೊಟ್ಟನು. ಈ ವರ್ಷಾಶನವು ಈಗಲೂ ಆ ಬ್ರಾಹ್ಮಣನ ವಂಶಜರಿಗೆ ದೊರೆಯುತ್ತಿರುವದು. ಅದಿರಲಿ. ಇಷ್ಟಾದ ಬಳಿಕ ಪ್ರತಾಪಸಿಂಹನು ಶಕ್ತಿಸಿಂಹನನ್ನು ಕುರಿತು—ಶಕ್ತೀ, ಇನ್ನು ನೀನು ನನ್ನ ರಾಜ್ಯದೊಳಗಿಂದ ಹೊರಟುಹೋಗು ನೋಡೋಣ! ಇನ್ನು ಮೇಲೆ ನನ್ನ ರಾಜ್ಯದಲ್ಲಿ ಎಲ್ಲಿಯಾದರೂ ನೀನು ದೃಷ್ಟಿಗೆ ಬಿದ್ದರೆ, ಸೆರೆಯಾಳಾಗಬೇಕಾದೀತು; ನಿನ್ನ ಅಪರಾಧಕ್ಕಾಗಿ ಯೋಗ್ಯ ಪ್ರಾಯಶ್ಚಿತ್ತವಾಗದೆಯಿರಲಿಕ್ಕಿಲ್ಲ, ಅನ್ನಲು, ಶಕ್ತಿಸಿಂಹನು ಅತ್ಯಂತ ವಿನಯದಿಂದ, "ರಾಜಾಜ್ಞೆಯು ಶಿರಸಾ ವಂದ್ಯವಾಗಿರುತ್ತದೆ" ಎಂದು ನುಡಿದು, ತನ್ನ ಸೇವಕರೊಡನೆ ತತ್ಕ್ಷಣವೇ ಮೇವಾಡ ದೇಶವನ್ನು ಬಿಟ್ಟು ಹೊರಟನು.

ಬ್ರಹ್ಮಹತ್ಯೆಯ ಪಾತಕದ ಭಯವು ಪ್ರತಾಪಸಿಂಹನ ಮನಸ್ಸಿನಲ್ಲಿ ಕಟಿಯಹತ್ತಿತು. ಆತನು ಆಗಾಗ್ಗೆ ಮನಸ್ಸಿನಲ್ಲಿ—ಹಾಯ್ ಹಾಯ್! ಪರಮೇಶ್ವರಾ, ಪ್ರಾರಂಭದಲ್ಲಿಯೇ ಅಪಶಕುನವಾಯಿತಲ್ಲ! ಇದರ ಪರಿಣಾಮವೇನಾಗುವದೋ ನೀನೇ ಬಲ್ಲೆ. ಆಗುವದು ಆಗಿಯೇ ತೀರಬೇಕಲ್ಲದೆ, ಅದನ್ನು ತಪ್ಪಿಸುವವರು ಯಾರು? ನಾನಂತು ಮೇವಾಡದ ಸ್ವಾತಂತ್ರ್ಯವನ್ನು ರಕ್ಷಿಸಲು ಹೆಣಗತಕ್ಕವನು! ನನ್ನ ನಿಶ್ಚಯದಲ್ಲಿ ಅಂತರವಾಗಲಿಕ್ಕಿಲ್ಲ. ಪ್ರಾಣಹೋದರೂ ಮೊಗಲರಿಗೆ ಶರಣುಹೋಗಲಾರೆನು. ಪ್ರತಿಜ್ಞೆಯನ್ನು ಪೂರ್ತಿಗೊಳಿಸುವದೇ ನನ್ನ ಜನ್ಮಸಾಫಲ್ಯವು; ಆದರೆ ಬ್ರಹ್ಮಹತ್ಯೆಯ ಪರಿಣಾಮವು ಏನಾಗುವದೊ? ಬ್ರಹ್ಮಹತ್ಯೆಯಾದ ಸ್ಥಳವನ್ನು ತ್ಯಾಗಮಾಡಿ, ನಾನು ಮಹಾ ತಪಸ್ವಿಯಂತೆ ಕಠಿಣ ವ್ರತವನ್ನು ಸ್ವೀಕರಿಸತಕ್ಕದ್ದು. ಇದರಿಂದ ಬ್ರಹ್ಮಹತ್ಯೆಯ ಪಾತಕಕ್ಕಾಗಿ ಪ್ರಾಯಶ್ಚಿತ್ತವನ್ನು ಭೋಗಿಸಿದಂತೆ ಆಗುವದಲ್ಲದೆ, ಸ್ವಾತಂತ್ರ್ಯ ರಕ್ಷಣಕ್ಕೂ ಅನುಕೂಲವಾಗುವದು. ಇನ್ನು ಮೇಲೆ ಮೇವಾಡದ ರಜಪೂತರು ವಿಲಾಸಭೋಗಕ್ಕೆ ಮೆಚ್ಚಿ ಕಾಲಹರಣ ಮಾಡಹತ್ತಿದರೆ, ಅಕಬರ ಬಾದಶಹನು ನಮ್ಮ ಸ್ವಾತಂತ್ರ್ಯ ಲಕ್ಷ್ಮಿಯನ್ನು ಹರಣ ಮಾಡದೆ ಇರನು. ಸ್ವಾತಂತ್ರ್ಯವನ್ನು ಕಾಯ್ದುಕೊಂಡು ವನವಾಸವನ್ನು ಭೋಗಿಸಿದರೂ ಚಿಂತೆಯಿಲ್ಲ. ಸ್ವಾತಂತ್ರ್ಯ ಹೀನರಾಗಿ ರಾಜ್ಯವಾಳುವದರಲ್ಲಿ ಪೌರುಷವೂ ಸುಖವೂ ಇರುವದಿಲ್ಲ. ಪಾಂಡವರಂಥ ಮಹಾತ್ಮರ, ರಾಜ್ಯವು ಪ್ರಾಪ್ತವಾಗುವವರೆಗೆ ವನವಾಸವನ್ನು ಭೋಗಿಸಲಿಲ್ಲವೇ? ಕ್ಷತ್ರಿಯ ರಾಜರಿಗೆ ಸ್ವಾತಂತ್ರ್ಯಾಭಾವದಲ್ಲಿ ವನವಾಸವೇ ಶ್ರೇಯಸ್ಕರವು. ಇನ್ನು ಉದೇಪುರವನ್ನು ಬಿಟ್ಟು ಕಮಳನೇರವೆಂಬ ದುರ್ಗವನ್ನು ರಾಜಧಾನಿಯಾಗಿ ಮಾಡಿಕೊಂಡು ಅಲ್ಲಿ ರಜಪೂತ ವೀರರೊಡನೆ ಗುಡಿಸಲಿನಲ್ಲಿ ಇರತಕ್ಕದ್ದು. ಉದೇಪುರವೂ, ಅದರ ಸುತ್ತಮುತ್ತಲಿನ ಪ್ರದೇಶಗಳೂ ನಿರ್ಮಾನುಷವಾಗಿ ಅಲ್ಲಿ ಘೋರವಾದ ಅರಣ್ಯವು ಬೆಳೆಯತಕ್ಕದ್ದು. "ಮೇವಾಡದ ರಾಣಾನ ಸಂಗಡ ಆತನ ಯಾವತ್ತು ರಜಪೂತ ಪರಿವಾರವು ಮನೆಮಾರುಗಳನ್ನು ತೊಲಗಿ ಅರಣ್ಯವನ್ನು ಸೇರತಕ್ಕದ್ದು. ಮೇವಾಡದೇಶವು ಇಂಥ ಕಠಿಣವ್ರತದ ದೀಕ್ಷೆಯನ್ನು ಹೊಂದಬೇಕಾಗಿರುವರಿಂದಲೇ ಇಂದು ನನಗೆ ಬ್ರಹ್ಮಹತ್ಯೆಯು ಒದಗಿರುತ್ತದೆ. ದೇಶತ್ಯಾಗವೇ

ಬ್ರಹ್ಮಹತ್ಯೆಯು ಪ್ರಾಯಶ್ಚಿತ್ತವು. ನನ್ನ ಈ ನಿಶ್ಚಯದಲ್ಲಿ ಅಂತರವಾಗಲಿ ಕ್ಕಿಲ್ಲ." ಎಂದು ಚಿಂತಿಸುತ್ತಿದ್ದನು.

ಈ ಮೇರೆಗೆ ನಿರ್ಧರಿಸಿದ ಪ್ರತಾಪಸಿಂಹನು ಸ್ವಪರಿವಾರದೊಡನೆ ರಾಜಧಾನಿಯಕಡೆಗೆ ತಿರುಗಿದನು. ಇತ್ತ ಶಕ್ತಿಯು ಅಣ್ಣನ ಅಪ್ಪಣೆಯಂತೆ ಮೇವಾಡವನ್ನು ಬಿಟ್ಟು ಹೊರಟು, ಮಾರ್ಗವನ್ನು ಕ್ರಮಿಸಹತ್ತಿದನು. ಬ್ರಹ್ಮಹತ್ಯೆಯಿಂದ ಪ್ರತಾಪನಿಗಾದಷ್ಟೇ ವ್ಯಸನವು ಶಕ್ತಿಸಿಂಹನಿಗೂ ಆಯಿತು; ಆದರೆ ತನ್ನನ್ನು ರಾಜ್ಯದಿಂದ ಹೊರಗೆ ಹಾಕಿದ ಅಪಮಾನವು ಅವನಿಗೆ ಸಹನವಾಗಲಿಲ್ಲ. ಆತನ ಆ ಅಪಮಾನವು ಮೆಲ್ಲಮೆಲ್ಲನೆ ದ್ವೇಷದ ಸ್ವರೂಪವನ್ನು ಹೊಂದಿತು. ಆ ದ್ವೇಷಾಗ್ನಿಯು ದಿನದಿನಕ್ಕೆ ಹೊತ್ತುತ್ತ ಹೋಗಿ, ಅದು ಶಕ್ತಿಸಿಂಹನ ಹೃದಯವನ್ನು ಸುಡಹತ್ತಿತು. ಆತನು ಅಶ್ವಾರೂಢನಾಗಿ ಮಾರ್ಗವನ್ನು ಕ್ರಮಿಸಹತ್ತಿದನು. ಇಂದು, ನಾಳೆ, ನಾಡದು ಎಂದು ಒಂದೊಂದೇ ದಿವಸಗಳು ಕ್ರಮಿಸಹತ್ತಿದವು. ಆತನು ಅನೇಕ ಪರ್ವತಗಳನ್ನೂ, ಅರಣ್ಯಗಳನ್ನೂ, ದೇಶಗಳನ್ನೂ ದಾಟಿಹೋದನು. ಒಂದುದಿನ ಹಗಲೆಲ್ಲ ಹಾದಿಯನ್ನು ನಡಿದು ದಣಿದು ಸೂರ್ಯಾಸ್ತದ ಸಮಯದಲ್ಲಿ ಒಂದು ನಿರ್ಜನವಾದ ಅರಣ್ಯದಲ್ಲಿ ಕುದುರೆಯನ್ನು ಇಳಿದು, ಒಂದು ಗಿಡದ ಬುಡದಲ್ಲಿ ಕುಳಿತುಕೊಂಡನು. ಬಳಿಯಲ್ಲಿ ಒಂದು ಸ್ವಚ್ಛವಾದ ನೀರಿನ ಪ್ರವಾಹವು ಸಣ್ಣಾಗಿ ಹರಿಯುತ್ತಿತ್ತು. ಸಂಧ್ಯಾಕಾಲದಲ್ಲಿ ಆ ಮಂಜುಲ ನಾದದ ಜಲಪ್ರವಾಹವನ್ನು ನೋಡಿ ಯಾರ ಮನಸ್ಸಾದರೂ ಸುಪ್ರಸನ್ನವಾಗಬಹುದಾಗಿತ್ತು; ಆದರೆ ದುರಭಿಮಾನದ ದ್ವೇಷಾಗ್ನಿಯಿಂದ ತಪ್ತವಾದ ಶಕ್ತಿಸಿಂಹನ ಮನಸ್ಸುಮಾತ್ರ ಅದರಿಂದ ಶಾಂತವಾಗಲಿಲ್ಲ. ಆತನು ಜಲಪ್ರವಾಹದಲ್ಲಿ ಕೈಕಾಲು—ಮೋರೆಗಳನ್ನು ತೊಳೆದು ಬಾಯಿ ಮುಕ್ಕಳಿಸಿ ಉಗುಳಿದನು. ಮನಸ್ಸಿನ ತಾಪದಲ್ಲಿಯೇ ಆತನ ಸಂಧ್ಯಾವಂದನದ ಕಾರ್ಯವು ನೆರವೇರಿತು. ಆತನ ಪರಿವಾರವು ಬಳಿಯಲ್ಲಿಯೇ ವಿಶ್ರಮಿಸುತ್ತಲಿತ್ತು. ಶಕ್ತಿಸಿಂಹನು ಸಂಧ್ಯಾವಂದನೆಯನ್ನು ಮಾಡಿ ಪುನಃ ಆ ವೃಕ್ಷದ ಬುಡದಲ್ಲಿ ಬಂದು ಕುಳಿತನು. "ಉದೇಪುರದ ರಾಣಾನ ಬಂಧುವಾದ ತಾನು ದೇಶಭ್ರಷ್ಟನಾದೆನಲ್ಲ" ಎಂಬ ವಿಚಾರವು ಉತ್ಪನ್ನವಾಗಿ ಆತನ ಮನಸ್ಸು ಅಸ್ವಸ್ಥವಾಯಿತು. ಆತನು ಮನಸ್ಸಿನಲ್ಲಿ—ಎಂಥ ಅಪಮಾನವಿದು! ಅಣ್ಣತಮ್ಮಂ

ದಿರಲ್ಲಿ ಹೀಗಾಗಬೇಕೆ? ಇದೆಲ್ಲ ಅಧಿಕಾರದ ಹೆಮ್ಮೆಯು, ಐಶ್ವರ್ಯದ ಮದವು! ಎಲೈ ಅಸತ್ಯವಾದಿಯಾದ ರಾಣಾ, ನಿನಗೆ ಧಿಕ್ಕಾರವು!! ಎರಡನೆಯವರ ಶ್ರಮದ ಫಲವನ್ನು ಇಚ್ಛಿಸುವ ನೀನು, ಸಾರ್ವಭೌಮನಿದ್ದರೂ ತಿರಸ್ಕರಣೀಯನೇ ಸರಿ!!! ಆದರೆ ಪ್ರತಾಪನು ಬಂಧುವಲ್ಲವೆ? ಬಂಧುವು ಮಾಡಿದ ಅಪಮಾನವನ್ನು ಸಹನಮಾಡಿಕೊಳ್ಳಲೋ? ಛೆ, ಛೆ! ಹೀಗೆ ಎಂದಿಗೂ ಆಗದು. ಪ್ರತಾಪನು ನನ್ನಿಂದ ತನಗಾದ ಅಪಮಾನವನ್ನು ಮರೆತಿದ್ದರೆ, ನಾನೂ ಆತನಿಂದ ನನಗಾದ ಅಪಮಾನವನ್ನು ಮರೆಯುತ್ತಿದ್ದೆನು; ಆದರೆ ಆತನು ಹಾಗೆ ಮಾಡದೆ ನನ್ನನ್ನು ಸ್ವದೇಶದಿಂದ ಹೊರಡಿಸಿದ್ದರಿಂದ, ನಾನಾದರೂ ಆತನಿಂದಾದ ಅಪಮಾನಕ್ಕಾಗಿ ಸೇಡು ತೀರಿಸಿಕೊಳ್ಳದೆ ಬಿಡುವದಿಲ್ಲ. ಪ್ರತಾಪನ ಸೇಡು ತೀರಿಸಿಕೊಂಡ ಹೊರತು—ಆತನನ್ನು ದೇಶಭ್ರಷ್ಟನಾಗಮಾಡಿ ಭಿಕ್ಷೆ ಬೇಡಲಿಕ್ಕೆ ಹಚ್ಚಿದ ಹೊರತು, ನನಗೆ ಸಮಾಧಾನವಾಗಲಾರದು. ಈ ಕಾರ್ಯವನ್ನು ಸಾಧಿಸಬೇಕಾದರೆ, ನಾನು ಅಕಬರನಿಗೆ ಶರಣುಹೋಗಿ ಆತನ ದಾಸ್ಯವನ್ನು ಸ್ವೀಕರಿಸಬೇಕು; ಆದರೆ ವಿಧರ್ಮಿಗಳಾದ ಯವನರ ದಾಸ್ಯವನ್ನು ನಾನು ಸ್ವೀಕರಿಸಬಹುದೋ? ನಾನು ಬಾಪ್ಪಾರಾವಳನ ವಂಶಜನಲ್ಲವೆ? ಬಂಧುವಿನಿಂದಾದ ಅಪಮಾನದ ಸೇಡನ್ನು ತೀರಿಸಿಕೊಳ್ಳುವದಕ್ಕಾಗಿ ಸ್ವದೇಶ ದ್ರೋಹವನ್ನೂ, ಸ್ವಜಾತಿಗಳ ದ್ರೋಹವನ್ನೂ ಕಟ್ಟಿಕೊಂಡು ಕುಲಕಂಟಕನಾಗಬಹುದೊ? ಶಕ್ತಿಸಿಂಹ, ಏನು ನಿನ್ನ ವಿಚಾರವಿದು! ವೈರಿಗಳಿಂದಾದ ಅಪಮಾನವನ್ನು ಸಹಿಸಬಹುದೆ? ಎಲ್ಲಿಯ ಸ್ವದೇಶವು, ಎಲ್ಲಿಯ ಜ್ಞಾತಿಗಳು! ಸೇಡು ತೀರಿಸಿಕೊಳ್ಳಬೇಕು. ಧರ್ಮಾಧರ್ಮದ, ಹಾಗು ಪಾಪಪುಣ್ಯದ ವಿಚಾರವು ಒತ್ತಟ್ಟಿಗಿರಲಿ! ಸ್ವದೇಶ ವಾತ್ಸಲ್ಯವೂ ಜಾತ್ಯಭಿಮಾನವೂ ಮಣ್ಣುಗೂಡಲಿ! ಅದನ್ನು ತಕ್ಕೊಂಡು ನಾನು ಮಾಡುವದೇನು? ಹಾಯ್ ಹಾಯ್! ಶಕ್ತಿಸಿಂಹಾ, ಇದು ನಿನ್ನ ದುರ್ಬುದ್ಧಿಯು. ಬ್ರಹ್ಮಹತ್ಯೆಯ ದೋಷದಿಂದ ನಿನ್ನ ಬುದ್ದಿ ಮಲೀನವಾಯಿತೋ ಏನು? ಆಗಲಿ! ಬುದ್ಧಿಯು ಬೇಕಾದಷ್ಟು ಮಲಿನವಾಗಲಿ ನಾನು ಅಪಮಾನವನ್ನು ಸರ್ವಥಾ ಸಹಿಸಲಾರೆನು. ಅಕಬರಬಾದಶಹನಿಗೆ ಶರಣುಹೋಗಿ ಬಂಧುವಿನ ಸೇಡನ್ನು ತೀರಿಸಿಕೊಳ್ಳದೆ ಬಿಡುವದಿಲ್ಲ.

ಹೀಗೆ ಅನೇಕ ಪ್ರಕಾರವಾಗಿ ಆಲೋಚಿಸಿ ಆ ವೀರನು ಅಕಬರನಿಗೆ ಶರಣು ಹೋಗುವದಕ್ಕಾಗಿ ದಿಲ್ಲಿಯಕಡೆಗೆ ಸಾಗಿದನು! ಬ್ರಹ್ಮಹತ್ಯೆಗಾಗಿ ಒಬ್ಬನು ದೇಶತ್ಯಾಗಮಾಡಬೇಕೆಂದು ನಿಶ್ಚಯಿಸಿದರೆ, ಇನ್ನೊಬ್ಬನು ಯವನ ರಸೇವೆಯನ್ನು ಸ್ವೀಕರಿಸಲಿಕ್ಕೆ ಹವಣಿಸಿದನು. "ಬುದ್ಧಿ ಕರ್ಮಾನುಸಾರಿಣಿ" ಯೆಂಬ ಮಾತು ಸುಳ್ಳಲ್ಲ.

೪ನೆಯ ಪ್ರಕರಣ

# ಸಾತ್ವಿಕೆ

ಹೀಗೆ ಬ್ರಹ್ಮಹತ್ಯೆಯ ಪಾತಕದ ದೋಷದಿಂದ ಆ ಬಂಧುಗಳಿಬ್ಬರೂ ಬೆದರಿದರು. ಪ್ರತಾಪಸಿಂಹನು ಪಾತಕದ ಪ್ರಾಯಶ್ಚಿತ್ತಕ್ಕಾಗಿ ದೇಶತ್ಯಾಗವನ್ನು ಮಾಡಬೇಕೆಂದು ನಿಶ್ಚಯಿಸಿದನು; ಶಕ್ತಿಸಿಂಹನು ಮೊಗಲರ ದಾಸ್ಯವನ್ನು ಸ್ವೀಕರಿಸಿದನು. ಇವರಿಬ್ಬರ ಈ ಭಿನ್ನಕೃತಿಗಳ ಪರಿಣಾಮವು ಭಿನ್ನವಾಯಿತೆಂಬದನ್ನು ವಾಚಕರು ಮುಂದೆ ತಿಳಕೊಳ್ಳಬಹುದು. ಜಗತ್ತಿನ ಅನುಭವವಿಲ್ಲದ ಪ್ರತಾಪನು, ತನ್ನ ತಾರುಣ್ಯದ ಮಬ್ಬಿನಲ್ಲಿ ಸ್ವ-ಪರಬಲಗಳ ವಿಚಾರವನ್ನು ಮಾಡದೆ, ಅಕಬರನಿಂದ ಚಿತ್ತೂರನ್ನು ತಕ್ಕೊಳ್ಳುವದಕ್ಕಾಗಿ ಯತ್ನಿಸಿದನು. ಈ ಯತ್ನದ ಸಿದ್ಧಿಗಾಗಿ ತನ್ನ ಪೂರ್ವದ ಮಿತ್ರರಾದ ಮಾರವಾಡ, ಅಂಬೇರ, ಬೀಕಾನೇರ, ಬುಂದಿ ಮೊದಲಾದ ರಜಪೂತ ಸಂಸ್ಥಾನಿಕರ ಕಡೆಗೆ, ಈ ಪ್ರಸಂಗದಲ್ಲಿ ತನಗೆ ಸಹಾಯ ಮಾಡಬೇಕೆಂದು ಪತ್ರಗಳನ್ನು ಬರೆದನು; ಆದರೆ ಆ ಅರಸರೆಲ್ಲರು ಅಕಬರನನ್ನು ಮೊದಲೇ ಕೂಡಿಕೊಂಡದ್ದರಿಂದ ಪ್ರತಾಪನ ಆಶೆಯು ನಿಷ್ಫಲವಾಯಿತು. ಮೇಲೆ ಹೇಳಿದಂತೆ ಶಕ್ತಿಸಿಂಹನು ಉದ್ಧಟತನದಿಂದ ಅಕಬರನನ್ನು ಕೂಡಿಕೊಂಡದ್ದಲ್ಲದೆ, ಮೇವಾಡದ ದುರ್ದೈವದಿಂದ ಸಾಗರಜಿ ಎಂಬ ಪ್ರತಾಪನ ಮತ್ತೊಬ್ಬ ಶೂರ ಬಂಧುವು ಅಕಬರನನ್ನು ಕೂಡಿಕೊಂಡಿದ್ದನು. ಸಾಗರಜಿಯು ಸಾಮಾನ್ಯನಿದ್ದಿಲ್ಲ. ಆತನ ಮನಸ್ಸನ್ನು ಪ್ರಸನ್ನೀಕರಿಸಿಕೊಳ್ಳುವದಕ್ಕಾಗಿ ಅಕಬರನು ಅವನನ್ನು ಚಿತ್ತೂರ ಪಟ್ಟದ ಮೇಲೆ ಕುಳ್ಳಿರಿಸಿ, ಆತನ ಪೂರ್ವಜರ,

"ರಾಣಾ" ಎಂಬ ಬಿರುದನ್ನು ಆತನಿಗೆ ಕೊಟ್ಟಿದ್ದನು. ಇವಲ್ಲದೆ ಧೂರ್ತನಾದ ಬಾದಶಹನು ಸಾಗರಜಿಗೆ ಕಂದಹಾರ ಪ್ರಾಂತದ ಸುಬೇದಾರಿಕೆಯನ್ನು ಕೊಟ್ಟಿದ್ದನು. ಕಂದಹಾರದಲ್ಲಾದ ಸಾಗರಜಿಯ ವಂಶಕ್ಕೆ "ಸಾಗರಾವತ" ವೆಂಬ ಹೆಸರು ಬಂದಿತು. ಮುಂದೆ ಜಹಾಂಗೀರ ಬಾದಶಹನ ಕಾಲದಲ್ಲಿ ಪ್ರಸಿದ್ಧ ವೀರನೆನಿಸಿದ ಮೊಹಬತ ಖಾನನು, ಸಾಗರಾವತವಂಶದ ರಜಪೂತನಿದ್ದು, ಕುಲಗೆಟ್ಟು ಮುಸಲ್ಮಾನನಾಗಿದ್ದನು! ಒಟ್ಟಿಗೆ ಹೇಳತಕ್ಕದ್ದೇನಂದರೆ, ಪ್ರತಾಪನ ಕಾಲದಲ್ಲಿ ರಜಪೂತಸ್ಥಾನದದೊಳಗಿನ ಸ್ವಾಭಿಮಾನದ, ಹಾಗು ಸ್ವಕುಲಾಭಿಮಾನ-ಸ್ವಧರ್ಮಾಭಿಮಾನಗಳ ಸದ್ದು ಅಡಗಿ, ನೀಚವಾದ ಸ್ವಾರ್ಥಪರಾಯಣತೆಯ ಸಂಚಾರವು ಎಲ್ಲಕಡೆಗೂ ಆಗಹತ್ತಿದ್ದರಿಂದ, ಮಹಾ ಮಹಾ ವೀರರೂ ಕೂಡ, ತಮ್ಮ ಸತ್ವವನ್ನು ಕಳಕೊಂಡು ಮೊಗಲರ ದಾಸ್ಯವನ್ನು ಸ್ವೀಕರಿಸಿದ್ದರು. ಮಾರವಾಡದ ಪ್ರಸಿದ್ಧ ವೀರನಾದ ರಾಜಾ ಮಾನಸಿಂಹ, ರಾಜಾ ತೋಡರಮಲ್ಲರಂಥ ನರರತ್ನಗಳು, ಸ್ವಾರ್ಥರೂಪವಾದ ಮಲದ ಮುಸುಕಿನಿಂದ ತಮ್ಮ ಗೌರವವನ್ನು ಕಳಕೊಂಡದ್ದರಿಂದ, ಅವರು ಅಕಬರನಂಥ ಮಹಾ ತೇಜಸ್ವಿಯನ್ನು ಆಶ್ರಯಿಸಿ, ತಮ್ಮ ಪ್ರಕಾಶವನ್ನು ಕೆಡವಿಕೊಳ್ಳಬೇಕಾಯಿತು. ಹೀಗೆ ಎಲ್ಲಕಡೆಯಿಂದಲೂ ನಿರಾಶೆಯಾದದ್ದರಿಂದ ಪ್ರತಾಪನು ಆಶೆದೊರೆದನು. ಚಿತ್ತೂರನ್ನು ತಕ್ಕೊಳ್ಳಬೇಕೆಂಬ ಆತನ ಯೋಚನೆಯು ನಿಷ್ಫಲವಾಗಿ, ಆತನು ಸೋತು ಓಡಿ ಬರಬೇಕಾಯಿತು. ಆ ಸರಳ ಸ್ವಭಾವದ ವೀರನಿಗೆ ಅಕಬರನ ಕಪಟಜಾಲವೂ, ರಜಪೂತ ಸಂಸ್ಥಾನಿಕರ ನೀಚವಾದ ಸ್ವಾರ್ಥಬುದ್ಧಿಯೂ ಗೊತ್ತಾಗದ್ದರಿಂದ, ಆತನು ಮೋಸಹೋಗಬೇಕಾಯಿತು. ಹೀಗೆ ಸಹಾಯ ಹೀನನಾದ ತಾನು ಪ್ರಬಲನಾದ ಅಕಬರ ಬಾದಶಹನಿಗೆ ಎದುರಾಗಿ ಸ್ವಾತಂತ್ರ್ಯವನ್ನು ಹ್ಯಾಗೆ ಕಾಯ್ದುಕೊಳ್ಳುವೆನೋ, ಎಂದು ಆತನು ಹಗಲಿರುಳು ಚಿಂತಿಸಹತ್ತಿದನು. ಚಿಂತೆಯ ಪರಿಹಾರಕ್ಕೆ ಆತನಿಗೆ ಉಪಾಯವು ತೋಚದಾಯಿತು. ನೋಡಿದತ್ತ ನಿರಾಶೆಯು ಹೊರತು ಬೇರೆ ಏನೂ ಆತನಿಗೆ ತೋರಲಿಲ್ಲ. ಕೈಯ್ಯಲ್ಲಿ ದುಡ್ಡಿಲ್ಲ, ಸ್ವಜನರ ಸಹಾಯವಿಲ್ಲ; ಇಂಥ ಸ್ಥಿತಿಯಲ್ಲಿ ತನ್ನಿಂದ ಆತ್ಮಘಾತದ ಹೊರತು ಬೇರೆ ಮಹತ್ಕಾರ್ಯವು ಆಗದೆಂಬ ವಿಚಾರವು ಆತನ ಮನಸ್ಸಿನಲ್ಲಿ ಆಗಾಗ್ಗೆ ಬರಹತ್ತಿತು. ವಿಚಾರಮಾಡಿದಂತೆ ಆತನಿಗೆ ತನ್ನ

ಮೈಮೇಲೆ ಬಿದ್ದಿದ್ದ ಭಾರದ ಕಲ್ಪನೆಯಾಗಹತ್ತಿ, ಆ ಕಲ್ಪನೆಯೊಡನೆ "ನಾನು ಈ ಭಾರವನ್ನು ಹ್ಯಾಗೆ ವಹಿಸೇನೆ"ಂಬ ಚಿಂತೆಯು ಆತನನ್ನು ಬಾಧಿಸಹತ್ತಿತು.ಅತ್ತಬಿದ್ದರೆಕೆರೆ, ಇತ್ತಬಿದ್ದರೆ ಬಾವಿಯೆಂಬಂತೆ, ತಾನು ಅಕಬರನಿಗೆ ಶರಣು ಹೋಗುವದೂ ಕಷ್ಟ, ಹೋಗದಿರುವದೂ ಕಷ್ಟ ಎಂಬ ಮನೋವ್ಯಥೆಯಿಂದಆತನುಬಹಳ ಹಣ್ಣಾದನು.

ಹೀಗಿರಲು ಪ್ರತಾಪನು ಒಂದುದಿನ ಶಯನ ಗೃಹದಲ್ಲಿ ಒಬ್ಬನೇ ಹಾಸಿಗೆಯ ಮೇಲೆ ಬಿದ್ದುಕೊಂಡಿರುವಾಗ ಇಂಥ ಬಗೆಬಗೆಯ ವಿಚಾರಗಳಿಂದ ತಳಮಳಿಸಹತ್ತಿದನು. ಏನು ಮಾಡಿದರೂ ಆತನಿಗೆ ನಿದ್ದೆಯು ಬರಲೊಲ್ಲದು. ತನ್ನಂಥ ಸತ್ವಹೀನನು ಉದೇಪುರದ ಪವಿತ್ರ ಕುಲದಲ್ಲಿ ಜನಿಸಿದ್ದೇ ಅನ್ಯಾಯವೆಂದು ಆತನು ತನ್ನನ್ನು ಹಳಿದುಕೊಳ್ಳಹತ್ತಿದನು. ತನ್ನ ಪೂರ್ವಜರ ಕೀರ್ತಿಯನ್ನು ನೆನಪಿಗೆ ತಂದುಕೊಂಡು "ನಾನು ಎಂಥ ಅಧಮನು ಜನಿಸಿದೆನಲ್ಲ." ಎಂದು ಆತನು ಸಂತಾಪಗೊಂಡು ದಿಗ್ಗನೆ ಹಾಸಿಗೆಯ ಮೇಲೆ ಎದ್ದು ಕುಳಿತುಕೊಂಡನು. ಇಹದಲ್ಲಿ ತನ್ನ ಮನೆತನದ ಕೀರ್ತಿಯನ್ನು ಕಾಯ್ದುಕೊಳ್ಳದ ತಾನು, ಹುಟ್ಟಿ ವ್ಯರ್ಥವಾಯಿತೆಂತಲೂ, ಹೀಗೆ ತೇಜೋಹೀನನಾಗಿ ಬಾಳುವದಕ್ಕಿಂತ ಆತ್ಮಘಾತಮಾಡಿಕೊಳ್ಳುವದೇ ಲೇಸೆಂತಲೂ ಯೋಚಿಸಿ, ಎದ್ದುನಿಂತು ಸಮೀಪದಲ್ಲಿದ್ದ ತನ್ನ ಖಡ್ಗವನ್ನು ತಕ್ಕೊಂಡು ಒರೆಯಿಂದ ಹಿರಿದನು. ಹಾಸಿಗೆಯನ್ನು ಬಿಟ್ಟು ಕೆಳಗೆ ನಿಂತಿದ್ದ ಆ ವೀರನು ಆವೇಶದಿಂದ ಹಾಗೇ ಮುಂದಕ್ಕೆ ಸಾಗುತ್ತಿರಲು, ಒಬ್ಬ ಹದಿನಾರುವರ್ಷದ ಪ್ರಮದೆಯು ಅಕಸ್ಮಾತ್ತಾಗಿ ಆತನ ಎದುರಿಗೆ ಪ್ರಕಟವಾಗಿ– "ವೀರಶಿರೋಮಣಿಯೇ, ಇದೇನು ಕೆಲಸ? ಖಡ್ಗವನ್ನು ಯಾರ ಮೇಲೆ ಪ್ರಯೋಗಿಸುವೆ" ಎಂದು ಮಂಜುಲ ಸ್ವರದಿಂದ ನುಡಿದಳು! ಅದನ್ನು ಕೇಳಿದ ಕೂಡಲೆ ಪ್ರತಾಪಸಿಂಹನು ಜಾಗರೂಕನಾಗಿ ಎದುರಿಗೆ ಕಣ್ದೆರೆದು ನೋಡಲು, ಕೇವಲ ಸತ್ವವೇ ಸ್ತ್ರೀರೂಪದಿಂದ ಪ್ರಕಟವಾಗಿರುವಂತೆ, ಚಿತ್ತದಲ್ಲಿ ತತ್‌ಕ್ಷಣ ಶಾಂತಿಯನ್ನು ಪ್ರಕಟಗೊಳಿಸುವ ಪ್ರಮದೆಯ ದಿವ್ಯರೂಪವು ಆತನ ಕಣ್ಣಿಗೆ ಬಿದ್ದು, ಯಾವಾಗಲೋ ಆತನ ಖಡ್ಗವು ಒರೆಗಂಡಿತ್ತು! ಆ ಪ್ರತಾಪಿಯು ಅತ್ಯಂತ ಪೂಜ್ಯಬುದ್ಧಿಯಿಂದ ಆ ಅಲೌಕಿಕ ಮೂರ್ತಿಯನ್ನು ನೋಡುತ್ತ ನಿಂತಲ್ಲಿ ನಿಂತುಬಿಟ್ಟನು!

ಈ ಮೇರೆಗೆ ಆಕಸ್ಮಿಕವಾಗಿ ಪ್ರತಾಪಸಿಂಹನ ಶಯನಗೃಹದಲ್ಲಿ ಪ್ರಕಟವಾಗಿದ್ದ ತರುಣಿಯ ರೂಪವನ್ನು ವರ್ಣಿಸುವದು ಪಾಮರರ ಯೋಗ್ಯತೆಯಲ್ಲ. ಆಕೆಯು ಲೋಕಸುಂದರಿಯಾಗಿದ್ದರೂ ಪ್ರತಾಪಸಿಂಹನ ಮನಸ್ಸಿನಲ್ಲಿ ಪೂಜ್ಯಬುದ್ಧಿಯನ್ನಲ್ಲದೆ ಬೇರೆ ದುಷ್ಟ ವಿಕಾರಗಳನ್ನು ಹುಟ್ಟಿಸಲಿಲ್ಲ. ಆಕೆಯ ಗಂಭೀರವೂ, ಶಾಂತವೂ ಆದ ಮುಖ-ಮುದ್ರೆ, ತಿಳುವಾದ ಹವಣಿಯ ಮೈಕಟ್ಟು, ಹೆಸರಿಡಲಿಕ್ಕೆ ಬಾರದಷ್ಟು ನಿಲುವಿಕೆ, ಸುಮನೋಹರವಾದ ಗೌರವರ್ಣದ ಕಾಂತಿ, ಉಕ್ಕಿ ಹೊರಸೂಸುವ ಸೌಕುಮಾರ್ಯ ಇವು, ನೋಡುವವರ ಚಿತ್ತವನ್ನು ಕೂಡಲೆ ಹರಣಮಾಡುವಂತೆ ಇದ್ದವು. ಆಕೆಯು ತನ್ನ ತಲೆಗೂದಲುಗಳನ್ನು ಓರಣದಿಂದ ಒಟ್ಟುಗೂಡಿಸಿ, ದುಂಡಗೆ ತುರುಬುಗಟ್ಟಿ, ಆ ತುರುಬಿನ ಬುಡಕ್ಕೆ ದುಂಡುಮಲ್ಲಿಗೆಯ ಅರಳು ಮಗ್ಗಿಗಳ ಮಾಲೆಯನ್ನು ಸುತ್ತಿದ್ದಳು. ವಜ್ರದ ಮೂಗುಬಟ್ಟಿನಿಂದ ಒಪ್ಪುವ ಆಕೆಯ ಮೂಗು ಸರಳವಾಗಿತ್ತು. ಕಾಡಿಗೆ ಹಚ್ಚಿದ ಆಕೆಯ ಕಣ್ಣುಗಳು ತೇಜಃಪುಂಜವಾಗಿದ್ದವು. ಆಕೆಯ ಕೆಂದುಟಿಗಳು ಸುಂದರವಾಗಿದ್ದು, ಆಕೆಯ ತಿಳುವಾದ ಗಲ್ಲಗಳ ಮಧ್ಯದಲ್ಲಿ ಒಪ್ಪುವ ನಸುಗೆಂಪಿನ ಹೊಳಪು ಮುಖದ ಸೌಂದರ್ಯವನ್ನು ಹೆಚ್ಚಿಸುತ್ತಿತ್ತು. ಆಕೆಯ ಸುಂದರವಾದ ಕಂಠವನ್ನು ಸುತ್ತಿದ ತನ್ಮಣಿಯೂ, ಕಠೋರ ಕುಚಮಂಡಲವನ್ನು ವ್ಯಾಪಿಸಿ ಅಲೆದಾಡುತ್ತಿದ್ದ ಚಂದ್ರಹಾರವೂ ಜರದಂಚಿನ ನೀಲಿಯ ರೇಶಿಮೆಯ ಕುಪ್ಪಸದಿಂದ ಎದ್ದುಕಾಣುತ್ತಿದ್ದವು. ಆಕೆಯು ಸೂಕ್ಷ್ಮವಾದ ಜರತಾರಿಯ ಪೀತಾಂಬರವನ್ನುಟ್ಟು, ಘಮಘಮಿಸುವ ಹಸುರು, ಕೆಂಪು, ಬಿಳಿಯ ಪಲ್ಲವ ಪುಷ್ಪಗಳಿಂದ ಕಟ್ಟಿದ ದೊಡ್ಡದೊಂದು ಹಾರವನ್ನು ಕೊರಳಲ್ಲಿ ಹಾಕಿಕೊಂಡಿದ್ದಳು. ಅದು ಆ ಸುಂದರಿಯ ಕಟಿ ಪ್ರದೇಶವನ್ನು ದಾಟಿ ಅಲಿದಾಡಿ, ಸೌಂದರ್ಯದ ಗಾಂಭೀರ್ಯವನ್ನು ಹೆಚ್ಚಿಸುತ್ತಿತ್ತು. ಆಕೆಯು ಉದ್ಯೋಗಪ್ರಿಯಳಂತೆ ಅಡ್ಡಸೆರಗುಕಟ್ಟಿ, ಹರಳಕಂಕಣದಿಂದ ಮನೋಹರವಾಗಿ ಒಪ್ಪುವ ಬಲಗೈಯಿಂದ ಶಯನಗೃಹದ ಕಂಬವನ್ನು ಹಿಡಿದು, ಎಡಗೈಯನ್ನು ಟೊಂಕದ ಮೇಲೆ ಇಟ್ಟುಕೊಂಡು, ಪ್ರಸನ್ನವದನದಿಂದ ಪ್ರತಾಪಸಿಂಹನನ್ನು ನೋಡುತ್ತಿದ್ದಳು. ಕೊರಳಹಾರಗಳಿಂದ ಆಕೆಯ ಮುದ್ದುಮೋಗವೂ, ರತ್ನದ ಒಡ್ಯಾಣದಿಂದ ಆಕೆಯ ಉರುಪ್ರದೇಶವೂ, ನೂಪುರಗಳಿಂದ ಆಕೆಯ

ಟೊಂಕದ ಕೆಳಭಾಗವೂ ಶೋಭಿಸುತ್ತಿರಲು, ಹಣೆಯ ಮೇಲಿನ ತಿಲಕವು ಸೌಂದರ್ಯರಾಶಿಯ ಶಿಖರದಂತೆ ಒಪ್ಪುತ್ತಿತ್ತು! ಪ್ರತಾಪಸಿಂಹನು ಬೆರಗಾಗಿ ತನ್ನನ್ನು ನೋಡುತ್ತ ನಿಂತಿರುವಾಗ, ಆ ಪ್ರಮದೆಯು ಮತ್ತೆ ಮಂಜುಲ ಸ್ವರದಿಂದ ಆತನನ್ನು ಕುರಿತು—ಕುಲದೀಪಕನಾದ ಕ್ಷತ್ರಿಯ ವೀರನೇ, ಅದೇಕೆ? ಹಿರಿದ ಖಡ್ಗವನ್ನೇಕೆ ಒರೆಗಾಣಿಸಿದೆ? ಮೂರ್ತಿಮಂತ ಪ್ರತಾಪವೇ, ಬೇಡ, ನಿನ್ನ ತಂದೆಯ ಕಾಲದಲ್ಲಿ ನಷ್ಟವಾಗಿದ್ದ ರಾಜ್ಯವನ್ನು ಪುನಃ ಕೈಸೇರಿಸಿಕೊಂಡ ಹೊರತು, ನಿನ್ನ ಜಯಶಾಲಿಯಾದ ಖಡ್ಗವನ್ನು ಒರೆಗಾಣಿಸಬೇಡ. ಶ್ರೀ ರಾಮಚಂದ್ರನ ವಂಶಜನಿಗೆ, ಬಾಪ್ಪಾರಾವಳನ ಸಂತತಿಯವನಿಗೆ, ಸಂಗರಾಜನ ಮೊಮ್ಮಗನಿಗೆ ಔದಾಸೀನ್ಯವೇ? ವೀರಾಗ್ರಣೀ, ನನ್ನ ಮಾತಿಗೆ ಕಿವಿಗೊಡು. ಪಿತ್ರಾಜ್ಞಾಪಾಲನಕ್ಕಾಗಿ ಹೆಂಡತಿಯನ್ನೂ, ತಮ್ಮನನ್ನೂ ಕೂಡಿಕೊಂಡು, ಮುನಿವೇಷದಿಂದ ಪಾದಚಾರಿಯಾಗಿ ವನವಾಸಕ್ಕೆ ತೆರಳಿದ ಶ್ರೀ ರಾಮಚಂದ್ರನು, ದೇವತೆಗಳಿಗೂ ಮೀರಿ ನಿಂತಿದ್ದ ರಾವಣನನ್ನು ಗೆದ್ದದ್ದು ಯಾತರಿಂದ? ಅದರಂತೆ, ಬಾಲ್ಯದಲ್ಲಿ ಅನಾಥನಾಗಿ ಒಬ್ಬ ಬ್ರಾಹ್ಮಣನ ಮನೆಯಲ್ಲಿ ದೊಡ್ಡವನಾದ ನಿಮ್ಮ ಮೂಲಪುರುಷ ಬಾಪ್ಪಾರಾವಳನು, ಸ್ವಭುಜ ಬಲದಿಂದ ಚಿತೋಡದ ರಾಜ್ಯವನ್ನು ಸಂಪಾದಿಸಿ, ಇರಾಣ–ತುರಾಣ–ಇಸ್ಪಹಾನ–ಕಂದಹಾರ ಮೊದಲಾದ ಯವನ ರಾಜ್ಯಗಳನ್ನು ಗೆದ್ದದ್ದು ಯಾತರಿಂದ? ಒಂದು ಸತ್ವದಿಂದಲ್ಲವೇ? "ಕ್ರಿಯಾಸಿದ್ಧಿಸ್ಸತ್ತ್ವೇಭವತಿಮಹತಾಂನೋಪಕರಣೇ" ಎಂಬ ಸಿದ್ಧಾಂತವು ಪ್ರಸಿದ್ಧವಾಗಿರುವದಷ್ಟೇ? ಆದ್ದರಿಂದ ಕ್ರಿಯಾಸ್ಥಿಯು ಮಹಾತ್ಮರ ಸತ್ವದಿಂದುಂಟಾಗುತ್ತದಲ್ಲದೆ, ಅನ್ಯಸಾಧನಗಳಿಂದಾಗುವದಿಲ್ಲೆಂಬದನ್ನು ಮರೆಯಬೇಡ. ವನವಾಸಿಯಾದ ರಾಮನಿಗೆ ವಾನರ ಬಲವೂ, ಅನಾಥನಾದ ಬಾಪ್ಪಾರಾವಳನಿಗೆ ರಜಪೂತರ ಸಹಾಯವೂ ಅವರವರ ಸತ್ವದಿಂದ ಆಕಸ್ಮಿಕ ದೊರೆತಂತೆ, ಸತ್ವಸ್ಥನಾದರೆ, ನಿನಗೂ ಮನುಷ್ಯಬಲವು ದೊರೆಯಬಹುದು. ಸತ್ವಶಾಲಿಯಾದ ರಘುರಾಜನು ಯಜ್ಞಮೂಲಕ ಸರ್ವಸ್ವವನ್ನು ದಾನ ಮಾಡಿ ಬರಿಗೈಯವನಾದಾಗ, ಆತನ ಗುರುಗಳಾದ ಕೌತ್ಸರು ದಕ್ಷಿಣೆ ಬೇಡಲು, ಆ ರಘುರಾಜನು ತನ್ನ ಸತ್ವಾತಿಶಯದಿಂದ ಸುವರ್ಣವೃಷ್ಟಿಯನ್ನು ಸುರಿಸಲಿಲ್ಲವೆ? ಆದ್ದರಿಂದ ಪ್ರತಾಪನಿಧಿಯೇ, ನೀನೂ ಸತ್ವಶಾಲಿ

ಯಾಗು; ಅಂದರೆ ಮನುಷ್ಯ ಸಹಾಯವನ್ನೂ, ದ್ರವ್ಯದ ಸಹಾಯವನ್ನೂ ಪಡೆಯುವೆ.

ಹೀಗೆ ಆ ತರುಣಿಯು ಕೇವಲ ಅಧಿಕಾರಸಂಪನ್ನಳಾಗಿ ಯಾವಬಗೆಯ ಸಂಕೋಚವೂ ಇಲ್ಲದೆ, ಅಸ್ಖಲಿತವಾಗಿ ಮಾತಾಡಿದ್ದನ್ನು ನೋಡಿ ಪ್ರತಾಪ ಸಿಂಹನು ಮತ್ತಿಷ್ಟು ಬೆರಗಾದನು. ಪುರುಷನೆನಿಸುವ ತಾನು, ಸತ್ವಹೀನ ನಾಗಿ ಆತ್ಮಹತ್ಯ ಮಾಡಿಕೊಳ್ಳಲಿಕ್ಕೆ ಯತ್ನಿಸುವಾಗ, ಆಕಸ್ಮಿಕ ಪ್ರಕಟವಾಗಿ ತನ್ನನ್ನು ಜಾಗ್ರುತಗೊಳಿಸಿದ ಕೃತಜ್ಞತೆಯಿಂದ, ಆ ವೀರನು ತರುಣಿಯನ್ನು ವಂದಿಸಿ, ಪೂಜ್ಯಬುದ್ಧಿಯಿಂದ ಆಕೆಯನ್ನು ಕುರಿತು—ಮಂಗಲಪ್ರದಳೇ, ದೇವೀ, ನಿನ್ನ ದಿವ್ಯವಾದ ತೇಜಸ್ಸಿಗೆ ಲೀನನಾದ ನಾನು ನಿನಗೆ ಶರಣು ಬಂದಿದ್ದೇನೆ. ನೀನು ಯಾರು? ಇಲ್ಲಿ ಪ್ರಕಟವಾದ ಕಾರಣವೇನೆಂಬ ದನ್ನು ಕೇಳುವ ಯೋಗ್ಯತೆಯು ಈ ಪ್ರತಾಪಸಿಂಹನಿಗೆ ಇರುವದಿಲ್ಲ. ನಿನ್ನ ದರ್ಶನದಿಂದ ನಾನು ಧನ್ಯನಾದೆನು; ನಿನ್ನ ಉಜ್ವಲಬೋಧದಿಂದ ನನ್ನ ಶೌರ್ಯದ ಸಂಜೀವನವಾದಂತಾಯಿತು. ಸತ್ವಶಾಲಿಯಾದ ಹರಿಶ್ಚಂದ್ರನು ಸತ್ಯಪಾಲನಕ್ಕಾಗಿ ಸರ್ವಸ್ವವನ್ನು ಕಳಕೊಂಡಂತೆ, ನಾನು ಉದೇಪುರದ ಸ್ವಾತಂತ್ರ್ಯ—ಪಾವಿತ್ರ್ಯಗಳ ರಕ್ಷಣಕ್ಕಾಗಿ ದೇಹವನ್ನಾದರೂ ಅರ್ಪಿಸುವೆನು. ನಮ್ಮ ಪೂರ್ವಜರು ರಕ್ತದ ಪ್ರವಾಹವನ್ನು ಹರಿಸಿ ಮನೆತನದ ಗೌರವವನ್ನು ಕಾಯ್ದುಕೊಂಡಿರುವರು. ಒಂದು ಚಿತ್ತೂರ ಕೋಟೆಯ ಸಂರಕ್ಷಣಕ್ಕಾಗಿ ಈವರೆತ್ತಿನವರೆಗೆ ಲಕ್ಷಾವಧಿ ಶೂರ ರಜಪೂತರ ಸಂಹಾರವಾಗಿರಬಹುದು. ಅಂದಬಳಿಕ ನನ್ನ ಪೂಜ್ಯ ಮನೆತನದ ಗೌರವವನ್ನು ಕಾಯ್ದುಕೊಳ್ಳುವ ಪ್ರಸಂಗದಲ್ಲಿ, ಕ್ಷುದ್ರ ಪ್ರಾಣಿಯಾದ ನನ್ನ ಜೀವವು ಎಷ್ಟರದು? ತ್ರಿಪುರ ಸುಂದರೀ, ದೇವೀ, ನೀನು ಮನುಷ್ಯಮಾತ್ರಳಲ್ಲ. ಇಂದು ನಿನ್ನ ದರ್ಶ ನದ ಪುಣ್ಯದಿಂದ ನನ್ನ ಹೇಡಿತನವು ಹಾಳಾಗಿ ಹೋಯಿತು. ನಿನಗೆ ಅನಂತ ಪ್ರಣಾಮಗಳಿರಲಿ, ಎಂದು ನುಡಿದು, ಪ್ರತಾಪಸಿಂಹನು ನಮಿಸಲು, ಆ ಯುವತಿಯು ಮುಗುಳು ನಗೆಯಿಂದ ನಗುತ್ತ ಪ್ರತಾಪಸಿಂಹನನ್ನು ಕುರಿತು—ಕುಲಭೂಷಣನಾದ ರಜಪೂತ ವೀರನೇ, ಪ್ರತಾಪಸಿಂಹಾ, ಸ್ವಾಭಿಮಾನಪೂರ್ಣವಾದ ನಿನ್ನ ಮಾತುಗಳನ್ನು ಕೇಳಿ ನನಗೆ ಬಹಳಸಂತೋ ಷವಾಯಿತು; ಆದರೆ "ನುಡಿಯುವದು ಸುಲಭವಾದಷ್ಟು ನಡೆಯುವದು

ಸುಲಭವಲ್ಲೆ"ಂಬದನ್ನು ಮರೆಯಬೇಡ. ನೀನು ವೀರನಿರುತ್ತೀ, ಧೀರ ನಿರುತ್ತೀ; ಆದ್ದರಿಂದ ಮನೆತನದ ಗೌರವವನ್ನು ಕಾಯ್ದುಕೊಳ್ಳುವಷ್ಟು ಸತ್ವವೂ ನಿನ್ನಲ್ಲಿ ಉಂಟಾಗಬಹುದು! ಆದರೆ ಒಂದು ಮಾತನ್ನು ನೀನು ನೆನಪಿನಲ್ಲಿಡತಕ್ಕದ್ದು. ನೀನು ಸ್ವತಃ ಸತ್ವಶಾಲಿಯಾದರೂ ನಿನ್ನ ಕುಟುಂಬ ದವರ, ಹಾಗು ಸಂಬಂಧಿಕರ ಕಷ್ಟದ ಯೋಗದಿಂದ ನಿನ್ನ ಸತ್ವಭಂಗವಾ ಗುವ ಸಂಭವವಿರುತ್ತದೆ. ಮಹಾತಪಸ್ವಿಯಿಂದಲ್ಲದೆ ಅನ್ಯರಿಂದ ಸತ್ವರಕ್ಷಣ ವಾಗದು. ಆಕಬರನಂಥ ಅಲೌಕಿಕ ಪುರುಷನು ಭರತಖಂಡದ ಚಕ್ರವರ್ತಿ ಯಾಗಿ ಪ್ರಕಾಶಿಸುತ್ತಿರಲು, ಆತನ ಅಬ್ಬರದೊಳಗೆ ನೀನು ತತ್ತರಿಸಬೇಕಾ ದೀತು–ರಾಜ್ಯಭ್ರಷ್ಟನಾಗಬೇಕಾದೀತು–ಹೆಂಡಿರುಮಕ್ಕಳೊಡನೆ ಅರಣ್ಯವಾಸ ವನ್ನು ಭೋಗಿಸಬೇಕಾದೀತು–ನಿಂತಲ್ಲಿ ನಿಲ್ಲಲಿಕ್ಕೆ ಆಸ್ಪದ ದೊರೆಯದೆ ಉಪ ವಾಸದಿಂದ ಅಡವಡವಿ ತಿರುಗಬೇಕಾದೀತು; ಆದರೆ ನೀನು ಇದಕ್ಕೆ ಬೆದರ ಬೇಡ. ಇಷ್ಟಕ್ಕೆ ಬೆದರುವ ಅಳ್ಳೆದೆಯವನು ನೀನಲ್ಲೆಂಬದನ್ನು ನಾನು ಬಲ್ಲೆನು. ಸತ್ವರಕ್ಷಣಕ್ಕಾಗಿ ಸಿರಿಯಾಳನು ತನ್ನ ಹೊಟ್ಟೆಯ ಮಗನನ್ನು ಕೊಂದು ಅತಿಥಿಗೆ ಉಣ್ಣಬಡಿಸಿದನು; ಕರ್ಣನು ಜೀವದಹಂಗು ಇಲ್ಲದೆ ಯುದ್ಧಭೂಮಿಯಲ್ಲಿ ಕುಂಡಲಗಳ ದಾನಮಾಡಿದನು. ದೂರವೇಕೆ? ನಿನ್ನ ವಂಶಜರೇ ಸತ್ವವನ್ನು ಕಾಯ್ದುಕೊಳ್ಳುವದಕ್ಕಾಗಿ ಎಷ್ಟು ಕಷ್ಟಪಟ್ಟರೆಂಬ ದನ್ನು ನೆನಪಿಗೆ ತಂದುಕೋ. ಫಲದಲ್ಲಿ ಆಶೆಯನ್ನಿಡಬೇಡ; ಉದೇಪುರದ ಸ್ವಾತಂತ್ರ್ಯರಕ್ಷಣಕ್ಕಾಗಿ ಹೆಣಗುವದು ನಿನ್ನ ಕರ್ತವ್ಯವೆಂದು ತಿಳಿದು ಸತ್ವರಕ್ಷ ಣವನ್ನು ಮಾಡಿಕೋ. ಪ್ರತಾಪಾ, ನೀನು ಆತ್ಮಘಾತಮಾಡಿಕೊಂಡರೆ ಎಂಥ ಅನರ್ಥವಾಗುವದೆಂಬದನ್ನು ಎಂದೂ ಮರೆಯಬೇಡ. ನೀನು ಈಗ ಆತ್ಮಘಾತಮಾಡಿಕೊಂಡರೆ, ನಿನ್ನ ಪವಿತ್ರಾಂಕುರವಾದ ಉಮ್ಮರ ಬಾಲಕನು ಅನಾಥನಾಗಿ ನಿನ್ನ ತಂದೆಯಂತೆ ಪರರಿಂದ ರಕ್ಷಿತನಾಗಿ ತೇಜೋಹೀನರಾಗ ಬಹುದು. ಇದರಿಂದ ಉದೇಪುರದ ರಾಣಾನ ಮೂರು ತಲೆಗಳು ಹೇಡಿ ತನದ ಕಲಂಕದಿಂದ ದೂಷಿತವಾದಂತಾಗುವದು. ನಿನ್ನ ತಂದೆಯು ಹೇಡಿ ಯಾಗಿ ಕೆಟ್ಟನು, ನೀನು ಆತ್ಮಘಾತಮಾಡಿಕೊಂಡು ಕೆಟ್ಟರೆ, ನಿನ್ನ ಮಗನು ಅನಾಥನಾಗಿ ಕೆಡುವನು. ಹೀಗಾದರೆ ನೀನೇನು ಮಹತ್ಕೃತ್ಯ ಮಾಡಿದ ಹಾಗಾಗುವದು ? ಎಲೈ ಪ್ರತಾಪಾ, ಆತ್ಮಘಾತವು ಅಧಮತನವಲ್ಲವೆ?

ಅದು ಚಂಚಲ ಸ್ವಭಾವದ ಸ್ತ್ರೀಯರಿಗೆ ಮಾತ್ರ ಒಪ್ಪಿದರೆ ಒಪ್ಪಬಹುದು. ನಿನ್ನಂಥ ಆತ್ಮಘಾತಕಿಯನ್ನು ಸಿಸೋದಿಯಾ ಕುಲದ ಅಭಿಮಾನಿಗಳಾದ ಭಾಟರು ಏನೆಂದು ವರ್ಣಿಸಬಹುದು? ಹಾಯ್ ಹಾಯ್! ಇಂದು ನೀನು ಎಂಥ ಅನುಚಿತಕಾರ್ಯವನ್ನು ಮಾಡುತ್ತಿದ್ದೆಯಲ್ಲ! ಆತ್ಮಘಾತಕಿ ಯೆನಿಸಿಕೊಳ್ಳುವದಕ್ಕಿಂತ ದುಷ್ಟ ಮೊಗಲರೊಡನೆ ಕಾದುತ್ತ ಸಮರಭೂಮಿ ಯಲ್ಲಿ ದೇಹವನ್ನು ಈಡಾಡುವದು ಶ್ರೇಯಸ್ಕರವಲ್ಲವೆ? ಇನ್ನು ನೀನು ನನ್ನನ್ನು ನಿನ್ನ ಮನೆತನದ ಅಧಿದೈವತವೆಂದು ಭಾವಿಸು. ನನ್ನ ಹೆಸರು ಸಾತ್ವಿಕೆ. ನೀನು ಉದಾಸೀನನಾಗಿ ಸತ್ವವನ್ನು ಕಳಕೊಂಡಾಗೆಲ್ಲ ನಾನು ನಿನಗೆ ಪ್ರಸನ್ನಳಾಗಿ ನಿನ್ನ ಸತ್ವದ ಪರಿಪೋಷಣ ಮಾಡುವೆನು. ಎಲೈ ಪ್ರತಾಪಶಾಲಿಯಾದ ಪ್ರತಾಪಾ, ಇಗೋ ಹಿಡಿ ಪ್ರಸಾದರೂಪವಾದ ಈ ಕಮಲಪುಷ್ಪವನ್ನು, ಎಂದು ನುಡಿದು, ಸಾತ್ವಿಕೆಯು ಕೈಯೆತ್ತಿ ಕಮಲಪುಷ್ಪ ವನ್ನು ಕೊಡಹೋಗಲು, ಪ್ರತಾಪನು ಭಕ್ತಿಪುರಸ್ಸರ ಅದನ್ನು ಸ್ವೀಕರಿಸು ವಾಗ ಆತನ ಕಣ್ಣುಗಳು ಆನಂದಬಾಷ್ಪಪೂರ್ಣವಾದವು. ಆತನು ಸಾತ್ವಿಕೆ ಯನ್ನು ಸಾಷ್ಟಾಂಗವಾಗಿ ವಂದಿಸಿ ಕೈ ಚಾಚಲು, ಆಕೆಯು ಕಮಲಪುಷ್ಪ ವನ್ನು ಕೊಟ್ಟು ತನ್ನ ವರದಹಸ್ತವನ್ನು ಪ್ರತಾಪಸಿಂಹನ ತಲೆಯ ಮೇಲಿ ಟ್ಟಳು. ಆಗ ಆನಂದಾತಿಶಯದಿಂದ ಪ್ರತಾಪಸಿಂಹನು ತಲೆಬಾಗಿ ಒಂದೇ ಸವನೆ ಕಣ್ಣೀರು ಸುರಿಸುತ್ತಿದ್ದನು. ಆತನು ಸ್ವಲ್ಪ ಹೊತ್ತಿನ ಮೇಲೆ ಎಚ್ಚತ್ತು ಮುಖನೆತ್ತಿ ಸಾತ್ವಿಕೆಯನ್ನು ನೋಡಲು, ಆಕೆಯು ಎತ್ತೋ ಅದೃಶ್ಯವಾಗಿ ಹೋಗಿದ್ದಳು!

ಹೀಗೆ ಸಾತ್ವಿಕೆಯು ಅದೃಶ್ಯವಾದದ್ದನ್ನು ನೋಡಿ ಪ್ರತಾಪನು ಸೋಜಿ ಗಗೊಂಡನು. ಆತನಿಗೆ ಆಕೆಯ ಬೋಧದಲ್ಲಿ ವಿಶ್ವಾಸವು ಉತ್ಪನ್ನವಾ ಯಿತು. ಆದಿನ ರಾತ್ರಿ ಆತನಿಗೆ ಗಾಢವಾದ ನಿದ್ದೆಯು ಹತ್ತಲೇ ಇಲ್ಲ. ಅರನಿದ್ದೆಯಲ್ಲಿ ಆತನಿಗೆ ಸ್ವಪ್ನದ ಮೇಲೆ ಸ್ವಪ್ನಗಳು ಬಿದ್ದವು. ಒಮ್ಮೆ ತಾನು ಅಕಬರನನ್ನು ಸೋಲಿಸಿದಂತೆಯೂ, ಮತ್ತೊಮ್ಮೆ ತಾನು ಅಕಬರ ನಿಂದ ಸೋತಂತೆಯೂ ಆತನು ಕನಸುಗಳನ್ನು ಕಂಡನು. ಮರುದಿನ ಬೆಳಗಾಯಿತು. ಆತನು ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ದರ್ಬಾರಕ್ಕೆ ಬಂದನು. ಉದೇಪುರವನ್ನು ಬಿಟ್ಟು ಕಮಳನೇರವನ್ನು ತನ್ನ ರಾಜಧಾನಿ

ಯಾಗಿ ಮಾಡಿಕೊಳ್ಳಲಿಕ್ಕೆ ತನ್ನ ಮುತ್ಸದ್ದಿಗಳ ಹಾಗು ಸರದಾರ ಮಂಡಲದ ಅನುಮತಿಯನ್ನು ಪಡೆಯುವದು ಅಂದಿನ ದರ್ಬಾರದ ಕೆಲಸವಾಗಿತ್ತು. ಶಿಷ್ಟಾಚಾರದಂತೆ ದರ್ಬಾರದ ಜನರು ರಾಣಾನನ್ನು ವಂದಿಸಿದ ಬಳಿಕ ಆತನು ಸಭಿಕರನ್ನು ಕುರಿತು—ಮೇವಾಡದ ಅಭಿಮಾನಿಗಳಾದ ವೀರರೇ, ಸ್ವಾತಂತ್ರ್ಯರಕ್ಷಣಕ್ಕಾಗಿ ನಾವು ಇನ್ನು ಉದೇಪುರದ ಅಂತಸ್ತಿನ ಮನೆಗಳ ವಾಸವನ್ನು ಬಿಟ್ಟುಕೊಟ್ಟು, ಗುಡ್ಡಗಳನ್ನು ಸೇರಿ ಗುಡಿಸಲುಗಳಲ್ಲಿರಬೇಕಾಗುವದು. ಆಕಬರನೊಡನೆ ಕಾದಲಿಕ್ಕೆ, ನಾವು, ನಮ್ಮ ವಿಜಯಶಾಲಿಗಳಾದ ಖಡ್ಗಗಳು, ಬಂದ ಎಡರುಗಳಿಗೆ ಹೆದರದಂಥ ಧೈರ್ಯವು, ಇವು ಮೂರರ ಹೊರತು ಉಳಿದ ಜೋಂಜಾಟವು ಇರಲಾಗದು. ನಮ್ಮ ಸರ್ವಶಕ್ತಿಯನ್ನೂ, ಬುದ್ಧಿಚಾತುರ್ಯವನ್ನೂ ಮೇವಾಡದ ಸ್ವಾತಂತ್ರ್ಯರಕ್ಷಣಕ್ಕಾಗಿಯೇ ವೆಚ್ಚಮಾಡಬೇಕಾಗಿರುವದರಿಂದ, ನಾವು ಕೇವಲ ಬಡವರಂತೆ ಕಷ್ಟಪಟ್ಟು ಕಾಲಹರಣಮಾಡಬೇಕಾಗಿರುವದು. ಇದಕ್ಕೆ ಉದೇಪುರವು ತಕ್ಕ ರಾಜಧಾನಿಯಲ್ಲ. ನಾವು ರಾಜಧಾನಿಯನ್ನು ಇಲ್ಲಿಂದ ಕಿತ್ತು, ರಾಜಪ್ರಸಾದವನ್ನು ತುಚ್ಛವೆಂದು ತಿಳಿದು, ದುರ್ಗಮವಾದ ಕಮಲನೇರ ದುರ್ಗವನ್ನೇ ರಾಜಧಾನಿಯಾಗ ಮಾಡಿಕೊಳ್ಳತಕ್ಕದ್ದು. ಸದ್ಯಕ್ಕೆ ಮಾರವಾಡವು ದಿಲ್ಲಿಯ ಬಾದಶಹನಿಗೆ ಅಂಕಿತವಾಗಿರುವದರಿಂದ, ಅಲ್ಲಿ ದಿಲ್ಲಿಯ ಸೈನ್ಯವು ಬೀಡುಬಿಟ್ಟಿರುವದು; ಕಾರಣ ಮಾರವಾಡದ ಕಡೆಯಿಂದಲೇ ಶತ್ರುಗಳು ಮೇವಾಡದ ಮೇಲೆ ಸಾಗಿ ಬರುವ ಸಂಭವವು ಹೆಚ್ಚು; ಆದ್ದರಿಂದ ಶತ್ರುಗಳ ಆ ಮಾರ್ಗವನ್ನೇ ಪ್ರತಿಬಂಧಿಸುವದಕ್ಕಾಗಿ ಕಮಳನೇರವನ್ನು ರಾಜಧಾನಿಯಾಗಿ ಮಾಡಿಕೊಳ್ಳಬೇಕು. ಮಿತ್ರರೇ, "ಜತೆಯಂತೆ ಮತಿ, ಮತಿಯಂತೆ ಕೃತಿ, ಕೃತಿಯಂತೆ ಫಲವೆ"ಂಬಂತೆ, ನೀವು ಪ್ರತಾಪಸಿಂಹನ ಜತೆಯವರಾದದ್ದರಿಂದ ಸ್ವಾತಂತ್ರ್ಯರಕ್ಷಣಕ್ಕಾಗಿ ಮನಸ್ಸು ಮಾಡಬೇಕಾಗುವದು; ಆ ಸ್ವಾತಂತ್ರ್ಯರಕ್ಷಣದ ಮನಸ್ಸಿನಿಂದ ನಿಮ್ಮ ದೇಹಗಳು ಯುದ್ಧದಂಥ ಕಠಿಣ ಕಾರ್ಯದಲ್ಲಿ ಸವಿದು ಕ್ಷೀಣವಾಗಬೇಕಾಗಿರುವದು; ವೀರರಿಗೆ ಭೂಷಣವಾದ ಆ ದೇಹದ ಕ್ಷೀಣತೆಗೆ ಐಹಿಕ ರಾಜ್ಯಭೋಗವು, ಒಂದು ಪಕ್ಷದಲ್ಲಿ ದುರ್ದೈವದಿಂದ ದೊರೆಯದಿದ್ದರೂ, ವೀರಸ್ವರ್ಗವು ಸಿದ್ಧ ಫಲವಾಗಿರುವದು. ಆ ಶ್ರೇಷ್ಠವಾದ ದಿವ್ಯ

ಫಲಕ್ಕೆ ಲಕ್ಷಗೊಟ್ಟು ನೀವೆಲ್ಲರೂ ಸುಖವನ್ನು ತ್ಯಜಿಸಬೇಕು, ಅನ್ನಲು, ಚಂದಾವತಕೃಷ್ಣನು ಎದ್ದು ನಿಂತು—ರಾಣಾಜೀ, ನಾವೆಲ್ಲರೂ ಮೇವಾಡದ ರಾಣಾನ ಜತೆಯುವರಷ್ಟೇ ಅಲ್ಲ, ಆತನ ದಾಸರಿರುವೆವು; ಮೇವಾಡದ ರಾಣಾನು ನಮಗೆ ಮಿತ್ರನಷ್ಟೇ ಅಲ್ಲ, ಸ್ವಾಮಿಯಾಗಿರುವನು. ಅಂದಬಳಿಕ ಸ್ವಾಮಿ—ಸೇವಕರ ಆಚಾರ-ವಿಚಾರಗಳಲ್ಲಿ ಭಿನ್ನವಾಗುವದುಂಟೇ? ಸ್ವಾತಂತ್ರ್ಯಪ್ರಿಯನಾದ ಪೂಜ್ಯಪ್ರಭುವೇ, ನಿನ್ನ ಇಚ್ಛೆಯೇ ನಮ್ಮೆಲ್ಲರ ಇಚ್ಛೆಯು; ನಿನ್ನ ವಿಚಾರವೇ ನಮ್ಮೆಲ್ಲರ ವಿಚಾರವು; ನಿನ್ನ ಆಚಾರವೇ ನಮ್ಮೆಲ್ಲರ ಆಚಾರವು. ನಿನ್ನ ಈ ವೀರಪರಿವಾರವು ನಿನ್ನ ನೆರಳೆಂದು ಭಾವಿಸು, ಎಂದು ನುಡಿಯಲು, ಯಾವತ್ತು ರಜಪೂತರು “ಧನ್ಯನು, ಮೇವಾಡದ ಅಧಿಪತಿಯು ಧನ್ಯನು” ಎಂಬ ಧನ್ಯೋದ್ಗಾರದಿಂದ ಚಂದಾವತಕೃಷ್ಣನ ಮಾತಿಗೆ ತಮ್ಮ ಒಪ್ಪಿಗೆಯನ್ನು ಪ್ರಕಟಿಸಿದರು; ಅದರಿಂದ ರಾಣಾನಿಗೆ ಪರಮಾನಂದವಾಯಿತು. ಹೀಗೆ ಅಕೃತ್ರಿಮ ಪ್ರೇಮಪಾಶಬದ್ಧರಾದ ಆ ಸ್ವಾಮಿ—ಸೇವಕರು ಕ್ಷಣಹೊತ್ತು ಆನಂದಪರವಶರಾಗಿ ಎಚ್ಚರಗೊಳ್ಳುತ್ತಿರಲು, ದಿಲ್ಲಿಯಿಂದ ಒಬ್ಬ ದೂತನು ಬಂದಿದ್ದಾನೆಂದು ದ್ವಾರಪಾಲಕನು ಬಿನ್ನಯಿಸಿದನು. ಆಗ ಪ್ರತಾಪಸಿಂಹನ ಆಜ್ಞೆಯಿಂದ ದಿಲ್ಲಿಯ ದೂತನು ಒಳಗೆ ಬಂದು, ವಿನಯದಿಂದ ರಾಣಾನನ್ನು ವಂದಿಸಿ, ಆತನಿಗೆ ಬಾದಶಹನ ಪತ್ರವನ್ನು ಒಪ್ಪಿಸಿದನು. ಬಾದಶಹನ ಮೋಹರುಳ್ಳ ಆ ಪತ್ರವನ್ನು ನೋಡಿ ಪ್ರತಾಪನು ಕೌತುಕದಿಂದ ಒಡೆಯುತ್ತಿರುವಾಗ, ಆತನಿಗೆ ಚಿತ್ತೂರಲ್ಲಿ ಬಾದಶಹನು ಮಾಡಿದ ಅನರ್ಥದ ಸ್ಮರಣವಾಗಿ, ಸ್ವಾಭಿಮಾನದ ಆ ರಾಣಾನ ಹೃದಯದಲ್ಲಿ ಸಂತಾಪವು ಉತ್ಪನ್ನವಾಯಿತು. ಆದರೂ ಆಗ ಅದನ್ನು ಆತನು ತೋರಗೊಡದೆ, ಪತ್ರವನ್ನು ಓದಹತ್ತಿದನು. ಸಭಿಕರ ಆತುರವು ಹೆಚ್ಚಿತು. ಸಭಾಸ್ಥಾನವು ನಿಶ್ಶಬ್ದವಾಗಿ ಸಭಿಕರು ಶಿಲಾ ಪ್ರತಿಮೆಗಳಂತೆ ಉಲುಕದೆ ಕುಳಿತುಕೊಂಡಿದ್ದರು. ಪತ್ರವನ್ನು ಪೂರ್ಣವಾಗಿ ಓದಿದ ಮೇಲೆ ಪ್ರತಾಪನು ಸಂತಾಪದಿಂದ ಆವಡುಗಚ್ಚಿ, ಮತ್ತೊಮ್ಮೆ ಆ ಪತ್ರವನ್ನು ಓದಿದನು. ಆ ಮೇಲೆ ಅವನು ತನ್ನ ಸಂತಾಪವನ್ನು ನುಂಗಿಕೊಂಡು ದೂತನನ್ನು ಕುರಿತು—ನೀನು ಹೋಗು. ಬಾದಶಹನ ಪತ್ರಕ್ಕೆ ಉತ್ತರಕೊಡುವ ಪ್ರಸಂಗ ಬಂದಲ್ಲಿ ದಿಲ್ಲಿಯ ದರ್ಬಾರಕ್ಕೆ ನಮ್ಮ ದೂತನು ಬರುವನು, ಎಂದು ಹೇಳಿ, ದೂತ

ನನ್ನು ಹೊರಗೆಕಳಿಸಿ, ಆತನ ಯೋಗಕ್ಷೇಮುವನ್ನು ವಿಚಾರಿಸಿ ಹಾದಿಗೆ ಹಚ್ಚು ವಂತೆ ಆಜ್ಞಾಪಿಸಿದನು.

ಇತ್ತ ಯುವನ ದೂತನು ದರ್ಬಾರದಿಂದ ಹೊರಗೆ ಹೋದ ಮೇಲೆ, ಪ್ರತಾಪನು ಮತ್ತೊಮ್ಮೆ ಆ ಪತ್ರವನ್ನು ಓದಿ, ಸಭಿಕರನ್ನು ಕುರಿತು—ಬಂಧು ಗಳೇ, ಮೇವಾಡದ ಯೋಗ್ಯತೆಯ ಪರೀಕ್ಷೆಯ ಕಾಲವು ಒದಗಿಬಂದದ್ದ ಕ್ಕಾಗಿ ನಾವೆಲ್ಲರೂ ಸಮಾಧಾನಪಡತಕ್ಕದ್ದೇ ಸರಿ. ಬಾದಶಹನ ಈ ಉದ್ದಾಮುತನದ ಪತ್ರದ ಸಂಗತಿಯನ್ನು ನೀವೆಲ್ಲರೂ ಕೇಳಿ, ಮುಂದಿನ ಯೋಚನೆಯನ್ನು ತಿಳಿಸಿರಿ, ಎಂದು, ಪತ್ರವನ್ನು ಮಂತ್ರಿಯ ಕೈಯಲ್ಲಿ ಕೊಟ್ಟನು. ಆಗ ಭಾಮುಸಾ ಎಂಬ ಮಂತ್ರಿಯು ತಾನು ಮೊದಲು ಅದನ್ನು ಓದಿಕೊಂಡು, ಸಭಿಕರೆಲ್ಲರು ಕೇಳುವಂತೆ ಗಟ್ಟಿಯಾಗಿ ಮತ್ತೊಮ್ಮೆ ಓದಿ ದನು. ಅದರ ತಾತ್ಪರ್ಯವೇನಂದರೆ—"ರಾಣಾ ಪ್ರತಾಪಸಿಂಹ, ಹಿಂದು ಮುಂದಿನ ವಿಚಾರದಿಂದ ನಡೆಯುವದು ಜಾಣತನವು. ನನ್ನೊಡನೆ ಯುದ್ಧ ಮಾಡುವ ಗೊಡವಿಗೆ ಹೋಗದೆ, ನೀನು ನನಗೆ ಶರಣು ಬಾ, ಅಂದರೆ ನಿನ್ನ ಯಾವತ್ತು ರಾಜ್ಯ ಮೊದಲಾದವನ್ನು ತಿರುಗಿ ಕೊಡುತ್ತೇನೆ. ನನ್ನ ಸ್ನೇಹಿತ ರೆನಿಸಿಕೊಳ್ಳುವ ಮಾರವಾಡ, ಜಯಪುರ, ಬುಂದಿ ಮೊದಲಾದ ರಜಪೂತ ಸಂಸ್ಥಾನಿಕರು ತಮ್ಮ ಮನೆತನದ ಕನ್ನಿಕೆಯರನ್ನು ನನ್ನ ಮನೆತನಕ್ಕೆ ಕೊಟ್ಟು ಶರೀರಸಂಬಂಧ ಮಾಡಿದ್ದರಿಂದ, ದೊಡ್ಡ ದೊಡ್ಡ ಜಹಗೀರುಗಳನ್ನೂ, ಅಧಿಕಾರಗಳನ್ನೂ, ಮಾನ-ಮರ್ಯಾದೆಗಳನ್ನೂ ಪಡೆದರು. ಅದರಂತೆ ಸಿಸೋದಿಯಾ ಕುಲದ ನೀನಾದರೂ ಮಾಡಿದರೆ, ನನ್ನ ರಾಜ್ಯದ ಬಹು ದೊಡ್ಡ ಭಾಗವನ್ನು ಸಂತೋಷದಿಂದ ನಿನಗೆ ಕೊಡುವೆನು. ಪ್ರತಾಪ ರಾಣಾ, ಮುಸಲ್ಮಾನರಿಗೂ ರಜಪೂತರಿಗೂ ಆಗಿರುವ ಶರೀರಸಂಬಂಧವು ಹೊಸದಲ್ಲ. ನಿಮ್ಮ ಮೂಲ ಪುರುಷನಾದ ಬಾಪ್ಪಾರಾವಳನೇ ಬಹು ಜನ ಮುಸಲ್ಮಾನ ಕನ್ನಿಕೆಯರನ್ನು ಮದುವೆಯಾಗಿ, ಆ ರಾಣಿಯರಿಂದ ಮೂವ ತ್ತೆರಡು ಜನ ಗಂಡುಮಕ್ಕಳನ್ನು ಹಡೆದನು! ಅಂದಬಳಿಕ ಈಗ ನೀನು ಮೊಗಲ ಬಾದಶಹರೊಡನೆ ಶರೀರಸಂಬಂಧ ಮಾಡಿ, ಸಖ್ಯವನ್ನೂ ಆಪ್ತತ್ವ ವನ್ನೂ ಸಂಪಾದಿಸಿ ಸುಖಪಡಲಿಕ್ಕೆ ಸಂಕೋಚಪಡುವದೇಕೆ? ನಮ್ಮ ಅಜ್ಜ ನಾದ ಬಾಬರನು ನಿಮ್ಮ ಅಜ್ಜನಾದ ಸಂಗರಾಣಾನನ್ನು ಯುದ್ಧದಲ್ಲಿ ಸೋಲಿ

ಸಿದರೂ, ನಮ್ಮ ತಂದೆಯಾದ ಹುಮಾಯೂನನೂ ನಿಮ್ಮ ಪೂರ್ವಜರ ಸ್ನೇಹಿತನಾಗಿದ್ದನು; ಆದ್ದರಿಂದ ರಾಣಾ ಪ್ರತಾಪಸಿಂಹ, ನಿಮ್ಮ ತಂದೆಯು ನನ್ನೊಡನೆ ದ್ವೇಷಮಾಡಿ ಕೆಟ್ಟಿದ್ದರೂ, ನಾನೂ ನೀನೂ ಸ್ನೇಹಿತರಾಗಿ ಆನಂದದಿಂದ ಇರೋಣ."

ಬಾದಶಹನ ಈ ಪತ್ರಾಭಿಪ್ರಾಯವನ್ನು ಕೇಳಿ ಯಾವತ್ತು ರಜಪೂತರು ಕಂಠರವದಿಂದ ಅದಕ್ಕೆ ಅಸಮ್ಮತಿಪಟ್ಟು, "ಬಾದಶಹನಿಗೆ ಶರಣುಹೋಗಲಾಗದೆ"ಂದು ರಾಣಾನಿಗೆ ಸ್ಪಷ್ಟವಾಗಿ ಹೇಳಿದರು. ಕಡೆಗೆ ಅಂದಿನ ದರ್ಬಾರದಲ್ಲಿ ಕಮಲನೇರವನ್ನು ರಾಜಧಾನಿಯಾಗಿ ಮಾಡಿಕೊಂಡು, ತಾವೆಲ್ಲರು ಮನೆಮಾರುಗಳನ್ನು ಕಿತ್ತುಕೊಂಡು ಅಲ್ಲಿಗೆ ಹೋಗಬೇಕೆಂದು ಗೊತ್ತಾಗಿ, ದರ್ಬಾರದ ಕಾರ್ಯವು ನಿಲ್ಲಿಸಲ್ಪಟ್ಟಿತು.

೫ನೆಯ ಪ್ರಕರಣ

# ಅಕಬರನ ದರ್ಬಾರ.

ಶರದೃತುವಿನಲ್ಲಿ ಉತ್ತರ ಹಿಂದುಸ್ತಾನದಲ್ಲಿಯ ದಿವಸಗಳಂಥ ಆನಂದದಾಯಕ ದಿವಸಗಳನ್ನು ಎಲ್ಲಿಯೂ ಕಾಣಲಾಸಲ್ಲ. ಅದರಲ್ಲಿಯೂ ಆಗಿನ ಅಲ್ಲಿಯ ಮುಂಜಾವಿನ ಕಾಲವು ಬಹು ಸೊಗಸಾದದ್ದು. ಆಗ ಅಲ್ಲಿ ಆಕಾಶವು ನಿರಭ್ರವಾಗಿಯೂ, ಪ್ರಶಾಂತವಾಗಿಯೂ ಇರುತ್ತದೆ. ಹವೆಯು ತಂಪಾಗಿದ್ದು, ಅದರಲ್ಲಿ ಮಂಜು--ಇಬ್ಬನ್ನಿ ಮೊದಲಾದವೇನೂ ಇರುವದಿಲ್ಲ. ಸೂರ್ಯನ ಹೊಂಬಣ್ಣದ ಕಿರಣಗಳ ಉನ್ನತ ಪ್ರಾಸಾದ, ದೇವಾಲಯಗಳ ಉತ್ತುಂಗ ಶಿಖರ, ಗಗನವನ್ನು ಚುಂಬಿಸುವ ವೃಕ್ಷಗಳು, ಇವೇ ಮೊದಲಾದ ಉನ್ನತ ವಸ್ತುಗಳ ತುದಿಗಳಲ್ಲಿ ಪ್ರಕಾಶಿಸತೊಡಗಿ, ಬರಬರುತ್ತ ಅವು ಕೆಳಕೆಳಗೆ ಬೀಳಬೀಳುತ್ತ ನೆಲವನ್ನು ಮುಟ್ಟಿ ಉಪವನದೊಳಗಿನ ಸಣ್ಣ ಸಣ್ಣ ಗಿಡಗಳನ್ನೂ, ಸಸ್ಯಗಳ ನಿರ್ಮಲ ಕ್ಷೇತ್ರಗಳನ್ನೂ ಚಿತ್ರಿತವಾಗಿ ಮಾಡುತ್ತಿರುವವು. ಇಂಥ ಸುಂದರವಾದ ಪ್ರಾತಃಕಾಲದ ಸಮಯದಲ್ಲಿ ಅಕಬರ ಬಾದಶಹನ ರಾಜಧಾನಿಯಾದ ಆಗ್ರಾ ಪಟ್ಟಣದಲ್ಲಿಯ ಪ್ರಶಸ್ತವಾದ ರಾಜಮಾರ್ಗವನ್ನು ಹಿಡಿದು ಒಬ್ಬ ರಜಪೂತ ಸರದಾರನು ಕುದುರೆಯನ್ನು ವೇಗವಾಗಿ ನಡಿಸುತ್ತ ಸಾಗಿದ್ದನು. ಆಗ ಆಗ್ರಾಪಟ್ಟಣದ ಶೋಭೆಗೆ ಕಳೆಯೇರಿದಂತಾಗಿತ್ತು. ಮೊಗಲರಲ್ಲಿ ದೊಡ್ಡ ದೊಡ್ಡ ಇಮಾರತುಗಳನ್ನು ಕಟ್ಟಿಸುವ ಬಾದಶಹರಲ್ಲಿ ಅಕಬರನು ಮೊದಲನೆಯವನು. ಆತನೇ ತನ್ನ ವಿಶಾಲವಾದ ಬುದ್ಧಿ--ಸಾಮರ್ಥ್ಯದಿಂದ ಆಗ್ರಾ ಪಟ್ಟಣವನ್ನು

ಕಟ್ಟಿಸಿದನೆಂದು ಹೇಳಬಹುದು. ಆಗ್ರಾ, ಅಲಹಾಬಾದ, ಅಟಕಗಳಲ್ಲಿಯ ಕೋಟಿಗಳು ಅಕಬರನ ರಚನಾಚಾತುರ್ಯದ ಸಾಕ್ಷಿಗಳಾಗಿರುತ್ತವೆ. ಆಗ್ರ್ರಾದ ರಾಜಮಾರ್ಗದ ಎಡಬಲಗಳಲ್ಲಿ ಕಲ್ಲಿನ, ಹಾಗು ಇಟ್ಟಂಗಿಗಳ ಮನೆಗಳ ಎರಡು ಸಾಲುಗಳು ಒಪ್ಪುತ್ತಿದ್ದವು. ಮನೆಗಳ ಬಾಗಿಲುಗಳೂ, ಅಗಸೆಯ ಬಾಗಿಲುಗಳೂ ಬಹು ಸುಂದರವಾಗಿದ್ದವು. ಎಷ್ಟೋ ಬಾಗಿಲುಗಳ ಮೇಲೆ ಸುಂದರ ಕಮಾನುಗಳನ್ನು ತಿರುವಿದ್ದು, ಅವುಗಳಲ್ಲಿಯ ಕಲ್ಲುಗಳಲ್ಲಿ ಕೆತ್ತಿಗೆಯ ಕೆಲಸವನ್ನು ವರ್ಣಿಸುವಹಾಗೆ ಮಾಡಿದ್ದರು. ಶ್ರೀಮಂತರಾದ ವ್ಯಾಪಾರಸ್ಥರು ತಮ್ಮ ತಮ್ಮ ಮನೆಗಳ ಅಟವಾಳಿಗೆಗಳಲ್ಲಿ ಕುಳಿತು, ಬೆಲೆಯುಳ್ಳ ರೇಸಿಮೆಯ ವಸ್ತ್ರ, ಶಾಲು, ಜಮುಖಾನಿ ಮೊದಲಾದವನ್ನು ಮಾರುತ್ತಲಿದ್ದರು. ಆಭರಣಗಳ ವ್ಯಾಪಾರಸ್ಥರು ಮುತ್ತು-ರತ್ನ--ವಜ್ರಗಳ ಬೆಲೆಯುಳ್ಳ ಸುಂದರವಾದ ಆಭರಣಗಳನ್ನು ಗಿರಾಕಿಗಳಿಗೆ ತೋರಿಸುತ್ತ ಕ್ರಯವಿಕ್ರಯದಲ್ಲಿ ಮಗ್ನರಾಗಿದ್ದರು. ಉಳಿದ ಎಷ್ಟೋ ಅಂಗಡಿಗಳಲ್ಲಿ ನೂಲಿನ, ಹಾಗು ಉಣ್ಣೆಯ ಬಗೆಬಗೆಯ ವಸ್ತ್ರಗಳು ಒಪ್ಪುತ್ತಿದ್ದವು. ಕೆಲವೊಂದು ಕಡೆಯಲ್ಲಿ ಬನಾರಸದ ಹಿತ್ತಾಳಿಯ ಪಾತ್ರೆಗಳೂ, ಬೇರೊಂದು ಕಡೆಯಲ್ಲಿ ರಜಪೂತಸ್ಥಾನದೊಳಗಿನ ಗಿಲೀಟಿನ ಸಾಮಾನುಗಳು, ಇನ್ನೊಂದು ಕಡೆಯಲ್ಲಿ ಗುಜರಾಥದೊಳಗಿನ ಖಡ್ಗಗಳು--ಭಾಲೆಗಳು, ಹೀಗೆ ಆ ಕಾಲದಲ್ಲಿ ಪ್ರಸಿದ್ಧವಾಗಿದ್ದ ಆಯಾ ಸ್ಥಳಗಳ ಪದಾರ್ಥಗಳು ಶ್ರೀಮಂತ ವ್ಯಾಪಾರಸ್ಥರ ಅಂಗಡಿಗಳಲ್ಲಿ ಶೋಭಿಸುತ್ತಿದ್ದವು. ಇರಾಣ, ತುರ್ಕಸ್ಥಾನ ಮೊದಲಾದ ಏಸಿಯಾ ಖಂಡದೊಳಗಿನ ವ್ಯಾಪಾರಸ್ಥರು ಆಗ್ರಾ ಪಟ್ಟಣದಲ್ಲಿ ಕಣ್ಣಿಗೆ ಬೀಳುತ್ತಿದ್ದರಲ್ಲದೆ, ಯುರೋಪದ ವ್ಯಾಪಾರಸ್ಥರನ್ನು ಸಹ ಆ ಅಕಬರನ ರಾಜಧಾನಿಯಲ್ಲಿ ನೋಡಬಹುದಾಗಿತ್ತು. ಅಕಬರನು ಅವರೆಲ್ಲರನ್ನು ಸಂತೋಷದಿಂದ ಬರಗೊಡುತ್ತಿದ್ದನು.

ಈ ವ್ಯಾಪಾರದ ಸ್ಥಳವನ್ನು ದಾಟಿ ಮುಂದಕ್ಕೆ ಹೋದ ಮೇಲೆ ಕೋಟೆಯ ಭವ್ಯವಾದ ಬಾಗಿಲ ಮುಂದಿನ ಪಟಾಂಗಣವು ಆ ರಜಪೂತ ಸರದಾರನಿಗೆ ಹತ್ತಿತು. ಕೋಟೆಯ ಗೋಡೆಗಳ ವಿಶಾಲತ್ವವನ್ನೂ, ಅಭೇದ್ಯತ್ವವನ್ನೂ, ಬಾಗಿಲದ ಭವ್ಯತ್ವವನ್ನೂ ನೋಡಿ ಆ ಸರದಾರನು ಬೆರಗಾದನು. ಯಮುನಾನದಿಯು ಹರಿಯುತ್ತಿದ್ದ ಒಂದು ನಿಟ್ಟನ್ನು ಬಿಟ್ಟು, ಉಳಿದ ಕಡೆ

ಯಲ್ಲೆಲ್ಲ ಕೋಟೆಯ ಗೋಡೆಗಳ ಸುತ್ತು ಮುತ್ತು ಆಳವಾದ ಕಂದಕವನ್ನು ಅಗಿದಿದ್ದರು. ಬಾದಶಹನಆಶ್ರಯವನ್ನು ಪಡೆದಿದ್ದ ರಜಪೂತಸರದಾರರೂ, ಸೈನಿಕರೂ ಕೋಟೆಯ ಸಂರಕ್ಷಣಕ್ಕಾಗಿ ಅಹೋರಾತ್ರಿ ಇಲ್ಲಿ ಜಾಗರೂಕರಾಗಿ ಕಾಯುತ್ತಿದ್ದರು. ಅವರನ್ನು ನೋಡಿ ಅಭಿಮಾನಿಯಾದ ಆ ರಜಪೂತ ಸರದಾರನಿಗೆ ಬಹಳ ವಿಷಾದವಾಯಿತು. ಈ ಪಟಾಂಗಣದಲ್ಲಿ ದಿನಾಲು ಸಂಜೆಯಮುಂದೆ ಬಾದಶಹನ ಸ್ವಂತದ ಲಾಯದೊಳಗಿನ ಕುದುರೆಗಳ ಫೇರಿಯನ್ನು ತಿರುವುತ್ತಾರೆಂತಲೂ, ಆಗ ರಾವುತರ ಮುಖ್ಯಾಧಿಕಾರಿಯು ಅಲ್ಲಿಗೆ ಬಂದಿರುತ್ತಾನೆಂತಲೂ ಸರದಾರನು ಜನರ ಮುಖದಿಂದ ಕೇಳಿದನು. ಕೋಟೆಯನ್ನು ನೋಡುವದಕ್ಕಾಗಿಯೂ, ಬಾದಶಹನ ದರ್ಶನವನ್ನು ತಕ್ಕೊಳ್ಳುವದಕ್ಕಾಗಿಯೂ ಸಾವಿರಾರು ಜನರು ಕೋಟೆಯನ್ನು ಪ್ರವೇಶಿಸುತ್ತಿದ್ದರು. ಅರಸರೂ, ಮನಸಬದಾರರೂ ತಮ್ಮ ಸಶಸ್ತ್ರ ಪರಿವಾರದೊಡನೆ ಕೋಟೆಯನ್ನು ಪ್ರವೇಶಿಸುತ್ತಿದ್ದರು. ಕೆಲವರು ರಥಗಳಲ್ಲಿ, ಕೆಲವರು ಪಲ್ಲಕ್ಕಿಗಳಲ್ಲಿ, ಕೆಲವರು ಆನೆಗಳ ಮೇಲೆ, ಕೆಲವರು ಕುದುರೆಗಳನ್ನೇರಿ ಸಾಗಿದ್ದರು. ಇವರ ಹೊರತು ಜಟ್ಟಿಗಳು, ಪೈಲವಾನರು, ಕಸರತ್ತಿನ ವಸ್ತಾದಿಗರು, ಗಮಲರು ಮೊದಲಾದ ವಿಧವಿಧದ ಜನರು, ಜನರ ಮನಸ್ಸನ್ನು ರಂಜಿಸುತ್ತಲಿದ್ದರು. ನಮ್ಮ ಸರದಾರನು ಇದನ್ನೆಲ್ಲ ನೋಡುತ್ತ ಕೋಟೆಯ ಭವ್ಯವಾದ ಬಾಗಿಲೊಳಗಿಂದ ಕೋಟೆಯನ್ನು ಪ್ರವೇಶಿಸಿದನು. ಅಲ್ಲಿಂದ ಒಂದು ಪ್ರಶಸ್ತವಾದ ಮಾರ್ಗವು ಮುಖ್ಯ ಕೋಟೆಯಕಡೆಗೆ ಹೋಗುತ್ತಿತ್ತು. ಆ ಮಾರ್ಗವನ್ನು ದೊಡ್ಡ ದೊಡ್ಡ ಮುಸಲ್ಮಾನ ಮನಸಬದಾರರು ರಕ್ಷಿಸುತ್ತಿದ್ದರು. ಐದುಸಾವಿರದ ಮನಸಬದಾರರು, ಹತ್ತು ಸಾವಿರದ ಮನಸಬದಾರರು ಕುದುರೆಗಳನ್ನು ಹತ್ತಿಕೊಂಡು ಸ್ವತಃ ಇಲ್ಲಿ ಪಹರೆಯನ್ನು ಮಾಡುತ್ತಿದ್ದರು. ಈ ಮಾರ್ಗದ ಎಡಬಲಗಳಲ್ಲಿ ಒಂದೇಸವನೆ ಕಲ್ಲಿನ ಕಮಾನುಗಳನ್ನು ತಿರುವಿದ್ದರು. ಆ ಕಮಾನುಗಳಲ್ಲಿ ರಾಜಸ್ತ್ರೀಯರ ಸಲುವಾಗಿ ಕಲಾಕುಸರಿಯ ವಸ್ತುಗಳನ್ನು ಮಾಡುತ್ತ ಪ್ರಸಿದ್ಧ ಕಸಬುದಾರರು ಕುಳಿತುಕೊಂಡಿದ್ದರು. ನಮ್ಮ ರಜಪೂತ ಸರದಾರನು ವಿಚಾರಮಗ್ನನಾಗಿ ಈ ಭವ್ಯವಾದ ಕಮಾನುಗಳನ್ನು ನೋಡುತ್ತ ಸಾವಕಾಶವಾಗಿ ಸಾಗಿರಲು, ನಗಾರಖಾನೆಯಲ್ಲಿ ನೌಬತ್ತು ಬಾರಿಸತೊಡಗಿತು; ಬಜಂತ್ರಿ-ಸಮ್ಮಾಳಗಳ ಸಪ್ಪಳವು ಕೇಳಿಸಹತ್ತಿತು.

ಆದರಿಂದ ಆ ರಜಪೂತ ಸರದಾರನು ವಿಚಾರ ಸಮಾಧಿಯಿಂದ ಜಾಗರೂಕನಾಗಿ ತನ್ನ ಕುದುರೆಯನ್ನು ಒತ್ತರದಿಂದ ನಡಿಸಹತ್ತಿದನು. ಈ ನೌಬತ್ತಿನ ಧ್ವನಿಯು, ಬಾದಶಹನು ದರ್ಬಾರವನ್ನು ಪ್ರವೇಶಿಸಿದ ಸುದ್ದಿಯನ್ನು ಜಗತ್ತಿಗೆ ತಿಳಿಸಿತು. ಕೂಡಲೆ ಬಾದಶಹನ ದರ್ಶನಾಪೇಕ್ಷೆಯಿಂದ ಕೂಡಿದ್ದ ಅಪಾರವಾದ ಜನ ಸಮೂಹವು, ಮಹಾ ನದಿಯ ಪ್ರಚಂಡ ಪ್ರವಾಹದಂತೆ ದರ್ಬಾರವನ್ನು ಪ್ರವೇಶಿಸಿತು. ನಮ್ಮ ರಜಪೂತ ಸರದಾರನಾದರೂ ತನ್ನ ಕುದುರೆಯನ್ನು ಒತ್ತರದಿಂದ ನಡಿಸಿ ಸ್ವಲ್ಪ ವೇಳೆಯಲ್ಲಿಯೇ ದರ್ಬಾರವನ್ನು ಪ್ರವೇಶಿಸಿದನು. ತಮ್ಮ ಪ್ರಿಯ ನೃಪವರ ಬಾದಶಹನ ದರ್ಶನದಿಂದ ತಮ್ಮ ನೇತ್ರಗಳನ್ನು ಸಫಲ ಮಾಡಿಕೊಳ್ಳುವದಕ್ಕಾಗಿ ಅಲ್ಲಿಯ ಜನರು ಹೀಗೆ ಯಾವಾಗಲೂ ಉತ್ಸುಕರಾಗಿರುತ್ತಿದ್ದರು. ಬಾದಶಹನಾದರೂ ಜನರ ಈ ಉತ್ಸುಕತೆಯನ್ನು ನಿತ್ಯದಲ್ಲಿ ದರ್ಶನಕೊಟ್ಟು ಪೂರ್ಣಮಾಡುತ್ತಿದ್ದನು; ಆದರೆ ಈದಿನ ಕೂಡಿದ ದರ್ಬಾರವು, ಬಾದಶಹನು ಒಂದು ಯುದ್ಧದಲ್ಲಿ ಜಯ ಹೊಂದಿದ ಬಳಿಕ ಕೂಡಿದ ದರ್ಬಾರುಗಳಲ್ಲಿ ಮೊದಲನೆಯದಾದ್ದರಿಂದ, ಪಟ್ಟಣದೊಳಗಿನ ಯಾವತ್ತು ದೊಡ್ಡ ದೊಡ್ಡ ಜನರೂ, ದೂರ ದೂರ ಪ್ರಾಂತಗಳ ಸುಬೇದಾರರೂ, ಬಾದಶಹನಿಗೆ ಮುಜುರೆ ಮಾಡುವದಕ್ಕಾಗಿ ದರ್ಬಾರಕ್ಕೆ ಬಂದಿದ್ದರು.

ದರ್ಬಾರದ ಮಧ್ಯಭಾಗದಲ್ಲಿ ಬಾದಶಹನ ಭವ್ಯ ಸಿಂಹಾಸನವಿದ್ದು, ಅದರ ಮೇಲೆ ರಾಜರಾಜೇಶ್ವರ ಅಕಬರ ಬಾದಶಹನು ನೇತ್ರಾನಂದಕರನಾಗಿ ಮಂಡಿಸಿದ್ದನು. ಅಕಬರನ ತರುವಾಯ ಆತನ ಮೊಮ್ಮಗನಾದ ಶಹಾಜಹಾನ ಬಾದಶಹನು ಕೋಟ್ಯಂತರ ರೂಪಾಯಿಗಳನ್ನು ವೆಚ್ಚಮಾಡಿ ಮಾಡಿಸಿದ ಪ್ರಸಿದ್ಧ ಮಯೂರಾಸನದಷ್ಟು ಅಕಬರನ ಆಗಿನ ಸಿಂಹಾಸನವು ಪ್ರಕಾಶಮಾನವೂ, ಶೋಭಾಯಮಾನವೂ ಆಗಿರದಿದ್ದರೂ, ಸಾಮ್ರಾಜ್ಯ ಸ್ಥಾಪಕ ಪುರುಷಶ್ರೇಷ್ಠರ ದಿವ್ಯತೇಜಸ್ಸಿಗೆ ಒಪ್ಪುವ ಹಾಗೆ ಅದು ನಿಶ್ಚಯವಾಗಿ ಇತ್ತು! ಬಾದಶಹನ ನಿಲುವಿಕೆ ಎತ್ತರ, ಮೈಕಟ್ಟು, ಚಕ್ಕಿಯಹಾಗೆ, ಬಣ್ಣ ಸಾದಗಪ್ಪು ಇದ್ದು, ಆತನ ಅಚ್ಚ ಕರ್ರಗಾದ ವಿಶಾಲ ನೇತ್ರಗಳು ತೇಜಃಪುಂಜವಾಗಿದ್ದವು. ಆತನ ಹಣೆಯು ವಿಶಾಲ; ಬಾಹುಗಳು ಅಜಾನುವಾಗಿದ್ದು, ಅವು ಹಲವು ಸಮರಭೂಮಿಗಳಲ್ಲಿ ತಮ್ಮ ಅಪೂರ್ವ ಸಾಮರ್ಥ್ಯ

ವನ್ನು ವ್ಯಕ್ತಮಾಡಿದ್ದವು. ಪ್ರೌಢವಯಸ್ಸಿನ ಆ ಬಾದಶಹನ ಮೂರ್ತಿಯು ಬಹು ಭವ್ಯವಾಗಿ ಒಪ್ಪುತ್ತಿತ್ತು. ಯುದ್ಧಗಳೂ, ಭಯಂಕರ ಪ್ರಸಂಗಗಳೂ ಅಕಬರನಿಗೆ ನಿತ್ಯದಲ್ಲಿ ಒದಗತಕ್ಕವಾಗಿದ್ದರೂ, ಆತನ ಅಂತಃಕರುಣವು ಬಹು ಕೋಮಲವಾಗಿತ್ತು. ಚಿತ್ತೂರ ಕೋಟೆಯನ್ನು ತಕ್ಕೊಂಡಾಗಿನ ಆತನ ಮನಸ್ಸಿನ ಕಾಠಿಣ್ಯವು ಮುಂದೆ ಉಳಿಯದೆ,ಆ ಮಹಾತ್ಮನ ಹೃದಯವು ಕೋಮಲವಾಗುತ್ತ ನಡೆದಿತ್ತು. ಒಂದು ಯಃಕಶ್ಚಿತ ಪ್ರಾಣಿಯ ವ್ಯಥೆಯನ್ನು ನೋಡಿದರೂ ಆತನ ಹೃದಯವು ಕಳಗಿ ನೀರಾಗುತ್ತಿತ್ತು. ಆತನು ಅತ್ಯಂತ ನಿರ್ಧಾರದ ಪುರುಷನಾಗಿದ್ದನು; ಕೈಕೊಂಡ ಕೆಲಸವು ಪೂರ್ಣವಾಗುವವರೆಗೆ ಒಂದು ಕ್ಷಣದ ವಿಶ್ರಾಂತಿಯನ್ನಾದರೂ ಆತನು ಹೊಂದುತ್ತಿದ್ದಿಲ್ಲ. ಆತನ ಸ್ವಭಾವವು ಜಾತ್ಯಾ ಉದಾರವೂ, ಕ್ಷಮಾಶೀಲವೂ ಆದದ್ದರಿಂದ, ಆತನಿಂದ ಗೆಲ್ಲಲ್ಪಟ್ಟ ಶತ್ರುಗಳೆಲ್ಲರು ಆತನ ರಾಜ್ಯದ ಆಧಾರಸ್ತಂಭವಾಗಿದ್ದರು. ಅಕಬರನಿಗೆ ವಿದ್ಯೆಯು ಅಷ್ಟಕ್ಕಷ್ಟೇ ಬರುತ್ತಿತ್ತು; ಆದರೆ ತನ್ನ ದರ್ಬಾರದಲ್ಲಾಗುವ ತತ್ವಜ್ಞಾನಿಗಳ, ಅಥವಾ ಪಂಡಿತರ ವಾದವನ್ನು ಆತನು ಸಹಜವಾಗಿ ತಿಳಿಕೊಳ್ಳುತ್ತಿದ್ದನು. ಒಮ್ಮೊಮ್ಮೆ ತರ್ಕಶಾಸ್ತ್ರಜ್ಞರ ಬುದ್ಧಿಗೆ ನಿಲುಕದ ತತ್ವಗಳನ್ನು ಸಹ ಆತನು ತತ್ಕಾಲದಲ್ಲಿ ಗ್ರಹಣ ಮಾಡುತ್ತಿದ್ದನು. ಆತನು ಹುಟ್ಟಾ ಬುದ್ಧಿಶಾಲಿ ಪುರುಷನಿದ್ದು, ಆತನಲ್ಲಿ ಕೆಲಸ ಮಾಡುವ ಸಾಮರ್ಥ್ಯವು ವಿಲಕ್ಷಣವಾಗಿ ಇತ್ತು. ಇಂಥ ಪ್ರಚಂಡ ಸಾಮ್ರಾಜ್ಯವು; ಆದರೆ ಅಕಬರನು ಅಲ್ಲಿಯ ಎಲ್ಲ ಸಂಗತಿಗಳನ್ನು ಸ್ವತಃನೋಡಿ ಸ್ವತಃ ಅವುಗಳ ವ್ಯವಸ್ಥೆಯನ್ನು ಮಾಡುತ್ತಿದ್ದನು. ರಾಜ್ಯಕಾರಭಾರದ ಯಾವ ಬಾಬಿನ ಕಡೆಗೂ ಆತನ ದುರ್ಲಕ್ಷ್ಯವಿದ್ದಿಲ್ಲ. ಇಂಥ ಕೆಲಸವು ಅಕಬರನಿಗೆ ಗೊತ್ತಾಗದೆ ಆಯಿತೆಂದು ಎಂದೂ ಆಗಲಿಲ್ಲ. ಆತನು ಒಳ್ಳೇ ಗುಣಗ್ರಾಹಿಯಿದ್ದನು. ಆತನು ತನ್ನ ಆಶ್ರಯದಲ್ಲಿ ಯೋದ್ಧಾಗಳ, ಮುತ್ಸದ್ದಿಗಳ, ಜಮಾಬಂದಿಯಲ್ಲಿ ನಿಷ್ಣಾತರಾದ ಜನರ, ವಿದ್ವಾಂಸರ ಒಂದು ಸೈನ್ಯವನ್ನೇ ಕೂಡಿಸಿದ್ದನೆಂದು ಹೇಳಬಹುದು. ಅಕಬರನ ಪ್ರೇಮವು ಎಲ್ಲ ಪ್ರಜೆಗಳ ಮೇಲೆ ಸರಿಯಾಗಿ ಇತ್ತು. ಆತನ ಆಳಿಕೆಯಲ್ಲಿ ಎಲ್ಲ ಧರ್ಮದ ವರಿಗೆ ಮಾನವು ಸರಿಯಾಗಿ ದೊರೆಯುತ್ತಿತ್ತು. ಇಂಥ ಉದಾತ್ತಾಚರಣೆಯು ಪೃಥ್ವಿಯೊಳಗಿನ ಆಗಿನ ಕಾಲದ ಯಾವ ರಾಜರಲ್ಲಿಯೂ ಇದ್ದಿಲ್ಲ

ವೆಂದು ಹೇಳಬಹುದು.

ಬಾದಶಹನ ಬಳಿಯಲ್ಲಿ ಸಾಮ್ರಾಜ್ಯದ ಭಾವೀ ಮಾಲಕನಾದ ಸೇಲೀಮನು ಕುಳಿತುಕೊಂಡಿದ್ದನು. ಸಿಂಹಾಸನದ ಕೆಳಗಿನ ಪ್ರದೇಶದಲ್ಲಿ ಬೆಳ್ಳಿಯ ಕಟಾಂಜನವನ್ನು ನಿಲ್ಲಿಸಿ, ಒಂದು ದೊಡ್ಡ ಪಟಾಂಗಣವನ್ನು ಮಾಡಿದ್ದರು. ಅದರೊಳಗೆ ರಾಜರು, ಮನಸಬದಾರರು, ಅಮೀರರು, ಉಮರಾವರು, ಪರದೇಶದ ವಕೀಲರೇ ಮೊದಲಾದ ದೊಡ್ಡ ದೊಡ್ಡ ಜನರು ನಿಂತುಕೊಂಡಿದ್ದರು; ಮತ್ತು ಸಮರಭೂಮಿಯಲ್ಲಿ ಶೌರ್ಯ–ಧೈರ್ಯ–ಬುದ್ಧಿ–ಸಾಮರ್ಥ್ಯಗಳ ಪರಮಾವಧಿಯಿಂದ ಅಲೌಕಿಕ ದಿಗ್ವಿಜಯವನ್ನು ಸಂಪಾದಿಸಿದಂಥ, ತಮ್ಮ ವೀರ್ಯಬಲದ, ಹಾಗು ಬುದ್ಧಿಬಲದ ಸ್ವಾಧೀನವಾಗಿ ಬೇರೆ ಬೇರೆ ದೇಶಗಳ ಉದಯಾಸ್ತಗಳನ್ನು ಇಟ್ಟುಕೊಂಡಿರುವಂಥ, ರಣದುರಂಧರರಾದ ಬುದ್ಧಿಸಾಗರ ನರವೀರರು ಈ ಪಟಾಂಗಣದಲ್ಲಿ ಒಟ್ಟುಗೂಡಿದ್ದರು. ಬೇರೆ ಬಹುಜನ ಸಂಸ್ಥಾನಿಕರು, ಸರದಾರರು, ದರಕದಾರರೇ ಮೊದಲಾದವರು ಕಟಾಂಜನದ ಹೊರಗೆ ನಿಂತುಕೊಂಡಿದ್ದರು. ಇದರ ಹೊರತು ಪ್ರಚಂಡ ಜನಸಮುದಾಯವು, ದರ್ಬಾರದಲ್ಲಿ ಏನು ನಡೆಯುತ್ತದೆಂಬದನ್ನು ನೋಡುವ ಕುತೂಹಲದಿಂದ ಮಾರ್ಗಪ್ರತೀಕ್ಷೆಯನ್ನು ಮಾಡುತ್ತ ಸ್ತಬ್ಧವಾಗಿ ಚಲಿಸದೆ ನಿಂತುಕೊಂಡಿತ್ತು. ಹೀಗಿರುವಾಗ ದರ್ಬಾರದ ಪದ್ಧತಿಯಂತೆ ಬಾದಶಹನ ಖಾಸ ಪಾಗೆಯೊಳಗಿನ ಕೆಲವು ಉತ್ತಮ ಕುದುರೆಗಳನ್ನು ಬಾದಶಹನ ಮುಂದೆ ತಂದು ನಿಲ್ಲಿಸಿ ಕ್ರಮವಾಗಿ ಅವನ್ನು ಹಿಡಕೊಂಡು ಹೋದರು. ಆ ಮೇಲೆ ಆನೆಗಳು ಬರತೊಡಗಿದವು. ಅವುಗಳ ಬೆನ್ನಮೇಲೆ ಕಿನಕಾಫಿನ ಝೂಲಗಳನ್ನು ಹಾಕಿ, ಕೊರಳೊಳಗೆ ಬಂಗಾರದ ಗಂಟೆಗಳ ಸರವನ್ನು ಕಟ್ಟಿದ್ದರು. ಇಂಥ ಆನೆಗಳ ಬಹು ದೊಡ್ಡ ಸಾಲು ಬಾದಶಹನ ಮುಂದೆ ಹಾದು ಹೋಗುತ್ತಲಿತ್ತು. ಆನೆಗಳು ಗಾಂಭೀರ್ಯದಿಂದ ಒಂದೊಂದೇ ಹೆಜ್ಜೆಯನ್ನು ಇಡುತ್ತ ಮೆಲ್ಲಮೆಲ್ಲನೆ ಸಾಗಿದ್ದವು. ಪ್ರತಿ ಒಂದು ಆನೆಯು ಬಾದಶಹನ ಮುಂದೆ ಬಂದಕೂಡಲೆ ಮುಂದಿನ ಕಾಲುಗಳಿಂದ ಬೊಗ್ಗಿ, ಸೊಂಡಿಯನ್ನು ಮೇಲಕ್ಕೆತ್ತಿ ಮುಜುರೆಯನ್ನು ಮಾಡುತ್ತಿತ್ತು. ಆನೆಗಳ ಹಿಂದಿನಿಂದ ಚಿಗರೆಗಳ ಸಾಲು ಬಂದಿತು. ಅವುಗಳ ಹಿಂದಿನಿಂದ ಕಪಿಲೆಯ ಆಕಳುಗಳು, ಬಂಗಾಲದ ಎಮ್ಮೆಗಳು, ಚಿಚ್ಚಗಳು, ಹುಲಿಗಳು, ಬೇರೆ ಬೇರೆ

ಜಾತಿಯ ನಾಯಿಗಳು ಸಾಲುಸಾಲಾಗಿ ಬಂದವು. ಆಮೇಲೆ ಗರುಡ ಮೊದಲಾದ ಹಿಂಸ್ರ ಪಕ್ಷಿಗಳನ್ನು ಬಾದಶಹನಿಗೆ ತೋರಿಸಲಾಯಿತು. ಕಡೆಗೆ ದರ್ಬಾರದೊಳಗಿನ ಕೆಲವು ಸರದಾರರು ಕುದುರೆಗಳನ್ನು ಹತ್ತಿ ಓಡಿಸಿ ತೋರಿಸಿದರು. ಇಷ್ಟೆಲ್ಲ ಆದ ಮೇಲೆ ಪ್ರದರ್ಶನದ ಸಮಾರಂಭವು ಮುಗಿಯಿತು. ಆಮೇಲೆ ನಗಾರಖಾನೆಯಲ್ಲಿ ಪುನಃ ನೌಬತ್ತು ಬಾರಿಸಲು, ದರ್ಬಾರದ ಕೆಲಸಕ್ಕೆ ಆರಂಭವಾಯಿತು. ಒಬ್ಬೊಬ್ಬರೇ ಸರದಾರರು ಬಾದಶಹನಿಗೆ ಮುಜುರೆ ಮಾಡುವದಕ್ಕಾಗಿ ಮುಂದಕ್ಕೆ ಬರಹತ್ತಿದರು. ಸೇಲೀಮನೇ ಮೊದಲಾದ ತನ್ನ ಮನೆತನದೊಳಗಿನ ಕೆಲವು ರಾಜಪುತ್ರರ ಸನ್ಮಾನವನ್ನು ಬಾದಶಹನು ಅವರವರ ಯೋಗ್ಯತೆಯಂತೆ ಮೊದಲು ಮಾಡಿದನು. ಆ ಮೇಲೆ ಮಾರವಾಡಾಧೀಶ್ವರನಾದ ರಾಜಾ ಮಾನಸಿಂಗನೆಂಬ ಕ್ಷತ್ರಿಯ ವೀರನು ಮುಜುರೆಗಾಗಿ ಬಾದಶಹನ ಮುಂದೆ ಬಂದು ನಿಲ್ಲಲು, ಯಾವತ್ತರ ನೇತ್ರಗಳು ಆತನ ಕಡೆಗೆ ಹೊರಳಿದವು. ಆಗ ಬಾದಶಹನು—ಅಂಬರಾಧೀಶ್ವರರೇ, ಬರಬೇಕು. ಈ ಸಿಂಹಾಸನದ ಸಲುವಾಗಿ ನೀವು ನಿಮ್ಮ ಪ್ರಾಣವನ್ನು ಅರ್ಪಿಸಿರುತ್ತೀರಿ. ಈ ಸಿಂಹಾಸನದ ಕೀರ್ತಿಯನ್ನು ಹಬ್ಬಿಸುವದಕ್ಕಾಗಿ ನೀವು ಅಲೌಕಿಕ ಶೌರ್ಯವನ್ನು ಪ್ರಕಟಮಾಡುತ್ತಿರುವಿರಿ. ನಿಮ್ಮ ವಿಲಕ್ಷಣವಾದ ಬುದ್ಧಿಚಾತುರ್ಯದ ಉಪಯೋಗವು ನಮಗೆ ವಿಶೇಷವಾಗಿ ಆಗುತ್ತಿರುವದು. ನಿಮ್ಮ ಘನತರವಾದ ಯೋಗ್ಯತೆಯನ್ನು ನಾವು ಮರೆತಿರುವದಿಲ್ಲ; ಆದರೆ ನಿಮ್ಮ ಸೇವೆಗೆ ತಕ್ಕ ಪ್ರತಿಫಲವನ್ನು ಕೊಡುವದು ನಮಗೆ ಅಶಕ್ಯವಾಗಿರುವದು. ನೀವು ನಮ್ಮ ಸಿಂಹಾಸನದ ಧ್ವಜವನ್ನು ದೂರದೂರದ ದೇಶಗಳಲ್ಲಿ ಊರುತ್ತಿರುವಿರಿ. ಹೋದ ಹೋದಲ್ಲಿ ವಿಜಯವನ್ನು ಸಂಪಾದಿಸದೆ ನೀವು ಬರುವವರಲ್ಲ. ನಮ್ಮ ಕೀರ್ತಿಯ ಅರ್ಧ ಶ್ರೇಯಸ್ಸು ನಿಮ್ಮದಿರುತ್ತದೆ!

ಈ ಮೇರೆಗೆ ನುಡಿದ ಅಕಬರನ ಸ್ತುತಿಪರ ಶಬ್ದಗಳನ್ನು ಕೇಳಿ, ಮಾನಸಿಂಹನು ತನ್ನ ಗೊಗ್ಗರ ದನಿಯಿಂದ—ರಾಜರಾಜೇಶ್ವರ, ವಕ್ತೃತ್ವಕಲೆಯು ನನ್ನಲ್ಲಿರುವದಿಲ್ಲ; ಆದರೆ ನಾನು ವಿಜ್ಞಾಪಿಸುವದೇನಂದರೆ, ಈ ಬಡ ಸೇವಕನ ಹೃದಯದಲ್ಲಿ ಕೃತಜ್ಞತೆಯು ವಾಸಿಸುತ್ತಿರುವದು. ಸರಕಾರ, ಈ ಖಡ್ಗವು ತಮ್ಮದಿರುತ್ತದೆ. ಇದರಿಂದ ಸಂಪಾದಿಸಲ್ಪಟ್ಟ ಜಯವಾದರೂ

ತಮ್ಮದೇ ಇರುವದು. ನಮ್ಮ ಪೂರ್ವಜರ ಕಾಲದಿಂದ ಮೊಗಲ ಬಾದಶಹರ ಮನೆತನದವರೊಡನೆ ನಮ್ಮ ಶರೀರಸಂಬಂಧವಾಗುತ್ತ ಬಂದಿರುತ್ತದೆ; ಆದ್ದರಿಂದ ಬಾದಶಹರಿಗೆ ನಾವು ಹೊರಗಿನವರಲ್ಲ, ಎಂದು ನುಡಿಯುವಾಗ ಆ ವೀರಶಿರೋಮಣಿಯ ಮನಸ್ಸಿಗೆ ನೊಣ ಕಡಿದಹಾಗಾಯಿತು; ಆದರೂ ಕೃತಜ್ಞತೆಯ ಭರದಲ್ಲಿ ಆ ಸರಳಹೃದಯದ ವೀರನ ಮುಖದಿಂದ, ಆಡದಿದ್ದರೂ ನಡೆಯ ಬಹುದಾಗಿದ್ದ ಆ ಶರೀರಸಂಬಂಧದ ಮಾತು ತಟ್ಟನೆ ಹೊರಟು ಹೋಯಿತು. ಬಳಿಕ ಆತನು ಮೂರು ಸಾರೆ ತಸ್ಲೀಮು ಮಾಡಿ ಹಿಂದಕ್ಕೆ ಸರಿಯಲು, ಬಹು ಪ್ರಸಿದ್ಧನಾದ ಖಾನ ಖಾನನ ಅಬದುಲ್ ರಹಿಮನೆಂಬ ಮಂತ್ರಿಯು ತಸ್ಲೀಮು ಮಾಡಹತ್ತಿದನು. ಆಗ ದರ್ಬಾರದಲ್ಲಿ—"ವೀರವರ ಖಾನಖಾನನ" "ಗುರ್ಜರ ಸಮರ ಶಾರ್ದೂಲ" "ವೀರಕುಲಾವತಂಸ" "ಕವಿರಾಜರಾಜೇಶ್ವರ" "ದಾನವೀರ" ಎಂಬ ಉದ್ಗಾರಗಳು ಹೊರಡಹತ್ತಿದವು. ಆಗ ಬಾದಶಹನು—"ಖಾನಖಾನನ, ಬರಬೇಕು. ನಿಮ್ಮ ಪರಾಕ್ರಮವಾದರೂ ರಾಜಾ ಮಾನಸಿಂಗರವರ ಪರಾಕ್ರಮಕ್ಕೆ ಸರಿಯಾಗಿರುವದು; ಆದ್ದರಿಂದ ಅವರ ಹೆಸರು ಹೊರಟಲ್ಲೆಲ್ಲ ನಿಮ್ಮ ಹೆಸರು ಹೊರಡತಕ್ಕದ್ದೇ ಸರಿ. ಇನ್ನೊಂದು ನಿಮ್ಮ ದೊಡ್ಡ ಭಾರವು ನಮ್ಮ ತಲೆಯ ಮೇಲೆ ಇರುತ್ತದೆ. ನಿಮ್ಮ ಖಡ್ಗವು ನಿಮ್ಮೊಡನೆ ಸಮರಭೂಮಿಯಲ್ಲಿ ಸಂಚರಿಸುವದಾಗಿದ್ದರೂ, ನಿಮ್ಮ ರಸಾಲ ಕವಿತೆಗಳು ವಂಶಪರಂಪರವಾಗಿ ನಮ್ಮನ್ನು ಇದ್ದಲ್ಲಿ ಸಂತೋಷಗೊಳಿಸುವವು. ಇದಲ್ಲದೆ ನಿಮ್ಮ ದಾತೃತ್ವ ಗುಣವು ಶ್ಲಾಘನೀಯವಾಗಿರುತ್ತದೆ. ದಾನ ವೀರರೇ, ಒಮ್ಮೊಮ್ಮೆ ನಿಮ್ಮ ದಾತೃತ್ವದ ಅತಿರೇಕವಾಗುತ್ತದೆಂದು ನಾವು ಕೇಳಿದ್ದೇವೆ; ನಿಜವೋ? ಒಮ್ಮೆ ಯಾಚಕರಿಗೆ ಬಳಿಯಲ್ಲಿದ್ದದ್ದನ್ನೆಲ್ಲ ಕೊಟ್ಟ ಮೇಲೆ, ಮತ್ತೊಬ್ಬ ಯಾಚಕನು ಬರಲು, ಆತನಿಗೆ ದೌತಿಯನ್ನೇ ಕೊಟ್ಟುಬಿಟ್ಟರಂತೆ! ಏನು ಕೊಟ್ಟರೂ ಕೊಡಿರಿ, ನಿಮ್ಮ ರಸಾಲವಾಣಿಯ ಉಲ್ಲೇಖನ ಸಾಧನವಾದ ದೌತಿಯನ್ನು ಮಾತ್ರ ಕೊಡುವದು ನಮ್ಮ ಮನಸ್ಸಿಗೆ ಬರುವದಿಲ್ಲ'' ಎಂದು ಬಾದಶಹನು ನುಡಿಯುತ್ತಿರಲು, ಸಭಾಸದರ ಮುಖದಿಂದ—"ಕರಾಮತ್! ಕರಾಮತ್!" ( ಧನ್ಯ! ಧನ್ಯ! ) ಎಂಬ ಉದ್ಗಾರಗಳು ಹೊರಟವು. ಈ ಉದ್ಗಾರಗಳು ಖಾನಖಾನನ ಕವಿತ್ವಕ್ಕಿಂತ ಆತನ ಅಲೌಕಿಕ ಶೌರ್ಯ, ಔದಾರ್ಯ ಇವು

ಗಳನ್ನು ಕುರಿತು ಉಚ್ಚರಿಸಲ್ಪಟ್ಟಿದ್ದವು. ಬಾದಶಹನ ಸ್ತೋತ್ರದಿಂದಲೂ ಸಭಿಕರ ಆನಂದೋದ್ಗಾರದಿಂದಲೂ ಆನಂದಪಟ್ಟ ಖಾನಖಾನನನ ಕಂಠವು ಬಿಗಿದು, ಮುಖದಿಂದ ಶಬ್ದಗಳು ಹೊರಡದಾಗಲು, ಆತನು ಸುಮ್ಮನೆ ಬಾದಶಹನಿಗೆ ಮೂರುಸಾರೆ ತಸ್ಲೀಮುಮಾಡಿ ತನ್ನ ಸ್ಥಳದಲ್ಲಿ ಕುಳಿತು ಕೊಂಡನು. ಆ ಮೇಲೆ ಎಷ್ಟೋ ಸಂಸ್ಥಾನಿಕರ, ಹಾಗು ವೀರರ ಸನ್ಮಾನ ವಾಯಿತು. ಆ ಮೇಲೆ ದೊಡ್ಡ ದೊಡ್ಡ ಪಂಡಿತರೂ, ಕವಿಗಳೂ ಒಬ್ಬರ ಹಿಂದೆ ಒಬ್ಬರು ಬಂದು ಬಾದಶಹನಿಗೆ ತಸ್ಲೀಮು ಮಾಡಹತ್ತಿದರು. ಅವ ರಲ್ಲಿ ಅಬುಲ್‌ಫಝುಲನನ್ನು ಬಾದಶಹನು ಬಹಳವಾಗಿ ಸತ್ಕರಿಸಿದನು. ಅಬುಲ್‌ಫಝುಲನು ಸಾಮಾನ್ಯ ಪುರುಷನಿದ್ದಿಲ್ಲ. ಆತನು ವಿಲಕ್ಷಣಮುತ್ಸ ದ್ದಿಯೂ, ತತ್ವಜ್ಞಾನಿಯೂ, ಇತಿಹಾಸಕಾರನೂ ಎಂದು ಜಗದ್ವಿಖ್ಯಾತನಾ ಗಿದ್ದನು. ಆತನು ಅಕಬರನ ದರ್ಬಾರದಲ್ಲಿ ದೈದೀಪ್ಯಮಾನವಾದ ರತ್ನ ದೀಪದಂತೆ ಪ್ರಕಾಶಿಸುತ್ತಿದ್ದನು! ಅಕಬರನು ಹಿಂದೂ ಮುಸಲ್ಮಾನರನ್ನು ಒಂದುಮಾಡಬೇಕೆಂದು ತಾನು ಹೊಸದಾಗಿ ಸ್ಥಾಪಿಸಿದ ಧರ್ಮವನ್ನು, ಈ ಅಬುಲ್‌ಫಝುಲನಿಂದಲೇ ಕಲಿತನೆಂದು ಜನರು ಆಡುತ್ತಿರುವರು. ಇದ ಕ್ಕಾಗಿ ಧರ್ಮಾಭಿಮಾನಿಗಳಾದ ಮುಲ್ಲಾಗಳು ಅಬುಲ್‌ಫಝುಲನನ್ನು ಬಹಳವಾಗಿ ದ್ವೇಷಿಸುತ್ತಿದ್ದರು. ಬಾದಶಹನ ಪ್ರೀತಿಯಮಗನಾದ ಸೇಲಿ ಮನೂ ಆ ಪಂಡಿತನನ್ನು ಕಂಡರೆ ಸೇರುತ್ತಿದ್ದಿಲ್ಲ; ಬಹಳವಾಗಿ ದ್ವೇಷಿಸು ತ್ತಿದ್ದನು.

ಹೀಗೆ ಪಂಡಿತರೂ ಕವಿಗಳೂ ಬರುವದಕ್ಕಿಂತ ಮೊದಲು, ಅಚ್ಚ ರಜ ಪೂತರ ಉಡಿಗೆ-ತೊಡಿಗೆಗಳನ್ನು ಧರಿಸಿದ ಒಬ್ಬ ರಜಪೂತ ಸರದಾರನು ಅಕಬರನ ಮುಂದೆ ಬಂದಾಗ ಒದಗಿದ ಪ್ರಸಂಗವನ್ನು ಬುದ್ಧಿಪೂರ್ವಕವಾಗಿ ಇಲ್ಲಿ ಕಟ್ಟಕಡೆಯಲ್ಲಿ ಹೇಳುತ್ತೇವೆ. ಆ ರಜಪೂತ ಸರದಾರನು ಎದುರಿಗೆ ಬಂದು ನಿಂತಕೂಡಲೆ, ಬಾದಶಹನು—ಬರಬೇಕು, ಯುವರಾಜರು-ಕವಿ ವರರು-ರಜಪೂತ ಕುಲಾವತಂಸರು-ಬಿಕಾನೇರಾಧಿಪತಿಗಳು ಇತ್ತ ಬರ ಬೇಕು. ವೀರಶಿರೋಮಣಿಗಳೇ, ನಿಮ್ಮ ಬಾಹುಗಳ ಅತುಲ ಪರಾಕ್ರಮದ ವರ್ಣನವನ್ನು ನಾವು ಬಹಳಸಾರೆ ಕೇಳಿದ್ದೇವೆ. ನಿಮ್ಮ ರಸಾಲಕವಿತೆಗಳಾ ದರೂ ನಮ್ಮ ಕಿವಿಗೆ ಬಿದ್ದಿರುತ್ತವೆ. ನಿಮ್ಮ ಕವಿತೆಗಳು ಕನ್ನಡಿಯಂತೆ

ರಾಜಸ್ಥಾನದ ಶೌರ್ಯದ ಪ್ರತಿಬಿಂಬವನ್ನು ತೋರಿಸುತ್ತವೆ. ಎಂದು ಶ್ಲಾಘಿಸಲು, ಪೃಥ್ವಿರಾಜನು—ಸರಕಾರ, ನನ್ನ ಜನ್ಮಭೂಮಿಯನ್ನು ವರ್ಣಿಸುವ ಅಧಿಕಾರವು ನನಗಿರುವದಿಲ್ಲ. ಚಾರಣರೂ–ಭಾಟರೂ ಮಾತ್ರ ಸ್ವಯಂಸ್ಫೂರ್ತಿಯಿಂದ ಅದನ್ನು ತಮ್ಮ ಪ್ರಾಸಾದಿಕವಾಣಿಯಿಂದ ವರ್ಣಿಸಲು ಸಮರ್ಥರು; ಆದರೆ ಆ ಚಾರಣರೂ ಹೋದರು, ಭಾಟರೂ ಹೋದರು! ಅವರು ಪುಣ್ಯಲೋಕಕ್ಕೆ ಹೊರಟು ಹೋದರು! ಅವರೊಡನೆ ನಮ್ಮ ಶೂರರಾದ ಪೂರ್ವಜರೂ ಹೊರಟು ಹೋದರು!! ಸದ್ಯಕ್ಕೆ ಮೇವಾಡದ ರಾಣಾ ಪ್ರತಾಪಸಿಂಹನೊಬ್ಬನು ಮಾತ್ರ ತನ್ನ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಲು ಯತ್ನಿಸುವನೆಂದು ಕೇಳುತ್ತೇನೆ; ಆದರೆ ಸರಕಾರ, ಅಲಮದುನಿಯಾದ ಬಾದಶಹರ ಮುಂದೆ ಪ್ರತಾಪಸಿಂಹನಂಥ ಕ್ಷುದ್ರ ಸಂಸ್ಥಾನಿಕನ ಆಟವು ಎತ್ತ ನಡೆಯಬೇಕು? ಪ್ರತಾಪನು ಇಂಥ ಸಾಹಸದ ಗೊಡವಿಗೆ ಹೋಗದೆ, ಉದಾರಾಂತಃಕರಣದ ಬಾದಶಹರಿಗೆ ಅಂಕಿತನಾಗುವದು ಉಚಿತವಾಗಿತ್ತು; ಆದರೆ ರಜಪೂತರ, ವಿಶೇಷವಾಗಿ ಉದೇಪುರದ ಪ್ರತಾಪಶಾಲಿಗಳಾದ ರಾಣಾನ ಮನೆತನದವರ ಹಟಮಾರಿತನವು ಪ್ರಸಿದ್ಧವಾಗಿರುವದು. ಖಾವಿಂದ, ನಿಜವಾದ ವೀರರ ಗುಣಗಳಿಗೆ ಲುಬ್ಧವಾಗುವ ಔದಾರ್ಯವು, ಈ ಪವಿತ್ರ ಚರಣಗಳಲ್ಲಿಯಲ್ಲದೆ ಬೇರೆಕಡೆಯಲ್ಲಿ ಕಣ್ಣಿಗೆ ಬೀಳದು, ಎಂದು ನುಡಿಯಲು, ಅಕಬರನು—ಪೃಥ್ವಿರಾಜ, ನಿಮ್ಮ ಮಾತುಗಳು ಒಪ್ಪತಕ್ಕವೇ ಸರಿ. ಪ್ರತಾಪನ ಮುತ್ತಜ್ಜನಾದ ಸಂಗರಾಜನ ಪರಾಕ್ರಮುವನ್ನೂ, ಆತನ ಪೂರ್ವಜರಾದ ಬಾಪ್ಪಾರಾವಳ, ಉಮ್ಮರ ಮೊದಲಾದವರ ಪರಾಕ್ರಮುವನ್ನೂ ಕೇಳಬಲ್ಲೆವು. ಪ್ರತಾಪನ ತಂದೆಯಕಾಲದ ಜಗತ್ಸಿಂಗ–ಪಟ್ಟಾರಾಜಾ ಮೊದಲಾದ ರಜಪೂತವೀರರ ಪರಾಕ್ರಮುವನ್ನು ನೋಡಿಬಲ್ಲೆವು. ಇಂದು ಪ್ರತಾಪರಾಣಾನ ಕಡೆಯಿಂದ ಒಬ್ಬ ಸರದಾರನು ದರ್ಬಾರಕ್ಕೆ ಬಂದಿರುವನೆಂದು ಕೇಳಿದ್ದೇವೆ. ಸ್ನೇಹದ ನಾಲ್ಕು ಮಾತುಗಳನ್ನು ಪತ್ರಮುಖದಿಂದ ರಾಣಾನಿಗೆ ಈ ಮೊದಲೆ ತಿಳಿಸಿದ್ದೆವು. ಅವುಗಳಿಗೆ ರಾಣಾನು ಏನು ಉತ್ತರಕೊಟ್ಟಿರುವನೆಂಬದನ್ನು ಇನ್ನು ಮೇಲೆ ವಿಚಾರಿಸಬೇಕಾಗಿದೆ. ರಜಪೂತವೀರನೇ, ತೇಜಸ್ವಿಗೆ ವೈರಿಗಳ ತೇಜಸ್ಸಿನ ಗರ್ವವು ಸಹನವಾಗುವದಿಲ್ಲ. ಇದೊಂದು ಕ್ಷಾತ್ರತೇಜದ ಅಂಗಭೂತಗುಣವೇ ಆಗಿರುತ್ತದೆ; ಆದ್ದರಿಂದ

ನನ್ನ ಶತ್ರುವೆನಿಸುವ ಪ್ರತಾಪನ ತೇಜೋಭಂಗ ಮಾಡದಿದ್ದರೆ, ನನ್ನ ತೇಜಸ್ಸಿನ ಪ್ರಖರತೆಯಾದರೂ ಹ್ಯಾಗೆ ಹೆಚ್ಚಬೇಕು?

ಈ ಮೇರೆಗೆ ನುಡಿದು ಬಾದಶಹನು ಸುಮ್ಮನಾದನು. ಪೃಥ್ವಿರಾಜನೂ ಮೂರು ಸಾರೆ ತಸ್ಲೀಮು ಮಾಡಿ ತನ್ನ ಸ್ಥಳದಲ್ಲಿ ಕುಳಿತುಕೊಂಡನು. ಬಳಿಕ ಮೇಲೆ ವರ್ಣಿಸಿದಂತೆ ತತ್ವಜ್ಞಾನಿಗಳೂ, ಪಂಡಿತರೂ ಬಾದಶಹನನ್ನು ಕಂಡರು. ದರ್ಬಾರದ ಈ ಅಟ್ಟಹಾಸವನ್ನೂ, ಅದರೊಳಗಿನ ಗುಣಿಜನರ ಸಮುಚ್ಚಯವನ್ನೂ ನೋಡಿ ದರ್ಬಾರಕ್ಕೆ ಹೊಸದಾಗಿ ಬಂದಿದ್ದ ನಮ್ಮ ರಜಪೂತಸರದಾರನು ಬೆರಗಾಗಿರಲು,ಮೇಲೆ ಹೇಳಿದಂತೆ ಪೃಥ್ವಿರಾಜನ ಅಭಿಮಾನೋಕ್ತಿಗಳು ಅವನ ಕಿವಿಗೆ ಬಿದ್ದವು. ತಮ್ಮ ಪ್ರತಾಪಶಾಲಿಯಾದ ರಾಣಾನು ಇಂಥ ಬಲಾಢ್ಯಸಾರ್ವಭೌಮನೊಡನೆ ಕೆಣಕಿ ಕಾದಿ, ತನ್ನ ಸ್ವಾತಂತ್ರ್ಯವನ್ನು ಕಾದುಕೊಂಡರೆ ಮಾತ್ರ ಆತನ ಪ್ರತಾಪಸಿಂಹನೆಂಬ ನಾಮದ ಸಾರ್ಥಕ್ಯವಾಗುವದೆಂದು ಆತನು ಭಾವಿಸಿದನು. ದರ್ಬಾರದ ಜನರ ಮುಜುರೆಗಳೆಲ್ಲ ಮುಗಿದ ಮೇಲೆ ಬಾದಶಹನ ಸೂಚನೆಯಂತೆ ಭಾಲದಾರನು ಗಂಭೀರಸ್ವರದಿಂದ— "ಉದೇಪುರದ ಪ್ರತಾಪಸಿಂಹರಾಣಾನವರ ಕಡೆಯಿಂದ ಬಂದ ಸರದಾರರು ಮುಂದಕ್ಕೆ ಬರಬೇಕು" ಎಂದು ನುಡಿದ ಕೂಡಲೆ, ಶಿವಸಿಂಗನೆಂಬ ಹೆಸರಿನ ಆ ಸರದಾರನು ಅಕಬರನ ಎದುರಿಗೆ ಬಂದು ಮೂರುಸಾರೆ ತಸ್ಲೀಮುಮಾಡಿ, ರಾಣಾನು ಕೊಟ್ಟಿದ್ದ ಪತ್ರವನ್ನು ಬಾದಶಹನ ಮುಂದೆ ಇಟ್ಟು, ಮತ್ತೆ ತ್ರಿವಾರ ತಸ್ಲೀಮುಮಾಡಿ, ಹಿಂದಕ್ಕೆ ಸರಿದು ತನ್ನಸ್ಥಳದಲ್ಲಿ ನಿಂತುಕೊಂಡನು. ಬಾದಶಹನು ಮೊಹರು ಮಾಡಿದ ಆ ಪತ್ರವನ್ನು ಕೈಮುಟ್ಟಿ ಒಡೆದು ಸ್ವತಃ ಓದಿಕೊಂಡನು. ಪತ್ರವಾಚನದಿಂದ ಬಾದಶಹನಿಗೆ ಸ್ವಲ್ಪ ಸಿಟ್ಟುಬಂದರೂ, ಆ ಗಂಭೀರನು ಅದನ್ನು ಹೊರಗೆ ತೋರಗೊಡದೆ, ಸಭಿಕರನ್ನುಕುರಿತು—ವೀರರೆ, ಪ್ರತಾಪನ ಪತ್ರವು ನಿಮಗೆ ತ್ವೇಷವನ್ನುಂಟುಮಾಡಬಹುದಾಗಿದ್ದರೂ, ರಾಣಾನು ತನ್ನ ಅಂಥ ನಿಕೃಷ್ಟಸ್ಥಿತಿಯಲ್ಲಿ ಸಹ ತನ್ನ ಸ್ವಾತಂತ್ರ್ಯರಕ್ಷಣಕ್ಕೆ ಹೆಣಗುವದನ್ನು ನೋಡಿ, ನೀವು ಆತನನ್ನು ಶ್ಲಾಘಿಸಲೇಬೇಕಾಗುವದು. ಉದೇಪುರದ ಅಭಿಮಾನಶಾಲಿಯಾದ ಸಿಸೋದಿಯಾಕುಲದಲ್ಲಿ ಹುಟ್ಟಿದ ಪ್ರತಾಪನಲ್ಲಿದ್ದ ಪ್ರತಾಪವನ್ನು ಪರೀಕ್ಷಿಸಲು, ನಿಮ್ಮಂಥ ಶೂರರು ಸಿದ್ಧವಾಗಿರಲಿಕ್ಕೆ ಬೇಕು. ಬಾದಶಹನೊ

ಡನೆ ದ್ವೇಷವನ್ನು ಕಟ್ಟಿಕೊಳ್ಳಲು, ತಾನು ತೀರ ಅಯೋಗ್ಯನೆಂಬದನ್ನರಿಯದೆ, ಪ್ರತಾಪನು ದಡ್ಡತನದಿಂದ ಹ್ಯಾಗೆ ಪತ್ರಬರಿದಿರುತ್ತಾನೆಂಬದನ್ನು ನಿಮಗೆ ತಿಳಿಸುವದಕ್ಕಾಗಿ ಚಿಟಣೀಸರು ಈ ಪತ್ರವನ್ನು ಎಲ್ಲರಿಗೂ ಕೇಳಿಸುವಂತೆ ಓದುವರು, ಎಂದು ನುಡಿಯಲು, ಚಿಟಣೀಸನು ಬಾದಶಹನಬಳಿಗೆ ಹೋಗಿ ಬಹು ವಿನಯದಿಂದ ಆ ಪತ್ರವನ್ನು ತಕ್ಕೊಂಡು, ಗಟ್ಟಿಯಾಗಿ ಓದಹತ್ತಿದನು.

ರಾಣಾಪ್ರತಾಪಸಿಂಹನಿಂದ ಅಕಬರಬಾದಶಹನಿಗೆ--

ಸರ್ವಪ್ರಕಾರದ ಸ್ತುತಿಸ್ತೋತ್ರಗಳಿಗೆ ಸರ್ವಶಕ್ತನಾದ ಆ ಪರಮಾತ್ಮನು ಪಾತ್ರನಿರುತ್ತಾನೆ. ಅದರಂತೆ ಆತನ ಸ್ತೋತ್ರವನ್ನು ಮಾಡಿ ಪತ್ರದ್ವಾರದಿಂದ ತಮಗೆ ತಿಳಿಸತಕ್ಕದ್ದನ್ನು ತಿಳಿಸುವೆನು.

ತಮ್ಮ ಔದಾರ್ಯವೂ, ಸಮಭಾವವೂ ಚಂದ್ರಸೂರ್ಯರಂತೆ ಸರ್ವತ್ರಪ್ರಸಿದ್ಧವಾಗಿರುವವು. ಈ ಸದ್ಗುಣಗಳಿಗೆ ತಮ್ಮ ಅಲೌಕಿಕ ಶೌರ್ಯವು ಜೋಡಾಗಿರುವದರಿಂದ, ತಮ್ಮ ಪೂರ್ವಜರಿಬ್ಬರಿಂದ ಸಂಪಾದಿಸಲ್ಪಟ್ಟ ಅಸ್ಥಿರವಾದ ಚಿಕ್ಕರಾಜ್ಯವನ್ನು ತಾವು ಸ್ಥಿರಗೊಳಿಸಿ, ಸಾರ್ವಭೌಮ ಪದವಿಯನ್ನು ಸಂಪಾದಿಸುವ ಮಾರ್ಗದಲ್ಲಿರುವಿರಿ. ಪ್ರತಾಪಸಿಂಹನು ತಮ್ಮ ಈ ಘನತರವಾದ ಯೋಗ್ಯತೆಯನ್ನು ಅರಿತಿರುವನು; ಆದರೆ ಪುಣ್ಯಶಾಲಿಯಾದ ಅಕಬರಬಾದಶಹನೇ, ಶರಣಬಾರೆಂದು ನೀನು ನನಗೆ ಬರೆಯುತ್ತೀ; ಆದರೆ ಬಾಪ್ಪಾರಾವಳನ ವಂಶಜನಾದ ನಾನು ಶತ್ರುವಿಗೆ ಶರಣುಹೋಗಿ, ಅವನೆದುರಿಗೆ ತಲೆಬಾಗಿಸಿ ನನ್ನ ಪರಮ ಅಭಿಮಾನಶಾಲಿಯಾದ ಸಿಸೋದಿಯಾ ಕುಲಕ್ಕೆ ಕಲಂಕವನ್ನುಂಟುಮಾಡಲಿಯಾ? ಈ ಮಾತು ಕಾಲತ್ರಯದಲ್ಲಿಯೂ ಆಗದು. "ಶೂರರಾದ ರಜಪೂತರು ತಮ್ಮ ಕನ್ನಿಕೆಯರನ್ನು ನನ್ನ ಮನೆತನಕ್ಕೆ ಕೊಟ್ಟರೆ"ಂದು ನೀನು ಬರೆದಿರುತ್ತೀ; ಆದರೆ ಆಶೆಬುರುಕತನದಿಂದಾಗಲಿ, ಹೇಡಿತನದಿಂದಾಗಲಿ ತಮ್ಮ ಕುಲದ ಪವಿತ್ರತೆಯನ್ನು ಮರೆತು, ನಿನ್ನ ಮನೆತನದೊಡನೆ ಶರೀರಸಂಬಂಧ ಮಾಡಿ ಜಾತಿಭ್ರಷ್ಟರೆಂಬ ಕಲಂಕಕ್ಕೆ ಪಾತ್ರರಾದ ವೇದಧರ್ಮದ ರಜಪೂತರು, ಶೂರರೆಂಬ ಪದವಿಗೆ ಹ್ಯಾಗೆ

ಪಾತ್ರರಾಗುವರೋ ನಾನರಿಯೆ! ಬಾದಶಹನೇ, ಸಿಸೋದಿಯಾಮನೆತನಕ್ಕೆ ರಾಜ್ಯಲೋಭವನ್ನು ತೋರಿಸಿ ಕಾರ್ಯಸಾಧಿಸಿಕೊಳ್ಳಬೇಕೆಂದು ನೀನು ಇಚ್ಛಿಸುತ್ತೀ; ಆದರೆ ಸಣ್ಣ ಸಣ್ಣ ಮಾತಿಗಾಗಿ ರಾಜ್ಯದಮೇಲಿನ ಹಕ್ಕನ್ನು ಅಭಿಮಾನಪುರಸ್ಸರ ಸಂತೋಷದಿಂದ ಬಿಟ್ಟುಕೊಟ್ಟು ದೇಶಾಂತರಕ್ಕೆ ತೆರಳಿ ದಂಥ ಚೊಂಡಾನಂಥ ಉದಾರಧೀರರಾದ ನಮ್ಮ ಪೂರ್ವಜರಚರಿತ್ರವನ್ನು ನೀನು ಕೇಳಿಲ್ಲೆಂಬಂತೆ ಕಾಣುತ್ತದೆ. ಸಿಸೋದಿಯಾ ಮನೆತನದವರು-ಶ್ರೀ ರಾಮಚಂದ್ರನ ಮನೆತನದವರು, ರಾಜ್ಯಲೋಭಕ್ಕೆ ಬಾಯಿತೆರೆಯತಕ್ಕವ ರಲ್ಲ. ತಮ್ಮ ಸತ್ವವನ್ನೂ, ಕ್ಷಾತ್ರಧರ್ಮವನ್ನೂ ಕಾಯ್ದುಕೊಳ್ಳುವದಕ್ಕಾಗಿ ಅವರು ರಾಜ್ಯತ್ಯಾಗವನ್ನು ಮಾಡಿ ವನವಾಸದ ಕಷ್ಟವನ್ನಾದರೂ ಭೋಗಿ ಸುವರು; ಜೀವದ ಪರಿವೆಯಿಲ್ಲದೆ ಸಮರಭೂಮಿಯಲ್ಲಿ ಸಕುಟುಂಬ ದೇಹ ತ್ಯಾಗವನ್ನಾದರೂ ಮಾಡುವರು. ಇಂಥ ಮಹಾತೇಜಸ್ವಿಗಳ ವಂಶದಲ್ಲಿ ಹುಟ್ಟಿದ ಪ್ರತಾಪನಿಗೆ ಶರಣುಬಾರೆಂದು ನೀನು ಬೋಧಿಸುವೆ; ಶರೀರಸಂ ಬಂಧ ಮಾಡೆಂದು ಪ್ರಾರ್ಥಿಸುವೆ; ಆದರೆ ಬಾದಶಹನೇ, ನಿನ್ನ ಈ ಬೋಧವೂ, ಪ್ರಾರ್ಥನೆಯೂ ಪ್ರತಾಪನಮುಂದೆ ನಡೆಯಲಾರವು. ನೀನು ಬಾಪ್ಪಾರಾವಳನ ಉದಾಹರಣವನ್ನು ಕೊಟ್ಟು ನನ್ನನ್ನು ಮೋಸಗೊಳಿಸಬೇ ಕೆಂದು ಮಾಡಿರುತ್ತೀ; ಆದರೆ ಪ್ರತಾಪನು ಹಾಗೆ ಮೋಸಹೋಗುವವನಲ್ಲ. ನೀನು ಬರೆದಂತೆ ಮಹಾಪ್ರತಾಪಶಾಲಿಯಾದ ಬಾಪ್ಪಾರಾವಳನು ದಿಗ್ವಿಜಯ ಮಾಡಿ, ಗೆದ್ದ ಅರಸರ ಒಬ್ಬೊಬ್ಬ ಕನ್ನಿಕೆಯರನ್ನು ಲಗ್ನವಾದದ್ದೇನೋ ನಿಜ. ಅಂಥ ಪರಾಕ್ರಮವನ್ನು ನಾನಾಗಲಿ, ನನ್ನ ವಂಶದವರಾಗಲಿ ಇನ್ನು ಮೇಲೆ ಮಾಡಿದರೆ, ಮನಸ್ಸಿಗೆ ಬಂದಲ್ಲಿ ಬಾಪ್ಪಾರಾವಳನಂತೆ ಮುಸಲ್ಮಾನ ಕನ್ನಿಕೆಯರನ್ನಾದರೂ ಲಗ್ನಮಾಡಿಕೊಳ್ಳಬಹುದು; ಬೇರೆ ಜಾತಿಯ ಕನ್ನಿಕೆ ಯನ್ನಾದರೂ ಲಗ್ನಮಾಡಿಕೊಳ್ಳಬಹುದು. ಅರಸರಿಗೆ ಜಾತಿಯ ಪ್ರತಿಬಂಧ ವಿಲ್ಲೆಂದು ಪುರಾಣಾಂತರದಲ್ಲಿ ಆಧಾರಗಳಿರುವವು. ಪಾಂಡವರ ಮುತ್ತಜ್ಜ ನಾದಶ್ಯಂತನುವು ಅಂಬಿಗನ ಮಗಳಾದ ಮತ್ಸ್ಯಗಂಧಿಯನ್ನೂ, ಮಹಾ ಬಲಿಷ್ಠನಾದ ಭೀಮಸೇನನು ದೈತ್ಯಪುತ್ರಿಯಾದ ಹಿಡಂಬೆಯನ್ನೂ, ಯಯಾ ತಿರಾಜನು ಬ್ರಾಹ್ಮಣಪುತ್ರಿಯಾದ ದೇವಯಾನಿಯನ್ನೂ ಲಗ್ನವಾಗಿರುವರೆಂ ಬುದು ನಮ್ಮೆಲ್ಲರಿಗೂ ಗೊತ್ತಿರುತ್ತದೆ. ಆದರೆ ಅಕಬರನೇ, ಬಾಪ್ಪಾರಾವಳ

ನಹಾಗೆ ದಿಗ್ವಿಜಯಮಾಡಿ ಲಗ್ನಮಾಡಿಕೊಳ್ಳದೆ, ನಿನ್ನ ಭಯಕ್ಕಾಗಿ ನನ್ನ ಮನೆತನದ ಕನ್ಯೆಯನ್ನು ನಿನ್ನ ಮನೆತನಕ್ಕೆ ಕೊಟ್ಟು ನನ್ನ ಪವಿತ್ರಕುಲಕ್ಕೆ ಎಂದೂ ಕಲಂಕವನ್ನುಂಟು ಮಾಡಲಾರೆನು. ಹಂಗಿನ ರಾಜ್ಯಸುಖಕ್ಕಿಂತ ಹಂಗಿಲ್ಲದ ವನವಾಸದ ಕಷ್ಟವು ಪ್ರತಾಪನಿಗೆ ಪ್ರೀಯವಾಗಿರುವದು. ನಮ್ಮ ಮುತ್ತಜ್ಜನನ್ನು ದೈವಶಾಲಿಯಾದ ನಿಮ್ಮ ಅಜ್ಜನೂ, ನಮ್ಮ ತಂದೆಯನ್ನು ಪುಣ್ಯಶಾಲಿಯಾದ ನೀನೂ ಜಯಿಸಿರಲು, ನಾನು ಅದರ ಸೇಡು ತೀರಿಸಿ ಕೊಳ್ಳದೆ ನಿನಗೆ ಶರಣು ಬರಲಾ ? ನಿಮ್ಮ ತಂದೆಯಾದ ದೊಡ್ಡಮನಸ್ಸಿನ ಹುಮಾಯೂನನೂ ನಮ್ಮವರೊಡನೆ ಸ್ನೇಹದಿಂದ ನಡಕೊಂಡಂತೆ, ನಾನೂ ನಿನ್ನೊಡನೆ ಸ್ನೇಹದಿಂದ ನಡಕೊಳ್ಳಬೇಕೆಂದು ನೀನು ಇಚ್ಛಿಸುತ್ತಿದ್ದರೆ, ನಿನ್ನ ತಂದೆಯಂತೆ ನನ್ನ ಸ್ವಾತಂತ್ರ್ಯವನ್ನು ಒಪ್ಪಿಕೊಂಡು ನಿನ್ನ ದುಷ್ಟವಾದ ಮಹತ್ವಾಕಾಂಕ್ಷೆಯನ್ನು ಬಿಟ್ಟು ಬಿಡು. ಬಾದಶಹನೇ, ನಿನ್ನ ಪತ್ರಕ್ಕೆ ಇಷ್ಟು ಉತ್ತರಕೊಡುವದು ಸಾಕೆಂದು ನನಗೆ ತೋರುತ್ತದೆ. ಪರಮಕಲ್ಯಾಣ ಪ್ರದನಾದ ಸರ್ವೇಶ್ವರನು ಎಲ್ಲರಿಗೂ ಸದ್ಬುದ್ಧಿಯನ್ನು ಕೊಡಲಿ.”

ಚಿಟಣೀಸನು ಈ ಮೇರೆಗೆ ಓದಿದ ಪತ್ರವನ್ನು ಕೇಳಿ, ದರ್ಬಾರದ ಜನರು ಬೆರಗಾದರು. ರಾಜಾಮಾನಸಿಂಗನಂಥ ಕೆಚ್ಚದೆಯ ರಜಪೂತರು ಕೂಡ ತಮ್ಮ ಅಧಮಕೃತಿಗಾಗಿ ಮನಸ್ಸಿನಲ್ಲಿ ನಾಚಿಕೊಂಡರೆಂದಬಳಿಕ, ಪೃಥ್ವಿರಾಜನಂಥ ಅಭಿಮಾನಶಾಲಿಗಳಾದ ರಜಪೂತರ ಕಣ್ಣೊಳಗಿಂದ ಅಶ್ರು ಬಿಂದುಗಳು ಉದುರಿ, ಪ್ರತಾಪನ ವಿಷಯವಾಗಿ ಅವರಲ್ಲಿ ಪೂಜ್ಯಬುದ್ಧಿಯು ಉತ್ಪನ್ನವಾದದ್ದೇನಾಶ್ಚರ್ಯವು ? ಪತ್ರಓದಿದ ಬಳಿಕ ದರ್ಬಾರವು ಕ್ಷಣ ಹೊತ್ತು ಸ್ತಬ್ಧವಾಗಿತ್ತು. ಬಾದಶಹನ ಮುಖದಿಂದ ಏನು ಶಬ್ದಗಳು ಹೊರಡುವವೋ ಎಂದು ಎಲ್ಲರು ಎವೆಯಿಕ್ಕದೆ ಆತನನ್ನು ನೋಡುತ್ತಲಿ ದ್ದರು. ಪತ್ರವನ್ನು ತಂದಿದ್ದ ಶಿವಸಿಂಗನು ಪತ್ರದ ಸಂಗತಿಯನ್ನು ಕೇಳಿ ಆವೇಶಗೊಂಡು ಗಾಂಭೀರ್ಯದಿಂದ ನಿಂತುಕೊಂಡಿದ್ದನು. ಅಷ್ಟರಲ್ಲಿ ಉದಾರಾಂತಃಕರಣದ ಅಕಬರ ಬಾದಶಹನು ಶಿವಸಿಂಗನನ್ನು ಕುರಿತು— ಹೋಗು, ರಜಪೂತ ಸರದಾರನೇ, ನಿನ್ನ ಯಜಮಾನನಾದ ರಾಣಾನ ಬಳಿಗೆ ಹೋಗು. ಅಕಬರಬಾದಶಹನು ತನ್ನ ಕರ್ತವ್ಯವನ್ನು ಮಾಡಿರುವನು. ಇನ್ನು

ಮುಂದೆ ಏನುಮಾಡುವನೆಂಬದನ್ನು ಆತನು ಕೃತಿಯಿಂದಲೇ ತೋರಿಸುವನು. ಲೇಖನಿಯಿಂದ ಬರೆಯುವದು ಸುಲಭ; ಆದರೆ ಬರೆದಂತೆ ಶಸ್ತ್ರಧರಿಸಿ ಕೃತಿ ಮಾಡಿ ತೋರಿಸುವದು ಬಹಳ ಕಠಿಣವಾಗಿರುತ್ತದೆ, ಎಂದು ನುಡಿದವನೇ ಆತನು ಸಿಂಹಾಸನದಿಂದ ಏಳಲು, ಕೂಡಲೆ ಸಭಿಕರು ಮನಸ್ಸಿನಲ್ಲಿ ಬಗೆಬಗೆ ಯಾಗಿ ಕಲ್ಪಿಸುತ್ತ, ದರ್ಬಾರದೊಳಗಿಂದ ಹೊರಟುಹೋದರು.

೬ ನೆಯ ಪ್ರಕರಣ

# ತಪೋಧನನು.

ವೈಶಾಖ ಶುದ್ಧ ಚತುರ್ದಶಿಯು ರಾತ್ರಿ ಹಿಟ್ಟುಚಲ್ಲಿದಹಾಗೆ ಬೆಳದಿಂಗಳು ಬಿದ್ದದೆ. ಕಮಳನೇರವನ್ನು ರಾಜಧಾನಿಯಾಗಿ ಮಾಡಿಕೊಂಡ ಪ್ರತಾಪನು, ಏನುಮಾಡುತ್ತಾನೋ ನೋಡಬೇಕೆಂದು ಗಾಂಭೀರ್ಯದಿಂದ ಸಾಗಿ ಬರುತ್ತಿರುವಂತೆ, ಚಂದ್ರಮನು ರಾಜಧಾನಿಯ ನೆತ್ತಿಯಮೇಲೆ ಬರತೊಡಗಿದ್ದಾನೆ. ಮಧ್ಯರಾತ್ರಿಯು ಮೀರುತ್ತ ಬಂದದ್ದರಿಂದ ಬಹುತರ ರಾಜಧಾನಿಯೊಳಗಿನ ಜನರೆಲ್ಲ ನಿದ್ರಾವಶರಾಗಿದ್ದಾರೆ. ಜನರ ಮಾತುಗಳೂ, ಮಂಗಲವಾದ್ಯಗಳ ಧ್ವನಿಗಳೂ, ರಥಗಳ ಓಡಾಟದ ಕಡಕಡಾಟವೂ, ಕುದುರೆಗಳ ಖುರಪುಟಧ್ವನಿಯೂ ಅಪರೂಪವಾಗಿ ಕೇಳಬರುತ್ತಲಿವೆ. ಹುಡುಗರ ಅಳುವ ಧ್ವನಿಗಳು ನಡುನಡುವೆ ಕೇಳಿಸುತ್ತಲಿವೆ. ರಸಿಕಜನರ ಸಂಗೀತದ ಮಂಜುಲಧ್ವನಿಯು ವೀಣಾದಿ ವಾದ್ಯಗಳ ಇಂಚರದೊಡನೆ ಬೆರೆತು ಸಂಭ್ರಮದಿಂದ ಕರ್ಣರಂಧ್ರವನ್ನು ಪ್ರವೇಶಿಸಿ ಮನಸ್ಸನ್ನು ರಂಜಿಸುತ್ತಲಿದೆ. ದುರ್ಗದ ಕಾವಲುಗಾರರ ಗಸ್ತಿಯ ಧ್ವನಿಯಿಂದ ಸುಜನರಲ್ಲಿ ಅಭಯವೂ, ದುರ್ಜನರಲ್ಲಿ ಭಯವೂ ಉತ್ಪನ್ನವಾಗುತ್ತಲಿವೆ. ರಾಜಧಾನಿಯೊಳಗಿನ ಮಂದಿರಗಳಲ್ಲಿ ಅಲ್ಲಿಯೊಂದು ಇಲ್ಲಿಯೊಂದರಂತೆ ದೀಪಗಳು ಪ್ರಕಾಶಿಸುತ್ತಲಿವೆ. ನವವಧುಗಳ ಲಜ್ಜಾಯುಕ್ತಪ್ರೇಮಕಂಪಿತ ಹೃದಯಗಳು, ಕಾಂತರ ಆಲಿಂಗನದಿಂದ ದ್ರವಿಸಿ, ಪ್ರೇಮರಸವು ಹೊರಸೂಸಿತೋ ಅನ್ನುವಂತೆ, ಅವರ ಮೈಗಳು ಬೆವರಲು, ಅವರು ನಸುಗಾಳಿಗೆ ಮೈಯೊಡ್ಡುತ್ತಲಿದ್ದಾರೆ.

ಹೀಗಿರುವಾಗ ಕಮಳನೇರದಲ್ಲಿ ಸ್ತಬ್ಧತೆಯು ಹೆಚ್ಚುತ್ತಹೋಗಿ ಎಂಟುತಾಸು ರಾತ್ರಿಯಾಗಲು, ರಾಜಧಾನಿಯಲ್ಲೆಲ್ಲ ಶಾಂತಿಯ ಸಾಮ್ರಾಜ್ಯವು ನೆಲೆಗೊಂಡಿತು. ಆಗ ಜಾರ-ಚೋರರ ನೀಚಕೃತಿಗಳಿಗೆ ಉತ್ತೇಜನವು ದೊರೆಯಿತು. ಅವರ ಅಧಮತನವನ್ನು ನೋಡಲಾರದೆ ಹಿಮಾಂಶುವು ಅದೋಮುಖವಾಗಿ ತೆರಳುವನೋ ಅನ್ನುವಂತೆ ಪಶ್ಚಿಮದಿಕ್ಕಿಗೆ ಸಾಗಿದ್ದನು. ಇಂಥ ವಿಲಕ್ಷಣ ಪ್ರಸಂಗದಲ್ಲಿ ಪ್ರತಾಪಸಿಂಹನು ವೇಷಾಂತರದಿಂದ ಅರಮನೆಯಿಂದ ಹೊರಬಿದ್ದು ಸಾಗಿದ್ದನು. ಆ ತೇಜಸ್ವಿಯ ಮುಖದಲ್ಲಿ ಚಿಂತೆಯ ಲಕ್ಷಣವು ತೋರುತ್ತಿತ್ತು. ಆತನು ಪ್ರಸಂಗಕ್ಕೆ ತಕ್ಕಂತೆ ಉಡುಪು-ತೊಡವುಗಳನ್ನು ಧರಿಸಿ ಶಸ್ತ್ರಾಸ್ತ್ರಗಳಿಂದ ಸಜ್ಜಾಗಿ ಮೈತುಂಬ ಮುಸುಕು ಇಟ್ಟಿದ್ದನು. ಅರಬರನಿಗೆ ಪತ್ರಬರೆದು ಕಳಿಸಿದ ಬಳಿಕ ಬಗೆಯಬಗೆಯ ವಿಚಾರಗಳಿಂದ ಮನಸ್ಸು ಅಸ್ವಸ್ಥವಾಗಲು, ಆತನು ತನ್ನ ಹೊಸ ರಾಜಧಾನಿಯ ಸ್ಥಿತಿಯನ್ನೂ, ಕಾವಲುಗಾರರೇ ಮೊದಲಾದವರ ಜಾಗರೂಕತೆಯನ್ನೂ, ಪ್ರಜೆಗಳ ಇರವನ್ನೂ ತಿಳಕೊಳ್ಳುವದಕ್ಕಾಗಿ ಅರಮನೆಯಿಂದ ಹೊರಬಿದ್ದನು. ಆತನು ಸಂದಿಗೊಂದಿಗಳಲ್ಲಿ ಹಾದು ಸದ್ದಿಲ್ಲದೆ ಸಾಗಿ ಕೋಟೆಯ ಒತ್ತಟ್ಟಿನ ಗೋಡೆಯ ಸನಿಯಕ್ಕೆ ಹೋಗುತ್ತಿರಲು, ಒಬ್ಬ ಸುಂದರ ತರುಣಿಯು ಜಟಾಧಾರಿಯಾದ ಒಬ್ಬ ತೇಜಃಪುಂಜ ತರುಣನ ಕೈಯನ್ನು ಹಿಡಕೊಂಡು ಬಳಿಯಲ್ಲಿದ್ದ ಉದ್ಯಾನದೊಳಗಿನ ಲತಾಮಂಟಪದ ಕಡೆಗೆ ಸಾಗಿದ್ದಳು.

ಇಷ್ಟು ರಾತ್ರಿಯಲ್ಲಿ ಈ ತರುಣರು ಇಲ್ಲಿ ಯಾಕೆ, ಎಂಬ ವಿಚಾರವು ಪ್ರತಾಪಸಿಂಹನ ಮನಸ್ಸಿನಲ್ಲಿ ತಟ್ಟನೆ ಉತ್ಪನ್ನವಾಯಿತು. ಪ್ರತಾಪನು ಮುಂದಕ್ಕೆ ಸಾಗದೆ ಬಳಿಯಲ್ಲಿಯೇ ಇದ್ದ ಒಂದು ಗಿಡದ ಮರೆಗೆ ನಿಂತುಕೊಂಡು ನೋಡಹತ್ತಿದನು. ರಾಣಾನು ಬಹು ಸುಶೀಲನು, ತಾನು ಹೀಗೆ ಗುಪ್ತರೀತಿಯಿಂದ ಕಾಂತಾ ಜನರ ಕೌತುಕದ ಕ್ರೀಡೆಯನ್ನು ನೋಡುವದು ನೀತಿಗೆ ಸಮ್ಮತವಾಗಬಹುದೋ, ಎಂಬ ವಿಚಾರವು ಆತನ ಮನಸ್ಸಿನಲ್ಲಿ ಉತ್ಪನ್ನವಾಯಿತು. ಆದರೆ ಪ್ರಜಾಪಾಲಕನಾದ ತಾನು, ಪ್ರಜೆಗಳ ನೀತಿನಡಾವಳಿಗಳನ್ನು ನಿರ್ಮಲ ಮನಸ್ಸಿನಿಂದ ಪರೀಕ್ಷಿಸಲು ಬದ್ಧನೆಂತಲೂ, ದುಷ್ಟಶಾಸನ ಶಿಷ್ಟಪರಿಪಾಲನಗಳು ತನ್ನ ಕರ್ತವ್ಯಗಳೆಂತಲೂ ತಿಳಿದು ಆತನು ಆ ತರುಣರ ನೀತಿಯನ್ನು ಪರೀಕ್ಷಿಸಲು ನಿಶ್ಚಯಿಸಿದನು. ಹಿಂದೂ

ಜನರು, ಮುಖ್ಯವಾಗಿ ರಜಪೂತರು ಪಾಪಮೂಲವಾದ ವ್ಯಭಿಚಾರವನ್ನು ಅತ್ಯಂತವಾಗಿ ತಿರಸ್ಕರಿಸುವದು ಅನಾದಿ ಸಿದ್ಧವು. ಅದರಲ್ಲಿ ಪ್ರತಾಪಸಿಂಹ ನಂತು ಬಹು ಪಾಪಭೀರುವೂ, ಅಭಿಮಾನಿಯೂ ಆದದ್ದರಿಂದ ಆತನು ಪ್ರಜೆಗಳ ನೀತಿಯ ನಿರೀಕ್ಷಣವನ್ನು ಅತ್ಯಂತ ಸೂಕ್ಷ್ಮರೀತಿಯಿಂದ ಮಾಡು ವವನಾಗಿದ್ದನು. ಜಟಾಧಾರಿಯು–ಸುಂದರ ತರುಣಿಯು–ಮಧ್ಯರಾತ್ರಿಯು; ಈ ಮೂರರ ಯೋಗವು ಪ್ರತಾಪಸಿಂಹನಲ್ಲಿ ಸಂಶಯುವನ್ನೂ, ಸಂತಾಪವನ್ನೂ ಉಂಟುಮಾಡಿದವು. ಆತನು ತನ್ನ ಮನಸ್ಸನ್ನು ಬಿಗಿ ಹಿಡಿದು ಆ ಕಾಂತ-ಕಾಂತೆಯರ ಕಮನೀಯ ರೂಪವನ್ನೂ, ಲಲಿತ ಮಂದಗಮನವನ್ನೂ ನೋಡುತ್ತ, ರಹಸ್ಯವನ್ನು ತಿಳಿಯಲು ಆತುರನಾಗಿದ್ದನು.

ಆಗ ಪ್ರಿಯನೊಡನೆ ಲತಾಮಂಟಪದ ಕಡೆಗೆ ಸಾಗಿದ್ದ ಆ ತರುಣಿಯು ತನ್ನ ಪ್ರಿಯನ ಹಸ್ತದಿಂದ ತನ್ನ ಹಸ್ತವನ್ನು ಮೆಲ್ಲನೆ ಬಿಡಿಸಿಕೊಂಡು, ಪ್ರಶಸ್ತವಾಗಿ ಅರಳಿದ ಗುಲಾಬಿಯ ಹೂಗಳನ್ನು ಎತ್ತ ಹತ್ತಿದಳು. ಬರಬರುತ್ತ ಆಕೆಯ ಮುಖವು ಪ್ರತಾಪಸಿಂಹನ ಕಡೆಗೆ ಆಯಿತು. ಆಕೆಯ ಪ್ರಿಯನಾದ ಜಟಾಧಾರಿಯು ತನ್ನ ಪ್ರಿಯಳ ಕಾರ್ಯಕ್ಕೆ ಉತ್ತೇಜನ ಕೊಡುವವನಂತೆ, ತಾನೂ ಪ್ರಶಸ್ತವಾಗಿ ಅರಳಿದ ದುಂಡಮಲ್ಲಿಗೆಯ ಹೂಗಳನ್ನು ಎತ್ತಹತ್ತಿದನು. ಹೂಗಳಿಂದ ಅವರಿಬ್ಬರ ಬೊಗಸೆಗಳು ತುಂಬಿದವು. ಆಗ ಆ ತರುಣಿಯು ಮಂಜುಲ ಸ್ವರದಿಂದ ಆ ಜಟಾಧಾರಿಯನ್ನು ಕುರಿತು—ಪ್ರಿಯಕರಾ, ಈ ಹೂಗಳನ್ನು ನೋಡಿದಿರಾ, ಎಷ್ಟು ಸಲಕ್ಷಣವಾಗಿರುತ್ತವೆ! ಅಹಹ! ಎಷ್ಟು ದೊಡ್ಡ ಹೂಗಳಿವು! ಈ ಸುಗಂಧಮಯವಾದ ಪುಷ್ಪಗಳನ್ನು, ಕಂಡವರು ಕಂಡಹಾಗೆ ಹರಿಯಬಾರದೆಂತಲೇ ಲುಬ್ಧನಾದ ಸೃಷ್ಟಿಕರ್ತನು ಈ ಹೂವಿನ ಗಿಡಗಳಿಗೆ ಮುಳ್ಳುಗಳನ್ನು ಮಾಡಿದಂತೆ ತೋರುತ್ತದೆ. ಖೋಡಿ ಮುಳ್ಳುಗಳು ಹೂಗಳನ್ನೆತ್ತುವಾಗ ಕೈಗೆ ಚಿವರಿಕೊಂಡ ಹಾಗೆ ಮಾಡುತ್ತವೆ. ಈದೇನು? ನಿಮ್ಮ ಬೊಗಸೆಯೂ ಮಲ್ಲಿಗೆಯ ಹೂಗಳಿಂದ ತುಂಬಿ ಹೋಗಿದೆಯಲ್ಲ, ಬಹಳ ನೆಟ್ಟಗಾಯಿತು. ಹೀಗೆ ಬರಬೇಕು, ಈ ಲತಾಮಂಟಪದ ಬಳಿಯ ಒಂದು ಸುಂದರವಾದ ಪೀಠದ ಮೇಲೆ ಕುಳಿತು ಕೊಂಡು, ಅದರಬಳಿಯ ಮತ್ತೊಂದು ಪೀಠದ ಮೇಲೆ ನಮ್ಮ ಬೊಗಸೆಗ

ಳೊಳಗಿನ ಹೂಗಳನ್ನು ರಾಶಿಯಾಗಿ ಸುರುವೋಣ, ಎಂದು ನುಡಿಯಲು, ಜಟಾಧಾರಿ ಪುರುಷನು ತರುಣಿಯೊಡನೆ ಪೀಠದಲ್ಲಿ ಕುಳಿತು, ಪ್ರಿಯಳು ಸುರುವಿದ ಹೂಗಳ ಮೇಲೆ ತನ್ನ ಹೂಗಳನ್ನು ಸುರುವಿ ಆಕೆಯನ್ನು ಆಲಿಂಗಿಸಿ ಚುಂಬಿಸುತ್ತ ಗದ್ಗದ ಸ್ವರದಿಂದ--ಪ್ರಿಯೇ, ಸಾತ್ವಿಕೆ, ಈ ಹೂಗಳ ಮಿಶ್ರಗಂಧವು ನಮ್ಮಿಬ್ಬರ ಸಂಯೋಗದಂತೆ ಎಷ್ಟು ಆನಂದಕರವಾಗಿರುತ್ತದಲ್ಲ! ಈ ವಸಂತ ಕಾಲದ ಸ್ವಚ್ಛ ಬೆಳದಿಂಗಳಲ್ಲಿ ನಿನ್ನಂಥ ಲೋಕೋತ್ತರ ಸುಂದರಿಯ ಸಹವಾಸ, ಸಂಭಾಷಣ, ಆಲಿಂಗನ, ಚುಂಬನಾದಿಗಳ ಯೋಗದಿಂದಾಗುವ ಪರಮಾನಂದವನ್ನು ಮಹಾ ತಪಸ್ವಿಯು ಪಡೆಯಬಹುದಲ್ಲದೆ, ಅನ್ಯರ ಪಾಡೇನು? ಮೂರ್ತಿಮಂತ ಸತ್ಯವಾಗಿರುವ ನೀನು ಶ್ರೇಷ್ಠ ತಪಸ್ವಿನ ಫಲವಾಗಿರುವೆ. ನಿನಗೆ ಹೃದಯವನ್ನು ಕೊಟ್ಟ ನಿನ್ನ ರಕ್ಷಣಕ್ಕಾಗಿ ಸರ್ವಸ್ವವನ್ನು ಅರ್ಪಿಸಿದ ಭಾಗ್ಯಶಾಲಿಯು ಲೋಕವಂದ್ಯನಾಗಿರುವನು. ಪ್ರೀಯೇ, ಹರಿಶ್ಚಂದ್ರಾದಿ ಮಹಾತ್ಮರ ಜಡದೇಹಗಳು ಮಣ್ಣುಗೂಡಿಹೋಗಿ ದೀರ್ಘಕಾಲವಾಗಿದ್ದರೂ, ಅವರ ಸತ್ವಶಾಲಿತ್ವದ ಕೀರ್ತಿಯು ಈವೊತ್ತಿಗೂ ಜಗತ್ತಿನಲ್ಲಿ ಹಬ್ಬಿರುತ್ತದೆ.

ಸಾತ್ವಿಕೆಯೆಂಬ ಹೆಸರು ಪ್ರತಾಪಸಿಂಹನ ಕಿವಿಗೆ ಬಿದ್ದಕೂಡಲೆ ಆತನು ಮೆಟ್ಟಿಬಿದ್ದನು. ದನಿಯ ಮೇಲಿಂದ ಆತನಿಗೆ ಸಾತ್ವಿಕೆಯ ಗುರುತು ಹತ್ತಿದ ಹಾಗಾಗುತ್ತಿದ್ದರೂ, ಈ ದಿನ ಆಕೆಯ ಉಡಿಗೆ-ತೊಡಿಗೆಗಳು ಭಿನ್ನವಾಗಿದ್ದದ್ದರಿಂದ ಆತನಿಗೆ ಆಕೆಯ ಗುರುತು ಪೂರಾ ಹತ್ತಿದ್ದಿಲ್ಲ. ಈ ದಿನ ಸಾತ್ವಿಕೆಯು ಶುಭ್ರವರ್ಣದ ಉಡಿಗೆ-ತೊಡಿಗೆಗಳನ್ನು ಧರಿಸಿ ತಪೋಧನನ ಸಹವಾಸದಿಂದ ವಿಚಿತ್ರ ಶೌಂದರ್ಯವನ್ನೂ, ಕಾಂತಿಯನ್ನೂ ತಾಳಿದ್ದಳು. ಈಗ ಪ್ರತಾಪನಿಗೆ ಪೂರಾ ಗುರುತು ಹತ್ತಲು, ಆತನ ದುಷ್ಟ ಲ್ಪನೆಗಳು ನಷ್ಟವಾಗಿ ಆತನಲ್ಲಿ ಭಕ್ತಿಯು ಉತ್ಪನ್ನವಾಯಿತು. ಇಂಥ ಲೋಕೋತ್ತರ ಸುಂದರಿಯು ಜಟಾಧಾರಿಯನ್ನು ಯಾಕೆ ಆಶ್ರಯಿಸಿರಬಹುದೆಂಬದನ್ನು ತಿಳಕೊಳ್ಳುವ ಕೌತುಕವು ಮಾತ್ರ ಆತನಲ್ಲಿ ಉತ್ಪನ್ನವಾಯಿತು. ಅಷ್ಟರಲ್ಲಿ ಸಾತ್ವಿಕೆಯು ಮುಗುಳುನಗೆಯಿಂದ ಜಟಾಧಾರಿಯನ್ನು ನೋಡಿ ಮಂಜುಲ ಸ್ವರದಿಂದ--ಪ್ರಿಯರೇ, ಈ ಗುಲಾಬಿಯ ಹೂಗಳೂ, ಮಲ್ಲಿಗೆಯ ಹೂಗಳೂ, ವರ್ಣ, ಆಕಾರ, ಗಂಧ ಮೊದಲಾದವುಗಳಿಂದ ಭಿನ್ನವಾಗಿ ತೋರು

ತ್ತಿದ್ದರೂ, ಅವುಗಳ ಸಂಯುಕ್ತ ಗಂಧದಿಂದಾಗುವ ಆನಂದವು ಭಿನ್ನವಾಗಿ ರುವದಿಲ್ಲವಲ್ಲ! ಆದರಂತೆ ಸಾತ್ವಿಕೆಯೆನಿಸುವ ನಾನೂ, ತಪೋಧನರೆನಿ ಸುವ ನೀವೂ ಭಿನ್ನವಾಗಿ ತೋರಿ ಜನರು ಭ್ರಾಂತಿಗೊಳಗಾದರೂ ನಮ್ಮಿಂ ದಾಗುವ ಆತ್ಮೋದ್ಧಾರ ರೂಪವಾದ ಕಾರ್ಯವು ಭಿನವಾದದ್ದಲ್ಲ, ಅನ್ನಲು, ತಪೋಧನನು—ಪ್ರಿಯೆ, ಬರೇ ಜನರೇ ಭ್ರಾಂತಿಗೊಳಗಾಗುವರೆಂದು ಯಾಕೆ ಅನ್ನುತ್ತೀ? ಸದ್ಯಕ್ಕೆ ಮೇವಾಡದ ಸಿಂಹಾಸನವೇರಿರುವ ಪ್ರತಾಪಸಿಂಹನೇ ಭ್ರಾಂತಿಗೊಳಗಾಗಿರುವನು. ಸಾತ್ವಿಕಾ—ತಪೋಧನರಲ್ಲಿಯ ಪರಸ್ಪರ ಸಹಜ ಸಂಬಂಧವನ್ನು ಕೃತ್ರಿಮವೆಂದು ಭಾವಿಸಿ ಆತನು ಕುಕಲ್ಪನೆಗೆ ಈಡಾಗಿರು ವನು. ಮನುಷ್ಯನು ತಪಸ್ಸಿನಿಂದ ಮನೋದಾರ್ಢ್ಯವನ್ನು ಸಂಪಾದಿಸಿದ ಹೊರತು ಅವನು ಸಾತ್ವಿಕೆಯ ಪಾಣಿಗ್ರಹಣಕ್ಕೆ ಯೋಗ್ಯನೇ ಆಗುವದಿಲ್ಲ. ಪವಿತ್ರ ಮೂರ್ತಿಯಾದ ನಿನ್ನ ಪಾಣಿಗ್ರಹಣ ಮಾಡಿದವನು, ನಿನ್ನನ್ನು ಕಾಯ್ದುಕೊಳ್ಳುವದಕ್ಕಾಗಿ ಯಾವಾಗಲೂ ತಪಸ್ಸನ್ನೇ ಆಚರಿಸಬೇಕಾಗು ವದು. ಒಟ್ಟಿಗೆ ತಪೋಧನನಲ್ಲಿ ನೀನು ವಾಸಿಸತಕ್ಕವಳು, ನಿನ್ನನ್ನು ಹೃದ ಯದಲ್ಲಿಟ್ಟುಕೊಳ್ಳಬೇಕೆನ್ನುವವನು ಯಾವಾಗಲೂ ತಪಸ್ಸನ್ನೇ ಆಚರಿಸುತ್ತಿರ ಬೇಕಾಗುವದು. ತಪಸ್ಸಿಗೆ ಹೆದರುವ ಹೇಡಿಗಳ ನೆರಳಿಗೆ ನೀನು ನಿಲ್ಲತಕ್ಕವ ಳಲ್ಲ. ಪ್ರಿಯೇ, ಮೇವಾಡದ ಪ್ರಕೃತದ ರಾಣಾನಾದ ಪ್ರತಾಪಸಿಂಹನಿಗೆ ಈ ಮೊದಲೇ ಒಮ್ಮೆ ನೀನು ದರ್ಶನಕೊಟ್ಟು ಬಂದೆಯಲ್ಲ; ಆದರೆ ಆತನು ತಪಸ್ಸಿನಿಂದ ನಿನ್ನನ್ನು ಪ್ರಸನ್ನೀಕರಿಸಿಕೊಂಡಹೊರತು ತನ್ನ ಪವಿತ್ರ . ಮನೆತ ನದ ಕೀರ್ತಿಯನ್ನು ಕಾಯ್ದುಕೊಂಡು ಕೃತಾರ್ಥನಾಗಲಾರನು. ಮೊನ್ನೆ ಚಿತ್ತೂರನ್ನು ತಕ್ಕೊಳ್ಳಬೇಕೆಂದು ಆತನು ಮಾಡಿದ ಪ್ರಯತ್ನವು ವ್ಯರ್ಥ ವಾದ್ದರಿಂದ ಆತನು ಇನ್ನು ಕಠಿಣ ತಪಸ್ಸನ್ನಾಚರಿಸಿ ನಿನ್ನ ಪ್ರಸಾದವಾದ ಸತ್ವವನ್ನು ಕಾಯ್ದುಕೊಳ್ಳದಿದ್ದರೆ, ರಜಪೂತರ ಗೌರವವು ಉಳಿಯುವ ಹಾಗಿಲ್ಲ. ರಜಪೂತರ ಗೌರವವನ್ನು ಕಾಯುವದಕ್ಕೆ ಸದ್ಯಕ್ಕೆ ಅವನೊಬ್ಬನೇ ಅಧಿಕಾರಿಯಾಗಿರುವನು. ಬಹು ಜನ ರಜಪೂತ ಸಂಸ್ಥಾನಿಕರು ತಪಸ್ಸನ್ನಾ ಚರಿಸಲಾರದೆ ಐಶ್ವರ್ಯಕ್ಕೆ ಮರುಳಾಗಿ ಅಕಬರನಿಗೆ ಶರಣು ಹೋಗಿ ಸತ್ವ ಹಾನಿಯನ್ನು ಮಾಡಿಕೊಂಡು ಅಪಕೀರ್ತಿಯನ್ನು ಸಂಪಾದಿಸಿದರು. ಸದ್ಯಕ್ಕೆ ರಜಪೂತರಲ್ಲಿ ಸತ್ವಮಯವಾದ ಕ್ಷಾತ್ರತೇಜಸ್ಸು ಲುಪ್ತವಾದಂತಾಗಿದೆ.

ಪ್ರಿಯೆ, ಸಾತ್ವಿಕೇ, ಪ್ರತಾಪನಿಗೆ ಉಪದೇಶಮಾಡಲಿಕ್ಕೆ ಈ ಪ್ರಶಾಂತ ಸಮಯವು ಬಹು ಯೋಗ್ಯವಾದದ್ದು. ತಪಸ್ವಿಯನ್ನೇ ಸತ್ವವು ಆಶ್ರಯಿಸುವದೆಂಬದನ್ನು ಈಗ ನಾವಿಬ್ಬರೂ ಮೂರ್ತಿಮತ್ತಾಗಿ ಆತನ ಎದುರಿಗೆ ನಿಂತು ಆತನ ಅನುಭವಕ್ಕೆ ತಂದುಕೊಟ್ಟಿದ್ದೇವೆ. ಅದನ್ನರಿಯದೆ ಪ್ರತಾಪನು ನಮ್ಮ ಕ್ರೀಡೆಯನ್ನು ಅವಲೋಕಿಸುತ್ತ ಅಗೋ ಆ ವೃಕ್ಷದ ಮರೆಯಲ್ಲಿ ನಿಂತುಕೊಂಡಿದ್ದಾನೆ. ಎಲೈ ಪ್ರತಾಪಶಾಲಿಯಾದ ರಾಣಾ, ಈ ತಪೋಧನನಿಂದ ತಪೋದೀಕ್ಷೆಯನ್ನು ಪಡೆಯುವದಕ್ಕಾಗಿ ಇತ್ತ ಬಾ! ಈ ಸಾತ್ವಿಕೆಯ ಸಮಕ್ಷ ನಿನ್ನ ದೀಕ್ಷಾಗ್ರಹಣದ ಕಾರ್ಯವು ಜರುಗಲಿ!

ಈ ಮೇರೆಗೆ ನುಡಿದ ತಪೋಧನನ ಮಾತುಗಳನ್ನು ಕೇಳಿ ಸಾತ್ವಿಕೆಯು ಮುಗುಳುನಗೆ ನಗುತ್ತಿರಲು, ಪ್ರತಾಪನು ಭಕ್ತಿಪರವಶನಾಗಿ ಭರದಿಂದ ಬಂದು ತಪೋಧನನ ಚರಣಗಳ ಮೇಲೆ ಮಸ್ತಕವನ್ನಿಟ್ಟನು. ಆಗ ತಪೋಧನನು ಆಶೀರ್ವದಿಸುತ್ತ ಪ್ರತಾಪನನ್ನು ಹಿಡಿದೆತ್ತಿ ಆತನನ್ನು ಬಳಿಯ ಪೀಠದಲ್ಲಿ ಆದರದಿಂದ ಕೂಡ್ರಿಸಿದನು. ಆ ಪವಿತ್ರ ಪ್ರಸಂಗದ ಮಹತ್ವವನ್ನು ವರ್ಣಿಸುವದು ನಮ್ಮಂಥ ಪಾಮರರ ಯೋಗ್ಯತೆಯಲ್ಲ. ತಪಸ್ಸಿನಿಂದ ಕೃಶವಾದ ಅಂಗವುಳ್ಳವನೂ, ತಪಸ್ತೇಜದಿಂದ ಪ್ರಕಾಶಮಾನನೂ, ಜಟಾ-ಕೌಪಿನ-ಕೃಷ್ಣಾಜಿನಗಳನ್ನು ಧರಿಸಿದವನೂ, ಪ್ರಸನ್ನವದನನೂ, ಶಾಂತಿಯ ನಿಧಿಯಂತೆ ನೇತ್ರಾನಂದಕರನೂ ಆದ ತಪೋಧನನು ನಗೆಮೊಗದಿಂದ ಸಾತ್ವಿಕೆಯನ್ನು ನೋಡುತ್ತ ಪ್ರತಾಪಸಿಂಹನನ್ನು ಬೋಧಿಸಲು ಆತುರಪಡುತ್ತಿದ್ದನು. ಅತ್ತ ಸಾತ್ವಿಕೆಯು ಪ್ರತಾಪನ ಅಕಲ್ಪಿತವಾದ ಆಗಮನವನ್ನೂ, ತನ್ನ ಪತಿಯ ದಿವ್ಯಜ್ಞಾನವನ್ನೂ, ಆಗಿನ ಪ್ರಶಾಂತಸಮಯವನ್ನೂ ನೋಡಿ ಕೌತುಕಪಡುತ್ತ, ಒಮ್ಮೆ ಕೃಪಾದೃಷ್ಟಿಯಿಂದ ಪ್ರತಾಪಸಿಂಹನನ್ನು, ಮತ್ತೊಮ್ಮೆ ಭಕ್ತಿಯುಕ್ತ ಪ್ರೇಮದಿಂದ ಪತಿಯನ್ನು ನೋಡುತ್ತ ಸತ್ವದ ನೆಲೆಯಂತೆ, ಸೌಭಾಗ್ಯದ ನಿಧಿಯಂತೆ, ಮಾಂಗಲ್ಯದ ರಾಶಿಯಂತೆ ಗಾಂಭೀರ್ಯದಿಂದ ಕುಳಿತುಕೊಂಡಿದ್ದಳು. ಇತ್ತ ಪ್ರತಾಪನು ಅಕಸ್ಮಿಕವಾಗಿ ತನಗೊದಗಿದ ಮಹಾತ್ಮರ ಸಮಾಗಮವನ್ನೂ, ಅನಾಯಾಸವಾಗಿ ಲಭಿಸುತ್ತಿರುವ ಸದ್ಬೋಧದ ಯೋಗವನ್ನೂ ಸ್ಮರಿಸಿ ಅತ್ಯಂತ ವಿನಯದಿಂದ ತಲೆಬಾಗಿಸಿ

ಕೊಂಡು ನಡನಡುವೆ ಪರಮವಿಶ್ವಾಸದಿಂದ ಸಾತ್ವಿಕೆಯನ್ನೂ, ಯಾವಾಗಾದ ರೊಮ್ಮೆ ನಯಭಯಗಳಿಂದ ತಪೋಧನನನ್ನೂ ನೋಡುತ್ತ ತನ್ನ ಸಮಸ್ತ ತಾಪಗಳನ್ನು ಮರೆತು ಸಮಾಧಾನದಿಂದ ಕುಳಿತುಕೊಂಡಿದ್ದನು; ಅತ್ತ ಚಂದ್ರಮನು ನಿರಭ್ರವಾದ ಆಕಾಶಮಂಡಲದಲ್ಲಿ ಸಾಕ್ಷೀಭೂತನಾಗಿ ತನ್ನ ಅಮೃತಕಿರಣಗಳಿಂದ ಸದ್ಭಾವನೆಯ ಪ್ರಾಣಿಮಾತ್ರಗಳ ಆನಂದವನ್ನು ಹೆಚ್ಚಿಸುತ್ತ, ದುಷ್ಟಭಾವನೆಯ ಪ್ರಾಣಿಗಳ ಚಿಂತೆಯನ್ನು ಹೆಚ್ಚಿಸುತ್ತ ತನ್ನ ಅನಾದಿಯ ಕ್ರಮದಂತೆ ಜಗತ್ತಿನ ವ್ಯವಹಾರವನ್ನು ನೋಡುತ್ತ ಸಾವಕಾಶ ವಾಗಿ ಸಾಗಿದ್ದನು. ವಿರಲವಾದ ನಕ್ಷತ್ರಗಳು ಆಕಾಶಮಂಡಲದಲ್ಲಿ ಲಕಲಕಿ ಸುತ್ತ, ಚಂದ್ರಮನಂತೆ ನಾವೂ ಜಗತ್ತಿಗೆ ಸಾಕ್ಷೀಭೂತರೆಂದು ದೂರದಿಂದ ಕೂಗಿ ಹೇಳುವಂತೆ ಒಪ್ಪುತ್ತಿದ್ದವು. ಮಾರುತನು ಉದ್ಯಾನದೊಳಗಿನ ಸುಗಂಧವನ್ನು ಹೊರಲಾರದೆ ಕೂಡ್ರುತ್ತ ನಿಲ್ಲುತ್ತ ಯಾವಾಗಾದರೊಮ್ಮೆ ಸುಳ್ಳನೆ ಸುಳಿದು, ಹೊರೆಹೊತ್ತವರ ಹಾಡುಹೀಗೇ ಎಂದು, ಸದಾಗತಿ ಯೆಂಬ ತನ್ನ ಹೆಸರನ್ನು ನೆನಿಸಿ ನಾಚುತ್ತಲಿದ್ದನು. ತಪೋಧನನ ಉಪದೇ ಶವನ್ನು ಭಕ್ತಿಪೂರ್ವಕವಾಗಿ ಕೇಳಲಿಕ್ಕೆ ಆತುರಪಡುವವೋ ಅನ್ನುವಂತೆ ಗಿಡಬಳ್ಳಿಗಳು ಅಲ್ಲಾಡದೆ ಸ್ತಬ್ಧವಾಗಿದ್ದವು. ಭಯದಿಂದಲೋ, ಭಕ್ತಿಯಿಂ ದಲೋ, ತನ್ನ ಸ್ವಾಭಾವಿಕ ಧರ್ಮದಿಂದಲೋ ಆಗಿನ ಕಾಲದಲ್ಲಿ ಜಗತ್ತೇ ಮೌನಮುದ್ರೆಯನ್ನು ಧರಿಸಿದಂತೆ ಆಗಿತ್ತು.

ಹೀಗಿರುವಾಗ ತಪೋಧನನು ಧೀರವೂ, ಗಂಭೀರವೂ ಆದ ಅಧಿಕಾರ ಯುಕ್ತಸ್ವರದಿಂದ ಪ್ರತಾಪಸಿಂಹನನ್ನು ಕುರಿತು—ಯಶಸ್ವಿಯಾದ ಪ್ರತಾಪ ಸಿಂಹನೇ, ನಿನ್ನ ಪವಿತ್ರವಂಶದ ಗೌರವವನ್ನೂ, ಸ್ವಾತಂತ್ರ್ಯವನ್ನೂ ಕಾಯ ಬೇಕೆಂದು ಇಚ್ಛಿಸುವ ನೀನು ನನ್ನ ಮಾತುಗಳನ್ನು ಲಕ್ಷಪೂರ್ವಕವಾಗಿ ಕೇಳು. ಪುಣ್ಯಶಾಲಿಯಾದ ನಿನ್ನನ್ನು ನನ್ನ ಪ್ರಿಯಳಾದ ಈ ಸಾತ್ವಿಕೆಯು ಬೋಧಿಸಿರುವದನ್ನು ನಾನು ಬಲ್ಲೆನು. "ತಪಸ್ವಿಗಳೇ ಸತ್ವವನ್ನುಕಾಯ್ದು ಕೊಳ್ಳುವರೆ"ಂದು ಆಕೆಯು ಬೋಧಿಸಿದ್ದನ್ನು ನೀನು ಮರೆಯಲಾಗದು. ಕ್ಷುದ್ರವಾದ ಐಹಿಕಸುಖಭೋಗಕ್ಕಾಗಿ ಸತ್ವಭಂಗವನ್ನು ಮಾಡಿಕೊಳ್ಳುವ ವರು ಮಹಾಕಾರ್ಯವನ್ನು ಮಾಡಲಾರರು. ಒಂದು ಪಕ್ಷದಲ್ಲಿ ಅವರಿಂದ ಕೆಲವು ಉಜ್ವಲಗುಣಗಳ ಮೂಲಕವಾಗಿಯಾಗಲಿ, ದೈವವಶಾತ್ತಾಗಿಯಾಗಲಿ

ಮಹಾಕಾರ್ಯಗಳು ಆದರೂ, ಅವರಿಗೆ ನಿಜವಾದ ಆನಂದವು ಪ್ರಾಪ್ತವಾಗು ವದಿಲ್ಲ. ಪುತ್ರಾ, ಅಕಬರನಂಥ ಅಲೌಕಿಕವೀರನೊಡನೆ ಹೋರಾಡಿ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವದು ಸುಲಭವಲ್ಲ. ಆದಕ್ಕಾಗಿ ನೀನು ಕಠಿಣ ತಪಸ್ಸನ್ನೇ ಆಚರಿಸಬೇಕಾಗುವದು. ಪ್ರತಾಪಾ, ಬರಿಯ ನಿನ್ನೊ ಬ್ಬನ ತಪಸ್ಸಿನಿಂದ ಕಾರ್ಯವಾಗಲಿಕ್ಕಿಲ್ಲ. ನಿನ್ನ ಸಂಗಡ ನಿನ್ನ ಆಪ್ತೇಷ್ಟ ರೂ, ಪ್ರಜೆಗಳೂ ತಪಸ್ಸನ್ನು ಆಚರಿಸಬೇಕಾಗುವದು. ಹೊನ್ನು-ಹೆಣ್ಣು ಮಣ್ಣುಗಳ ಮೋಹಗಳು ತಪಸ್ಸಿಗೆ ವಿಘ್ನಕಾರಿಗಳಾಗಿರುವವು. ಈ ಮೂರು ಮೋಹಗಳಲ್ಲಿ ಹೊನ್ನು ಮಣ್ಣುಗಳ ಮೋಹವನ್ನು ನೀನು ಒತ್ತಾಯದಿಂದ ನಿನ್ನವರಿಗೆ ಬಿಡಿಸಿದರೆ, ದಾರಿದ್ರ್ಯದಕಷ್ಟದಿಂದ ಹೆಂಣಿನ ಅವರ ಮೋಹವು ತಾನೇ ಹಂಣಾಗುವದು. ಇದಕ್ಕಾಗಿ ನೀನೂ, ನಿನ್ನ ಪ್ರಜೆಗಳೂ ದಾರಿ ದ್ರ್ಯದ ಕಷ್ಟವನ್ನು ಭೋಗಿಸಲಿಕ್ಕೆ ಸಿದ್ಧವಾಗಬೇಕಾಗುವದು. ನೀನು ಉದೇಪುರವನ್ನು ಬಿಟ್ಟು ಕಮಳನೇರವನ್ನು ರಾಜಧಾನಿಯಾಗಮಾಡಿಕೊಂ ಡದ್ದು ಬಹಳ ನೆಟ್ಟಗಾಯಿತು. ಇದರ ಕೋಟೆಯನ್ನೂ, ಬೇರೆ ಮಹತ್ವದ ಕೋಟೆಗಳನ್ನೂ ಭದ್ರಪಡಿಸಿ, ಯೋಗ್ಯಜನರನ್ನು ದುರ್ಗಾಧ್ಯಕ್ಷರನ್ನಾಗಿ ನಿಯಮಿಸು. ಈ ಕಾರ್ಯದಲ್ಲಿ ಎಷ್ಟು ಧನವ್ಯಯವಾದರೂ ಹಿಂಜರಿಯ ಬೇಡ. ಪ್ರಜೆಗಳು ಹಿಂದು ಮುಂದಿನ ಚಿಂತೆಯಿಲ್ಲದೆ ಹಂಗುದೊರೆದು ಅಕ ಬರನೊಡನೆ ಕಾದಬೇಕೆಂತಲೂ, ಅಕಬರನ ಸೈನ್ಯಕ್ಕೆ ಅನ್ನದ ಕೊರತೆಯಾಗ ಬೇಕೆಂತಲೂ ಬೈಲು ಸೀಮೆಯ ನಿನ್ನ ರಾಜ್ಯವನ್ನು ಹಾಳುಗೆಡವಿ, ಅಲ್ಲಿಯ ಪ್ರಜೆಗಳು ಅರವಲಿಪರ್ವತದ ಅರಣ್ಯಗಳಲ್ಲಿ ವಾಸಿಸುವಂತೆ ಮಾಡು. ಈ ಕೆಲಸದಲ್ಲಿ ದಯಾದಾಕ್ಷಿಣ್ಯಗಳನ್ನು ಕಾಯಬೇಡ. "ನನ್ನ ಮನೆ ಬಿಟ್ಟು ಹ್ಯಾಗೆ ಹೋಗಲಿ, ಹೊಲಗಳು ಬೀಳು ಬೀಳುತ್ತವಲ್ಲ, ಹೂಳಿಟ್ಟ ದುಡ್ಡು- ಕಾಳುಕಡಿಗಳು-ಮನೆಯೊಳಗಿನ ಸುಸರಿಯ ಸಾಮಾನುಗಳು ಹಾಳಾದರೆ ಮುಂದೆ ಗತಿಯೇನು? ಉಂಡುಟ್ಟು ಸುಖದಿಂದಿದ್ದ ನಾವು ಹ್ಯಾಗೆ ಸಾಯೋ ಣ?" ಎಂಬಿವೇ ಮೊದಲಾದ ಹೀನವಿಚಾರಗಳಿಂದ ಹತವೀರ್ಯರಾಗಿ ಅಳುತ್ತ ಕುಳಿತುಕೊಳ್ಳುವ ಜನರು ಅಕಬರನಿಗೆ ಎದುರಾಗಿ ಮೇವಾಡದ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಲಿಕ್ಕೆ ಯೋಗ್ಯರಲ್ಲ. ಪುತ್ರಾ, ಮರಣ ಕಾಲದಲ್ಲಿ ಇವೆಲ್ಲವುಗಳ ಹಂಗನ್ನು ಬಿಟ್ಟು ಪರಲೋಕಕ್ಕೆ ಎಲ್ಲರೂ ತೆರಳಬೇ

ಕಾಗಿರುವದಲ್ಲವೆ? ಅಂದಬಳಿಕ ಸತ್ವರಕ್ಷಣಕ್ಕಾಗಿ ಇವೆಲ್ಲವುಗಳ ಹಂಗನ್ನು ತಟ್ಟನೆ ಬಿಟ್ಟುಕೊಟ್ಟು ಘೋರ ತಪೋದೀಕ್ಷೆಯನ್ನು ಕೈಕೊಳ್ಳುವವನೇ ಧೀರನಲ್ಲವೆ? ಆವನ ಜನ್ಮವೇ ಸಫಲವೆಂದು ತಿಳಿಯಬೇಕು. ಅದರಿಂದಲೇ ಈಗಿನ ಮಹತ್ವದ ಪ್ರಸಂಗದಲ್ಲಿ ನೀನು ನಿನ್ನ ಪ್ರಜೆಗಳನ್ನು ಬರಿಗೈಯ ಬಂಟರನ್ನಾಗಿ ಮಾಡು. ದೇಶಕ್ಕೆ ಬಂದ ಕಷ್ಟವನ್ನು ಭೋಗಿಸುವಲ್ಲಿ ರಾಜನೂ, ಪ್ರಜೆಗಳೂ ಸಮಭಾಗಿಗಳು; ಆದ್ದರಿಂದ ಪ್ರತಾಪಾ, "ಬನಾಸ"ಮತ್ತು "ಬೇರೀಸ"ಎಂಬ ಎರಡು ನದಿಗಳ ನಡುವಿನ, ಹಾಗು ಅವುಗಳ ನೆರೆಯ ಯಾವತ್ತು ಪ್ರದೇಶವನ್ನು ನಿರ್ಮಾನುಷವಾಗಿ ಮಾಡು. ನಿನ್ನ ಸ್ವಾತಂತ್ರ್ಯ ರಕ್ಷಣದ ಕಾರ್ಯವು ಸಾಧಿಸುವವರೆಗೆ ಆ ಪ್ರದೇಶದಲ್ಲಿ ಒಂದು ದೀಪವು ಕೂಡ ಹತ್ತಲಾಗದು. ಈ ಕಾರ್ಯದಲ್ಲಿ ನಿನಗೆ ವಿಘ್ನಮಾಡುವವರಿಗೆ ನೀನು ಕಠಿಣ ಶಾಸನಮಾಡತಕ್ಕದ್ದು. ನಿನ್ನ ಅಪ್ಪಣೆಯು ನಿರ್ಬಾಧವಾಗಿ ನಡಿಸಲ್ಪಟ್ಟದೆಯೋ ಇಲ್ಲವೋ ಎಂಬದನ್ನು ನೋಡುವದಕ್ಕಾಗಿ ನೀನು ಸ್ವತಃ ನಿನ್ನ "ಚಿತ್ತಕ"ವೆಂಬ ಹೆಸರಿನ ಕುದುರೆಯನ್ನು ಹತ್ತಿಕೊಂಡು ಕೆಲವು ಸವಾರರೊಡನೆ ಆ ಬೈಲು ಪ್ರದೇಶದಲ್ಲಿ ಸಂಚಾರಮಾಡು. ರಾಜದ್ರೋಹಿಗಳ ಶಾಸನ ಮಾಡತಕ್ಕದ್ದು. ಪ್ರತಾಪಾ, ಅಸಮಾಧಾನಪಡಬೇಡ, ಎದೆಗುಂದಬೇಡ. ನೀನು ಅಂಥ ಕ್ಷುದ್ರನಲ್ಲೆಂಬದನ್ನು ನಾನು ಬಲ್ಲೆನು. ಈ ಜಗತ್ತಿನಲ್ಲಿ ತಪಸ್ಸಿನಿಂದ ಸತ್ವಶಾಲಿಯಾಗಿ ಕಾರ್ಯವನ್ನು ಸಾಧಿಸಬಹುದಲ್ಲದೆ, ಹ್ಯಾಗಾದರೂ ಮಾಡಿ ಲುಬ್ಧತನದಿಂದ ಧನವನ್ನು ಸಂಪಾದಿಸಿ ಸತ್ವಹೀನನಾಗಿ ಕಾರ್ಯವನ್ನು ಸಾಧಿಸಲಾಸಲ್ಲ. ಅಂತೇ ನೀನೂ ನಿನ್ನ ಪ್ರಜೆಗಳೂ ತಪಸ್ವಿಗಳಾಗಿರೆಂದು ಆಗ್ರಹದಿಂದ ಬೋಧಿಸುತ್ತೇನೆ. ತಪಸ್ವಿಯನ್ನು ಅಷ್ಟಸಿದ್ಧಿಗಳೇ ಸೇವಿಸಬಹುದಾಗಿರಲು, ಆತನಿಗೆ ಕ್ಷುದ್ರಸಂಪತ್ತಿನ ಪಾಡೇನು? ಆದ್ದರಿಂದ ಪುತ್ರಾ, ನೀನು ತಪಸ್ವಿಯಾಗು, ತಪೋನಿಷ್ಠನಾಗು, ತಪೋಧನನಾಗು, ತಪೋಮಯನಾಗು !!

ಈಮೇರೆಗೆ ನುಡಿದು ತಪೋಧನನು ತನ್ನ ಪ್ರಿಯಳನ್ನು ಕುರಿತು—ಪ್ರಿಯೇ, ಸಾತ್ವಿಕೇ, ನಿನ್ನ ಅನುಗ್ರಹಕ್ಕೆ ಪಾತ್ರನಾದ ಈ ರಾಣಾ ಪ್ರತಾಪಸಿಂಹನಿಗೆ ನೀನಾದರೂ ಎರಡು ಮಾತುಗಳನ್ನು ಹೇಳು. ಈ ಮೊದಲೇ ನಾನು ಆತನನ್ನು ಬೋಧಿಸಿರುವೆನೆಂದು ಈಗ ಬೋಧಿಸುವದಕ್ಕೆ ಉದಾಸೀನ

ಮಾಡಬೇಡ. ಬೋಧದ ಪರಿಣಾಮವಾಗುವವರೆಗೆ ಬೋಧಿಸುತ್ತಲೇ ಇರುವದು ಸಜ್ಜನರ ಧರ್ಮವು, ಅದೇ ಅವರ ಕುಲವ್ರತವು, ಅದೇ ಅವರ ಪವಿತ್ರ ಕರ್ತವ್ಯವು, ಎನ್ನಲು ಸಾತ್ವಿಕೆಯು—ಪೂಜ್ಯರಾದ ತಪೋಧನರೇ, ನನಗೆ ಕೇವಲ ಆಧಾರವಾಗಿದ್ದ ನೀವು ಪ್ರತ್ಯಕ್ಷ ಬೋಧಿಸುತ್ತಿರಲು, ನಾನು ಹೊಸದಾಗಿ ಬೋಧಿಸುವದೇನು? ನಿಮ್ಮಿಂದ ನಾನು ಭಿನ್ನವಾಗಿದ್ದರಷ್ಟೇ ಪ್ರತಾಪನನ್ನು ಬೇರೆಯಾಗಿ ಬೋಧಿಸುವದು. ತೋರಿಕೆಯಲ್ಲಿ ನಮ್ಮಿಬ್ಬರೊಳಗೆ ಭೇದವಿದ್ದರೂ, ನಮ್ಮಿಬ್ಬರ ರಹಸ್ಯದಲ್ಲಿ ಐಕ್ಯವಿರುತ್ತದೆ. ಪ್ರಿಯಕರಾ, ನಿನ್ನ ಅಸ್ತಿತ್ವವೇ ನನ್ನ ಅಸ್ತಿತ್ವವು, ನಿನ್ನ ಬೋಧವೇ ನನ್ನ ಬೋಧವು. ತಪಸ್ಸು ಸತ್ವದ ಪೋಷಕದ್ರವ್ಯದಂತೆ ಇರುವದರಿಂದ ಸತ್ವವು ತಪಸ್ಸಿನ ರೂಪಾಂತರವೆಂದು ಹೇಳಬೇಕಾಗುವದು. ಆದ್ದರಿಂದ ಈಗ ಪ್ರತಾಪನು, ತಪೋಧನರ ಬೋಧವೇ ಸಾತ್ವಿಕೆಯ ಬೋಧವೆಂದು ತಿಳಿದು ಆತನು ತಪಸ್ವಿಯಾದರೆ ಇಹದಲ್ಲಿ ಕೀರ್ತಿಯನ್ನೂ, ಪರದಲ್ಲಿ ಸದ್ಗತಿಯನ್ನೂ ಪಡೆಯುವನು! ಯಾಕೆ ಪುತ್ರಾ, ಮೌನವೇಕೆ? ಈ ತಪೋಧನ-ಸಾತ್ವಿಕೆಯರಲ್ಲಿ ಸಂಕೋಚಪಡಬೇಡ. ನಿನ್ನ ಹೃದ್ಗತವನ್ನು ಹೇಳಿ ನಮ್ಮನ್ನು ಸಂತೋಷಪಡಿಸು. ನಮ್ಮಿಬ್ಬರಲ್ಲಿ ಭೇದ ತೋರುವದೇ ತಪಸ್ವಿಯಾಗದಿರುವದರ ಸಾಕ್ಷಿಯು, ಅನ್ನಲು, ಪ್ರತಾಪನು ಪೀಠದಿಂದೆದ್ದು ವಿನಯದಿಂದ ನಮಿಸಿ—ಮಹಾತ್ಮರೇ, ನಮ್ಮ ಪೂರ್ವಜರ ಪುಣ್ಯದಿಂದ ನನಗೆ ತಮ್ಮ ದರ್ಶನವಾಯಿತು. ತಮ್ಮ ಉಪದೇಶದಿಂದ ನಾನು ಜಾಗರೂಕನಾದೆನು. ತಮ್ಮ ಉಪದೇಶದಂತೆ ನಡೆಯಬೇಕೆಂದು ನಾನು ಈಗ ಮನಸ್ಸಿನಲ್ಲಿ ನಿಶ್ಚಯಿಸಿದ್ದರೂ, ಆ ನಿಶ್ಚಯದ ಒಲವು ಕುಗ್ಗದೆ ಅಭಿವೃದ್ಧವಾಗುವಂತೆ ಈ ಪಾಮರನನ್ನು ತಾವೇ ರಕ್ಷಿಸಬೇಕು. ಈ ಪ್ರತಾಪನು ಇಂದಿನಿಂದ ಚಿತ್ತೂರ ಕೋಟೆಯು ಸಿಗುವವರೆಗೆ ಐಶ್ವರ್ಯಭೋಗವನ್ನು ಭೋಗಿಸಲಾರನು. ತಾವು ಇಂದುಪ್ರಕಟವಾಗಿರುವ ಇದೊಂದು ಉದ್ಯಾನದ ಹೊರತು ಉಳಿದ ಉದ್ಯಾನಗಳು ಕಮುಳನೇರದಲ್ಲಿ ಇನ್ನು ಕಣ್ಣಿಗೆಬೀಳವು. ಹುಲ್ಲಗುಡಿಸಲುಗಳ ಹೊರತು ಕಮುಳನೇರದಲ್ಲಿ ಭವ್ಯ ಮಂದಿರಗಳು ತಲೆದೋರವು. ಚಿತ್ತೂರು ಮೇವಾಡದ ರಾಣಾನ ಕೈಸೇರಿ ಅದರ ವೈಧವ್ಯವು ನಷ್ಟವಾಗುವವರೆಗೆ ಪ್ರತಾಪನು ತಪಸ್ವಿಯಂತೆ ಗಡ್ಡಗಳನ್ನು ಬಿಡಿಸುವನು, ಸುವರ್ಣಪಾತ್ರೆಯಲ್ಲಿ

ಭೋಜನಮಾಡದೆ ಎಲೆಗಳಲ್ಲಿ ಭೋಜನಮಾಡುವನು; ಮೃದುವಾದ ಹಾಸಿಗೆಯಮೇಲೆ ಮಲಗದೆ ಹುಲ್ಲಮೇಲೆ ಮಲಗುವನು. ಚಿತ್ತೂರನ್ನು ತಕ್ಕೊಳ್ಳುವ ಆತನ ನಿಶ್ಚಯವು ಎಲ್ಲರಿಗೂ ಗೊತ್ತಾಗುವದಕ್ಕಾಗಿ ಆತನು ಪ್ರಸಿದ್ಧವಾದ ಯಾವತ್ತು ಸಮಾರಂಭಗಳಲ್ಲಿಯೂ, ಸೈನ್ಯದಲ್ಲಿಯೂ ನಗಾರಿನೌಬತ್ತುಗಳನ್ನು ಬಾರಿಸಗೊಡುವದಿಲ್ಲ, ಬಾರಿಸಿದರೆ ಸೈನ್ಯದ ಮುಂದೆ ಬಾರಿಸದೆ ಹಿಂದೆ ಬಾರಿಸಗೊಡುವನು. ಬಹಳ ಹೇಳುವದೇನು? ಪರಮಪೂಜ್ಯನಾದ ಅಪ್ಪನು ಮರಣಹೊಂದಿದಾಗ ಸೂತಕವನ್ನು ಆಚರಿಸಿ ವ್ರತಸ್ಥರಾಗಿರುವಂತೆ, ಪ್ರತಾಪನು ಚಿತ್ತೂರ ಸಿಗುವವರೆಗೆ ವ್ರತಸ್ಥನಾಗಿರುವನು; ಎಂದು ನುಡಿದು, ಪ್ರತಾಪನು ತಪೋಧನನ ಚರಣಗಳಮೇಲೆ ಮಸ್ತಕವನ್ನಿಡಲು, ಸಾತ್ವಿಕೆಯು—ಪುತ್ರ, ಏಳು. ನಿನ್ನ ಮೇಲೆ ತಪೋಧನರ ಅನುಗ್ರಹವು ಪೂರ್ಣವಾಗಿರುತ್ತದೆ. ನಿನ್ನ ಸತ್ವಭಂಗವಾಗುವ ಪ್ರಸಂಗದಲ್ಲಿ ಅವರು ಯಾವ ಮುಖದಿಂದಾದರೂ ಸಂರಕ್ಷಣಮಾಡುವರು. ಚಿಂತೆಮಾಡಬೇಡ. ಇನ್ನು ನೆಟ್ಟಗೆ ಅರಮನೆಗೆ ಹೋಗಿ ಸ್ವಸ್ಥವಾಗಿ ಮಲಗಿಕೋ. ನೀನು ಮಹಾ ಸತ್ವಶಾಲಿಯೆಂಬ ಕೀರ್ತಿಯು ಜಗತ್ತಿನಲ್ಲಿ ಸ್ಥಿರವಾಗಿ ಉಳಿಯುವದು. ಇದು ನಮ್ಮ ಪೂರ್ಣಾಶೀರ್ವಾದವೆಂದು ತಿಳಿ, ಎಂದು ನುಡಿಯುತ್ತಿರಲು, ಪ್ರತಾಪನಿಗೆ ಪರಮಾನಂದವಾಗಿ ಆ ಆನಂದದ ಭರದಲ್ಲಿ ಆತನಿಗೆ ವಿಸ್ಮೃತಿಯುಂಟಾಯಿತು. ಮುಂದೆ ಒಂದು ಕ್ಷಣದಲ್ಲಿ ಆತನು ಎಚ್ಚತ್ತುನೋಡಲು, ಅಲ್ಲಿ ತಪೋಧನನೂ ಇದ್ದಿಲ್ಲ, ಸಾತ್ವಿಕೆಯೂ ಇದ್ದಿಲ್ಲ!

## ೭ ನೆಯ ಪ್ರಕರಣ

# ರಾಜಾಮಾನಸಿಂಗನು.

ಹಿಂದಿನ ೫ನೆಯ ಪ್ರಕರಣದಲ್ಲಿಯ ಪ್ರತಾಪಸಿಂಹನ ಪತ್ರವನ್ನು ಓದಿ, ಅಕಬರನ ದರ್ಬಾರದೊಳಗಿನ ಬೇರೆ ಬೇರೆ ಜನರ ಮನಸ್ಸಿನಲ್ಲಿ ಬೇರೆ ಬೇರೆ ಭಾವನೆಗಳು ಉತ್ಪನ್ನವಾದವೆಂದು ಆ ಪ್ರಕರಣದ ಕೊನೆಯಲ್ಲಿ ಹೇಳಿದೆ ಯಷ್ಟೇ? ಅವರಲ್ಲಿ ರಾಜಾಮಾನಸಿಂಗನೆಂಬ ರಜಪೂತವೀರನ ಮನಸ್ಸಿನಲ್ಲಿ ಒಂದು ಪ್ರಕಾರದ ಲಜ್ಜಾಭಾವವು ಉತ್ಪನ್ನವಾಯಿತು; ಯಾಕಂದರೆ, ಆತನ ಅಕ್ಕನನ್ನು ಅಕಬರನ ತಂದೆಯಾದ ಹುಮಾಯೂನನಿಗೆ ಕೊಟ್ಟದ್ದರಿಂದ, ಅಕಬರನಿಗೆ ಮಾನಸಿಂಗನು ಸೋದರಮಾವನಾಗುತ್ತಿದ್ದನು. ಈ ಸಂಬಂಧದ ಮೂಲಕ ಪ್ರತಾಪನ ಪತ್ರದಿಂದ ಮಾನಸಿಂಹನ ಮನಸ್ಸಿಗೆ ನೊಣ ಕಡಿದಹಾಗೆ ಆಯಿತು. ಆದರೂ, ಆ ಸರಳ ಹೃದಯದ ವೀರನು ಪ್ರತಾಪನ ಸ್ವಾಭಿಮಾನಕ್ಕಾಗಿ ಒಂದುಬಗೆಯ ಆದರ ಭಾವವನ್ನು ತಾಳಿದನು. ಜಯಪುರದ (ಅಂಭೇರದ) ರಾಜರು ಮೊದಲಿನಿಂದಲೇ ಒಳ್ಳೇ ಪರಾಕ್ರಮಶಾಲಿಗಳಾದದ್ದರಿಂದ, ಅವರ ಬೀಗತನದಮೂಲಕ ಮೊಗಲಬಾದಶಹರ ಕಲ್ಯಾಣವು ಬಹಳವಾಗಿ ಆಯಿತು. ಮಾನಸಿಂಹನು ಸಾಮಾನ್ಯಪುರುಷನಿದ್ದಿಲ್ಲ. ಆತನು ಮಹಾಬುದ್ಧಿಶಾಲಿಯೂ, ಪರಾಕ್ರಮಿಯೂ, ಸಾಹಸಿಯೂ ಇದ್ದದ್ದರಿಂದ ದಿಲ್ಲಿಯ ದರ್ಬಾರದೊಳಗಿನ ಶೂರಸರದಾರರಲ್ಲಿ ಆತನು ಅಗ್ರಗಣ್ಯನಾಗಿ, ಅಕಬರನ ಅಮಾತ್ಯಪದವಿಯನ್ನು ಹೊಂದಿದ್ದನು. ಅಕಬರನಿಗೆ ಪ್ರಾಪ್ತವಾದ ಜಯದ ಅರ್ಧಶ್ರೇಯಸ್ಸಿಗೆ ಆತನ ಮಾವನಾದ ಈ ಮಾನಸಿಂಗನ ಶೌರ್ಯ-ಪರಾಕ್ರಮಗಳೇ ಕಾರಣವೆಂದು ಮೇಲೆ ದರ್ಬಾರದ

ಕಾಲಕ್ಕೆ ಅಕಬರನ ಮುಖದಿಂದಲೇ ಹೊರಟದ್ದನ್ನು ವಾಚಕರು ಮರೆತಿರಲಿಕ್ಕಿಲ್ಲ. ಮಾನಸಿಂಹನು ದಿಲ್ಲಿಯ ಬಾದಶಾಹಿಯ ಸಲುವಾಗಿ ಪಶ್ಚಿಮದಲ್ಲಿ ಕಾಬೂಲಪ್ರಾಂತವನ್ನೂ, ಪೂರ್ವದಲ್ಲಿ ಬ್ರಹ್ಮದೇಶದೊಳಗಿನ ಆರಾಕಾನ ಪ್ರಾಂತವನ್ನೂ ಗೆದ್ದು, ಬಾದಶಾಹಿಗೆ ಕೊಡಿಸಿದನು. ಆತನು ಈ ಪ್ರಕಾರದ ಹಲವು ವಿಜಯಗಳನ್ನು ಸಂಪಾದಿಸಿದರೂ, ತನ್ನ ರಜಪೂತಸೈನ್ಯದ ಹೊರತು ಬೇರೆ ಜ್ಯಾತಿಯವರ ಸೈನ್ಯವನ್ನು ಸಹಾಯಕ್ಕೆ ತಕ್ಕೊಂಡಿದ್ದಿಲ್ಲ; ಮುಸಲ್ಮಾನರ ಸೈನ್ಯವನ್ನಂತು ಆತನು ಸಹಾಯಕ್ಕೆ ತಕ್ಕೊಳ್ಳಲೇ ಇಲ್ಲ!

ಇಂಥ ಘನವಾದ ಯೋಗ್ಯತೆಯ ಮಾನಸಿಂಗನು ಒಮ್ಮೆ ದಿಲ್ಲಿಯ ಬಾದಶಹನ ಸಲುವಾಗಿ ದಕ್ಷಿಣ ಹಿಂದುಸ್ತಾನಕ್ಕೆ ದಂಡೆತ್ತಿಹೋಗಿ ಸೊಲ್ಲಾಪುರ ಪ್ರಾಂತವನ್ನು ಗೆದ್ದು ತಿರುಗಿ ಉತ್ತರಹಿಂದುಸ್ತಾನಕ್ಕೆ ಬರುತ್ತಿದ್ದನು. ಆಗ ಪ್ರತಾಪಸಿಂಹನು ಕಮುಳನೇರ ರಾಜಧಾನಿಯಲ್ಲಿರುತ್ತಾನೆಂಬ ಸುದ್ದಿಯು ಆತನಿಗೆ ಹತ್ತಿತು. ಪ್ರತಾಪನ ವಿಷಯದ ಆದರ ಬುದ್ಧಿಯಿಂದ ಆತನನ್ನು ಒಮ್ಮೆ ಕಣ್ಣುಮುಟ್ಟ ನೋಡಿ ಆತನೊಡನೆ ಕೆಲವು ಮಾತುಗಳನ್ನು ಆಡಬೇಕೆಂದು ಆ ಅಂಬರಾಧೀಶ್ವರನಾದ ಮಾನಸಿಂಗನು ಕಮುಳನೇರದ ಕಡೆಗೆ ಸಾಗಿದನು. ಮೊದಲೇ ಮಾನಸಿಂಗನು ಮಹಾಪರಾಕ್ರಮಿಯು, ಅದರಲ್ಲಿ ಸೊಲ್ಲಾಪುರಪ್ರಾಂತವನ್ನು ಗೆದ್ದು ಕೀರ್ತಿಯನ್ನು ಸಂಪಾದಿಸಿಕೊಂಡು ಬಂದವನು; ಆದ್ದರಿಂದ ಆತನೂ ಆತನ ಸೈನ್ಯದವರೂ ಮಹಾತೇಜಸ್ವಿಗಳಾಗಿ ಒಪ್ಪುತ್ತಿದ್ದರು. ಯಾವತ್ತು ರಜಪೂತಸಂಸ್ಥಾನಿಕರಂತೆ ಜಯಪುರದ (ಅಂಭೇರದ) ಸಂಸ್ಥಾನಿಕರಾದರೂ ಉದೇಪುರದ ಮನೆತನವನ್ನು ಪೂಜ್ಯವೆಂದು ಭಾವಿಸುತ್ತ ಬಂದಿದ್ದರು; ಆದ್ದರಿಂದ ಆ ಭಾವನೆಯನ್ನನುಸರಿಸಿ ತನ್ನ ಅಂಥ ಊರ್ಜಿತಸ್ಥಿತಿಯಲ್ಲಾದರೂ ಮಾನಸಿಂಗನು ತಾನಾಗಿ ಪ್ರತಾಪನ ದರ್ಶನಕ್ಕೆ ಬಂದು ಆತನನ್ನು ಬಹುಮಾನಗೊಳಿಸಿದ್ದು ಮಾನಸಿಂಗನ ಉದಾರಮನಸ್ಸಿಗೆ ಒಪ್ಪತಕ್ಕದ್ದೇ ಸರಿ. ಆ ರಜಪೂತವೀರನು ಕಮುಳನೇರದ ಸನಿಯಕ್ಕೆ ಬಂದು ತಳವೂರಿದನು. ಆತನು ತನ್ನ ದೂತನನ್ನು ಪ್ರತಾಪಸಿಂಹನ ಕಡೆಗೆ ಕಳಿಸಲು, ಆ ದೂತನು ಪ್ರತಾಪಸಿಂಹನ ಬಳಿಗೆ ಹೋಗಿ ವಂದಿಸಿ—ಮಹಾರಾಣಾಜೀ, ಅಂಬರಾಧೀಶರಾದ ಮಾನಸಿಂಹರವರು ತಾವಾಗಿ ಮಹಾರಾಣಾನವರ ಆತಿಥ್ಯವನ್ನು ಸ್ವೀಕರಿಸಲಿಕ್ಕೆ ಇಲ್ಲಿಗೆ ಬಂದಿದ್ದಾರೆ,

ಎಂದು ಹೇಳಿದನು. ಅದನ್ನು ಕೇಳಿ ಪ್ರತಾಪಸಿಂಹನು—ನನ್ನಮೇಲೆ ಅವರ ದೊಡ್ಡ ಅನುಗ್ರಹವಾಯಿತೆಂತಲೇ ಹೇಳಬೇಕಾಗುವದು. ನಾವು ಆತಿಥ್ಯದ ಎಲ್ಲ ಸಿದ್ಧತೆಯನ್ನು ಮಾಡುವೆವು. ಅವರು ಅವಶ್ಯವಾಗಿ ಬಂದು ನಮ್ಮ ಮನಸ್ಸನ್ನು ಸಂತೋಷಗೊಳಿಸಬೇಕು, ಎಂದು ಹೇಳಲು, ಸೇವಕನು ವಂದಿಸಿ ಹೊರಟುಹೋದನು.

ಮನಸ್ಸಿನಲ್ಲಿ ಎಷ್ಟು ವೈರಭಾವವಿದ್ದರೂ ಶಿಷ್ಟಾಚಾರವನ್ನನುಸರಿಸಿ ಮಾಡತಕ್ಕದ್ದನ್ನು ಮಾಡಲೇಬೇಕೆಂದು ಪ್ರತಾಪನು ನಿಶ್ಚಯಿಸಿದನು. ಪ್ರತಾಪನ ನೂತನ ರಾಜಧಾನಿಯಾದ ಕಮಳನೇರದ ಬಳಿಯ ಉದಯಸಾಗರವೆಂಬ ಸರೋವರದ ತೀರದಲ್ಲಿ ಅಂಬಾರಾಧಿಪತಿಯ ಸತ್ಕಾರದ ಸಿದ್ಧತೆಯ ಕೆಲಸವು ಒತ್ತರದಿಂದ ಸಾಗಿತು. ಮಾನಸಿಂಗನಂಥ ರಾಜ–ಅತಿಥಿಯು; ಅದರಲ್ಲಿ ತಾನಾಗಿ ಮನೆಗೆ ಬಂದವನು; ಮೇಲಾಗಿ ಮೇವಾಡದ ಚಿರಶತ್ರುವಾದ ಅಕಬರಬಾದಶಹನ ಮುಖ್ಯ ಅಮಾತ್ಯನು. ಇದಕ್ಕಾಗಿ ಪ್ರತಾಪಸಿಂಹನು ಆತಿಥ್ಯದ ಸಿದ್ಧತೆಯನ್ನು ಉತ್ತಮರೀತಿಯಿಂದ ಮಾಡಲಿಕ್ಕೆ ತನ್ನ ಸೇವಕರಿಗೆ ಆಜ್ಞಾಪಿಸಿದನು. ತಪೋಧನನಿಂದ ತಪಸ್ಸಿನ ದೀಕ್ಷೆಯನ್ನು ಹೊಂದಿ ವ್ರತಸ್ಥನಾಗಿದ್ದ ಪ್ರತಾಪಸಿಂಹನು, ಸ್ವತಃ ಕಂದಮೂಲಗಳನ್ನು ಪತ್ರಾವಲಿಯಲ್ಲಿ ಭಕ್ಷಿಸುತ್ತಿದ್ದರೂ, ಮಾನಸಿಂಹನ ಸಲುವಾಗಿ ಬಗೆಬಗೆಯ ಪಕ್ವಾನ್ನಗಳನ್ನು ಸುವರ್ಣಪಾತ್ರೆಗಳಲ್ಲಿ ಬಡಿಸುವಂತೆ ವ್ಯವಸ್ಥೆ ಮಾಡಿದ್ದನು. ಉದಯಸಾಗರದ ತೀರದಲ್ಲಿ ಹಾಕಿದ ಭವ್ಯವಾದ ಮಂಟಪದಲ್ಲಿ ಆತಿಥ್ಯದ ಎಲ್ಲ ಪದಾರ್ಥಗಳು ಸಿದ್ಧವಾದವು. ಮಾನಸಿಂಗನ ಆದರಾತಿಥ್ಯದ ಭಾರವನ್ನು ಪ್ರತಾಪಸಿಂಹನು ತನ್ನ ಹಿರಿಯಮಗನಾದ ಅಮರಸಿಂಹನಿಗೆ ಒಪ್ಪಿಸಿದ್ದನು. ಮಾನಸಿಂಹನನ್ನು ಕರೆಯುವದಕ್ಕಾಗಿ ಮರ್ಯಾದೆಗೆ ಒಪ್ಪುವಂತೆ ಪ್ರತಿಷ್ಠಿತಜನರನ್ನು ರಾಣಾನು ಕಳುಹಿದನು. ಅಂಬರಾಧೀಶ್ವರನು ತನ್ನ ಪರಿವಾರದೊಡನೆ ಬರಲು, ಪ್ರತಾಪಸಿಂಹನು ತನ್ನ ಮಂತ್ರಿಮಂಡಲದೊಡನೆ ಸ್ವತಃ ಆತನನ್ನು ಎದುರುಗೊಂಡು ಬಹುಮಾನಪೂರ್ವಕವಾಗಿ ಮಂಟಪಕ್ಕೆ ಕರಕೊಂಡು ಬಂದನು. ಮರ್ಯಾದೆಯಂತೆ ಎಲ್ಲರೂ ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತುಕೊಂಡರು. ರಾಜಾಮಾನಸಿಂಗನ ಪರಾಕ್ರಮವನ್ನು ಪ್ರತಾಪಸಿಂಹನು ಕೇಳಿದ್ದನು. ಅದರಂತೆ ಪ್ರತಾಪಸಿಂಹನ ಸ್ವಾಭಿಮಾನ

ವನ್ನೂ, ವೀರ್ಯವನ್ನೂ ಮಾನಸಿಂಗನು ಕೇಳಿದ್ದನು; ಆದ್ದರಿಂದ ಆ ಉಭಯವೀರರು ಪರಸ್ಪರರ ದರ್ಶನದಿಂದ ಸಂತೋಷಪಟ್ಟರು. ಶಿಷ್ಟಾಚಾರದಂತೆ ಪರಸ್ಪರರ ಯೋಗಕ್ಷೇಮದ ವಿಚಾರವಾಯಿತು. ಮಾನಸಿಂಹನು ಪ್ರತಾಪನ ಸ್ವಾಭಿಮಾನಪೂರ್ಣವಾದ ಆಚರಣೆಯನ್ನೂ, ಅಕಬರಬಾದಶಹನಂಥ ಬಲಾಢ್ಯಮೊಗಲನಿಗೆ ಸ್ಪಷ್ಟೋಕ್ತಿಯಿಂದ ಪತ್ರಬರೆದ ಆತನ ಧೈರ್ಯವನ್ನೂ ಹೊಗಳಿದನು. ಪ್ರತಾಪಸಿಂಹನಾದರೂ ಮಾನಸಿಂಗನ ಪರಾಕ್ರಮವನ್ನೂ, ಸಾಹಸವನ್ನೂ ಶ್ಲಾಘಿಸಿದನು. ಈ ಉಭಯವೀರರ ಸಂಭಾಷಣವನ್ನು ಕೇಳಿ ಎಲ್ಲರೂ ಆನಂದಪಟ್ಟರು. ಮಾತಿಗೆ ಮಾತು ಹೊರಟು ಮಾನಸಿಂಗನು ಪ್ರತಾಪಸಿಂಹನನ್ನು ಕುರಿತು—

ಮಾನಸಿಂಗ—ರಾಣಾ ಪ್ರತಾಪಸಿಂಗಜೀ, ಮೊಗಲರ ಅಬ್ಬರದಲ್ಲಿ ನಮ್ಮ ಕ್ಷಾತ್ರತೇಜಸ್ಸು ಅಡಗಿದಂತಾಗಿದೆ. ಅಭಿಮಾನ ಮೂಲವಾದ ಒಳಜಗಳಗಳಿಂದ ನಾವು ಈ ಹೀನಸ್ಥಿತಿಯನ್ನು ತಂದುಕೊಂಡೆವು. ಯಾರಿಗೂ ಹೆಸರಿಡುವಹಾಗಿಲ್ಲ, ಕಾಲಮಹಿಮೆಯೆಂದು ಹೇಳಬೇಕಾಗುವದು.

ಪ್ರತಾಪಸಿಂಹ—ರಾಜಾಮಾನಸಿಂಗಜೀ, ನಿಮ್ಮ ಮಾತು ಯೋಗ್ಯವಾದದ್ದೇ ಸರಿ; ಆದರೆ ರಜಪೂತರ ಕ್ಷಾತ್ರತೇಜಸ್ಸು ಈಗಲಾದರೂ ಪ್ರಕಾಶಿಸುತ್ತಲೇ ಆದೆ. ಅಕಬರಬಾದಶಹನ ವಿಜಯ ಸಂಪಾದನೆಗೆ ಬಹ್ವಂಶದಿಂದ ನಿಮ್ಮ ವಿಜಯಶಾಲಿಯಾದ ಖಡ್ಗವು ಕಾರಣವಾಗಿರುವದೇ ಇದಕ್ಕೆ ಸಾಕ್ಷಿಯು; ಆದ್ದರಿಂದ ನಿಮ್ಮಂಥ ವೀರರು ರಾಜಸ್ಥಾನದಲ್ಲಿ ಉದಯಹೊಂದುತ್ತಿರುವವರೆಗೆ ರಜಪೂತರ ಕ್ಷಾತ್ರತೇಜಸ್ಸು ಅಡಗಿತೆಂದು ಹೇಳಲಿಕ್ಕಾಗುವದಿಲ್ಲ.

ಮಾನಸಿಂಗ—ರಾಣಾಜೀ, ನಮ್ಮ ಕ್ಷಾತ್ರತೇಜಸ್ಸು ಎಷ್ಟು ಪ್ರಖರವಾಗಿದ್ದರೂ, ಅದು ನಷ್ಟಸ್ವಾತಂತ್ರ್ಯದ ದೋಷದಿಂದ ಮಲಿನವಾಗಿರುತ್ತದೆ. ಅಕಬರಬಾದಶಹನಿಗೆ ಶರಣುಹೋಗಿ ನಾವು ತೇಜೋಹೀನರಾಗಿರುವೆವು. ಇಡಿಯ ರಜಪೂತಸ್ಥಾನದಲ್ಲಿ ಮೊಗಲರಿಗೆ ಈ ವೊತ್ತಿನವರೆಗೆ ಶರಣುಹೋಗದ ಮನೆತನವೆಂದರೆ, ಮುಖ್ಯವಾಗಿ ನಿಮ್ಮದೊಂದೇ ಎಂದು ಹೇಳಬಹುದು. ನಮ್ಮ ಸುದೈವವು; ಇಂಥ ಕಠಿಣಕಾಲದಲ್ಲಿಯೂ ರಜಪೂತರ ಗೌರವದ ಚಿಹ್ನೆವಾಗಿರುವಂತೆ ನಿಮ್ಮ ಮನೆತನವೊಂದಾದರೂ ಸ್ವತಂತ್ರವಾಗಿರುತ್ತದೆ! ಆದು

ಹೀಗೆಯೇ ತನ್ನ ಸ್ವಾತಂತ್ರ್ಯವನ್ನು ಕಾಯ್ದುಕೊಂಡಿರಲಿ. ಅದೇ, ನಮಗೆ ಅಭಿಮಾನಾಸ್ಪದವೂ ಆನಂದಕರವೂ ಆಗಿರುವದು.

ಪ್ರತಾಪಸಿಂಹ—ನಿಮ್ಮಂಥ ನರವೀರರ ಅಭಿಮಾನಕ್ಕೆ ಆಸ್ಪದವಾದ ಮನೆತನವು ಧನ್ಯವೇ ಸರಿ. ಬಹಳ ಹೊತ್ತಾಯಿತು, ಏಳಬೇಕು, ಭೋಜನದ ಸಿದ್ಧತೆಯಾಗಿದೆ.

ಈ ಮೇರೆಗೆ ನುಡಿದು ಪ್ರತಾಪಸಿಂಹನು ತನ್ನ ಮಂತ್ರಿಮಂಡಲದೊಡನೆ ಎದ್ದನು. ಮಾನಸಿಂಗನೂ ಪ್ರತ್ಯುಥ್ಥಾನಾದಿಗಳಿಂದ ಆತನನ್ನು ಸತ್ಕರಿಸಿದನು. ಇತ್ತ ಭೋಜನದ ಸಿದ್ಧತೆಯ ಕೆಲಸವು ನಡೆಯಿತು. ಭೋಜನ ಸಮಾರಂಭವೂ ಹೀಗೆಯೇ ಸುಸೂತ್ರವಾಗಿ ಸಾಗಿದ್ದರೆ, ಪ್ರತಾಪಸಿಂಹನು ಮಾನಸಿಂಗನೊಡನೆ ದ್ವೇಷಕಟ್ಟಿಕೊಳ್ಳುವ ಪ್ರಸಂಗವು ಬರುತ್ತಿದ್ದಿಲ್ಲ; ಆದರೆ ಈಶ್ವರೀ ಸಂಕೇತವು ಹಾಗೆಯಿದ್ದಿಲ್ಲ. ಮಾನಸಿಂಗನ ಅಪಮಾನದಿಂದ ಹುಟ್ಟಿದ ದ್ವೇಷಾಗ್ನಿಯಲ್ಲಿ ಅಕಬರನ ದ್ವೇಷಾಗ್ನಿಯು ಕೂಡಿ ಪ್ರಜ್ವಲಿಸುವಾಗ, ಆದರ ತಾಪದಲ್ಲಿ ಪ್ರತಾಪನು ತಪಶ್ಚರ್ಯವನ್ನು ಮಾಡಿ ಜಗತ್ತಿನಲ್ಲಿ ತನ್ನ ಸ್ವಾಭಿಮಾನ–ಸ್ವಕುಲಾಭಿಮಾನ–ಸ್ವಧರ್ಮಾಭಿಮಾನಗಳ ಅಜರಾಮರವಾದ ಕೀರ್ತಿಯನ್ನು ಇಟ್ಟು ಹೋಗಬೇಕಾಗಿತ್ತು. ಆದ್ದರಿಂದ ಅಂದಿನ ಮೇಜವಾನಿಯ ಪ್ರಸಂಗದಲ್ಲಿ ಅವರಿಬ್ಬರು ವೀರರ ಮನಸ್ತಾಪವಾಗಿ ಅನರ್ಥ ಪರಂಪರೆಗಳ ಉತ್ಪತ್ತಿಗೆ ಕಾರಣವಾಯಿತು. ಮೆಲ್ಲ ಮೆಲ್ಲನೆ ಭೋಜನದ ಪದಾರ್ಥಗಳ ಸಿದ್ಧತೆಯಾಯಿತು. ಮಾನಸಿಂಹನೂ ಭೋಜನಕ್ಕಾಗಿ ಬಂದನು. ಅಮರಸಿಂಹನು ಬಹು ವಿನಯದಿಂದ ಅಥಿತಿಯ ಅದರಾತಿಥ್ಯವನ್ನು ಮಾಡತೊಡಗಿದನು. ಕುಮಾರನ ನಮ್ರವರ್ತನವನ್ನೂ, ವಿವೇಕವನ್ನೂ ನೋಡಿ ಮಾನಸಿಂಗನು ಮನಸ್ಸಿನಲ್ಲಿ ಬಹು ಸಂತುಷ್ಟನಾಗಿ ಊಟಕ್ಕೆ ಮಣಿಯಮೇಲೆ ಕುಳಿತುಕೊಂಡನು. ಭೋಜನದ ಎಲ್ಲ ಪ್ರಕಾರದ ಅಪೂರ್ವಸಿದ್ಧತೆಯನ್ನು ನೋಡಿ ಆಶ್ಚರ್ಯಚಕಿತನಾದಿ ಮಾನಸಿಂಹನು ನಗುತ್ತ ನಗುತ್ತ—

ಮಾನಸಿಂಗ—ಇಷ್ಟು ಅಲ್ಪಾವಕಾಶದಲ್ಲಿ ಇಷ್ಟು ಉತ್ಕೃಷ್ಟರೀತಿಯಿಂದ ಭೋಜನದ ಸಿದ್ಧತೆಯು ಹ್ಯಾಗಾಯಿತೆಂಬದೇ ನನಗೆ ಮೊದಲು ತಿಳಿಯದಾಗಿದೆ. ನನ್ನ ಸಲುವಾಗಿ ನೀವು ಮಾಡಿದ ಪರಿಶ್ರಮಕ್ಕಾಗಿ ನಾನು ಬಹಳ ಸಂತುಷ್ಟನಾಗಿದ್ದೇನೆ. ಇಷ್ಟಕ್ಕಾಗಿ ನಾನು ಮಹಾರಾಣಾನವರಿಗೆ

ಅತ್ಯಂತ ಕೃತಜ್ಞನಾಗಿರುವೆನು.

ಅಮರಸಿಂಹ—ತಮ್ಮ ಯೋಗ್ಯತೆಗೆ ತಕ್ಕಂತೆ ಆದರಾತಿಥ್ಯವನ್ನು ಮಾಡಲಿಕ್ಕೆ ಅನುಕೂಲವಾಗದ್ದಕ್ಕಾಗಿ ನಮಗೆ ವಿಷಾದವಾಗಿದೆ. ಅದಕ್ಕಾಗಿ ಕ್ಷಮೆಯನ್ನು ಯಾಚಿಸುವೆವು.

ಅಮರಸಿಂಹನ ಈ ವಿನಿಯೋಕ್ತಿಗೆ ಮಾನಸಿಂಹನು ಸಂತೋಷಪಟ್ಟು, ಕಣ್ಣುಮುಚ್ಚಿ ಮನಸ್ಸಿನಲ್ಲಿ ಇಷ್ಟದೇವತೆಯನ್ನು ಧ್ಯಾನಿಸಿ, ಆಕೆಯ ಹೆಸರಿನಿಂದ ಸ್ವಲ್ಪ ಅನ್ನವನ್ನು ಭೂಮಿಯ ಮೇಲೆ ಇಟ್ಟು ಉಣ್ಣಲಿಕ್ಕೆ ಸಿದ್ಧನಾದನು. ಇನ್ನುಮೇಲೆ ಆತನು ತುತ್ತನ್ನು ಬಾಯಲ್ಲಿ ಹಾಕಿಕೊಳ್ಳತಕ್ಕವನು, ಅಷ್ಟರಲ್ಲಿ ಆತನಿಗೆ ಯಾತರದೋ ನೆನಪಾಗಿ ಆತನು ಅಮರಸಿಂಹನನ್ನು ನೋಡುತ್ತ—

ಮಾನಸಿಂಗ—ಸರಿ, ಇದೊಳ್ಳೇ ಕೆಲಸವು; ಮಹಾರಾಣಾನವರು ಬಂದಿರುವದಿಲ್ಲವಲ್ಲ, ಅವರನ್ನು ಬಿಟ್ಟು ನಾನು ಉಣ್ಣುವದು ಹ್ಯಾಗೆ?

ಅಮರಸಿಂಹ—ತಾವು ಊಟಕ್ಕೆ ಕುಳಿತುಕೊಳ್ಳಬೇಕು, ಅವರು ಈಗ ಬರುವರು.

ಮಾನಸಿಂಹ—ಇದು ವಿಲಕ್ಷಣಪ್ರಕಾರವೆಂತಲೇ ಹೇಳಬೇಕಾಗುವದು. ಕುಮಾರ, ನಿನ್ನ ತೀರ್ಥರೂಪರೆಲ್ಲಿ? ಅವರ ಪಂಗ್ತಿಲಾಭವಾಗಬೇಕೆಂದು ನಾನು ಇಚ್ಛಿಸುತ್ತೇನೆ.

ಹೀಗೆ ನುಡಿಯುತ್ತ ಮಾನಸಿಂಹನು ಕೈಯೊಳಗಿನ ತುತ್ತನ್ನು ಭೋಜನಪಾತ್ರೆಯಲ್ಲಿಟ್ಟು ಉತ್ಕಂಠೆಯಿಂದ ಅಮರಸಿಂಹನ ಉತ್ತರದ ಹಾದಿಯನ್ನು ನೋಡುತ್ತ ಸುಮ್ಮನೆ ಕುಳಿತುಕೊಂಡನು. ಅಮರಸಿಂಹನು ಏನೂ ಉತ್ತರಕೊಡದೆ ನೆಲವನ್ನು ನೋಡುತ್ತ ಸುಮ್ಮನೆ ನಿಂತುಕೊಂಡಿದ್ದನು. ಆಗ ಮಾನಸಿಂಗನು—"ಕುಮಾರ! ನೀವು ಉತ್ತರಕೊಡದಿರುವದಕ್ಕೆ ಕಾರಣವೇನು? ನಿಮ್ಮ ಹಿರಿಯರು ಇನ್ನೂ ಯಾಕೆ ಬರಲಿಲ್ಲ? ಅತಿಥಿಯ ಪಮಾನ ಮಾಡುವದು," ಎಂದು ನುಡಿಯುತ್ತಿರಲು, ಅಮರಸಿಂಹನು ನಡುವೆ ಬಾಯಿಹಾಕಿ—ಮಾನಸಿಂಹಜೀ, ತಾವು ಹೀಗೆ ಸಿಟ್ಟಾಗಬಾರದು. ಮಹಾರಾಣಾನವರಿಗೆ ತಲೆನೋಯುತ್ತಿರುವದರಿಂದ ತಮ್ಮ ಪಂಗ್ತಿಗೆ ಊಟಕ್ಕೆ ಬರುವಹಾಗಿಲ್ಲ. ಈ ಆಕಸ್ಮಿಕ ವಿಘ್ನದಿಂದ ಅವರ ಮನಸ್ಸಿಗೆ ಬಹಳ

ವಿಷಾದವಾಗಿದೆ; ಆದರೆ ಉಪಾಯವಿಲ್ಲ. ಮಾಡುವದೇನು? ಎಂದು ನುಡಿದು ಮಾನಸಿಂಗನನ್ನು ಸಮಾಧಾನಪಡಿಸುವ ಯತ್ನಮಾಡಿದನು. ಮಾನಸಿಂಗನ ಮುಖಮಂಡಲವು ಅನೇಕ ವಿಚಾರಗಳಿಂದ ವ್ಯಾಪ್ತವಾಯಿತು. ಆತನು ಗಂಭೀರಸ್ವರದಿಂದ—ಕುಮಾರ! ನೀವು ಇನ್ನೂ ಹುಡುಗರು. ನೀವು ಯಾರನ್ನು ಮೋಸಗೊಳಿಸುವ ಯತ್ನಮಾಡುವಿರೆಂಬದು ನಿಮ್ಮ ಲಕ್ಷದಲ್ಲಿ ಬಂದಂತೆ ತೋರುವದಿಲ್ಲ. ಇಷ್ಟು ಸಾಧಾರಣ ಮಾತು ನನಗೆ—ಅದಿರಲಿ ಬಿಡಿರಿ; ನೀವು ಸ್ವತಃ ಮಹಾರಾಣಾಜಿಯವರ ಬಳಿಗೆ ಹೋಗಿ ಅವರಿಗೆ—"ನಿಮ್ಮ ತಲೆಶೂಲಿಯ ಕಾರಣವು ನನಗೆ ತಿಳಿದಿರುತ್ತದೆ. ಆಗುವದು ಆಗಿಹೋಗಿರುವದು. ಅದು ಬುದ್ಧಿಪೂರ್ವಕವಾಗಿ ಮಾಡಿದ್ದಿರಲಿ, ತಿಳಿಯದೆಮಾಡಿದ್ದಿರಲಿ, ಅದನ್ನುತಿದ್ದಿಕೊಳ್ಳಲಿಕ್ಕೆ ಈಗ ಉಪಾಯವಿಲ್ಲ. ಕದಾಚಿತ್ ಅಂಥ ಉಪಾಯವೇನಾದರೂ ಇದ್ದರೆ, ಸ್ವತಃ ನೀವೇ ಇಲ್ಲಿಗೆ ಬಂದು," ಎಂದು ನುಡಿಯುತ್ತಿರಲು, ಮಾನಸಿಂಗನ ಮಾತು ಮುಗಿಯುವದರ ಹಾದಿಯನ್ನು ನೋಡದೆ ಅಮರಸಿಂಹನು, ಬಳಿಯಲ್ಲಿದ್ದ ಒಬ್ಬ ಸರದಾರನಿಗೆ ರಾಣಾನವರನ್ನು ಕರೆಯಲಿಕ್ಕೆ ಹೋಗುವದಕ್ಕಾಗಿ ನೇತ್ರಸಂಕೇತಮಾಡಿದನು. ಕೂಡಲೆ ಆ ಸರದಾರನು ರಾಣಾನ ಬಳಿಗೆಹೋಗಿ ಬೇಗನೆ ತಿರುಗಿ ಬಂದು—ನಿಜವಾಗಿಯೇ ಮಹಾರಾಣಾಜಿಯವರ ತಲೆಯು ಬಹಳವಾಗಿ ನೋಯುತ್ತದೆ; ಮೇಲಕ್ಕೆ ಏಳಲಿಕ್ಕೆ ಸಹ ಅವರಿಗೆ ಬರುವಹಾಗಿಲ್ಲ, ಎಂದು ಹೇಳಿದನು. ಅದನ್ನು ಕೇಳಿ ಮಾನಸಿಂಗನಿಗೆ ಸಮಾಧಾನವಾಗಲಿಲ್ಲ. ಆತನು ತಳಮಳಿಸುತ್ತ ಪುನಃ ಅಮರಸಿಂಹನನ್ನು ಕುರಿತು—ಕುಮಾರ! ಈಗ ನೀವು ಸತಃ ಮಹಾರಾಣಾನವರ ಬಳಿಗೆ ಹೋಗಿ ಎಲ್ಲ ಸಂಗತಿಯನ್ನು ತಿಳಿಸಿರಿ. ನೀವು ನಮ್ಮ ಪಂಗ್ತಿಯಲ್ಲಿ ಊಟಮಾಡಲಿಕ್ಕೇಬೇಕೆಂದು ಅವರಿಗೆ ಹೇಳಿರಿ. ನೀವೇ ನಮ್ಮೊಡನೆ ಊಟಮಾಡದಿದ್ದರೆ ಉಳಿದ ಯಾವ ರಜಪೂತರು ನಮ್ಮೊಡನೆ ಊಟಮಾಡುವರು? ಕುಮಾರ, ತಿಳಿಯಿತೇ? ಇಷ್ಟು ಮಾತು ಹೇಳಲಿಕ್ಕೆ ನಿಮಗೆ ಬರಬಹುದೇ? ಎಂದು ಕೇಳಲು, "ಬರುವದು" ಎಂದು ಉತ್ತರ ಕೊಟ್ಟು, ಅಮರಸಿಂಹನು ತನ್ನ ತಂದೆಯ ಬಳಿಗೆ ಹೋದನು.

ಅಮರಸಿಂಹನು ಹೋದದ್ದನ್ನು ನೋಡಿ ಮೇಲೆ ಹೇಳಿದ ಸರದಾರನು ಮಾನಸಿಂಗನನ್ನು ಕುರಿತು—ಮಹಾರಾಜ, ನನ್ನಮಾತು ತಮಗೆ ಸತ್ಯವಾಗಿ

ತೋರಲಿಲ್ಲ. ಕುಮಾರನನ್ನು ಮಹಾರಾಣಾನವರ ಬಳಿಗೆ ಕಳಿಸಿದ್ದು ನೆಟ್ಟ ಗಾಯಿತು. ಈಗ ಕುಮಾರರು ಬಂದು ಹೇಳಿದ ಬಳಿಕ ನಿಜವಾದ ಸಂಗ ತಿಯು ತಾನೇ ಗೊತ್ತಾಗುವದು, ಎಂದು ನುಡಿದನು. ಆ ಸರದಾರನ ಮೇಲೆ ಮಾನಸಿಂಗನ ಸಿಟ್ಟು ಮೊದಲಿನಿಂದಲೇ ವಿಶೇಷವಾಗಿ ಇತ್ತು. ಅದ ರಲ್ಲಿ ಆತನ ಈ ಹಂಗಿಸಿದಂಥ ಮಾತಿನಿಂದ ಮಾನಸಿಂಗನು ಮತ್ತಿಷ್ಟು ಸಿಟ್ಟಾಗಿ ಆತನನ್ನು ಕುರಿತು—ಎಲೇ, ನಿದ್ದೆಹತ್ತಿದವರನ್ನು ಯಾರಾದರೂ ಎಬ್ಬಿಸಬಹುದು; ಆದರೆ ನಿದ್ದೆಯ ಸೋಗಿನಿಂದ ಮಲಗಿದವರನ್ನು ಎಬ್ಬಿಸು ವದು ಬಹಳ ಕಠಿಣವಾಗಿರುತ್ತದೆ. ನಿಮ್ಮ ಮಹಾರಾಣಾನು ತಲೆಶೂಲಿಯ ನೆವದಿಂದ ತನ್ನ ಸತ್ಯವಾದಿತ್ವದ, ಹಾಗು ವ್ರತಧಾರಕತ್ವದ ಗುರುತನ್ನು ನನಗೆ ಚೆನ್ನಾಗಿ ಮಾಡಿಕೊಟ್ಟನೆಂದು ಹೇಳಬೇಕಾಗುವದು, ಎನ್ನುತ್ತಿರಲು, "ಹೂ! ವ್ರತಧಾರಕತ್ವದ ಗುರುತೋ" ಎಂದು ನುಡಿಯುತ್ತ, ಪ್ರತಾಪಸಿಂ ಹನು ತನ್ನ ಮಂತ್ರಿಗಳನ್ನೂ, ಬೇರೆಸರದಾರರನ್ನೂ ಕೂಡಿಕೊಂಡು ಅಲ್ಲಿಗೆ ಬಂದನು. ಆತನು ಮಾನಸಿಂಗನನ್ನು ಕುರಿತು ಗಂಭೀರಸ್ವರದಿಂದ—ವ್ರತ ಧಾರಿಯ ಯಾವ ಅಧರ್ಮಾಚರಣೆಯನ್ನು ತಾವು ಈಗ ನೋಡಿದಿರಿ? ಇಲ್ಲಿ ಯವರೆಗೆ ನಿಜವಾದ ಕಾರಣವನ್ನು ಮುಚ್ಚಿ ತಲೆಶೂಲಿಯ ನೆವದಿಂದ ನನ್ನ ಮಗನ ಮುಖಾಂತರ ನಿಮ್ಮ ಆದರಾತಿಥ್ಯವನ್ನು ಮಾಡಿಸಿದ್ದೇ ನನ್ನ ಮಹಾ ಪರಾಧವೋ ಏನು? ಅಂಬರಾಧೀಶ! ನೀವು ನಿಮ್ಮ ಹಿರಿಯರ ಕಾಲದಿಂದಲೇ ನಿಮ್ಮ ಸರ್ವಸ್ವವನ್ನು ಯವನರ ಚರಣಕ್ಕೆ ಅರ್ಪಿಸಿಬಿಟ್ಟಿರುತ್ತೀರಿ? ಆದ್ದ ರಿಂದ ನಿಮಗೆ ಸಮಾಜದ ನೀತಿಯ ಜ್ಞಾನವಿಲ್ಲದಿರುವದು ಸ್ವಾಭಾವಿಕವೇ ಸರಿ. ಯಾವನೇ ಆರ್ಯನು ಕಾರಣವಿಲ್ಲದೆ ಎರಡನೆಯವರ ಮನಸ್ಸನ್ನು ನೋಯಿಸುವದಿಲ್ಲ. ಆದರಲ್ಲಿ ತಾನಾಗಿ ತನ್ನ ಮನೆಗೆ ಬಂದ ಅತಿಥಿಯನ್ನು ಸರ್ವಪ್ರಕಾರದಿಂದ ಸಂತುಷ್ಟಪಡಿಸುವದಂತು ಆರ್ಯರ ಪರಮಧರ್ಮವಾಗಿ ರುವದು. ಅಂಬರರಾಜ! ಇದೇ ಕಾರಣದಿಂದಲೇ ನಾನು ಇಲ್ಲಿಯವರೆಗೆ ತಲೆ ಶೂಲಿಯ ನೆವದಿಂದ ನಿಮ್ಮ ಆದರಾತಿಥ್ಯಕ್ಕೆ ಕೊರತೆಬಾರದಂತೆ ಯತ್ನಿಸಿರು ತ್ತೇನೆ. ನಾನು ಇಲ್ಲಿಗೆ ಬಾರದಿರುವದರ ನಿಜವಾದ ಕಾರಣವು ಈಗ ತಮ್ಮ ಮನಸ್ಸಿಗೆ ಹೊಳೆದಿರಬಹುದು, ಎಂದು ನುಡಿಯಲು, ಮಾನಸಿಂಹನು ಅಭಿ ಮಾನಪೂರ್ವಕವಾಗಿ ಪ್ರತಾಪಸಿಂಹನನ್ನು ಕುರಿತು—ದಿಲ್ಲೀಶ್ವರನ ಬಲಗೈ

ಯೆನಿಸುವ ಅಂಬರಾಧಿಪತಿ ಮಾನಸಿಂಗನಿಗೆ, ಆ ನಿಜವಾದ ಕಾರಣವನ್ನು ಕೇಳುವ ಇಚ್ಛೆಯು ಬಹಳವಾಗಿದೆ. ಮೇವಾಡಾಧಿಪತಿಯ ಮುಖದಿಂದ ಎಂದೂ ಅಸತ್ಯವಚನವು ಹೊರಬೀಳುವ ಸಂಭವವಿರುವದಿಲ್ಲ, ಎಂದನು. ಆಗ ಪ್ರತಾಪನು ನಿಜವಾದ ಕಾರಣವನ್ನು ಹೇಳುವ ಉದ್ದೇಶದಿಂದ ಮಾನಸಿಂಗನನ್ನು ಕುರಿತು—ಹಾಗಿದ್ದರೆ ನಿಜವಾದ ಕಾರಣವನ್ನು ಆನಂದದಿಂದ ಕೇಳಿರಿ. ಯಾವ ರಜಪೂತನು ಕ್ಷಾತ್ರಧರ್ಮದ ತ್ಯಾಗಮಾಡಿದನೋ, ಯಾವನು ತನ್ನ ಮರ್ಯಾದೆಯನ್ನೂ, ವಂಶಾಭಿಮಾನವನ್ನೂ ಮರೆತು ಬಿಟ್ಟು ಕೇವಲ ದ್ರವ್ಯದ, ಹಾಗು ಅಧಿಕಾರದ ಆಶೆಯಿಂದ ತನ್ನ ತಂಗಿಯನ್ನೂ, ಮಗಳನ್ನೂ ಯವನ ಚರಣಗಳಿಗೆ ಅರ್ಪಿಸಿ, ಪ್ರತ್ಯಕ್ಷವಾಗಲಿ ಅಪ್ರತ್ಯಕ್ಷವಾಗಲಿ ಆ ಯವನರೊಡನೆ ಭೋಜನ ಮಾಡಿದನೋ ಆ ಭ್ರಷ್ಟರಜಪೂತನೊಡನೆ, ಪವಿತ್ರ ಸಿಸೋದಿಯಾ ವಂಶದಲ್ಲಿ ಹುಟ್ಟಿದ ಈ ಪ್ರತಾಪಸಿಂಹನು ಎಂದಿಗೂ ಭೋಜನಮಾಡಿ ಭ್ರಷ್ಟನಾಗಲಾರನು. ಒಬ್ಬ ಕುಲಗೇಡಿಯು ತನ್ನ ಕುಲದವರೊಡನೆ ಒಂದೇ ಪಂಕ್ತಿಯಲ್ಲಿ ಊಟಮಾಡಬೇಕೆಂದು ಹಿಡಿದ ಹಟದಲ್ಲಿಯೂ ತಮ್ಮ ಹಟದಲ್ಲಿಯೂ ಭೇದವೇನಿದೆ? ಈ ನಿಮ್ಮ ಹಟವು ವ್ಯರ್ಥವಾದದ್ದೆಂದು ಹೇಳಬೇಕಾಗುವದು.

ಈ ಸ್ಪಷ್ಟೋಕ್ತಿಯನ್ನು ಕೇಳಿ ಮಾನಸಿಂಗನು ಮುಖಭಂಗಿತನಾಗಿ ಪ್ರತಾಪನಿಗೆ—ಮಹಾರಾಜ, ಸಾಕು, ಬಹಳವಾಯಿತು. ಇದಕ್ಕೂ ಹೆಚ್ಚಿಗೆ ಕೇಳುವ ಇಚ್ಛೆಯು ನನಗಿಲ್ಲ, ಎಂದು ನುಡಿದು ತಟ್ಟನೆ ಎಲೆಬಿಟ್ಟು ಎದ್ದನು. ಅಪಮಾನಾಭಿಮಾನಗಳಿಂದುಂಟಾದ ಸಂತಾಪಾಗ್ನಿಯಿಂದ ಆತನ ಸರ್ವಾಂಗವು ದಗ್ಧವಾಗಹತ್ತಿತು. ಮೋರೆಯು ಕೆಂಪಾಯಿತು. ಅದರೂ ಆತನು ವಿಲಕ್ಷಣವಾದ ಆತ್ಮಸಂಯಮನದಿಂದ ತನ್ನ ಮನಸ್ಸಿನೊಳಗಿನ ಸಿಟ್ಟನ್ನು ಹೊರಗೆಡವದೆ, ಊಟಕ್ಕೆ ಕೂಡ್ರುವಾಗ ಇಷ್ಟ ದೇವತೆಯ ಹೆಸರಿನಿಂದ ಭೂಮಿಯಲ್ಲಿಟ್ಟಿದ್ದ ಅನ್ನವನ್ನು ಮಹಾಭಕ್ತಿಯಿಂದ ತನ್ನ ಮುಂಡಾಸದಲ್ಲಿ ಮುದುಡಿಕೊಂಡು ಮನಸ್ಸಿನಲ್ಲಿ—"ಆದದ್ದೆಲ್ಲ ಯೋಗ್ಯವೆಂತಲೇ ಹೇಳಬೇಕಾಗುವದು. ನನ್ನ ಮಾನಖಂಡನವನ್ನು ನಾನೇ ಮಾಡಿಕೊಂಡಿರಲು, ಎರಡನೆಯವರಿಗೆ ದೋಷಕೊಡುವದಾದರೂ ಯಾಕೆ? ಪ್ರತಾಪಸಿಂಹನೇನು ನನ್ನನ್ನು ಕರೆಕಳಿಸಿದ್ದಿಲ್ಲ. ನನ್ನ ಅಗಂತುಕತನದ ಪ್ರಾಯಶ್ಚಿತ್ತವು ನನಗೆ ಚನ್ನಾಗಿ

ಆಯಿತು. ಅಂದಬಳಿಕ ನಿರರ್ಥಕ ಸಿಟ್ಟುಮಾಡುವದರಲ್ಲಿ ಪ್ರಯೋಜನವೇನು?" ಎಂದು ವಿಚಾರಮಾಡಿ ಪ್ರತಾಪಸಿಂಹನನ್ನು ಕುರಿತು—ಮಹಾರಾಣಾಜೀ, ನಿಮಗೆ ಯೋಗ್ಯವೆಂದು ತೋರಿದ್ದನ್ನು ನೀವು ಮಾಡಿದಿರಿ; ಆದ್ದರಿಂದ ನಿಮ್ಮ ವಿರುದ್ಧವಾಗಿ ನಾನು ಏನೂ ಮಾತಾಡುವದಿಲ್ಲ; ಆದರೆ ಒಂದು ಮಾತನ್ನು ಮಾತ್ರ ಮರೆಯಬೇಡಿರಿ. ನಮ್ಮ ಮರ್ಯಾದೆಯು ಹೋದದ್ದು ಹೋಗಲಿ, ನಿಮ್ಮ ಮರ್ಯಾದೆಯಾದರೂ ಚಿರಕಾಲ ಉಳಿಯಬೇಕೆಂಬದಿಷ್ಟೇ ಉದ್ದೇಶದಿಂದಲೇ ನಾನು ಯವನರಿಗೆ ಶರಣು ಹೋಗಿ ಈಗಲಾದರೂ ಅದೇ ಸ್ಥಿತಿಯಲ್ಲಿರುತ್ತೇನೆ, ಎಂದು ಹೇಳಿದನು. ಅದಕ್ಕೆ ಸ್ಪಷ್ಟಮಾತಿನ ಪ್ರತಾಪನು—"ನೀವು ಅವಲಂಬಿಸಿದ ಮಾರ್ಗವು ಪ್ರಶಂಸನೀಯವಾದದ್ದೇ ಸರಿ! ಇಂಥ ಉದಾರವಾದ ನೀತಿಯನ್ನು ತಾವು ಯಾರಬಳಿಯಲ್ಲಿ ಕಲಿತಿರಿ? ನಮ್ಮ ಲೌಕಿಕವನ್ನೂ, ಮಾನ-ಮರ್ಯಾದೆಗಳನ್ನೂ ಚಿರಕಾಲ ರಕ್ಷಿಸುವದಕ್ಕಾಗಿಯೇ ನೀವು ನಿಮ್ಮ ತಂಗಿಯನ್ನೂ, ಮಗಳನ್ನೂ ಯವನರ ಪಾದಕ್ಕೆ ಒಪ್ಪಿಸಿದೆವೆಂಬದು ನೀವು ಆಡುವ ಮಾತಿನ ಭಾವಾರ್ಥವಿರುತ್ತದಷ್ಟೇ?" ಎಂದು ಕೇಳಲು, ಮಾನಸಿಂಗನ ಕೋಪವು ಅನಿವಾರ್ಯವಾಯಿತು. ಆತನು ಕ್ಷುಬ್ಧನಾಗಿ ಕೂಡಲೆ ಕುದುರೆಯನ್ನು ಹತ್ತಿ ಪ್ರತಾಪಸಿಂಹನ ಕಡೆಗೆ ಒಮ್ಮೆ ಕೆಟ್ಟ ಕಣ್ಣಿನಿಂದ ನೋಡಿ—ಮಹಾರಾಣಾಜೀ, ನಿಮ್ಮ ಈ ಕೃತ್ಯದ ಪ್ರಾಯಶ್ಚಿತ್ತವನ್ನು ನೀವು ಬೇಗನೆ ಅನುಭೋಗಿಸಬೇಕಾಗುವದೆಂಬದನ್ನು ಚನ್ನಾಗಿ ಲಕ್ಷದಲ್ಲಿಡಿರಿ. ಒಂದು ವೇಳೆ ನಾನು ನಿಜವಾದ ರಜಪೂತನಿರಲಿಕ್ಕಿಲ್ಲ; ಆದರೆ ನಿಮಗೆ ಯೋಗ್ಯ ಪ್ರಾಯಶ್ಚಿತ್ತವನ್ನು ಮಾಡದಿದ್ದರೆ ನನ್ನ ಹೆಸರು ಮಾನಸಿಂಗನಲ್ಲ!

ಮಾನಸಿಂಗನ ಈ ಮಾತುಗಳನ್ನು ಕೇಳಿ ಪ್ರತಾಪನು ಸಿಂಹನಾದ ಮಾಡಿ—"ಅಚ್ಚ ವೀರರು ತಮ್ಮ ಬಾಯಿಂದ ತಮ್ಮ ಪರಾಕ್ರಮವನ್ನು ವರ್ಣಿಸುತ್ತಿರುವದಿಲ್ಲ. ಮುಂದೆ ಆಗತಕ್ಕದ್ದು ಆದೀತು; ಆದರೆ ತಮ್ಮೊಡನೆ ಯುದ್ಧಪ್ರಸಂಗವು ಒದಗುವದೆಂಬದನ್ನು ಕೇಳಿ ಈಗಂತು ನನಗೆ ನಿಶ್ಶಂಶಯ ಬಹಳ ಸಂತೋಷವಾಗಿದೆ. ಯುದ್ಧ ಕ್ಷೇತ್ರದಲ್ಲಿ ತಮ್ಮ ಗಂಟುಬಿದ್ದ ದಿನವೇ ಸುದಿನವು;" ಎಂದು ನುಡಿಯುತ್ತಿರಲು, ಪ್ರತಾಪಸಿಂಹನ ಒಬ್ಬ ಸರದಾರನು ವಿನೋದದಿಂದ ಮಾನಸಿಂಗನಿಗೆ—ಅಂಬರಾಧೀಶ, ಯುದ್ಧಕ್ಕೆ ಬರುವಾಗ

ಸಂಗಡ ನಿಮ್ಮ ತಂಗಿಯ ಮಗನಾದ ಅಕಬರನನ್ನು ಕರಕೊಂಡು ಬರಬೇಕು; ಇಲ್ಲದಿದ್ದರೆ ನಿಮ್ಮ ಶೌರ್ಯದ ಪ್ರಕಾಶವು ಚನ್ನಾಗಿ ಬೀಳಲಿಕ್ಕಿಲ್ಲ, ಎಂದು ನುಡಿದನು. ಸರದಾರನ ಈ ಮಾತುಗಳನ್ನು ಕೇಳಿ ಎಲ್ಲರೂ ಗಹಗಹಿಸಿ ನಕ್ಕರು. ಮಾನಸಿಂಗನು ಕ್ಷಣವಾದರೂ ತಡೆಯದೆ ತನ್ನ ಕುದುರೆಯನ್ನು ಚಬಕದಿಂದ ಹೊಡೆದು ಅಲ್ಲಿಂದ ಅದೃಶ್ಯನಾದನು. ಪ್ರತಾಪಸಿಂಹನು ಆತನ ಸಿಟ್ಟನ್ನು ಎಷ್ಟು ಮಾತ್ರವೂ ಲಕ್ಷಿಸಲಿಲ್ಲ. ಮಾನಸಿಂಗನು ಹೊರಟು ಹೋದ ಕೂಡಲೆ ಪ್ರತಾಪನು, ಆತನು ಊಟಕ್ಕೆ ಕುಳಿತ ಸ್ಥಳವನ್ನು ಗೋಮಯದಿಂದ ಸಾರಿಸಿ ಪವಿತ್ರವಾಗಿ ಮಾಡಿ, ಆ ಮೇಜವಾನಿಯ ಸಲು ವಾಗಿ ಮಾಡಿದ ಅಡಿಗೆಯನ್ನು ನಾಯಿಗಳಿಗೆ ಹಾಕಿಸಿ, ಪಾತ್ರೆಗಳನ್ನು ತಿಕ್ಕಿಸಿ ಅವನ್ನು ಗಂಗೋದಕದಿಂದ ಪವಿತ್ರವಾಗಮಾಡಿದನು. ಆ ಮೇಲೆ ಆತನ ಸಂಸರ್ಗಜನ್ಯ ಪಾತಕದಿಂದ ಮುಕ್ತವಾಗುವದಕ್ಕಾಗಿ ಸಪರಿವಾರ ಸಚೈಲ ಸ್ನಾನವನ್ನು ಮಾಡಿ, ಯಾವತ್ತು ಕಡೆಗೆ ಗಂಗೋದಕವನ್ನು ಸಿಂಪಡಿಸಿ ಮಂಟಪವನ್ನು ಪರಿಶುದ್ಧಗೊಳಿಸಿದನು!!

೮ನೆಯ ಪ್ರಕರಣ

# ಸಮರೋದ್ಯೋಗ.

ರಜಪೂತರಲ್ಲಿ ಹಟವಾರಿತನವು ಬಹಳ. ಈ ಛಲದ ಮೂಲಕ ಪರಸ್ಪರರ ಸೇಡು ತೀರಿಸಿಕೊಳ್ಳುವದಕ್ಕೋಸ್ಕರ ಅವರು ತಮ್ಮ ತಮ್ಮೊಳಗೆ ಆಗಾಗ್ಗೆ ಬಡದಾಡಿ ರಕ್ತದ ಕಾಲಿವೆಗಳನ್ನು ಹರಿಸಲಿಕ್ಕೆ ಹಿಂದೆ ಮುಂದೆ ನೋಡುತ್ತಿದ್ದಿಲ್ಲ. ಈ ಛಲದ ಮೂಲಕವಾಗಿಯೇ ಕೆಲವು ಮನೆತನಗಳಲ್ಲಿ ವಂಶಪರಂಪರಾಗತ ದ್ವೇಷವು ನೆಲೆಗೊಂಡಂತೆ ಆಗಿತ್ತು. ಈ ಕೆಟ್ಟ ದ್ವೇಷವೇ ಮುಸಲ್ಮಾನರು ಈ ದೇಶಕ್ಕೆ ಬರಲಿಕ್ಕೂ ಅವರು ಈ ದೇಶದಲ್ಲಿ ನೆಲೆಯೂರಿ ನಿಲ್ಲಲಿಕ್ಕೂ ಬಹ್ವಂಶದಿಂದ ಕಾರಣವಾಯಿತೆಂದು ಹೇಳಬಹುದು. ಮಾನಸಿಂಗನು ಸಂತಾಪದಿಂದ ಉರಿಯುತ್ತ ದಿಲ್ಲಿಗೆ ಹೋದನು. ಕಮಳನೇರದಲ್ಲಿ ನಡೆದ ಸಂಗತಿಯನ್ನು ಕೇಳಿ ಅಕಬರಬಾದಶಹನಾದರೂ ಬಹಳ ಸಿಟ್ಟಾದನು. ಪ್ರತಾಪಸಿಂಹನು ಅಪಮಾನ ಮಾಡಿದ್ದು ಮಾನಸಿಂಗನಿಗಲ್ಲ, ನನಗೆಂದು ಆತನು ತಿಳಿದು "ಈವೊತ್ತಿಗೆ ರಜಪೂತರ ಒಗರೂ, ಅಭಿಮಾನವೂ ನಷ್ಟವಾದವೆಂದು ನಾನು ತಿಳಿದದ್ದು ಅಸತ್ಯವು. ಇನ್ನೂ ರಜಪೂತರ ಮೂಗು ಮೇಲೆಯೇ ಅಗಿರುತ್ತದೆ. ಹಿಂದಕ್ಕೆ ಪ್ರತಾಪಸಿಂಗನು ಬರೆದು ಕಳಿಸಿದ ಪತ್ರವು ನಿರರ್ಥಕವಾದದ್ದಲ್ಲ. ಆ ರಾಣಾನು ನಿಜವಾಗಿಯೇ ನನ್ನನ್ನು ಲಕ್ಷಿಸುವದಿಲ್ಲ. ಆತನ ತಲೆಯನ್ನು ತಗ್ಗಿಸದಿದ್ದರೆ ನನ್ನ ಗೌರವಕ್ಕೆ ಬಾಧೆಬಾರದೆಯಿರದು," ಎಂದು ಬಾದಶಹನು ಯೋಚಿಸಿ ಪ್ರತಾಪನ ಸೊಕ್ಕು ಮುರಿಯುವದಕ್ಕಾಗಿ ಸಮರೋದ್ಯೋಗವನ್ನು ನಡಿಸಲು ನಿಶ್ಚಯಿಸಿದನು. ಆತನು ಮಾನಸಿಂಗನನ್ನು ಕುರಿತು—ಮಾನಸಿಂಗ, ನೀವು ನನ್ನ ಬಲಗೈಯು.

ನಿಮಗಾದ ಅಪಮಾನದಿಂದ ನನ್ನ ಹೃದಯದಲ್ಲಿ ಭಯಂಕರವಾದ ಕೋಪಾಗ್ನಿಯು ಉತ್ಪನ್ನವಾಗಿರುತ್ತದೆ. ಆ ಅಗ್ನಿಯಿಂದ ಸ್ವಲ್ಪ ದಿವಸಗಳಲ್ಲಿ ನಾನು ಪ್ರತಾಪಸಿಂಹನನ್ನು ಸಸೈನ್ಯ ಸುಟ್ಟು ಭಸ್ಮಮಾಡುವೆನು. ನನ್ನ ಮುಂದೆ ಇಷ್ಟು ಅಹಂಕಾರವೇ? ಇಷ್ಟು ಅಭಿಮಾನವೇ!!" ಎಂದು ನುಡಿದು ತನ್ನ ಮನಸ್ಸಿನಲ್ಲಿ—"ನನ್ನ ಮಾರ್ಗಕ್ಕೆ ಅಡ್ಡಾಗುವವನೂ, ನನ್ನ ನೀತಿಯಲ್ಲಿಯ ಹುಳಕನ್ನು ಬೈಲಿಗೆಳೆಯುವವನೂ ಪ್ರತಾಪಸಿಂಹನು ಒಬ್ಬನು ಮಾತ್ರ ಉಳಿದಿರುವನು. ಇಷ್ಟು ದಿವಸದ ಸತತವಾದ ಪರಿಶ್ರಮದಿಂದ ನಾನು ಮುಸಲ್ಮಾನೀ ರಾಜ್ಯರೂಪವಾದ ಮಂದಿರವನ್ನು ಕಟ್ಟಿಸಿದೆನು. ಹಿಂದೂ ಮುಸಲ್ಮಾನರನ್ನು ಒಂದು ಮಾಡುವದಕ್ಕಾಗಿ ರಜಪೂತ ಕನ್ಯೆಯರನ್ನು ಮುಸಲ್ಮಾನರ ಮನೆತನಕ್ಕೆ ಕೊಡುವ ಪ್ರಚಾರವನ್ನು ಕೆಡವಿದೆನು. ಜಾತಿಭೇದವನ್ನು ನಾಶಮಾಡುವದಕ್ಕಾಗಿ ಮುಸಲ್ಮಾನರ ಕೈಯ್ಯ ಅನ್ನವನ್ನು ರಜಪೂತರ ಮುಖದಲ್ಲಿ ಹಾಕಿಸಿದೆನು. ಇವೆಲ್ಲವುಗಳ ಯೋಗದಿಂದ ನನ್ನ ರಾಜ್ಯವನ್ನು ಸ್ಥಿರಗೊಳಿಸುವ ಯತ್ನ ಮಾಡಿದೆನು; ಆದರೆ ನನ್ನ ಪ್ರಯತ್ನವೆಲ್ಲ ಇಂದು ಪ್ರತಾಪನ ಒಂದೇ ಒದತದಿಂದ ಮಣ್ಣುಗೂಡಿ ಹೋಯಿತು. ಒಂದಿಲ್ಲೊಂದು ಉಪಾಯದಿಂದ ರಾಣಾನ ಅಪರಾಧಕ್ಕಾಗಿ ಯೋಗ್ಯ ಶಾಸನ ಮಾಡಿದ ಹೊರತು ನನ್ನ ಮನಸ್ಸಿಗೆ ಸಮಾಧಾನವಾಗಲಾರದು!

ಈ ಮೇರೆಗೆ ಯೋಚಿಸಿ ಬಾದಶಹನು ಪ್ರತಾಪಸಿಂಹನ ಗೃಹ ಭೇದಿಗಳಾದ ಎಷ್ಟೋ ಜನ ಕುಲಕಂಟಕರನ್ನು ಕರೆಸಿದನು. ಅವರಲ್ಲಿ ಶಕ್ತಿಸಿಂಹ-ಸಾಗರಜಿ ಯೆಂಬ ಇಬ್ಬರು ಪ್ರತಾಪನ ಬಂಧುಗಳೂ, ಸಾಗರಜಿಯ ಜಾತಿಭ್ರಷ್ಟ ಮಗನಾದ ಮೊಹಬತ್ ಖಾನನೆಂಬ ಸರದಾರನೂ ಮುಖ್ಯರಾಗಿದ್ದರು. ಅವರಲ್ಲಿಯೂ ಶಕ್ತಿಸಿಂಹನು ಮೊನ್ನೆ ಮೊನ್ನೆ ಪ್ರತಾಪನೊಡನೆ ಕಲಹಬೆಳೆಸಿ ಆತನ ಸೇಡು ತೀರಿಸಿಕೊಳ್ಳುವದಕ್ಕಾಗಿ ಬಾದಶಹನನ್ನು ಕೂಡಿದವನಾದ್ದರಿಂದ, ಬಾದಶಹನು ಆವನನ್ನು ಕುರಿತು—"ಶಕ್ತಿಸಿಂಹ, ಡಾಂಬಿಕನೂ, ಅಭಿಮಾನಿಯೂ ಆದ ನಿನ್ನ ಅಣ್ಣ ಪ್ರತಾಪನ ಶಾಸನವನ್ನುಮಾಡಿ ನಿನ್ನ ಮರ್ಮದವೇದನೆಯನ್ನು ಕಡಿಮೆಮಾಡುವೆನು, ನಿಶ್ಚಿಂತನಾಗಿರು, ಅನ್ನಲು, ಬಾದಶಹನ ಈ ಆಶ್ವಾಸನದಿಂದ ಅಟ್ಟಕ್ಕೇರಿದ ಶಕ್ತಿಸಿಂಹನು

ಹಿಂದುಮುಂದಿನ ವಿಚಾರವಿಲ್ಲದೆ ನೀಚತನದಿಂದ ಬಾದಶಹನನ್ನು ಕುರಿತು—ಜಹಾಪನಾಹ! ಪ್ರತಾಪಸಿಂಹನನ್ನು ನಾಶಗೊಳಿಸುವದಕ್ಕಾಗಿ ತಾವು ಬಹು ದೊಡ್ಡ ಸೈನ್ಯವನ್ನು ಕೂಡಿಸಬೇಕಾಗುವದು; ಯಾಕಂದರೆ, ಪ್ರತಾಪಸಿಂಹನ ಬಳಿಯಲ್ಲಿ ಇನ್ನೂ ಇಪ್ಪತ್ತು ಸಾವಿರಸೈನ್ಯವಿರುತ್ತದೆ. ಅದರಲ್ಲಿ ರಜಪೂತರು ಮಹಾ ಪರಾಕ್ರಮಿಗಳೂ, ಸಾವಿಗೆ ಹೆದರದವರೂ ಇರುತ್ತಾರೆ. ಅವರಲ್ಲಿ ನಿಜವಾದ ಶೌರ್ಯವು ವಾಸಿಸುತ್ತಿರುವದು. ಭಿಲ್ಲರು ಮಹಾ ಚಪಲರು; ಧನುರ್ವಿದ್ಯೆಯಲ್ಲಿ ನಿಷ್ಣಾತರು. ಅವರು ಗುಡ್ಡಗಾಡಿನಲ್ಲಿ ದಕ್ಷತೆಯಿಂದ ಯುದ್ಧಮಾಡಲು ಸಮರ್ಥರಿರುವರು. ಪರ್ವತದ ಗುಹೆಗಳಲ್ಲಿಯೂ, ಖಿಂಡಿಗಳಲ್ಲಿಯೂ ಅಡಗಿಕೊಂಡು ಕುಳಿತುಕೊಳ್ಳುವಲ್ಲಿ ಅವರು ಒಳ್ಳೇ ನಿಷ್ಣಾತರು. ಆಗ ಅವರನ್ನು ಹುಡುಕುವದು ಸುಲಭವಲ್ಲ. ಗುರಿಹೊಡೆಯುವದರಲ್ಲಿ ಅವರನ್ನು ಸರಿಗಟ್ಟುವವರು ಯಾರೂ ಇಲ್ಲ. ಪ್ರಸಂಗದಲ್ಲಿ ಸಣ್ಣ ಸಣ್ಣ ಕಲ್ಲಿನರಾಶಿಗಳನ್ನು ಹಾಕಿಕೊಂಡು ಅವುಗಳ ಮರೆಗೆ ಕುಳಿತು ಅವರು ಯುದ್ಧ ಮಾಡುವರು. ಇಂಥ ಭಿಲ್ಲರು ಪ್ರತಾಪನಿಗೆ ಪೂರ್ಣ ಸಹಾಯಕರಾಗಿರುವರು. ರಾಜಸ್ಥಾನದೊಳಗಿನ ಭೂಮಿಯಾ ಎಂಬ ಜನರು, ಎದುರಿಗೆ ನಿಂತು ಎಂದೂ ಯುದ್ಧಮಾಡುವದಿಲ್ಲ. ಆದರೆ ತಮ್ಮ ತಮ್ಮ ಪರ್ವತ ದುರ್ಗಗಳನ್ನೂ, ನಿವಾಸಸ್ಥಾನಗಳನ್ನೂ ಸಂರಕ್ಷಿಸುವಲ್ಲಿ ಇವರು ಒಳ್ಳೇ ಪ್ರವೀಣರಿರುವರು. ಅವರಿಂದಾಗುವ ಗುಪ್ತತ್ರಾಸವನ್ನು ಮೊಗಲಸೈನ್ಯವು ಅನುಭವಿಸಬೇಕಾದೀತು. ಬೇರೆ ಅರಣ್ಯವಾಸಿಗಳಾದರೂ ಧನುರ್ಬಾಣಗಳಿಂದ ಶತ್ರುಗಳನ್ನು ಜರ್ಜರಮಾಡುವರು. ದಕ್ಷಿಣದಿಕ್ಕಿನಲ್ಲಿ ಭಿಲ್ಲರೂ, ಪೂರ್ವದಿಕ್ಕಿನಲ್ಲಿ ಮೀರರೂ, ಪಶ್ಚಿಮದಿಕ್ಕಿನಲ್ಲಿ ಮೀನರೂ ಮೊಗಲರನ್ನು ಸಮರಾಂಗಣಕ್ಕೆ ಉತ್ಸಾಹದಿಂದ ಕರೆಯಬಹುದು. ಖಾವಿಂದ, ರಜಪೂತರಲ್ಲಿರುವ ಒಂದು ದೊಡ್ಡ ಕೊರತೆಯನ್ನು ಹೇಳುವೆನು ಆಲಿಸಬೇಕು. ರಜಪೂತರ ಎಲ್ಲ ಸಾಮರ್ಥ್ಯವು ಖಡ್ಗ, ಬರ್ಚಿ, ಕಠಾರಿಗಳನ್ನವಲಂಬಿಸಿರುವದು. ಒಮ್ಮೊಮ್ಮೆ ಅವರು ಧನುಷ್ಯಬಾಣಗಳನ್ನಾದರೂ ಉಪಯೋಗಿಸುವರು. ಖಡ್ಗ ಯುದ್ಧದಲ್ಲಿ ರಜಪೂತರನ್ನು ಸರಿಗಟ್ಟುವವರು ಪೃಥ್ವಿಯಲ್ಲಿ ಮತ್ತೊಬ್ಬರಿಲ್ಲ; ಭಿಲ್ಲರ ಧನುರ್ವಿದ್ಯೆಯ ಪ್ರವೀಣತೆಯನ್ನಂತು ಆಗಲೇ ಹೇಳಿಯೇ ಇದ್ದೇನೆ; ಆದ್ದರಿಂದ ರಜಪೂತರ ನಾಶಕ್ಕಾಗಿ ಖಾವಿಂದರು ಬೇರೆ ಉಪಾಯ

ವನ್ನೇ ಯೋಚಿಸಬೇಕು. ಆ ಉಪಾಯವೆಂದರೆ ತೋಫು-ತುಬಾಕಿಗಳನ್ನು ರಜಪೂತರು ಯುದ್ಧದಲ್ಲಿ ಉಪಯೋಗಿಸುವದು! ನೂರಾರು ಶಸ್ತ್ರಗಳಿಂದಾಗದ ಕಾರ್ಯವನ್ನು ತೋಫಿನ ಒಂದು ಗುಂಡುಮಾಡುವದು. ರಜಪೂತ ಸೈನಿಕರು ಎಷ್ಟು ಶೂರರಿದ್ದರೂ, ಭಿಲ್ಲರು ಧನುರ್ವಿದ್ಯೆಯಲ್ಲಿ ಎಷ್ಟು ಪ್ರವೀಣರಿದ್ದರೂ ತೋಫು–ತುಬಾಕಿಗಳ ಮುಂದೆ ಅವರ ಆಟವು ನಡೆಯದು. ಆದ್ದರಿಂದ ಆದಷ್ಟು ಪ್ರಯತ್ನಮಾಡಿ ತೋಫು–ತುಬಾಕಿಗಳನ್ನು ಕೂಡಿಸಬೇಕು.

ಶಕ್ತಿಸಿಂಹನ ಗೃಹಭೇದಕವಾದ ಈ ಮಾತುಗಳನ್ನು ಕೇಳಿ ಅಕಬರನಿಗೆ ಬಹಳ ಸಮಾಧಾನವಾಯಿತು. ಆತನು ಶಕ್ತಿಸಿಂಹನ ಯೋಗ್ಯ ಸೂಚನೆಯಂತೆ ಸೈನ್ಯದ ವ್ಯವಸ್ಥೆಮಾಡಿ ಇಪ್ಪತ್ತೈದುಸಾವಿರ ಸೈನ್ಯವನ್ನು ಸಮರಕ್ಕೆ ಸಜ್ಜು ಮಾಡಿದನು. ತನ್ನ ಮಗನಾದ ಸೇಲೀಮನನ್ನು ಸೇನಾಪತಿಯಾಗಿ ನೇಮಿಸಿ, ಮೊಹಬತ್‌ಖಾನನನ್ನು ಆತನ ಅಂಗರಕ್ಷಕನನ್ನಾಗಿಯೂ, ಮಾನಸಿಂಗನನ್ನು ಮಂತ್ರಾಲೋಚಕನನ್ನಾಗಿಯೂ, ಶಕ್ತಿಸಿಂಹನೇ ಮೊದಲಾದ ಕೆಲವು ಸರದಾರರನ್ನು ಸಹಾಯಕರನ್ನಾಗಿಯೂ ನಿಯಮಿಸಿದನು. ಮಾನಸಿಂಹನ ಯೋಗ್ಯತೆಯು ವಾಚಕರಿಗೆ ಗೊತ್ತಿರುವದು. ಶಕ್ತಿಸಿಂಹನ ಪರಾಕ್ರಮದ ಅನುಭವವಾದರೂ ಅವರಿಗೆ ಆಗಿರುತ್ತದೆ. ಇನ್ನು ಮೊಹಬತ್‌ಖಾನನೆಂಬ ಕುಲಗೇಡಿ ರಜಪೂತನ ಯೋಗ್ಯತೆಯ ಪರಿಚಯಮಾಡಿಕೊಡುವದಷ್ಟು ಉಳಿದದೆ. ಸಾಹಸ, ವೀರ್ಯ, ಬಾಹುಬಲ, ಬುದ್ಧಿಸಾಮರ್ಥ್ಯ ಈ ಗುಣಗಳಲ್ಲಿ ಮೊಹಬತ್‌ಖಾನನು ಅಕಬರನ ಬಲಗೈಯಾಗಿದ್ದನು. ಸ್ವಜ್ಞಾತಿದ್ರೋಹದಲ್ಲಿ ಆತನನ್ನು ಸರಿಗಟ್ಟುವವರು ಅಖಿಲ ಭರತಖಂಡದಲ್ಲಿ ಆಗ ಮತ್ತೊಬ್ಬರಿದ್ದಿಲ್ಲ. ಈ ನರರತ್ನಗಳು ಅಕಬರನಿಗೆ ಲಭಿಸಿದ್ದರಿಂದಲೇ ಆತನು ಇಷ್ಟು ಖ್ಯಾತಿವಂತನಾದನು. ಸಲ್ಪದಿನಗಳಲ್ಲಿ ಯುದ್ಧದ ಸಿದ್ಧತೆಯಾಗಿ ಸರ್ವಸನ್ನಾಹದೊಡನೆ ೨೫ ಸಾವಿರ ಸೈನ್ಯವು ದಿಲ್ಲಿಯ ಪಟ್ಟಣದಿಂದ ಹೊರಟಿತು ಈ ಯುದ್ಧಕ್ಕೆ ಮೂಲವು ಮಾನಸಿಂಗನೇ ಆದದ್ದರಿಂದ ಮುಂದೆ ಒದಗಿದ ಸ್ವಜಾತಿಯವರ ಅನರ್ಥಕ್ಕೆಲ್ಲ ಆತನೇ ಕಾರಣನಾದನೆಂದು ಹೇಳಬಹುದು.

ಮೂರ್ತಿಮಂತ ಪ್ರತಾಪವಾದ ರಾಣಾಪ್ರತಾಪಸಿಂಹನಾದರೂ ಯುದ್ಧದ ಸಿದ್ಧತೆಯನ್ನು ಚನ್ನಾಗಿ ಮಾಡಿದ್ದನು. ಮೇವಾಡದ ಮೇಲೆ

ಸಾಗಿ ಬರುವ ಶತ್ರುಗಳಿಗೆ ರಜಪೂತವೀರ್ಯದ ಗುರುತನ್ನು ಚೆನ್ನಾಗಿ ಮಾಡಿಕೊಟ್ಟು, ಅವರನ್ನು ಹಣ್ಣು ಮಾಡುವ ಯತ್ನದಲ್ಲಿ ಆತನು ಮುಣುಗಿ ಹೋಗಿದ್ದನು. ತಾನು ಶತ್ರುಗಳಿಂದ ರಕ್ಷಿಸಿಕೊಳ್ಳಬೇಕೆಂದು ಗೊತ್ತು ಮಾಡಿದ್ದ ಪರ್ವತವೇಷ್ಟಿತಪ್ರದೇಶದೊಳಗಿನ ಪ್ರತಿ ಒಂದು ದುರ್ಗವನ್ನೂ, ಪ್ರತಿ ಒಂದು ಪರ್ವತವನ್ನೂ, ಪ್ರತಿ ಒಂದು ಕಂದರವನ್ನೂ, ಪ್ರತಿ ಒಂದು ಖಿಂಡಿಯನ್ನೂ ಆತನು ಕಣ್ಣುಮುಟ್ಟಿ ನೋಡುತ್ತಿದ್ದನು. ಪ್ರತಿ ಒಂದು ದುರ್ಗದಲ್ಲಿ ಅನ್ನ ಸಾಮಗ್ರಿಯನ್ನು ಸಮೃದ್ಧವಾಗಿ ಒದಗಿಸಿ ಇಟ್ಟು, ಅಲ್ಲಿಯ ಸೈನ್ಯದ ವ್ಯವಸ್ಥೆಯನ್ನು ಉತ್ತಮರೀತಿಯಿಂದ ಮಾಡಿ, ದುರ್ಗದ ಬಾಗಿಲುಗಳನ್ನು ಹಾಕಿಸಿಬಿಟ್ಟನು. ತನ್ನ ಯಾವತ್ತು ಸೈನ್ಯವನ್ನೂ, ಮೇವಾಡದ ಎಲ್ಲ ಪ್ರಜೆಗಳನ್ನೂ ತನ್ನ ಸ್ಫೂರ್ತಿದಾಯಕವಾದ ಮಾತುಗಳಿಂದ ಉತ್ತೇಜನಗೊಳಿಸಿದನು. ಭರತಭೂಮಿಯ ಅಲಂಕಾರವಾಗಿದ್ದ ತಮ್ಮ ರಾಣಾನ ಸಲುವಾಗಿ ದೇಹಸಮರ್ಪಣಮಾಡುವ ನಿಶ್ಚಯವನ್ನು ಪ್ರತಿ ಒಬ್ಬ ಸೈನಿಕನು ಮಾಡಿದ್ದನು. ದುರ್ಗಾಧಿಪತಿಗಳು ತಮ್ಮ ತಮ್ಮ ಸೈನ್ಯಗಳೊಡನೆ ರಾಣಾನನ್ನು ಕೂಡಿದರು. ಶಕ್ತಿಸಿಂಹನು ಅಕಬರನ ಮುಂದೆ ಹೇಳಿದಂತೆ, ಎದುರಿಗೆ ನಿಂತು ಯುದ್ಧಮಾಡದ "ಭೂಮಿಯೂ"ಎಂಬ ಜನರು ತಮ್ಮ ಭೂಮಿಯ ಸಲುವಾಗಿ ಪ್ರಾಣಕೊಡಲಿಕ್ಕೆ ಸಿದ್ಧರಾದರು. ಮೇವಾಡದೊಳಗಿನ ಬೇರೆ ಕಾಡುಜನರಾದರೂ ಮಹಾರಾಣಾನ ಉತ್ತೇಜನಪರವಾದ ಭಾಷಣದಿಂದ ಯುದ್ಧಸನ್ನದ್ಧರಾದರು. ದಕ್ಷಿಣದಿಕ್ಕಿನಿಂದ ಭಿಲ್ಲಜನರೂ, ಪೂರ್ವದಿಕ್ಕಿನಿಂದ ಮೀರಜನರೂ, ಪಶ್ಚಿಮದಿಕ್ಕಿನಿಂದ ಮೀನಜನರೂ ಶತ್ರುಗಳನ್ನು ಜರ್ಜರಮಾಡುವ ತಮ್ಮ ಧನುರ್ಬಾಣಗಳನ್ನು ಧರಿಸಿ ರಜಪೂತ ಸೇನೆಯನ್ನು ಕೂಡಿದರು. ಮಳೆಗಾಲದ ನದೀ ಪ್ರವಾಹದಂತೆ ಪ್ರತಾಪನ ಸೇನೆಯು ಬರಬರುತ್ತ ತುಂಬಿ ಹೊರಸೂಸಹತ್ತಿತು. ಹೀಗೆ ಸಂಖ್ಯೆಯಿಂದಲೂ ಬಲದಿಂದಲೂ ಅಭಿವೃದ್ಧವಾಗುತ್ತಿರುವ ತನ್ನ ಮಹಾಸೇನೆಯನ್ನು ನೋಡಿ ಮಹಾರಾಣಾನ ಹೃದಯದಲ್ಲಿ ಚಿರಕಾಲದಿಂದ ಪೋಷಿತವಾಗಿದ್ದ ಆಶಾಂಕುರವು ಅಭಿವೃದ್ಧವಾಗಹತ್ತಿತು. ಈ ಮೇರೆಗೆ ಝುಂಝಾವಮಾರುತನಿಂದ ಕ್ಷುಬ್ಧವಾದ ಮಹಾಸಾಗರದಂತೆ ಯಾವತ್ತು ಮೇವಾಡದೇಶವು ಅಲ್ಲೋಲ-ಕಲ್ಲೋಲವಾಗಿ ರಣಮದದಿಂದ ಉನ್ಮತ್ತವಾಯಿತು.

ಶತ್ರುಗಳಿಗೆ ಪ್ರತಿಬಂಧವಾಗಬೇಕೆಂದು ಪ್ರತಾಪನು ಮೇವಾಡದ ಬೈಲುಭೂಮಿಯನ್ನು, ಅಂದರೆ ಬುನಾಸ ಮತ್ತು ರಬಿನದಿಗಳ ದಂಡೆಯ ಪ್ರದೇಶವನ್ನು ತಪೋಧನನ ಆಜ್ಞೆಯಂತೆ ಹಾಳುಗೆಡವಿದ್ದನಷ್ಟೇ? ಆ ಪ್ರದೇಶವು ತನ್ನ ಅಪ್ಪಣೆಯಂತೆ ನಿರ್ಮಾನುಷವಾಗಿ ಅರಣ್ಯಮಯವಾಗಿರುವದೋ ಇಲ್ಲವೋ ಎಂಬದನ್ನು ಯಾವಾಗಲೂ ಕಣ್ಣುಮುಟ್ಟಿ ನೋಡುತ್ತಿದ್ದನು. ಆತನು ತನ್ನ ಸಂಗಡ ಸ್ವಲ್ಪಸೈನ್ಯವನ್ನು ತಕ್ಕೊಂಡು ಆ ಪ್ರದೇಶದಲ್ಲಿ ಸಂಚರಿಸಿ ನೋಡಿದನು. ಆ ಪ್ರದೇಶದಲ್ಲಿ ಮನುಷ್ಯಾಕೃತಿಯು ಎಲ್ಲಿಯೂ ದೃಷ್ಟಿಗೆ ಬೀಳಲಿಲ್ಲ. ಯಾವತ್ತು ಪ್ರದೇಶದಲ್ಲಿ ಮನುಷ್ಯರ ಧ್ವನಿಯು ಎಲ್ಲಿಯೂ ಕೇಳಿಬರಲಿಲ್ಲ! ಪ್ರತಾಪನ ಸೈನ್ಯವನ್ನು ನೋಡಿ ಅಡವಿಯ ಹಕ್ಕಿಗಳ ಗುಂಪು ಭಯದಿಂದ ತಮ್ಮ ಗೂಡುಗಳನ್ನು ಬಿಟ್ಟು ಭುರ್ರನೆ ಹಾರಿ ಕಿಲಿಬಿಲಿ ಶಬ್ದ ಮಾಡುತ್ತ ಆಕಾಶದಲ್ಲಿ ಅಸ್ತವ್ಯಸ್ತವಾಗಿ ಸಂಚರಿಸಹತ್ತಿದವು. ಅರಣ್ಯದೊಳಗಿನ ಶ್ವಾಪದಗಳು ಅಂಜಿ ಓಡಿ ದಟ್ಟವಾದ ಅರಣ್ಯವನ್ನು ಸೇರಹತ್ತಿದವು. ಮುಳ್ಳು ತುಂಬಿದ ಜಾಲಿಯ ಗಿಡಗಳಿಂದಲೂ, ಬೇರೆ ಅಡವಿಯ ಗಿಡಬಳ್ಳಿಗಳಿಂದಲೂ ಆ ವಿಸ್ತೀರ್ಣವಾದ ಪ್ರದೇಶವು ತುಂಬಿಹೋಗಿತ್ತು. ಇಂಥ ನಿರ್ಜನವಾದ ಅರಣ್ಯಪ್ರದೇಶದಲ್ಲಿ ಸಂಚರಿಸುತ್ತ ಪ್ರತಾಪಸಿಂಹನು ಮನಸ್ಸಿನಲ್ಲಿ— ಸಮಗ್ರ ಮೇವಾಡದೇಶವು ಈ ಪ್ರಕಾರ ಯಾವಾಗಲೂ ಅರಣ್ಯಮಯವಾಗಿಯೇ ಇರಲಿ; ಆದರೆ ನಮ್ಮ ಪವಿತ್ರವಾದ ಈ ಜನ್ಮಭೂಮಿಯು ಮೊಗಲರ ಕೈಸೇರಿ ಎಂದೂ ಕಲಂಕಿತವಾಗಬೇಡ, ಎಂದು ಅಂದುಕೊಂಡನು. ದಿನಾಲು ಈ ಪ್ರಕಾರ ಯುದ್ಧದ ಸಿದ್ಧತೆಯ ಕಾರ್ಯವನ್ನು ನೆರವೇರಿಸಿ ಸಾಯಂಕಾಲದಲ್ಲಿ ಮಹಾರಾಣಾನು ತನ್ನ ಪರ್ವತದ ಕಂದರಕ್ಕೆ ಬರುತ್ತಿದ್ದನು. ಆಗ ಆತನ ಪಟ್ಟಾಭಿಷಿಕ್ತ ಮಹಾರಾಜ್ಞಿಯಾದ ಪದ್ಮಾವತಿಯು ತನ್ನ ಕೈಮುಟ್ಟಿ ಒಲೆಹೊತ್ತಿಸಿ ಅಡಿಗೆಯನ್ನು ಮಾಡುತ್ತಿದ್ದಳು. ರಾಜಪುತ್ರರೂ, ರಾಜಕನ್ಯಯರೂ ಹೀನವೇಷದಿಂದ ಆಕೆಯ ಬಳಿಯಲ್ಲಿ ಕ್ರೀಡಿಸುತ್ತಿದ್ದರು. ಹಾಯ್ ಹಾಯ್! ದಯಾಹೀನವಾದ ದೈವದ ವಿಲಾಸವು ವಿಚಿತ್ರವಾದದ್ದು; ಆದರೆ ಮಹಾನುಭಾವನಾದ ವ್ರತಸ್ಥ ಪ್ರತಾಪಸಿಂಹನು ಇದನ್ನು ನೋಡಿ ಎಂದೂ ಅಸಮಾಧಾನಪಡುತ್ತಿದ್ದಿಲ್ಲ. ಆತನು ತನ್ನ ರಣವೇಷವನ್ನು ಕಳಚಿ ತೆಗೆದಿಡುವಾಗ ಒಮ್ಮೊಮ್ಮೆ ತನ್ನ ಕುಟುಂಬದವರ ಈ

ಹೀನಸ್ಥಿತಿಯನ್ನು ನೋಡಿ—ಜಗದೀಶ್ವರನೇ, ನಿನ್ನ ಇಚ್ಛೆಯೇ ಇದ್ದರೆ ನಮ್ಮ ಅಮರಸಿಂಹನೂ, ಆತನ ಮಾತೆಯೂ ಚಿರಕಾಲ ಹೀಗೆಯೇ ಇದೇ ಪರ್ವತಕಂದರದಲ್ಲಿ ವಾಸಿಸಲಿ; ಆದರೆ ಮೊಗಲರ •ದಾಸರಾಗಿ ಭವ್ಯವಾದ ರಾಜಪ್ರಾಸಾದದೊಳಗೆ ವಾಸಿಸುವ ಹೀನಪ್ರಸಂಗವನ್ನು ಅವರಪಾಲಿಗೆ ತರ ಬೇಡ, ಎಂದು ದೇವರನ್ನು ಪ್ರಾರ್ಥಿಸುತ್ತಿದ್ದನು!

ಈ ಮೇರೆಗೆ ಕೆಲವು ತಿಂಗಳು ಕ್ರಮಿಸಿದವು. ಮಹಾರಾಣಾನು ಕ್ಷಣ ವಾದರೂ ವಿಶ್ರಾಂತಿಯನ್ನು ಪಡೆಯದೆ ಯುದ್ಧದ ಸೌರಣೆಯಲ್ಲಿ ತೊಡಗಿ ದ್ದನು. ಅಷ್ಟರಲ್ಲಿ ಸಾಮ್ರಾಟ್ ಅಕಬರನ ಪುತ್ರನಾದ ಸೇಲೀಮನು, ಅಂಬರೇಶ್ವರ ಮಹಾರಾಜಮಾನಸಿಂಗನೊಡನೆ ಅಗಣಿತ ಸೈನ್ಯವನ್ನು ಕೂಡಿ ಕೊಂಡು ಮೇವಾಡದ ಮೇಲೆ ಸಾಗಿಬಂದನು. ತಮ್ಮ ಬಾಹುಬಲವು ಒರೆಗೆ ಹತ್ತುವ ಪ್ರಸಂಗವೊದಗಿದ್ದನ್ನು ನೋಡಿ ಮಹಾರಾಣಾ ಪ್ರತಾಪಸಿಂ ಹನೂ, ಆತನ ಸೇನಾನಾಯಕನೂ ಸ್ಫೂರ್ತಿಗೊಂಡರು. ಸಮುದ್ರದ ತೆರೆ ಗಳಂತೆ ಮೊಗಲ ಸೈನ್ಯವು ಮೇವಾಡದೇಶವನ್ನು ವ್ಯಾಪಿಸಿ ಅದರ ಬಾಹ್ಯ ಪ್ರದೇಶವನ್ನು ಹಾ ಹಾ ಅನ್ನುವದರೊಳಗಾಗಿ ಕೈವಶಮಾಡಿಕೊಂಡಿತು. ಚತುರಚೂಡಾಮಣಿಯಾದ ಪ್ರತಾಪನು ಮೊಗಲರ ಈ ಕೃತಿಗೆ ಎಷ್ಟುಮಾತ್ರ ವೂ ಪ್ರತಿಬಂಧಮಾಡಲಿಲ್ಲ. ಹೀಗೆ ಮೊಗಲಸೈನ್ಯವು ನಿರಾತಂಕವಾಗಿ ಮೇವಾಡದ ಒಂದೊಂದು ಭಾಗವನ್ನು ಸ್ವಾಧೀನಪಡಿಸಿಕೊಳ್ಳುತ್ತ, ಪ್ರತಾಪ ಸಿಂಹನು ಸಂರಕ್ಷಣದ ಅತ್ಯುತ್ತಮಸಿದ್ಧತೆಯನ್ನು ಮಾಡಿಕೊಂಡು ಕುಳಿತಿದ್ದ ಗುಡ್ಡಗಾಡ ಪ್ರದೇಶದ ಬಳಿಗೆ ಬಂದಿತು; ಆದರೆ ಆ ಸೈನ್ಯದ ಗತಿಯು ಅಲ್ಲಿಗೆ ಕಟ್ಟಾಯಿತು. ಆ ಗುಡ್ಡಗಾಡಸೀಮೆಯ ಪ್ರವೇಶಮಾರ್ಗವನ್ನು ಪ್ರತಾಪ ಸಿಂಹನು ಕಟ್ಟುಮಾಡಿದ್ದನು. ಆ ದ್ವಾರವೆಂದರೆ ರಾಜಸ್ಥಾನದ ಇತಿಹಾಸ ದಲ್ಲಿ ಪ್ರಸಿದ್ಧವಾದ ಹಳದೀಘಟ್ಟದ ಖಿಂಡಿಯೆಂಬದನ್ನು ವಾಚಕರು ಲಕ್ಷ ದಲ್ಲಿಡತಕ್ಕದ್ದು. ಅದು ಒಂದು ಬಂಡಿಹೋಗುವಷ್ಟು ಮಾತ್ರ ಅಗಲವಾ ಗಿತ್ತು. ಈ ಖಿಂಡಿಯ ಒಂದುಮಗ್ಗಲಿನಲ್ಲಿ ಕಮಳನೇರ ದುರ್ಗವೂ, ಎರಡ ನೆಯ ಮಗ್ಗಲಲ್ಲಿ ಮೀರಪುರದ ಉಚ್ಚ ಶೈಲಶೃಂಗದ ವಿಭಾಗವೂ ಒಪ್ಪುತ್ತಿ ದ್ದವು. ಅರವಲೀಪರ್ವತದ ವಿಸ್ತೀರ್ಣಗಿರಿಶ್ರೇಣಿಯು ಬಹುದೂರದವರೆಗೆ ಹಬ್ಬಿತ್ತು. ಅದರ ಸುತ್ತು ಮುತ್ತು ನಿಬಿಡವಾದ ಅರಣ್ಯವು ಪಸರಿಸಿತ್ತು.

ಆಸ್ಥಾನದ ರಮಣೀಯತ್ವವನ್ನು ಇಷ್ಟೆಂದು ವರ್ಣಿಸುವಹಾಗಿದ್ದಿಲ್ಲ. ಇಪ್ಪತ್ತೆರಡುಸಾವಿರ ಶೂರ ರಜಪೂತವೀರರು ಆ ಮಾರ್ಗವನ್ನು ರಕ್ಷಿಸುತ್ತಲಿದ್ದರು. ಇನ್ನು ಮುಂದೆ ಏನು ಮಾಡಬೇಕೆಂಬ ವಿಚಾರವು ಮಾನಸಿಂಗನ ಮನಸ್ಸಿನಲ್ಲಿ ಉತ್ಪನ್ನವಾಯಿತು. ಆತನು ಚಿಂತಾಕ್ರಾಂತನಾಗಿ ಹಳದೀಘಾಟದಿಂದ ಸ್ವಲ್ಪ ಅಂತರದಮೇಲೆ ತಳಊರಬೇಕೆಂದು ಮೊಗಲಸೈನ್ಯಕ್ಕೆ ಅಜ್ಞಾಪಿಸಿದನು. ಹಾಯ್ ಹಾಯ್! ಜ್ಞಾತಿವಿರೋಧದಂಥ ವಿರೋಧವು ಬೇರೆಯಾವದೂ ಇಲ್ಲ. ಈ ವಿರೋಧದ ಮೂಲಕವಾಗಿಯೇ ಇಂದು ರಜಪೂತ ಕುಲತಿಲಕನಾದ ಮಹಾರಾಜ ಮಾನಸಿಂಗನು, ರಜಪೂತಕುಲಾವತಂಸನಾದ ಮಹಾರಾಣಾ ಪ್ರತಾಪಸಿಂಹನೊಡನೆ ಭಯಂಕರ ಶತ್ರುವಾಗಿ ಯುದ್ಧಕ್ಕೆ ಸನ್ನದ್ಧನಾಗುತ್ತಲಿದ್ದನು.

ಕೃಷ್ಣಪಕ್ಷದ ರಾತ್ರಿಯು. ಎಲ್ಲ ಕಡೆಯಲ್ಲಿ ಘೋರವಾದ ಅಂಧಕಾರವು ಪಸರಿಸಿರುತ್ತದೆ. ಮೊಗಲಸೈನ್ಯದಲ್ಲಿ ಹಲವು ಡೇರೆಗಳು ನಿಲ್ಲಿಸಲ್ಪಟ್ಟವೆ. ಛಾವಣಿಯೊಳಗಿನ ಅಸಂಖ್ಯದೀಪಜ್ಯೋತಿಗಳ ಪ್ರಕಾಶದಿಂದ ಅಂಧಕಾರಮಯ ಪರ್ವತಪ್ರದೇಶವು ಸ್ವಲ್ಪ ಪ್ರಕಾಶಿತವಾಗಿರುತ್ತದೆ. ಮೊಗಲ ಸೈನಿಕರು ಬೈಲಿಗೆ ಕುಳಿತು ಆನಂದದಿಂದ ಮಾತಾಡುತ್ತಲಿದ್ದಾರೆ. ನಡನಡುವೆ ಅವರ ಅಟ್ಟಹಾಸದ ಧ್ವನಿಗಳು ಕೇಳಬರುತ್ತಲಿವೆ. ವೀರರು ಮರಣಕ್ಕೆ ಸ್ವಲ್ಪವಾದರೂ ಬೆದರುವದಿಲ್ಲೆಂಬ ಮಾತಿನ ಉದಾಹರಣವನ್ನು ಅಲ್ಲಿ ಸ್ಪಷ್ಟವಾಗಿ ಕಾಣಬಹುದಾಗಿದೆ. ಇಂಥ ಪ್ರಸಂಗದಲ್ಲಿ ಅಂಬರಾಧೀಶ್ವರನಾದ ಮಾನಸಿಂಗನು ಸೇನಾಪತಿಯಾದ ಸೇಲೀಮನ ಕೆಂಪು ಕಿನಕಾಫಿನ ಡೇರೆಯ ಕಡೆಗೆ ಸಾಗಿದ್ದನು. ಆ ಡೇರೆಯು ಅಸಂಖ್ಯದೀಪಗಳಿಂದಲೂ, ಹಲವು ಬಣ್ಣದ ನಿಶಾನೆಗಳಿಂದಲೂ ಶೋಭಿಸುತ್ತಲಿತ್ತು. ಆ ವಿಶಾಲವಾದ ತಂಬುವಿನಲ್ಲಿ ಯುವರಾಜನಾದ ಸೇಲೀಮನು ಒಂದು ಸುಖಶಯ್ಯೆಯಮೇಲೆ ಬಿದ್ದುಕೊಂಡು, ಪ್ರಫುಲ್ಲಿತಚಿತ್ತದಿಂದ ಗಾಯನವನ್ನು ಕೇಳುತ್ತಲಿದ್ದನು. ಆತನ ಬಳಿಯಲ್ಲಿದ್ದ ಒಂದು ಸುಂದರವಾದ ಪೀಠದ ಮೇಲೆ ಮದ್ಯದಿಂದ ತುಂಬಿದ ಒಂದು ಸುವರ್ಣಪಾತ್ರೆಯೂ, ಮದ್ಯಪ್ರಾಶನದ ಒಂದು ಚಿಕ್ಕ ಪಾತ್ರೆಯೂ, ಬೇರೆಯೊಂದು ಸುವರ್ಣಪಾತ್ರವೂ ಇಟ್ಟಿದ್ದವು. ಮಧುರ ಕಂಠದ ಕೆಲವು ಪ್ರಮದೆಯರು ಅಪ್ಸರೆಯರಂತೆ ಗಾಯನಮಾಡುತ್ತ ಸೇಲೀ

ಮನ ಬಳಿಯಲ್ಲಿ ಕುಳಿತುಕೊಂಡಿದ್ದರು. ಯುವರಾಜನ ಶರೀರವು ದೀರ್ಘ, ಸುಂದರ, ಅತ್ಯಂತ ಬಲಿಷ್ಠವಾದದ್ದು. ಆತನ ಉನ್ನತವಾದ ಲಲಾಟಪ್ರದೇಶವು ಪ್ರಶಸ್ತವಾಗಿ ಒಪ್ಪುತ್ತಿತ್ತು. ಮರುದಿನ ಘನಘೋರ ಯುದ್ಧದ ಪ್ರಸಂಗವು ಒದಗತಕ್ಕದ್ದಾಗಿದ್ದರೂ, ಆ ಯುವರಾಜನ ಮುಖಮುದ್ರೆಯಲ್ಲಿ ಚಿಂತೆಯ ಲಕ್ಷಣವು ಲೇಶವಾದರೂ ತೋರುತ್ತಿದ್ದಿಲ್ಲ. ಆತನ ಸುಂದರ ಮುಖಮಂಡಲವು ಚಿಂತಾಹೀನವಾಗಿ ಹಾಸ್ಯರಂಜಿತವಾಗಿ ಒಪ್ಪುತ್ತಿತ್ತು. ಗಾಯನದಲ್ಲಿ ಮಗ್ನನಾಗಿದ್ದ ಆ ಯವರಾಜನು ಮಾನಸಿಂಗನು ಬಂದ ಸುದ್ದಿಯನ್ನು ಕೇಳಿ ಗಾಯಕಿಯರನ್ನು ಅಪ್ಪಣೆಕೊಟ್ಟು ಕಳುಹಿಸುತ್ತಿರಲು, ಮಾನಸಿಂಹನು ಡೇರೆಯೊಳಗೆ ಬಂದನು. ಆತನು ಮೊದಲು ಯುವರಾಜನನ್ನು ನಮ್ರಭಾವದಿಂದ ವಂದಿಸಿದನು. ಆಗ ಸೇಲೀಮನು ಹಾಸ್ಯಮುಖದಿಂದ ಆತನ ಸಲಾಮನ್ನು ತಕ್ಕೊಂಡು ಆತನೊಡನೆ ಡೇರೆಯೊಳಗಿನದೊಂದು ಗುಪ್ತಭಾಗವನ್ನು ಪ್ರವೇಶಿಸಿದನು. ಬಾಗಿಲಿಕ್ಕಿದ ಬಳಿಕ ಅವರು ತಮ್ಮ ತಮ್ಮ ಆಸನಗಳ ಮೇಲೆ ಕುಳಿತುಕೊಂಡರು. ಆಗ ಸೇಲೀಮನು ಅಂಬರೇಶ್ವರನನ್ನು ಕುರಿತು-

ಸೇಲೀಮ—ಅಂಬರೇಶ್ವರ, ತಾವು ಶತ್ರುಗಳ ಯುದ್ಧದ ಸೌರಣೆಯನ್ನು ಅರಿತಿರಬಹುದು. ಇನ್ನು ಯುದ್ಧವನ್ನು ಎಂದು ಆರಂಭಿಸತಕ್ಕದ್ದು ?

ಮಾನಸಿಂಹ (ನಮ್ರಭಾವದಿಂದ)—ಶತ್ರುವಿನೊಡನೆ ಯುದ್ಧವನ್ನು ನಾಳಿಯೇ ಆರಂಭಿಸುವದು ಯೋಗ್ಯವೆಂದು ಈ ದಾಸನಿಗೆ ತೋರುತ್ತದೆ. ಮಳೆಗಾಲವು ಸಮೀಪಿಸಿತು. ದಿಲ್ಲೀಶ್ವರನ ಕಾರ್ಯವು ಬೇಗನೆ ಆದಷ್ಟು ನೆಟ್ಟಗೆ.

ಸೇಲೀಮ—ನನ್ನ ಮತವಾದರೂ ತಮ್ಮ ಹಾಗೆಯೇ ಇರುತ್ತದೆ. ದಿಲ್ಲೀಶ್ವರನ ಪರಾಕ್ರಮಶಾಲಿಯಾದ ಸೈನ್ಯದ ಮುಂದೆ ಮೇವಾಡದ ರಜಪೂತರ ಸೈನ್ಯವು ಈವೊತ್ತಿನವರೆಗೆ ಈಡಾಗಿ ನಿಂತಿರುವದಿಲ್ಲ. ನಾಳೆ ಹಾ ಹಾ ಅನ್ನುವದರೊಳಗೆ ರಜಪೂತರ ಸೈನ್ಯದ ದೂಳವನ್ನು ಹಾರಿಸಿಬಿಡೋಣ !

ಮಾನಸಿಂಗ—ಆದರಲ್ಲೇನು ಸಂಶಯವೇ ಇಲ್ಲೆನ್ನಿರಿ; ಆದರೆ, ಹುಜೂರಿನ ಅಪ್ಪಣೆಯಾದಲ್ಲಿ ಈಗ ಹೇಳಿಕೊಳ್ಳುವದೇನಂದರೆ, ನಾಳಿನ ಯುದ್ಧವು ನಿಜವಾದ ಶೌರ್ಯಕ್ಕೆ ಒಪ್ಪುವಂತೆ ಆಗುವದು! ನಾಳೆ ರಜಪೂತ

ರಾದರೂ ಅಪೂರ್ವ ಪರಾಕ್ರಮವನ್ನು ತೋರಿಸುವರು. ಮೇವಾಡದ ಮೇಲೆ ದಂಡೆತ್ತಿ ಬಂದಾಗಿನಿಂದ ಈವೊತ್ತಿನವರೆಗೆ ನಮಗಾಗಿರುವ ಶ್ರಮವು, ನಾಳಿನ ಯುದ್ಧದಲ್ಲಾಗುವ ಶ್ರಮದ ಪಾಸಂಗಕ್ಕೆ ಹತ್ತಲಾರದೆಂಬದು ತಮ್ಮ ಅನುಭವಕ್ಕೆ ಬರಬಹುದು.

ಸೇಲೀಮ--ಅಂಬರೇಶ್ವರ, ತಮ್ಮ ಮಾತಿನ ಕಲ್ಪನೆಯು ನನಗೆ ಚೆನ್ನಾಗಿ ಇರುತ್ತದೆ. ತೈಮೂರಲಿಂಗನ ವಂಶದಲ್ಲಿ ಜನ್ಮತಾಳಿದ ನಮ್ಮಂಥ ವೀರರಿಗೆ ಘನಘೋರ ಯುದ್ಧವೇ ಆನಂದಪ್ರದವಾಗಿರುವದು! ಆದರೆ ನಾಳಿನ ಯುದ್ಧವು ಎಷ್ಟು ಹೊತ್ತು ನಡೆಯಬಹುದು? ಹುಲಿಯೊಡನೆ ನಡೆದ ಚಿಗರಿಯ ಯುದ್ಧವು ಎಷ್ಟು ಹೊತ್ತು ಸಾಗೀತು? ನನ್ನ ತಂದೆಯ ಮಹಾ ಸೈನ್ಯದಮುಂದೆ ಆ ಅಂಜಬುರುಕ ಪ್ರತಾಪನಿಗೆ ಓಡಿಹೋಗಲಿಕ್ಕೆ ಭೂಮಿಯು ಸಾಲಲಿಕ್ಕಿಲ್ಲ!

ಮಾನಸಿಂಗ—ತಮ್ಮ ತಂದೆಯ ಅಸಂಖ್ಯ ಸೈನ್ಯದ ಮುಂದೆ ನಿಲ್ಲು ವಂಥ ಪ್ರತಾಪಶಾಲಿಯಾದ ಸೈನ್ಯವು ಇಡಿಯ ಭರತಖಂಡದಲ್ಲಿ ಎಲ್ಲಿಯೂ ಇರುವದಿಲ್ಲ! ದಿಲ್ಲೀಶ್ವರನ ಪರಾಕ್ರಮಶಾಲಿಯಾದ ಸೈನ್ಯದ ವಿಜಯವು ಯಾ ವಾಗಲೂ ಹೀಗೆಯೇ ಆಗಲಿ; ಆದರೆ ಪ್ರತಾಪಸಿಂಹನು ತಮ್ಮ ಸೈನ್ಯದ ಮುಂದೆ ಒಮ್ಮೆಲೆ ಓಡಿಹೋದಾನೆಂಬಂತೆ ನನಗೆ ತೋರುವದಿಲ್ಲ. ಈ ದಾಸನಿಗೆ ಪ್ರತಾಪಸಿಂಹನ ಗುರುತು ಚೆನ್ನಾಗಿ ಇರುವದು.

ಈ ಮೇರೆಗೆ ಸಂಭಾಷಣವಾದ ಬಳಿಕ ಮರುದಿವಸ ಯುದ್ಧವನ್ನು ಆರಂಭಿಸಬೇಕೆಂದು ನಿಶ್ಚಯವಾಗಿ ಮಾನಸಿಂಗನು ತನ್ನ ಡೇರೆಗೆ ಹೊರಟು ಹೋದನು. ಆದೇಕಾಲದಲ್ಲಿ ಅತ್ತ ಪ್ರತಾಪಸಿಂಹನು ತನ್ನ ಮುಖ್ಯ ಮುಖ್ಯ ಸರದಾರರನ್ನೂ, ಸೇನಾನಾಯಕರನ್ನೂ ಕರೆಸಿ, ಅವರವರ ಪೂರ್ವಜರ ಪರಾ ಕ್ರಮವನ್ನು ಬೇರೆಬೇರೆಯಾಗಿ ವರ್ಣಿಸಿ ಪ್ರೋತ್ಸಾಹಗೊಳಿಸಿ ಒಟ್ಟಿನಿಂದ ಅವರನ್ನು ಕುರಿತು—ವೀರರೇ, ನಿಮ್ಮನ್ನು ಇಲ್ಲಿಗೆ ಕರೆಸಿದ ಕಾರಣವು ನಿಮಗೆ ಗೊತ್ತಾಗಿರಬಹುದು. ನೀವು ನಿಮ್ಮ ನಿಮ್ಮ ಸೈನ್ಯವನ್ನು ಕಟ್ಟಿ ಕೊಂಡು ಕಮಳನೇರಕ್ಕೆ ಬಂದ ಕಾರಣವನ್ನು ನಾನು ವಿಸ್ತರಿಸಿ ಹೇಳಲವಶ್ಯ ವಿಲ್ಲ. ನಮ್ಮ ಜನ್ಮಭೂಮಿಯ ವಿರುದ್ಧವಾಗಿ ಯಾವತ್ತು ಭರತವರ್ಷದ ಸೈನ್ಯವು ಮೇಘಗಳ ಗುಂಪಿನಂತೆ ಒಟ್ಟುಗೂಡಿ ಹಳದೀಘಾಟದ ಬಳಿಯಲ್ಲಿ

ಬೀಡುಬಿಟ್ಟಿರುವದು. ಮೇವಾಡದ ಬೆಳೆಯುಳ್ಳ ಪ್ರದೇಶದಲ್ಲಿ ದಟ್ಟಾಗಿಬೆಳೆದ ಅರಣ್ಯಪ್ರದೇಶಗಳನ್ನು ದಾಟಬರಲಿಕ್ಕೆ ಸುಲಭವಾದಷ್ಟು, ಇನ್ನು ಮೇವಾಡದ ಪರ್ವತಪ್ರದೇಶವನ್ನು ಪ್ರವೇಶಿಸಲಿಕ್ಕೆ ಸುಲಭವಾಗದೆಂದು ಮೊಗಲ ಸೈನ್ಯಕ್ಕೆ ಚನ್ನಾಗಿ ಗೊತ್ತಾಗಬಹುದು. ಕಿಂಬಹುನಾ, ಅಲ್ಲಿ ಅವರ ಪ್ರವೇಶವಾಗುವದೇ ದುರ್ಘಟವೆಂದು ಅವರು ತಿಳಕೊಳ್ಳಬೇಕಾದೀತು. ಬಂಧುಗಳೇ, ನೀವೆಲ್ಲರೂ ಬಾಪ್ಪಾರಾವಳನ ಪವಿತ್ರವಂಶದಲ್ಲಿ ಜನ್ಮತಾಳಿರುತ್ತೀರಿ. ಅಂದಬಳಿಕ ಮೊಗಲರ ಮುಂದೆ ತಲೆಬಾಗಿಸಿ ಆ ಪವಿತ್ರವಂಶಕ್ಕೆ ಕಲಂಕವನ್ನುಂಟುಮಾಡಲಿಕ್ಕೆ ಯಾರು ಮನಸ್ಸು ಮಾಡೀರಿ? ದುರ್ದೈವದಿಂದ ಇಂಥ ಅಮಂಗಲಪ್ರಸಂಗವು ಒದಗುವದಕ್ಕಿಂತ ಸಂಪೂರ್ಣ ಸಿಸೋದಿಯಾವಂಶವು ಜಗತ್ತಿನೊಳಗಿಂದ ಪೂರ್ಣ ನಿಃಪಾತವಾಗಿ ಹೋಗುವದು ನೆಟ್ಟಗೆ. ಸುಂದರವಾದ ಮೇವಾಡಪ್ರಾಂತದೊಳಗಿನ ಪರ್ವತಗಳು, ಖಿಂಡಿಗಳು, ಬೆಳೆಯುಳ್ಳ ಪ್ರದೇಶಗಳು, ಅರಣ್ಯಗಳು, ಗಿರಿದುರ್ಗಗಳು ಇವೇ ಮೊದಲಾದವುಗಳೆಲ್ಲವೂ ಅಪಾರವಾದ ಸಮುದ್ರದಲ್ಲಿ ಮುಣುಗಿಹೋಗಲಿ! ಆದರೆ ಸ್ವಾತಂತ್ರ್ಯವನ್ನು ಕಳಕೊಳ್ಳಬೇಡಿರಿ. ವೀರರೇ, ಪ್ರತಾಪಸಿಂಹನು ತನ್ನ ತಾಯಿಯ ಮುಖವನ್ನು ತನ್ನ ಪರಾಕ್ರಮದಿಂದ ಉಜ್ವಲವಾಗಿ ಮಾಡುವನು. ಬದುಕಿರುವವರೆಗೆ ಆತನು ಒಂದೇಸವನೆ ಮೊಗಲರೊಡನೆ ಯುದ್ಧಮಾಡುತ್ತಲಿರುವನು. ವೀರ್ಯಶಾಲಿಗಳಾದ ಪೂರ್ವಪುರುಷರ ಬಲವು ನಿಮ್ಮ ಬಾಹುಗಳಲ್ಲಿರುವದೋ ಇಲ್ಲವೋ ಎಂಬದನ್ನು ಆತನು ಚನ್ನಾಗಿ ಪರೀಕ್ಷಿಸುವನು. ಅನ್ನಲು, ಯಾವತ್ತು ವೀರರು ತಮ್ಮ ಒಪ್ಪಿಗೆಯನ್ನು ವ್ಯಕ್ತಮಾಡುವದಕ್ಕಾಗಿ ತಮ್ಮ ತಮ್ಮ ಖಡ್ಗಗಳನ್ನು ಒರೆಗಳಿಂದ ಹಿರಿದು ಪ್ರತಾಪಸಿಂಹನನ್ನು ಸಂತೋಷಗೊಳಿಸಿದರು. ಅವರು ತಾವು ಮೊಗಲರನ್ನು ಅಡ್ಡಗಟ್ಟಿ ತುಂಡರಿಸಲಿಕ್ಕೆ ಸಿದ್ಧರಿರುವೆವೆಂದು ನುಡಿಯಲು ಸಭಾಕಾರ್ಯವು ಪೂರ್ಣವಾಯಿತು.

೯ನೆಯ ಪ್ರಕರಣ

# ಸಂಗ್ರಾಮ ಸಂಭ್ರಮ.

ಬಾದಶಹನ ಸೈನ್ಯವು ತನ್ನ ದೇಶದ ಬೈಲು ಸೀಮೆಯನ್ನು ಕೈವಶ ಮಾಡಿಕೊಂಡು ಹಳದಿಯ ಘಾಟದ ಬಳಿಯಲ್ಲಿ ಬೀಡುಬಿಟ್ಟು ಕುಳಿತು, ಯುದ್ಧಕ್ಕೋಸ್ಕರ ಆತುರಪಡುತ್ತಿರುವದನ್ನು ನೋಡಿ ಪ್ರತಾಪಸಿಂಹನು ತನ್ನ ಕಮಳನೇರ ರಾಜಧಾನಿಯಿಂದ ಹೊರಟು ಪಶ್ಚಿಮನಿಟ್ಟಿನಲ್ಲಿರುವ ಋಖಭನಾಥವೆಂಬ ಸ್ಥಾನದ ಕಡೆಗೆ ಸಾಗಿದನು. ಋಖಭನಾಥಸ್ಥಾನವು ಭಯಂಕರವಾದ ಪರ್ವತಗಳಿಂದಲೂ, ಕಂದರಗಳಿಂದಲೂ, ನದಿಗಳಿಂದಲೂ ಸುತ್ತಲ್ಪಟ್ಟಿರುವದು. ಆ ಸ್ಥಾನಕ್ಕೆ ಹೋಗಲಿಕ್ಕೆ ತೀರ ಇಕ್ಕಟ್ಟಾದ, ಅಂದರೆ ಒಂದು ಬಂಡಿಯು ಮಾತ್ರ ಹೋಗುವಷ್ಟು ಅಗಲವಾದ ಮಾರ್ಗವಿದ್ದು, ಆ ಮಾರ್ಗದ ಎಡಬಲಗಳಲ್ಲಿ ಉನ್ನತವಾದ ಪರ್ವತಶ್ರೇಣಿಗಳು ಹಬ್ಬಿರುತ್ತವೆ. ಪ್ರತಾಪನು ತನ್ನ ಇಂಥ ದುರ್ಗಮಸ್ಥಾನದ ಕಡೆಗೆ ಸಾಗಿ, ಅಲ್ಲಲ್ಲಿ ಪರ್ವತಗಳ ಮೇಲೆ ಶೂರರಾದ ರಜಪೂತ ಸರದಾರರನ್ನು ಅವರ ವೀರಪರಿವಾರದೊಡನೆ ಇಟ್ಟನು. ಆ ಪ್ರಾಂತದ ಮೂಲನಿವಾಸಿಗಳಾದ ಭಿಲ್ಲರು ತಮ್ಮ ಹಳೇ ಆಯುಧಗಳನ್ನು ತಕ್ಕೊಂಡು, ಧನುಷ್ಯಬಾಣಗಳಿಂದ ಸಜ್ಜಾಗಿ, ಹೊತ್ತು ಬಿದ್ದರೆ ಶತ್ರುಗಳಮೇಲೆ ಒಗೆಯುವದಕ್ಕೆ ದೊಡ್ಡ ದೊಡ್ಡ ದುಂಡಿಗಳನ್ನು ಇಟ್ಟುಕೊಂಡು ರಜಪೂತರಿಗೆ ಸಹಾಯಮಾಡಲಿಕ್ಕೆ ಸಿದ್ಧರಾಗಿದ್ದರು. ಈ ಮೇರೆಗೆ ವ್ಯವಸ್ಥೆಮಾಡಿದ ಪ್ರತಾಪಸಿಂಹನು ಸ್ವತಃ ಉತ್ಸಾಹಶಾಲಿಯಾಗಿ ತನ್ನ ಕೆಂಪುಮಂಜಿಯ ಬಣ್ಣದ ನಿಶಾನಿಯನ್ನು ತನ್ನ ಸೈನ್ಯದ ಮುಂಭಾಗದಲ್ಲಿ ಊರಿದ್ದನು. ಆತನ ಸೈನಿಕರು ಕಾದಲಿಕ್ಕೆ ಸಿದ್ಧರಾಗಿದ್ದರು. ಅತ್ತ

ಮೊಗಲಸೈನ್ಯವೂ ಯುದ್ಧಕ್ಕೆ ಸಿದ್ಧವಾಯಿತು. ಯುದ್ಧದ ಉಪಕರಣಗಳ ಸಂಬಂಧದಿಂದ ಮೊಗಲರ ಸೈನ್ಯವು ಪ್ರತಾಪನ ಸೈನ್ಯಕ್ಕಿಂತ ಶ್ರೇಷ್ಠವಾಗಿತ್ತೆಂದು ಹೇಳಬಹುದಾಗಿತ್ತು. ರಜಪೂತರ ಸೈನ್ಯದಲ್ಲಿ ತೋಫುಗಳಿದ್ದಿಲ್ಲ. ಈ ಕೊರತೆಯೇ ಅವರ ಅಪಜಯಕ್ಕೆ ಮುಖ್ಯಕಾರಣವಾಯಿತೆಂದು ಹೇಳಬಹುದು; ಆದರೂ ರಜಪೂತರು ಖಡ್ಗಯುದ್ಧದಲ್ಲಿ ಇಡಿಯ ಜಗತ್ತಿಗೆ ಮಿಗಿಲಾಗಿದ್ದರೆಂದು ಹೇಳಬಹುದು. ಮಾನಸಿಂಗನ ಸೂಚನೆಯಂತೆ ಮರುದಿವಸವೇ ಯುದ್ಧಕ್ಕೆ ಆರಂಭವಾಯಿತು. ಹಳದಿಯ ಘಾಟದ ಇಕ್ಕಟ್ಟಾದ ಖಿಂಡಿಯ ಎರಡೂ ಮಗ್ಗಲುಗಳಲ್ಲಿ ಇಪ್ಪತ್ತೆರಡು ಸಾವಿರ ರಜಪೂತವೀರರು ಶತ್ರುಗಳ ದೂಳಹಾರಿಸುವದಕ್ಕಾಗಿ ಸಜ್ಜಾಗಿ ನಿಂತರು. ಅವರ ವೀರಶ್ರೀಯೂ, ಅಪೂರ್ವಸಾಹಸವೂ ವರ್ಣನಾತೀತವಾಗಿದ್ದವು. ರಜಪೂತರು ನಾಲ್ಕೂಕಡೆಯಿಂದ ತಮ್ಮ ತಮ್ಮ ಕುಲಾಧಿಪತಿಗಳನ್ನು ರಕ್ಷಿಸುತ್ತ ಶತ್ರುಗಳೊಡನೆ ಭಯಂಕರವಾಗಿ ಕಾದಹತ್ತಿದರು. ಒಮ್ಮೊಮ್ಮೆ ಅವರು ದೂರದಿಂದ ಶತ್ರುಗಳಮೇಲೆ ಬಾಣಗಳ ಮಳೆಯನ್ನು ಸುರಿಸುತ್ತಲಿದ್ದರು; ಒಮ್ಮೊಮ್ಮೆ ಸೇನಾನಾಯಕರ ಅಪ್ಪಣೆಯಾಗಲು, ಮಳೆಗಾಲದ ನದಿಗಳ ತೆರೆಗಳಂತೆ ಅತುಲಪರಾಕ್ರಮದಿಂದ ಶತ್ರುಗಳ ಸೈನ್ಯದಮೇಲೆ ಒಮ್ಮೆಲೆ ಬಿದ್ದು ಅವರನ್ನು ಜರ್ಜರ ಮಾಡುತ್ತಲಿದ್ದರು.

ಇಂದು ರಜಪೂತವೀರರಿಗೆ ಮಹೋತ್ಸವದ ದಿವಸವು ಒದಗಿದಂತೆ ಆಗಿತ್ತು. ಅಂದು ಅವರು ಸಮರಭೂಮಿಯಿಂದ ಹಿಂದೆಗೆಯುವಂತೆಯಿದ್ದಿಲ್ಲ. ಜಹ್ವಾಣ, ರಾಠೋಡ, ಝಾಲಾ, ಚಂದ್ರಾವತ, ಜಗಾವತ ಮೊದಲಾದ ಪ್ರಸಿದ್ಧ ರಜಪೂತಕುಲದ ವೀರರು ಸಿಂಹನಾದಮಾಡಿ ವ್ಯಾಘ್ರಗಳಂತೆ ಶತ್ರುಗಳಮೇಲೆ ಬಿದ್ದರು. ಶತ್ರುಗಳ ಶಸ್ತ್ರಾಸ್ತ್ರಗಳಿಂದ ರಜಪೂತರ ಒಂದು ಗುಂಪು ನಾಶವಾದಕೂಡಲೆ ಆದರ ಸ್ಥಳವನ್ನು ಮತ್ತೊಂದು ಗುಂಪು ಆಕ್ರಮಿಸುತ್ತಿತ್ತು. ಆ ಘೋರವಾದ ರಣೋತ್ಸವದಲ್ಲಿ ದಾರುಣವಾದ ಮೃತ್ಯುವನ್ನು ಸಂತೋಷದಿಂದ ಆಲಿಂಗಿಸಲಿಕ್ಕೆ ರಜಪೂತವೀರರು ಸಿದ್ಧರಾಗಿದ್ದರು; ಆದರೆ ದಿಲ್ಲೀಪತಿಯ ಅಸಂಖ್ಯ ಸೈನ್ಯದಮುಂದೆ ಆ ರಜಪೂತರ ಅಸಾಧಾರಣ ವೀರತ್ವವೂ, ಅದ್ಭುತಪರಾಕ್ರಮವೂ ನಡೆಯದಾದವು. ದಿಲ್ಲೀಶ್ವರನ, ಹಾಗು ಅಂಬರಾಧಿಪತಿಯ ಸೈನ್ಯಗಳೊಳಗಿಂದ "ಧುಡುಂ, ಧುಡುಂ"

ಶಬ್ದಮಾಡುತ್ತ ತೋಫುಗಳ ಗುಂಡುಗಳು ಸಾಗಿಹೋಗಿ ರಜಪೂತರ ಗುಂಪಿಗೆ ಗುಂಪುಗಳನ್ನು ನಾಶಮಾಡತೊಡಗಿದವು; ಆದರೂ ರಜಪೂತರು ಹಿಂಜರಿಯು ಲಿಲ್ಲ. ಈ ಘೋರಸಂಗ್ರಾಮದಲ್ಲಿ ವೀರಮಣಿಯಾದ ಪ್ರತಾಪಸಿಂಹನು ಹಿಂದೆ ಯಿದ್ದಿಲ್ಲ! ಸದಾ ವಿಜಯಶಾಲಿಯಾದ ಆತನ ಖಡ್ಗವು ಶತ್ರುಗಳ ಗಂಟಲುಗಳ ರಕ್ತವನ್ನು ಗಟಗಟ ಕುಡಿಯುತ್ತಲಿದ್ದರೂ, ಆದರ ರಕ್ತಪಾನದ ಇಚ್ಛೆಯು ತೃಪ್ತವಾಗದೆ ಹೆಚ್ಚುತ್ತಲೇ ಇತ್ತು. ಯುದ್ಧದ ಆರಂಭದಿಂದಲೇ ಪ್ರತಾಪಸಿಂಹನ ಕಣ್ಣು ಅಂಬರಾಧಿಪತಿಯಾದ ಮಾನಸಿಂಗನಮೇಲೆ ಇತ್ತು. ಮೇಲಿಂದಮೇಲೆ ಆತನು ಮಾನಸಿಂಗನ ಮೇಲೆ ಏರಿಹೋಗುತ್ತಲಿದ್ದನು; ಆದರೆ ದಿಲ್ಲಿಯ ಅಸಂಖ್ಯ ಸೈನ್ಯವನ್ನು ಭೇದಿಸಿ ಮಾನಸಿಂಗನ ಬಳಿಗೆ ಹೋಗು ವದು ಪ್ರತಾಪಸಿಂಗನಿಂದಾಗಲಿಲ್ಲ. ತನ್ನ ಪ್ರಯತ್ನವೆಲ್ಲ ನಿಷ್ಫಲವಾದದ್ದನ್ನು ನೋಡಿ ಪ್ರತಾಪನು ಕ್ರೋಧಕರ್ಕಶಸ್ವರದಿಂದ ಗರ್ಜಿಸಿ—ಎಲೈ ಕುಲಕಂಟಕ ನಾದ ಮಾನಸಿಂಹಾ! ದಿಲ್ಲಿಯ ನಾಯಿಯೇ! ಮೊಗಲರ ಪ್ರಚಂಡಸೈನ್ಯದ ಯೋಗದಿಂದಲೇ ಇಂದು ನಿನ್ನ ಪ್ರಾಣರಕ್ಷಣವಾಗಿರುತ್ತದೆ! ಧರ್ಮಜ್ಞರಾದ ರಜಪೂತರು ಖಡ್ಗಯುದ್ಧದಿಂದಲೇ ಜಯಾಪಜಯಗಳ ನಿರ್ಣಯಮಾಡಿ ಕೊಳ್ಳುತ್ತಿರುತ್ತಾರೆ. ದಿಲ್ಲೀಶ್ವರನ ಸೇವಾರೂಪವಾದ ರೊಜ್ಜಿನಲ್ಲಿ ಹೊರ ಳಾಡುವ ನೀನು, ಈ ರಜಪೂತಧರ್ಮವನ್ನು ಮರೆತುಬಿಟ್ಟಿರುತ್ತೀ. ಎಲೈ ಅಧಮ ರಜಪೂತನೇ, ಇರಲಿ; ಇಂದಿಲ್ಲ ನಾಳೆ ನಿನ್ನ ಸಮಾಚಾರವನ್ನು ತಕ್ಕೊಳ್ಳಲಿಕ್ಕೆ ಬಂದೀತು; ನಿನ್ನ ಶಾಸನ ಮಾಡಿಯೇ ತೀರಬೇಕೆಂದು ಹಟಹಿ ಡಿಯಲಿಕ್ಕೆ ಇದು ಸಮಯವಲ್ಲ, ಎಂದು ಕ್ರೋಧಾವೇಶದಿಂದ ನುಡಿದು, ತನ್ನ ಚಿತ್ತಕವೆಂಬ ಕುದುರೆಯನ್ನು, ರಾಜಪುತ್ರನಾದ ಸೇಲೀಮನು ಇರುವ ಕಡೆಗೆ ತಿರುಗಿಸಿದನು. ಸೇಲೀಮನು ಆನೆಯ ಅಂಬಾರಿಯಲ್ಲಿ ಕುಳಿತು ಯುದ್ಧಮಾಡುತ್ತಿದ್ದನು! ಈ ಸಾರೆ ಮಾತ್ರ ಪ್ರತಾಪನ ಪ್ರಯತ್ನವು ನಿಷ್ಫಲ ವಾಗಲಿಲ್ಲ. ಈ ಕಾಲದಲ್ಲಿ ರಜಪೂತಸೈನ್ಯವು ಭೀಷಣನಾದಮಾಡಿ ಮೊಗಲ ಸೇನೆಯಮೇಲೆ ಬಿದ್ದು ಆದನ್ನು ಭೇದಿಸಿಹೋಗಿ ಅಗ್ರೇಸರತ್ವವನ್ನು ಪಡೆ ಯಿತು! ರಜಪೂತರ ಖಡ್ಗ-ಬರ್ಚಿಗಳ ಭಯಂಕರವಾದ ಆಘಾತದಿಂದ ಮೊಗಲಸೈನ್ಯವು ಅಸ್ತವ್ಯಸ್ತವಾಗಿ ಸೈನ್ಯಸಂಹಾರದ ಮಿತಿಯು ಮೀರಿತು. ಸ್ವಲ್ಪವೇಳೆಯಲ್ಲಿಯೇ ದಿಲ್ಲಿಯ ಸೇನಾಪತಿಯಾದ ಯುವರಾಜ ಸೇಲೀ

ಮನೂ, ರಜಪೂತ ಸೇನಾಪತಿಯಾದ ಮಹಾರಾಣಾ ಪ್ರತಾಪಸಿಂಹನೂ ಎದುರುಬದುರಾದರು.

ಎರಡೂ ಪಕ್ಷಗಳ ಪ್ರಖ್ಯಾತರಾದ ವೀರರು ತಮ್ಮ ತಮ್ಮ ಪ್ರಭುಗಳ ಸಂರಕ್ಷಣಕ್ಕಾಗಿಯೂ, ಸಹಾಯಕ್ಕಾಗಿಯೂ ಧಾವಿಸಿದರು! ಅಲ್ಪಾವಕಾಶದಲ್ಲಿ ಒದಗಿದ ಅಲ್ಲಿಯ ಭಯಂಕರವಾದ ಯುದ್ಧವನ್ನೂ, ಗಗನವನ್ನು ಭೇದಿಸುವ ವೀರನಾದ-ಆರ್ತಸ್ವರಗಳ ಭೀಷಣವಾದ ಕೋಲಾಹಲವನ್ನೂ ವರ್ಣಿಸುವದು ಶಕ್ಯವಲ್ಲ! ರಜಪೂತರಲ್ಲಿಯೂ, ಮೊಗಲರಲ್ಲಿಯೂ ಭಿನ್ನಭಾವವು ಉಳಿಯಲಿಲ್ಲ! ಶತ್ರುಗಳಾರು ಮಿತ್ರರಾರು ಎಂಬದನ್ನು ತಿಳಿಯಲಿಕ್ಕೆ ಎರಡೂ ಪಕ್ಷದವರಿಗೆ ಬರಲೊಲ್ಲದು! ಖಡ್ಗಗಳ ಖಣಿಖಟಿಲೆಂಬಧ್ವನಿಯೂ, ವೀರರ ವೀರಗರ್ಜನೆಯೂ, ಮರಣೋನ್ಮುಖರ ಆರ್ತಧ್ವನಿಯೂ ಅಲ್ಲದೆ ಬೇರೆ ಧ್ವನಿಗಳು ಕೇಳದಾದವು. ಎರಡೂ ನಿಟ್ಟಿನ ಯೋಧರು ಛಿನ್ನ ವಿಚ್ಛಿನ್ನ ವೃಕ್ಷಗಳಂತೆ ಪಟಪಟ ಬೀಳತೊಡಗಿದರು! ಎರಡೂ ಪಕ್ಷದ ಧ್ವಜಗಳ ಸುತ್ತುಮುತ್ತು ಹೆಣಗಳ ರಾಶಿಯು ಬಿದ್ದಿತು. ಪ್ರತಾಪಸಿಂಹನ ಪ್ರತಾಪಶಾಲಿಯಾದ ಖಡ್ಗದ ಆಘಾತದಿಂದ ಸೇಲೀಮನ ಅಂಗರಕ್ಷಕರೆಲ್ಲ ಮಣ್ಣುಗೂಡಿದರು. ಪ್ರತಾಪನ ಪ್ರೀತಿಯ ಚಿತ್ತಕವೆಂಬ ಕುದುರೆಯು ಶಹಾಜಾದಾ ಸೇಲೀಮನ ಆನೆಗೆ ಕ್ಷಣದಲ್ಲಿ ಗಂಟು ಬಿದ್ದಿತು. ಆಗ ಸೇಲೀಮನು ಆನೆಯ ಅಂಬಾರಿಯಲ್ಲಿ ಕುಳಿತು ತನ್ನ ಸೇನಾನಾಯಕರಿಗೆ ಯುದ್ಧವಿಷಯದ ಸಂಗತಿಗಳನ್ನು ಸೂಚಿಸುವದರಲ್ಲಿ ಮಗ್ನನಾಗಿದ್ದನು. ಅಷ್ಟರಲ್ಲಿ ತನ್ನ ಎದುರಿಗೆ ಪ್ರತಾಪಸಿಂಹನ ಭಯಂಕರವಾದ ಮೂರ್ತಿಯು ಬಂದು ನಿಂತದ್ದನ್ನು ನೋಡಿ ಆತನು ಭಯಭೀತನಾದನು. ಆ ಸರಳಹೃದಯದ ವೀರನು ಮನಸ್ಸಿನಲ್ಲಿ—"ಆಹಹ! ಎಂಥ ಅದ್ಭುತಸಾಹಸವಿದು! ಎಂಥ ಅದ್ವಿತೀಯ ಪರಾಕ್ರಮವಿದು!! ಸಂಗಡ ಸೈನ್ಯವಾಗಲಿ, ಅಂಗರಕ್ಷಕರಾಗಲಿ ಇರದೆ, ಒಬ್ಬನೇ ನಮ್ಮ ಸೈನ್ಯವನ್ನು ಭೇದಿಸಿ ನಿರ್ಭಯದಿಂದ ಸಂಚರಿಸುವದು ಎಂಥ ಆಶ್ಚರ್ಯಕರವಾದ ಘಟನೆಯು! ಈತನನ್ನು ದೇವರೆಂದು ತಿಳಿಯಬೇಕೋ, ಮನುಷ್ಯನೆಂದು ತಿಳಿಯಬೇಕೊ ತಿಳಿಯದಾಗಿದೆ! ಈ ವೀರಮಣಿಯನ್ನು ಹಡೆದ ರಜಪೂತವೀರಮಾತೆಯು ಧನ್ಯಳೇ ಸರಿ! ಇಂಥ ನರವೀರರು ರಜಪೂತರಲ್ಲಿ ಬಹುಜನರು ಹುಟ್ಟುವದರಿಂದ ರಜಪೂತಸ್ಥಾನವು ಧನ್ಯವೆಂ

ತಲೇ ಹೇಳಬೇಕಾಗುವದು. ಎಂದು ಯೋಚಿಸುತ್ತಿರಲು, ಪ್ರತಾಪನು ಸೇಲೀಮನ ತೀರ ಸನಿಯಕ್ಕೆ ಹೋಗಿ ತನ್ನ ಕೈಯೊಳಗಿನ ದೀರ್ಘವಾದ ಭಾಲೆಯನ್ನು ಆತನ ಕುತ್ತಿಗೆಗೆ ಗುರಿನೋಡಿ ಒಗೆದನು; ಆದರೆ ಸೇಲೀಮನ ಸುದೈವದಿಂದ ಪ್ರತಾಪನ ಎಂದೂ ತಪ್ಪದ ಗುರಿಯು ತಪ್ಪಿ ಭಾಲೆಯು ಅಂಬಾರಿಯ ಕಬ್ಬಿಣದ ತಗಡಿನಲ್ಲಿ ಸಿಕ್ಕು ಜೋತಾಡಹತ್ತಿತು! ಅಂಬಾರಿಯು ಯೋಗದಿಂದಲೇ ಸೇಲೀಮನ ಪ್ರಾಣರಕ್ಷಣವಾಯಿತು. ಎಂದೂ ತಪ್ಪದ ತನ್ನ ಗುರಿಯು ತಪ್ಪಿದ್ದನ್ನು ನೋಡಿ ಪ್ರತಾಪನು ಸಂತಾಪಗೊಂಡನು. ಆತನು ಕ್ರೋಧದಿಂದ ಗರ್ಜಿಸಿ ತನ್ನ ಚಿತ್ತಕ ಕುದುರೆಯನ್ನು ಒತ್ತರದಿಂದ ನೂಕಿದನು. ಅಶ್ವಶ್ರೇಷ್ಠವಾದ ಚಿತ್ತಕವು, ವೀರಶ್ರೇಷ್ಠನಾದ ಪ್ರತಾಪನಿಗೆ ತಕ್ಕದ್ದಾಗಿತ್ತು. ಅದು ಯಜಮಾನನ ಭಾವವನ್ನರಿತು ಕ್ಷಣಾರ್ಧದಲ್ಲಿ ಹಾರಿ ತನ್ನ ಮುಂಗಾಲುಗಳನ್ನು ಆನೆಯ ಗಂಡಸ್ಥಳದಮೇಲೆ ಊರಿನಿಂತು ಕೊಂಡಿತು. ಕಂಣುಮುಚ್ಚಿ ಕಂಣುತೆರೆಯುವದರೊಳಗಾಗಿ ಪ್ರತಾಪನ ಖಡ್ಗಪ್ರಹಾರದಿಂದ ಮಾವುತನು ಮರಣಹೊಂದಿ ನೆಲಕ್ಕೆ ಅಪ್ಪಳಿಸಿದನು; ಪುನಃ ಸೇಲೀಮನ ಸುದೈವವು ಆತನನ್ನು ರಕ್ಷಿಸಿತು. ಮಾವುತನು ನೆಲಕ್ಕೆ ಬಿದ್ದದ್ದರಿಂದ ಆನೆಯು ಬೆದರಿ ಒಡೆಯನನ್ನು ಹೊತ್ತುಕೊಂಡು ರಣಾಂಗಣ ದಲ್ಲಿ ದಾರಿಸಿಕ್ಕತ್ತ ಓಡಿಹೋಯಿತು. ಹೀಗೆ ಆನೆಯ ಬೆದರಿಕೆಯಿಂದ ಸೇಲೀಮನು ಮತ್ತೆ ಬದುಕಿ ಉಳಿದನು!

ತೀರ ಕೈಗೆಸಿಕ್ಕ ಬೇಟೆಯು ತಪ್ಪಿಸಿಕೊಂಡು ಹೋದದ್ದನ್ನು ನೋಡಿ ಪ್ರತಾಪನು ಕ್ರೋಧಸಂತಪ್ತನಾದನು. ಆತನೂ, ಆತನ ವೀರಪರಿವಾರವೂ ಸಿಂಹನಾದಮಾಡಿ ಸೈನ್ಯವನ್ನು ಸಂಹರಿಸುತ್ತ ಸೇಲೀಮನ ಆನೆಯನ್ನು ಹಿಂಬಾಲಿಸಿ ವೇಗದಿಂದ ಸಾಗಿದವು. ಶೂರರಾಣಾನು ಮೊಗಲಸೈನ್ಯವನ್ನು ಭೇದಿಸಿ ಸೈನ್ಯದ ಅಂತರ್ಭಾಗವನ್ನು ಪ್ರವೇಶಿಸಿದನು. ಪ್ರತಾಪಸಿಂಹನ ಈ ಅಸಾಮಾನ್ಯ ವೀರತ್ವವನ್ನು ನೋಡಿ ಯಾವತ್ತು ಹಿಂದೂ ಸೈನಿಕರಿಗೆ ಭಾರ ತೀಯ ಪ್ರಸಿದ್ಧವೀರನಾದ ಅರ್ಜುನನ ನೆನಪಾಯಿತು! ಮೊಗಲಸೈನಿಕರು ಆಶ್ಚರ್ಯಮಗ್ನರಾದರು. ಮನಸ್ಸಿನಲ್ಲಿ ಅವರು ವೀರಶ್ರೇಷ್ಠ ಪ್ರತಾಪಸಿಂಹ ನನ್ನು ಬಹಳವಾಗಿ ಹೊಗಳಿದರು; ಆದರೆ ಮೊಗಲಸೈನಿಕರಾದರೂ ಸಾಮಾ ನ್ಯವೀರರಿದ್ದಿಲ್ಲ. ಪ್ರತಾಪನೂ, ಆತನ ಸೈನಿಕರೂ ತಮ್ಮ ಸೈನ್ಯವನ್ನು

ಭೇದಿಸುತ್ತ ಸಾಗಿದ್ದನ್ನು ನೋಡಿ ಅವರು ಸಿಟ್ಟಿನಿಂದ ಎಚ್ಚರದಪ್ಪಿದರು. ಸಂಕಟಕಾಲದಲ್ಲಿ ಅವರ ಧೈರ್ಯವು ದ್ವಿಗುಣಿತವಾಯಿತು. ಮುಸಲ್ಮಾನ ವೀರರಾದರೂ ರಜಪೂತರಷ್ಟೇ ಕೆಚ್ಚೆದೆಯವರಾಗಿದ್ದರು. ಅವರು ೫೦೦ ವರ್ಷ ಭರತಖಂಡದಮೇಲೆ ಅಪ್ರತಿಹತವಾಗಿ ಸಾಮ್ರಾಜ್ಯಾಧಿಕಾರವನ್ನು ನಡಿಸಿದ್ದರು. ಅಂಥವರಿಗೆ ಇಂದು ಹಿಂದುಗಳಿಂದ ಆದ ಅಪಮಾನವು ಸಹನವಾಗುವ ಹಾಗಿದ್ದಿಲ್ಲ. ಅವರು ಒಮ್ಮೆಲೆ "ಅಲ್ಲಾಹೋ ಅಕಬರ" ಎಂದು ಆಕಾಶವು ಭೇದಿಸುವಂತೆ ಪ್ರಚಂಡಗರ್ಜನೆಮಾಡಿ ಪ್ರತಾಪನ ಸೈನ್ಯ ವನ್ನು ನಾಲ್ಕುಕಡೆಯಿಂದ ಮುತ್ತಿಬಿಟ್ಟರು, ಹೀಗೆ ಮೊಗಲರು ಮುಗಿಬಿದ್ದ ದ್ದನ್ನು ನೋಡಿ ರಜಪೂತರೂ ರೊಚ್ಚಿಗೆದ್ದರು. ಅವರು ತಮ್ಮ ಪೂಜ್ಯ ರಾಣಾನನ್ನು ಸಂರಕ್ಷಿಸುವದಕ್ಕಾಗಿ ಜೀವದ ಹಂಗು ಇಲ್ಲದೆ ಕಾದಹತ್ತಿದರು. ರಜಪೂತವೀರರು ರಣಾಂಗಣದಿಂದ ಓಡಿಹೋಗುವದನ್ನು ಸ್ವಪ್ನದಲ್ಲಾದರೂ ಅರಿಯರು! ಪ್ರತಾಪನ ಸುತ್ತು ಮುತ್ತು ಹೆಣಗಳ ರಾಶಿಯು ಬಿದ್ದಿತು! ಪ್ರತಾಪನ ಮೈಗೆ ಭಯಂಕರವಾದ ಏಳು ಗಾಯಗಳಾಗಿರುವವು! ಆದರೆ ಆ ವೀರಪುಂಗವನಿಗೆ ಅವುಗಳ ಸ್ಮೃತಿಯೇ ಇದ್ದಿಲ್ಲ. ಆತನು ಶತ್ರುಸೈನ್ಯ ವನ್ನು ಭೇದಿಸುತ್ತ ಮುಂದಕ್ಕೆ ಸಾಗಹತ್ತಿದನು.

ಮೊಗಲಸೈನ್ಯದ ಮುತ್ತಿಗೆಯಿಂದ ಹೊರಗೆ ಇದ್ದ ಕೆಲವು ರಜಪೂತ ವೀರರು, ಹೀಗೆ ತಮ್ಮ ರಾಣಾನು ಮೊಗಲರಿಂದ ಮುತ್ತಲ್ಪಟ್ಟಿದ್ದನ್ನು ನೋಡಿದರು. ತಾವೆಲ್ಲರೂ ಸಮರಭೂಮಿಯಲ್ಲಿ ದೇಹವನ್ನಿಟ್ಟರೂ ತಮ್ಮ ರಾಣಾನನ್ನು ಹೊರಹೊರಡಿಸಬೇಕೆಂದು ನಿಶ್ಚಯಿಸಿ ಅವರು ಮೊಗಲಸೈನ್ಯಕ್ಕೆ ಮುಗಿಬಿದ್ದರು, ಅವರು ಸಿಸೋದಿಯಾ ಕುಲದ ನಿಶಾನೆಯನ್ನು ಸಂಗಡ ತಕ್ಕೊಂಡು ಆವೇಶದಿಂದ ಪ್ರತಾಪಸಿಂಗನ ಕಡೆಗೆ ಸಾಗಿದರು! ಶ್ರೇಷ್ಠ ರಜಪೂತಕುಲದ ಆ ಧ್ವಜವು ದೃಷ್ಟಿಗೆ ಬಿದ್ದಕೂಡಲೆ ರಜಪೂತ ಸೈನಿಕರು ಅದರ ಕಡೆಗೆ ನಡೆದರು. ಸ್ವಲ್ಪಹೊತ್ತಿನಲ್ಲಿ ಆ ಶೂರ ರಜಪೂತರು, ಪ್ರತಾಪಸಿಂಹನು ಒಬ್ಬನೇ ಯುದ್ಧಮಾಡುತ್ತಿರುವ ಸ್ಥಳವನ್ನು ಮುಟ್ಟಿದರು. ಅವರು ವರ್ಣಿಸಲಶಕ್ಯವಾದ ಪರಾಕ್ರಮದಿಂದ ಕಾದಿ ಪ್ರತಾಪಸಿಂಹನನ್ನು ನಿಶ್ಚಿತವಾದ ಮೃತ್ಯುಮುಖದಿಂದ ಬಿಡಿಸಿದರು! ಈ ಪ್ರಸಂಗದಲ್ಲಿ ನೂರಾರುಜನ ರಜಪೂತವೀರರು ರಣಭೂಮಿಯಲ್ಲಿ ದೇಹವಿಟ್ಟರು. ತಮ್ಮ ಮಹಾರಾಣಾನ

ಸಲುವಾಗಿ ಸ್ವಾಮಿನಿಷ್ಠ ರಜಪೂತರು ರಕ್ತದ ಪ್ರವಾಹವನ್ನು ಹರಿಸಿದರು; ಆದರೆ ಅಂದು ಪ್ರತಾಪಸಿಂಹನುಸಮರಮದದಿಂದ ಎಚ್ಚರದಪ್ಪಿದ್ದನು! ಆತನು ಯುದ್ಧಾವೇಶದಿಂದ ಮತ್ತೊಮ್ಮೆ ಶತ್ರುಸೈನ್ಯವನ್ನು ಭೇದಿಸಿ ಒಳಗೆ ಒಬ್ಬನೇ ಪ್ರವೇಶಿಸಿದನು. ಆತನ ವಿಜಯಶಾಲಿಯಾದ ಖಡ್ಗಕ್ಕೆ ಹಲವು ಮೊಗಲ ವೀರರು ಆಹುತಿಯಾದರು! ಮೊಗಲರು ಪುನಃ ಆತನನ್ನು ಮುತ್ತಿ ಬಿಟ್ಟರು. ಪ್ರತಾಪನ ರಾಜಛತ್ರವು ಶತ್ರುಗಳ ಮಧ್ಯದಲ್ಲಿ ಸಿಕ್ಕುಹೋಯಿತು. ಇದನ್ನು ನೋಡಿ ರಜಪೂತವೀರರು ಮತ್ತೆ ಮುಗಿಬಿದ್ದು ಭಯಂಕರ ಸಮರವ್ಯಾಪಾರ ದಿಂದ ಮೊಗಲರನ್ನು ಹಿಂದಕ್ಕೊತ್ತಿ ಸಮರೋನ್ಮತ್ತನಾದ ತಮ್ಮ ರಾಣಾ ನನ್ನು ಮತ್ತೆ ಹೊರಹೊರಡಿಸಿಕೊಂಡುಬಂದು ಪ್ರಾಣಸಂಕಟದಿಂದ ಮುಕ್ತ ಮಾಡಿದರು; ಆದರೆ ಆ ದಿನ ಪ್ರತಾಪಸಿಂಹನು ತೀರ ವಿಚಾರಶೂನ್ಯನಂತೆ ಆಚರಿಸಿದನು. ಆತನ ಯುದ್ಧಾವೇಶವು ಕುಗ್ಗಲಿಲ್ಲ. ಸಾರಾಸಾರ ವಿಚಾ ರಶಕ್ತಿಯು ಪ್ರಕಟವಾಗಲಿಲ್ಲ. ಆತನು ಮೊಗಲರ ಮೇಲಿನ ರೊಚ್ಚಿನಿಂದ ಮತ್ತೆ ಅವರನ್ನು ತುಂಡರಿಸುತ್ತ ಶತ್ರುಸೈನ್ಯದ ಮಧ್ಯವನ್ನು ಪ್ರವೇಶಿಸಿದನು. ಈ ಕಾಲದಲ್ಲಿ ಮೊಗಲವೀರರೂ ಉನ್ಮತ್ತರಾಗಿದ್ದರು. ಅವರು "ಅಲ್ಲಾ ಹೋ ಅಕಬರ" ಎಂದು ಭೀಷಣನಾದಮಾಡಿ ಹಾ ಹಾ ಅನ್ನುವದರೊಳಗೆ ಪ್ರತಾಪನನ್ನು ಬಲವಾಗಿ ಮುತ್ತಿಬಿಟ್ಟರು! ಪ್ರತಾಪನಿಗೆ ಹೊರಗೆ ಹೋಗ ಲಿಕ್ಕೂ, ಆತನ ವೀರಅನುಚರರಿಗೆ ಒಳಗೆ ಬರಲಿಕ್ಕೂ ಆಸ್ಪದವು ದೊರೆಯ ದಾಯಿತು. ಕಾಫರನಾದ ಈ ಶತ್ರುವನ್ನು ತುಂಡರಿಸಿ ದಿಲ್ಲೀಶ್ವರನನ್ನು ನಿಶ್ಚಿಂತವಾಗಿ ಮಾಡಿಬಿಡಬೇಕೆಂದು ಮೊಗಲರು ನಿಶ್ಚಯಿಸಿ, ಅಪೂರ್ವಶೌ ರ್ಯವನ್ನು ಪ್ರಕಟಿಸುತ್ತಲಿದ್ದರು! ಮಾನಸಿಂಗನ ಮಾನಖಂಡನ ಮಾಡಿದ ಸೇಡನ್ನು ಈ ದಿನ ತೀರಿಸಿಕೊಳ್ಳುವೆವೆಂದು ಅವರು ನಿಶ್ಚಯಿಸಿದ್ದರು; ಆದರೆ ಕೆಚ್ಚೆದೆಯ ಪ್ರತಾಪನು ನಿಶ್ಚಲಮನಸ್ಸಿನಿಂದ ತನ್ನ ಸಮರ ಪಾಂಡಿತ್ಯವನ್ನು ತೋರಿಸುತ್ತಲಿದ್ದನು!

ಮನುಷ್ಯನು ಎಷ್ಟೇ ಕಷ್ಟಪಡಲಿ, ಎಷ್ಟೇ ಪರಾಕ್ರಮವನ್ನು ತೋರಿ ಸಲಿ, ಎಷ್ಟೇ ಸಾಹಸಮಾಡಲಿ; ಆತನಿಗೆ ಕಾಲವು ಅನುಕೂಲವಾಗಿರದಿದ್ದರೆ ಆತನ ಮನೋಭೀಷ್ಟವು ಪೂರ್ಣವಾಗುವದಿಲ್ಲ. ಈ ಮಾತನ್ನು ಪ್ರತಾಪ ಸಿಂಗನಿಗೆ ಹಚ್ಚಿನೋಡಿ ಮನಗಾಣಬಹುದು. ಈ ವರೆಗೆ ಪ್ರತಾಪನು ಪಟ್ಟ

ಕಷ್ಟವನ್ನೂ, ತೋರಿಸಿದ ಪರಾಕ್ರಮನ್ನೂ, ಮಾಡಿದ ಸಾಹಸವನ್ನೂ ಮನಸ್ಸಿನಲ್ಲಿ ತಂದರೆ, ಆತನ ಭಾಲೆಯ ಇರತದಿಂದ ಸೇಲೀಮನ ಅಂಗರಕ್ಷಕರು ಉರುಳಿಬಿದ್ದಂತೆ ಸೇಲೀಮನೂ ಉರುಳಿಬೀಳಬೇಕಾಗಿತ್ತು; ಆದರೆ ಪ್ರತಾಪಸಿಂಹನ ಪ್ರತಿಕೂಲಕಾಲವು ಹಾಗಾಗಗೊಡಲಿಲ್ಲ. ಅತ್ಯಂತ ಸಾಮರ್ಥ್ಯದಿಂದ ಪ್ರತಾಪನು ಇರಿದಭಾಲೆಯ ಇರತವು ಸೇಲೀಮನ ಅಂಬಾರಿಯ ಕಬ್ಬಿಣದ ದಪ್ಪವಾದ ತಗಡಿಗೆ ತಾಕಿ ಸೇಲೀಮನು ಉಳಿದನು. ಇಲ್ಲದಿದ್ದರೆ ನಿಶ್ಚಯವಾಗಿ ಅವನು ಸಮರಭೂಮಿಯಲ್ಲಿ ಉರುಳುತ್ತಿದ್ದನು. ಪ್ರತಾಪಸಿಂಹನ ಇಂಥ ಶೌರ್ಯವೀರ್ಯದ ಅನೇಕ ಪ್ರಸಂಗಗಳಲ್ಲಿ "ಚಿತ್ತಕವೆಂ"ಬ ಆತನ ಪ್ರೀತಿಯ ಕುದುರೆಯು ಮಾಡಿದ ಕೆಲಸವನ್ನು ಭಾಟರು ಬಹಳ ಚನ್ನಾಗಿ ವರ್ಣಿಸಿದ್ದಾರೆ. ಆ ಕುದುರೆಯು ಯಜಮಾನನಿಗೆ ಯುದ್ಧಪ್ರಸಂಗದಲ್ಲಿ ಅನುಕೂಲವಾಗಿ ನಡೆಯುತ್ತಿದ್ದದ್ದಲ್ಲದೆ, ಅದು ಹಲವುಸಾರೆ ತನ್ನ ಯಜಮಾನನನ್ನು ಪ್ರಾಣಸಂಕಟದೊಳಗಿಂದ ಮುಕ್ತವಾಗಮಾಡಿತ್ತು. ಅಂಥ ಚಿತ್ತಕಕುದುರೆಯು ಈಗ ಗಾಯಪಟ್ಟು ಹಣ್ಣಾಗಿತ್ತು. ಪ್ರತಾಪನಿಗೂ ಹಲವು ಗಾಯಗಳಾಗಿದ್ದವು. ಆದರೂ ಆತನು ಬೆದರಲಿಲ್ಲ. ಕ್ಷಣದಲ್ಲಿ ಆತನು ಮೊಗಲ ಸೈನ್ಯದ ಮುತ್ತಿಗೆಯನ್ನು ಭೇದಿಸಿ ಪಾರಾಗಿ ಹೋಗುತ್ತಿದ್ದನು. ಕೂಡಲೆ ಮೊಗಲರು ಆತನನ್ನು ಮುತ್ತುತ್ತಿದ್ದರು. ಪ್ರತಾಪನ ತಲೆಯಮೇಲೆ ಯಾವಾಗಲೂ ಶ್ವೇತಛತ್ರವಿರುತ್ತಿದ್ದದ್ದರಿಂದ, ಮೊಗಲರಿಗೆ ಪ್ರತಾಪನ ಗೊತ್ತುಹಿಡಿದು ಮುತ್ತಲಿಕ್ಕೆ ಅನುಕೂಲವಾಗುತ್ತಿತ್ತು. ಮೊಗಲರು ಮುತ್ತಬೇಕು, ಪ್ರತಾಪನು ಮೈ ಮರೆತು ಆವೇಶದಿಂದ ಕಾದುತ್ತಿರುವಾಗ ಆತನ ಸೈನಿಕರು ಜೀವದ ಪರಿವೆಯಿಲ್ಲದೆ ಆತನನ್ನು ಮುತ್ತಿಗೆಯಿಂದ ಹೊರಹೊರಡಿಸಬೇಕು. ಹೀಗಾಗಿ ರಜಪೂತಸೈನಿಕರೂ, ಮೊಗಲಸೈನಿಕರೂ ಬಹುಜನರು ಸಮರಭೂಮಿಯಲ್ಲಿ ದೇಹವಿಟ್ಟರು. ಈ ಹಳದಿಯ ಘಾಟದ ಮಹಾಯುದ್ಧದಲ್ಲಿ ಉತ್ಪನ್ನವಾದ ಸಮರದೇವತೆಯು ಆಕಂಠರುಧಿರಪಾನದಿಂದ ತೃಪ್ತಳಾದಳು! ಆಕೆಯು ಪಾನಮಾಡಿ ಉಳಿದ ರಕ್ತವು ಸಮರಭೂಮಿಯಲ್ಲಿ ಸರವುಗಟ್ಟಿ ಹರಿಯಹತ್ತಿತು. ಆಗಿನ ಕಾಲದಲ್ಲಿ ವೀರರ ಜೀವಿತಗಳು ತೃಣಕ್ಕೆ ಸಮಾನವಾಗಿದ್ದವು! ಅವರ ದೇಹಾಭಿಮಾನವು ಅಳಿದು ಹೋಗಿ ಅವರು ಪ್ರತ್ಯಕ್ಷ ಕೃತಾಂತಸ್ವರೂಪರಾಗಿದ್ದರು. ಮಾನಸಿಂಗನು

ಕೂಡ, ಪ್ರತಾಪನ ಪರಾಕ್ರಮಕ್ಕೆ ತಲೆದೂಗಿದನು. ಪ್ರತಾಪನ ನಿಜವಾದ ಪರಾಕ್ರಮವೂ, ಧೈರ್ಯವೂ, ಯುದ್ಧಚಾತುರ್ಯವೂ ಇದೇ ಕಾಲದಲ್ಲಿ ಪ್ರಕಟವಾದವೆಂದು ಹೇಳಬಹುದು. ವೈರಿಗಳ ಮಧ್ಯದಲ್ಲಿ ತನ್ನ ಚಿತ್ತಕ ಕುದುರೆಯನ್ನು ಹತ್ತಿಕೊಂಡು ಸಮರೋತ್ಸಾಹದಿಂದ ಮೆರೆಯುತ್ತಿರುವ ಪ್ರತಾಪನು ಪ್ರಳಯಕಾಲದ ಕಾಲಭೈರವನ ಸ್ಮರಣಮಾಡಿಕೊಡುತ್ತಿದ್ದನು. ಆತನ ಆ ಉಗ್ರರೂಪವನ್ನು ನೋಡಿ ಮೊಗಲಸೈನಿಕರು ಚಕಿತರಾದರು. ರಜಪೂತವೀರರು ಆತನನ್ನು ನೋಡಿ ಅಭಿಮಾನಪಟ್ಟು, ಇಂಥ ರತ್ನವು ಮೇವಾಡದ ಪುಣ್ಯಭೂಮಿಯಿಂದ ಎಲ್ಲಿ ಜಾರಿಹೋಗುತ್ತದೋ ಎಂಬ ಚಿಂತೆಯಿಂದ ಆತನನ್ನು ಬಿಡಿಸಿಕೊಂಡು ಬರಲಿಕ್ಕೆ ಜೀವದ ಪರಿವೆಯಿಲ್ಲದೆ ಕಾದುತ್ತಲಿದ್ದರು; ಆದರೆ ಈ ಸಾರೆಯ ಮೊಗಲರ ಬಲವಾದ ಮುತ್ತಿಗೆಯನ್ನು ಭೇದಿಸುವದು ಅವರಿಂದ ಆಗಲೊಲ್ಲದು. ತಮ್ಮ ಸ್ವಾಮಿಯಾದ ರಾಣಾನು ವೈರಿಗಳ ಮಧ್ಯದಲ್ಲಿ ಸಿಕ್ಕು, ಹಲವು ಗಾಯಗಳಿಂದ ಜರ್ಜರನಾದದ್ದನ್ನೂ, ಆತನ ಚಿತ್ತಕಕುದುರೆಯು ವೈರಿಗಳ ಶಸ್ತ್ರಗಳ ಇರತದಿಂದ ಹಣ್ಣಾದದ್ದನ್ನೂ ನೋಡಿ ರಜಪೂತರು ಬೆದರಿದರು. ಅವರ ಮೋರೆಗಳು ಕಳೆಗುಂದಿದವು. ಅವರು ರಾಣಾನನ್ನು ಉಳಿಸಿಕೊಳ್ಳುವ ಉಪಾಯವನ್ನು ಕಾಣದಾದರು. ಅಷ್ಟರಲ್ಲಿ ಒಬ್ಬ ತರುಣಿಯು ಅಶ್ವಾರೂಢಳಾಗಿ ಮುಂದಕ್ಕೆ ಸಾಗಿರಲು, ಒಬ್ಬ ರಜಪೂತವೀರನು ತನಗೆ ಎದುರಾದವರನ್ನು ತುಂಡರಿಸುತ್ತ ನಿಶ್ಶಂಕೆಯಿಂದ ಪ್ರತಾಪನ ಬಳಿಗೆ ಹೋದನು!

ಪ್ರತಾಪನು ಆ ತರುಣಿಯನ್ನೂ, ಆ ವೀರ ರಜಪೂತನನ್ನೂ ನೋಡಿ ಉತ್ಸಾಹಗೊಂಡನು. ಸೈನ್ಯದ ಸಂಹಾರವನ್ನು ನಿಲ್ಲಿಸಿದರೆ ವೈರಿಗಳು ಏರಿ ಬರುವರೆಂದು ತಿಳಿದು ಪ್ರತಾಪನು ಬಾಯಿಂದ ಒಂದು ಶಬ್ದವನ್ನು ಕೂಡ ಉಚ್ಚರಿಸದೆ, ಆ ಬಂದವರನ್ನು ಕೃತಜ್ಞತಾ ಬುದ್ಧಿಯಿಂದ ನೋಡಿ ಸತ್ಕರಿಸಿದನು. ಬಹಳ ಹೊತ್ತು ಒಂದೇಸವನೆ ಕಾದಿದ್ದರಿಂದ ಆತನ ಶಕ್ತಿಯು ಕುಗ್ಗಿತ್ತು. ಇದನ್ನರಿತು ಆ ಸ್ತ್ರೀಯ ಪ್ರೇರಣೆಯಿಂದ ಆ ತರುಣ ರಜಪೂತ ವೀರನು ಪ್ರತಾಪನ ತಲೆಯ ಮೇಲಿನ ಶ್ವೇತಚ್ಛತ್ರವನ್ನು ತನ್ನ ತಲೆಯ ಮೇಲೆ ಹಿಡಿಸಿಕೊಂಡನು. ಆ ಶ್ವೇತಚ್ಛತ್ರದ ಗುರುತಿನ ಮೇಲಿಂದ ಮೊಗಲ ಸೈನಿಕರು ಪ್ರತಾಪನನ್ನು ಬಿಟ್ಟು, ಆ ತರುಣ ರಜಪೂತನನ್ನೇ

ಪ್ರತಾಪನೆಂದು ತಿಳಿದು ಆತನನ್ನು ಮುತ್ತಿದರು. ಮೊಗಲರ ಮುತ್ತಿಗೆಯ ದಿಸೆಯು ಸಂಪೂರ್ಣ ಬದಲಾದದ್ದರಿಂದ ಪ್ರತಾಪನು ಪ್ರಾಣಸಂಕಟದಿಂದ ಪಾರಾದನು. ಆತನು ನಿರಾತಂಕವಾಗಿ ಸಮರಭೂಮಿಯಿಂದ ಜಾರಿಹೋಗ ಲಿಕ್ಕೆ ಅನುಕೂಲವಾಯಿತು; ಆದರೆ ತನ್ನ ಸಲುವಾಗಿ ಪ್ರಾಣಕೊಡುವದ ಕ್ಕಾಗಿ ಶ್ವೇತಚ್ಛತ್ರವನ್ನು ತಲೆಯ ಮೇಲೆ ಹಿಡಿಸಿಕೊಂಡ ವೀರನಿಗೆ ಸಹಾಯ ಮಾಡುವದಕ್ಕಾಗಿ ಆ ಶೂರ ರಾಣಾನು ಅತ್ತ ಕಡೆಗೆ ಕುದುರೆಯನ್ನು ತಿರುಗಿಸಿ ದನು. ಆಗ ಆ ತರುಣ ಸ್ತ್ರೀಯು ವಾಯುವೇಗದಿಂದ ಪ್ರತಾಪನ ಬಳಿಗೆ ಬಂದು—ಪುತ್ರಾ, ತಿರುಗು ಹಿಂದಕ್ಕೆ. ನನ್ನ ಮಾತಿನಲ್ಲಿ ನಂಬಿಗೆಯಿದ್ದರೆ, ನನ್ನ ವಿಷಯವಾಗಿ ನಿನ್ನಲ್ಲಿ ಪೂಜ್ಯ ಬುದ್ಧಿಯು ಇದ್ದರೆ, ಒಬ್ಬ ತರುಣ ರಜ ಪೂತನ ಪ್ರಾಣರಕ್ಷಣಕ್ಕಿಂತ ಮೇವಾಡದ ಸ್ವಾತಂತ್ರ್ಯ ರಕ್ಷಣದ ಯೋಗ್ಯ ತೆಯು ಹೆಚ್ಚೆಂದು ನಿನಗೆ ತೋರುತ್ತಿದ್ದರೆ, ತಟ್ಟನೆ ನೀನು ಸಮರ ಭೂಮಿ ಯಿಂದ ಜಾರಿಹೋಗು, ನನ್ನ ಅಪ್ಪಣೆಗೆ ವಿರುದ್ಧವಾಗಿ ನಡೆದರೆ ನಿನ್ನ ಸರ್ವ ಸ್ವದ-ಇಡಿಯ ರಜಪೂತಸ್ಥಾನದ ಗೌರವದ ಸರ್ವಸ್ವದ ನಾಶವಾಗುವದು; ಆದರೆ ಪುತ್ರಾ, ನೀನು ಈ ಸಾತ್ವಿಕೆಯ ಅಪ್ಪಣೆಯಂತೆ ನಡೆದರೆ ಬಹುಮು ಟ್ಟಿಗೆ ಲಾಭವನ್ನು ಪಡೆದೀ. ಇಂದಿನ ಸಮರದಲ್ಲಿ ನಿನಗೆ ಸರ್ವಥಾ ಜಯ ಪ್ರಾಪ್ತಿಯಾಗುವದಿಲ್ಲ! ಸುಮ್ಮನೆ ಶಲಭದಂತೆ ಭ್ರಾಂತಿಯಿಂದ ಪ್ರಾಣಕಳ ಕೊಳ್ಳಬೇಡ. ಇಂದಿನ ನಿನ್ನ ಸಮರ ವ್ಯಾಪಾರವು ನಿನ್ನ ಹೆಸರಿಗೆ ಒಪ್ಪುವಂತೆ ಸಂಸ್ಮರಣೀಯವಾಗಿ ಪರಿಣಮಿಸಿತು! ಶಾಬಾಸ! ಪುತ್ರಾ ಶಾಬಾಸ! ಇದಕ್ಕೂ ಹೆಚ್ಚಿಗೆ ಮಾತಾಡುವದು ಸಾತ್ವಿಕೆಯ ಶೀಲವಲ್ಲ. ತಿರುಗುಹಿಂದಕ್ಕೆ ಜಾರು ಸಮರಭೂಮಿಯಿಂದ!!

ಈ ಮೇರೆಗೆ ನುಡಿದು ಸಾತ್ವಿಕೆಯು ತಟ್ಟನೆ ತನ್ನ ಕುದುರೆಯನ್ನು ತಿರುಗಿಸಿ ಸಮರ ಭೂಮಿಯನ್ನು ಹೊಕ್ಕು ಅದೃಶ್ಯಳಾದಳು. ಅಷ್ಟರಲ್ಲಿ ಪ್ರತಾಪಸಿಂಹನನ್ನು ಸಮರಭೂಮಿಯಿಂದ ಹೊರಹೊರಡಿಸಿದ ರಜಪೂತನು ತನ್ನ ಅದ್ವಿತೀಯವಾದ ಸಮರ ಪಾಂಡಿತ್ಯವನ್ನು ತೋರಿಸುತ್ತ ಸಮರಭೂಮಿ ಯಲ್ಲಿ ದೇಹವಿಟ್ಟನು. ಆಗ ರಜಪೂತರಲ್ಲಿ ಹಾಹಾಕಾರವು ಉತ್ಪನ್ನವಾಗಿ ಅವರು ರಾಣಾನೇ ಹತನಾದನೆಂದು ತಿಳಿದು ಸಮರಭೂಮಿಯಿಂದ ಜಾರ ಹತ್ತಿದರು. ಇದನ್ನು ನೋಡಿ ಪ್ರತಾಪನು ಅಸಮಾಧಾನಪಟ್ಟರೂ, ಆತನು

ಸಾತ್ವಿಕೆಯ ಅಪ್ಪಣೆಯನ್ನು ಮೀರಲಾರದೆ ಬಹು ಕಷ್ಟದಿಂದ ಸಮರಭೂಮಿಯಿಂದ ಜಾರಿದನು. ಆತನು ತನ್ನ ಚಿತ್ತಕಕ್ಕೆ ವೇಗದಿಂದ ಹೋಗಲು ಸೂಚಿಸುವಾಗ ಆ ಮರಣೋನ್ಮುಖನಾದ ರಜಪೂತ ಸರದಾರನನ್ನು ಕುರಿತು—ಹಾಯ್ ಹಾಯ್! ಸ್ವಾಮಿಭಕ್ತನಾದ ವೀರಾಗ್ರಣಿಯೇ, ಝೂಲಾವಂಶೀಯನಾದ ಮಾನಾವೀರಾ, ಅಸ್ತಂಗತನಾಗಿ ಪ್ರತಾಪನ ಹೃದಯಕ್ಕೆ ಶೂಲದ ಇರತದಂತೆ ವ್ಯಥೆಯನ್ನು ಕೊಟ್ಟೆಯಾ! ಪ್ರಾಣದಾತೃವಾದ ನಿನಗೆ ಸಂಕಟಮಗ್ನನಾದ ಪ್ರತಾಪ ರಾಣಾನು ಏನು ಕೊಡುವನು! ಆದರೆ ಇಂದಿನಿಂದ ನಿನ್ನ ಸಂತತಿಯವರಿಗೆ ಆತನು "ರಾಜಾ" ಎಂಬ ಬಿರುದನ್ನು ಕೊಟ್ಟಿರುವನು, ಎಂದು ನುಡಿಯುತ್ತಿರಲು, ಚಿತ್ತಕವು ಪ್ರತಾಪಸಿಂಹನನ್ನು ಸಮರಭೂಮಿಯಿಂದ ಬಹುದೂರ ದಾಟಿಸಿಕೊಂಡು ಹೋಗಿತ್ತು. ಇಂದಿನ ಯುದ್ಧದಲ್ಲಿ ರಜಪೂತ ಸೈನ್ಯದಲ್ಲಾದ ಸಂಹಾರವನ್ನು ವರ್ಣಿಸಲಾಸಲ್ಲ! ಮಹಾ ಮಹಾ ವೀರರೆನಿಸಿಕೊಳ್ಳುವವರು ಸಮರಭೂಮಿಯಲ್ಲಿ ಬಿದ್ದರು. ವಿಕ್ರಮ ಸಂವತ್ಸರದ ೧೬೩೨ ಶ್ರಾವಣಶುದ್ಧ ಸಪ್ತಮಿಯ ದಿವಸವು, ಮೇವಾಡದ ಇತಿಹಾಸದಲ್ಲಿ ಚಿರಸ್ಮರಣೀಯವಾಯಿತು, ಇಂದಿನ ಯುದ್ಧದಲ್ಲಿ ರಾಣಾನ ಹತ್ತರದವರಾದ ಆಪ್ತೇಷ್ಟರೂ—ಇತರ ಠಾಕೂರರೂ, ಅರಸರೇ ಮೊದಲಾದವರೂ ಕೂಡಿ ಆರಿಸಿದ ೫೦೦ ಜನರು ಸಮರಭೂಮಿಯಲ್ಲಿ ದೇಹವಿಟ್ಟರು. ಅವರಲ್ಲಿ ಗಾಲ್ಹೇರದ ಪದಭ್ರಷ್ಟರಾಜನಾದ ರಾಮಸಾತುವರನೂ, ಆತನ ಮಗನಾದ ಖಂಡೇರಾಯನೂ, ಆತನ ತುವರ ಕುಲದೊಳಗಿನ ಆಪ್ತ ಸಂಬಂಧಿಕರೂ—ಬೀಗರೂ ಬಿಜ್ಜರೂ ಕೂಡಿ ಮುನ್ನಾರಾಐವತ್ತು ಜನರು ಸಮರಭೂಮಿಯಲ್ಲಿ ಬಿದ್ದರು. ಅದರಂತೆ, ಝೂಲಾವಂಶೀಯನಾದ ಮಾನಾರಾಜನೂ, ಆತನ ಸಂಬಂಧಿಕರೂ ಕೂಡಿ ೧೫೦ ಜನರು ಮರಣ ಹೊಂದಿದರು. ಇವರ ಹೊರತು ಬೇರೆ ಎಷ್ಟು ಜನರು ಮರಣಹೊಂದಿದರೆಂಬದರ ಲೆಕ್ಕ ಹತ್ತುವಹಾಗಿದ್ದಿಲ್ಲ. ಈ ಹಳದಿಯ ಘಾಟದ ಯುದ್ಧದ ಆರಂಭದಲ್ಲಿ ಪ್ರತಾಪನ ಕಡೆಗಿದ್ದ ೨೨ಸಾವಿರ ಜನರೊಳಗೆ ಎಂಟು ಸಾವಿರ ಜನರು ಮಾತ್ರ ಉಳಿದರು! ಈ ಯುದ್ಧದಿಂದ ಮೇವಾಡದ ಪ್ರತಿ ಒಂದು ಮನೆಯಲ್ಲಿ ರೋದನಧ್ವನಿಯು ಕೇಳಿಸುತ್ತಿತ್ತು. ಅಂದಬಳಿಕ ಆಗಿನ ಕಾಲದಲ್ಲಿ ಎಂಥ ಅನರ್ಥ ಪ್ರಸಂಗವು ಒದಗಿತೆಂಬದನ್ನು ವಾಚಕರೇ ತರ್ಕಿಸಬಹುದು.

ಮುಂದೆ ಮಳೆಗಾಲವು ಆರಂಭವಾದದ್ದರಿಂದ ಸೇಲೀಮನು ಈ ಸಂಗ್ರಾಮ ಸಂಭ್ರಮವನ್ನು ಮುಗಿಸಿ, ತಾನು ಪೆಟ್ಟುತಿಂದು ಗಟ್ಟಿಯಾಗಿ ನರಳುತ್ತಿದ್ದರೂ, ಜಯವನ್ನು ಸಂಪಾದಿಸಿದೆನೆಂಬ ಸಮಾಧಾನದಿಂದ ದಿಲ್ಲಿಗೆತೆರಳಿದನು. ಮುಂದೆ ಎಷ್ಟೋ ದಿವಸಗಳವರೆಗೆ ಮೊಗಲರು ಹಳದಿಯ ಘಾಟದ ಯುದ್ಧವನ್ನೂ, ಪ್ರತಾಪನ ಪರಾಕ್ರಮವನ್ನೂ ಕಥೆಮಾಡಿ ಹೇಳುತ್ತಿದ್ದರು! ಈ ಸಂಗ್ರಾಮಸಂಭ್ರಮದ ಭಯಂಕರ ಸ್ವರೂಪವು ಮರಣಪರ್ಯಂತರ ಮೊಗಲ ಸೈನಿಕರ ಹೃದಯದೊಳಗಿಂದ ಅಳಿಸಿ ಹೋಗಲಿಲ್ಲ!

## ೧೦ ನೆಯ ಪ್ರಕರಣ

# ಬಂಧುಪ್ರೇಮ.

ಪ್ರತಾಪಸಿಂಹನು ಸಮರಭೂಮಿಯಿಂದ ಜಾರಿ ಹೋದನೆಂದು ಮೇಲೆ ಹೇಳಿದೆಯಷ್ಟೆ! ಆ ಪ್ರತಾಪಿಗೂ, ಆತನ ಕುದುರೆಗೂ ಅಂದಿನ ಘನಘೋರ ಕಾಳಗದಲ್ಲಿ ಆದಷ್ಟು ಶರೀರ ವ್ಯಥೆಯೂ, ಮಾನಸಿಕ ವ್ಯಥೆಯೂ ಬೇರೆ ಯಾವ ಯುದ್ಧದಲ್ಲಿಯೂ ಆಗಿದ್ದಿಲ್ಲ. ವೀರಾಗ್ರಣಿಯಾದ ಝಾಲಾವಂಶೀಯ ಮಾನಾ ರಾಜನು ತನ್ನ ಸಲುವಾಗಿ ಪ್ರಾಣ ಕೊಟ್ಟದ್ದರಿಂದಲೂ, ಬೇರೆ ಎಷ್ಟೋ ಮಹಾ ಮಹಾ ವೀರರು ಸಮರ ಭೂಮಿಯಲ್ಲಿ ಪಟ ಪಟ ಬಿದ್ದು ಮರಣ ಹೊಂದಿದ್ದರಿಂದಲೂ, ಆ ಸ್ವಜನಾಭಿಮಾನಿಯಾದ ಪುರುಷನಿಗೆ ಪರ ಮಾವಧಿ ವ್ಯಸನವಾಯಿತು. ಇಷ್ಟು ಜನ ಶೂರರನ್ನು ಬಲಿ ಕೊಟ್ಟರೂ, ಇಷ್ಟು ಪರಮಾವಧಿಯಾದ ಪರಾಕ್ರಮವನ್ನು ಪ್ರಕಟ ಮಾಡಿದರೂ ಸೇಲೀ ಮನು ದೈವವಶಾತ್ ಪಾರಾದದ್ದರಿಂದ ಯುದ್ಧದ ದಿಶೆಯೇ ಬದಲಾದದ್ದನ್ನು ನೋಡಿ ಆತನು ತಳಮಳಿಸಿದನು. ಸಾತ್ವಿಕೆಯು ತನ್ನನ್ನು ಆಜ್ಞೆಯಿಂದ ನಿರ್ಬಂಧಿಸದಿದ್ದರೆ, ತನ್ನ ಸಲುವಾಗಿ ಸಮರ ಭೂಮಿಗೆ ಆಹುತಿಯಾಗುತ್ತಿ ರುವ ವೀರರೊಡನೆ ತಾನೂ ವೀರಸ್ವರ್ಗವನ್ನು ಕುರಿತು ಪ್ರಯಾಣ ಮಾಡುತ್ತಿ ದ್ದೆನೆಂತಲೂ, ಹಾಗಾಗಿದ್ದರೆ, ಪ್ರಕೃತದಲ್ಲಿ ಅನುಭವಿಸಬೇಕಾಗುತ್ತಿರುವ ಸ್ವಜನ ಘಾತದ ದುಃಖಕ್ಕೆ ತಾನು ಈಡಾಗುತ್ತಿದ್ದಿಲ್ಲೆಂತಲೂ ಆ ವೀರನು ಪಶ್ಚಾತ್ತಾಪ ಪಟ್ಟನು. ಆತನು ತನ್ನ ಚಿತ್ತಕನನ್ನು ಹಿಂದಕ್ಕೆ ತಿರುಗಿಸಿ ಈಗಲೇ ಸಮರ ಭೂಮಿಗೆ ಹೋಗಿ ವೀರ ಕ್ಷತ್ರಿಯರಿಗೆ ಉಚಿತವಾದ ರಣ ಸಾಹಸವನ್ನು ಪ್ರಕಟಮಾಡಿ, ತನ್ನ ಪೂರ್ವಜರಂತೆ ಕೀರ್ತಿಶೇಷನಾಗಬೇಕೆಂ

ತಲೂ ಬಗೆದನು; ಆದರೆ ಸಾತ್ವಿಕೆಯ ಅಧಿಕಾರಯುಕ್ತ ಅಪೌರುಷೇಯವಾದ ಬೋಧವು ಮನಸ್ಸಿನಲ್ಲಿ ಬರಲು, ಆತನು ಚಿತ್ತಕನನ್ನು ಮುಂದಕ್ಕೆ ನೂಕು ತ್ತಿದ್ದನು. ಅಂದಿನ ಕಾಳಗದಲ್ಲಿ ಪ್ರತಾಪನಿಗೆ ಏಳು ಗಾಯುಗಳಾಗಿದ್ದವು; ಅವುಗಳಲ್ಲಿ ಮೂರು ಭಾಲೆಯವು, ಒಂದು ಗುಂಡಿನದು, ಮೂರು ಖಡ್ಗ ದವು. ಆತನ ಕುದುರೆಯೂ ಹಲವು ಗಾಯುಗಳಿಂದ ಜರ್ಜರವಾಗಿತ್ತು. ಅಂದು ಹಗಲೆಲ್ಲ ಸಮರಭೂಮಿಯಲ್ಲಿ ಒಂದೇಸವನೆ ಕುದುರೆಯ ಮೇಲೆ ಕುಳಿತು ಕಾದಿದ್ದರಿಂದ ಆತನೂ ಆತನ ಕುದುರೆಯೂ ಬಹಳ ಹಣ್ಣಾಗಿದ್ದವು. ಆತನು ಹೋಗ ಹೋಗುತ್ತ ಮನಸ್ಸಿನಲ್ಲಿ—ಪ್ರತಾಪಾ, ಏನು ನಿನ್ನ ದುರ್ದೈ ವವಿದು! ನಿನ್ನಿಂದ ಎಷ್ಟು ಜನರ ಪ್ರಾಣಹಾನಿಯಾಗಬೇಕಾಗಿದೆಯೋ ತಿಳಿಯದು. ಎಲಾ, ಶಿಸೋದಿಯಾ ವಂಶದ ರಾಣಾನೆನಿಸುವ ಪುತ್ರಾ, ದೈವಹೀನನಾದ ನೀನು ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳಲಿಕ್ಕೆ ಅಧಿಕಾರಿಯೇ ಇದ್ದಂತೆ ತೋರುವದಿಲ್ಲ, ಎಂದು ಅಸಮಾಧಾನಪಡುತ್ತ ಸುಮ್ಮನೆ ಕುದು ರೆಯ ಮೇಲೆ ಕುಳಿತು, ಅದು ಹೋದತ್ತ ಹೋಗಲೆಂದು ಕಡಿವಾಣವನ್ನು ಸಡಿಲು ಬಿಟ್ಟಿರಲು, ಯಾರೋ ಗಂಭೀರ ಸ್ವರದಿಂದ—ಎಲೈ ಕೆಚ್ಚೆದೆಯ ವೀರನೇ, ನನ್ನ ಅಪ್ಪಣೆಯನ್ನು ಮನಸ್ಸಿನಲ್ಲಿ ತಾರದೆ ಹತಾಶನಾಗುವೆಯಾ? ನಿನ್ನ ಪೂರ್ವಜರು ಸ್ವಾತಂತ್ರ್ಯ ರಕ್ಷಣಕ್ಕಾಗಿ ತಮ್ಮ, ಹಾಗು ತಮ್ಮವರ ಜೀವಿತವನ್ನು ತೃಣಕ್ಕಿಂತ ಕಡೆಯೆಂದು ತಿಳಿದು ಜಗದ್ವಂದ್ಯರಾದದ್ದನ್ನು ಮರೆ ತೆಯಾ? ಮನುಷ್ಯನ ಜೀವಿತವು ಕ್ಷಣಭಂಗುರವಲ್ಲವೆ? ಆತನು ಸಂಪಾದಿ ಸಿದ ಐಶ್ವರ್ಯಾಧಿಕಾರಗಳು ನಶ್ವರವಲ್ಲವೆ? ಪ್ರತಾಪಾ, ರಾಮಾಯಣ–ಮಹಾಭಾರತಾದಿ ಮಹಾ ಮಹಾ ಐತಿಹಾಸಿಕ ಗ್ರಂಥಗಳನ್ನು ತಮ್ಮ ಉಜ್ವಲ ಕ್ಷಾತ್ರತೇಜಸ್ಸಿನಿಂದ ಪ್ರಕಾಶಿತವಾಗ ಮಾಡಿರುವ ವೀರಾಗ್ರೇಸರರು ಈಗ ಜೀವದಿಂದಿರುವರೇನು? ನಿನ್ನ ಪೂರ್ವಜರಾದ ಬಾಪ್ಪಾರಾವಳ, ಹಮ್ಮೀರ, ಸಂಗರಾಜ ಮೊದಲಾದವರ ಕೀರ್ತಿಯಲ್ಲದೆ, ಅವರ ಜಡ ದೇಹಗಳು ಸ್ಥಿರ ವಾಗಿರುವವೇ? ಇದನ್ನೆಲ್ಲ ಮರೆತು ಸ್ವಜನಘಾತದ ಸ್ಮರಣದಿಂದ ಮೋಹಿತ ನಾಗಿ ವ್ಯಸನಪಟ್ಟು ಹೀಗೆ ಉದಾಸೀನನಾಗುವದು ಯೋಗ್ಯವೆ? ಅಥವು ಕ್ಷತ್ರಿಯರ ಈ ಕೃತಿಯು ನಿನ್ನಂಥ ವೀರನಿಗೆ ಒಪ್ಪುವದಿಲ್ಲ. ನೀನು ಸಮರ ಭೂಮಿಯಿಂದ ಓಡಿಹೋಗುತ್ತೇನೆಂದು ತಿಳಿಯಬೇಡ; ಹೆಚ್ಚು ಬಲಿಷ್ಠನಾಗಿ

ಮೊಗಲರನ್ನು ಬಗ್ಗು ಬಡಿಯಲಿಕ್ಕೆ ಬೇಕಾಗುವ ಸಾಧನ ಸಾಮುಗ್ರಿಗಳನ್ನು ಸಂಪಾದಿಸಿಕೊಂಡು ಬರಲಿಕ್ಕೆ ಅವಸರದಿಂದ ಹೋಗುತ್ತೇನೆಂದು ತಿಳಿ. ಪ್ರತಾಪಾ, ಇಂದಿಗೆ ಯುದ್ಧವು ಮುಗಿಯಿತೆ? ನೀನು ಅಕಬರನಿಗೆ ಶರಣು ಹೋಗಿ ಆತನ ದಾಸನಾದೆಯಾ? ಏನು ನಿನ್ನ ಅಪಕ್ವ ವಿಚಾರವಿದು! ಯುದ್ಧದಲ್ಲಿ ವೀರರು ಒಮ್ಮೆ ಹಿಂದಕ್ಕೆ ಸರಿಯಬೇಕಾಗುವದು, ಒಮ್ಮೆ ಮುಂದಕ್ಕೆ ಬರಬೇಕಾಗುವದು, ಒಮ್ಮೆ ಪ್ರಾಣವಿಸರ್ಜನವನ್ನು ಮಾಡಬೇಕಾಗುವದು. ಯಾವಾಗ ಏನು ಮಾಡಬೇಕೆಂಬದನ್ನು ಸಮರಪಂಡಿತನಾದ ಸೇನಾನಿಯು ನಿರ್ಣಯಿಸಿಕೊಳ್ಳತಕ್ಕದ್ದು. ಕೇವಲ ಯುದ್ಧಮಾಡುವದು ನಿನ್ನ ಕರ್ತವ್ಯವಾಗಿರದೆ, ಮೇವಾಡದ ಸ್ವಾತಂತ್ರ್ಯರಕ್ಷಣವು ನಿನ್ನ ಕರ್ತವ್ಯವಾಗಿರುತ್ತದೆಂಬದನ್ನು ಮರೆಯಬೇಡ. ಅದಿರಲಿ, ಹಿಂದಕ್ಕೆ ಹೊರಳಿ ನೋಡು; ನಿನ್ನನ್ನು ಮಧ್ಯಮಾರ್ಗದಲ್ಲಿ ತುಂಡರಿಸಿ ಚಲ್ಲುವದಕ್ಕಾಗಿ ಇಬ್ಬರು ಯವನ ಸವಾರರು ಬೆನ್ನಟ್ಟಿ ಬರುತ್ತಲಿದ್ದಾರೆ. ನೀನು ಕರ್ತವ್ಯ ಭ್ರಷ್ಟನಾಗಿ ಉದಾಸೀನನಾದರೂ ನಿನ್ನ ಚಿತ್ತಕನು ಉದಾಸೀನನಾಗದೆ ತನಗೆ ಪ್ರಾಣಾಂತ ಸಮಯವು ಒದಗಿರಲು, ವೇಗದಿಂದ ಮಾರ್ಗವನ್ನು ಕ್ರಮಿಸಿ ನಿನ್ನನ್ನು ಪ್ರಾಣಸಂಕಟದಿಂದ ಮುಕ್ತಮಾಡಲಿಕ್ಕೆ ಹೆಣಗುತ್ತದೆ! ಈ ಪಶುವಿನ ಕೃತಜ್ಞತಾಬುದ್ಧಿಯನ್ನಾದರೂ ಸ್ಮರಿಸಿ, ನಿನ್ನ ಪೂರ್ವಜರ ವಿಷಯವಾಗಿ ಕೃತಜ್ಞನಾಗಿ ಕರ್ತವ್ಯತತ್ಪರನಾಗು, ಎಂದು ಬೋಧಿಸಿದ್ದು ಕಿವಿಗೆಬಿದ್ದಿತು. ಧ್ವನಿಯು ಸಾತ್ವಿಕೆಯದಾದರೂ, ಆಕೆಯ ಪವಿತ್ರ ಮೂರ್ತಿಯು ಎಲ್ಲಿಯೂ ಪ್ರತಾಪನ ಕಣ್ಣಿಗೆ ಬೀಳಲೊಲ್ಲದು!

ಸಾತ್ವಿಕೆಯ ಈ ಅಶರೀರವಾಣಿಯಿಂದ ಪ್ರತಾಪನು ಎಚ್ಚತ್ತನು. ಆತನು ಔದಾಸೀನ್ಯವನ್ನು ಬಿಟ್ಟು ತನ್ನ ನಂಬಿಗೆಯ ಚಿತ್ತಕನ ಕುತ್ತಿಗೆಯನ್ನು ಚಪ್ಪರಿಸಿ—ಶಾಬಾಸ! ಚಿತ್ತಕಾ! ನೀನು ನಿಶ್ಚಯವಾಗಿ ಪ್ರತಾಪನ ಪ್ರಾಣರಕ್ಷಕನಿರುತ್ತೀ. ನೀನು ಈವೊತ್ತಿನವರೆಗೆ ನನ್ನ ಸಂರಕ್ಷಣಕ್ಕಾಗಿ ಮಾಡುತ್ತ ಬಂದಿರುವ ಸಾಹಸವನ್ನು ನೆನಿಸಿದರೆ, ಮಹಾತ್ಮಳಾದ ಸಾತ್ವಿಕೆಯು ನಿನ್ನನ್ನು ಶ್ಲಾಘಿಸಿದ್ದು ಆಶ್ಚರ್ಯವಲ್ಲ. ಅಶ್ವಶ್ರೇಷ್ಠನೇ, ಮನುಷ್ಯನೆನಿಸುವ ನಾನು ಮೋಹಕ್ಕೆ ಒಳಗಾಗಿರಲು, ನೀನು ಕರ್ತವ್ಯಜಾಗ್ರತಿಯಿಂದ ನನ್ನ ಸಂರಕ್ಷಣಕ್ಕಾಗಿ ಹೆಣಗುತ್ತಿರುವೆಯಲ್ಲ! ಧನ್ಯನು ಧನ್ಯನು!! ಎಂದು ತನ್ನ ಕುದರೆ

ಯನ್ನು ಹೊಗಳಿ, ಅದರ ಕುತ್ತಿಗೆಯನ್ನು ಮತ್ತೊಮ್ಮೆ ಚಪ್ಪರಿಸಿದನು. ತನ್ನ ಯಜಮಾನನ ಉತ್ಸಾಹವನ್ನೂ, ಆತನು ತನ್ನನ್ನು ಈ ಪರಿ ಉತ್ತೇಜನಗೊಳಿಸಿದ್ದನ್ನು ನೋಡಿ, ಸತ್ವಶಾಲಿಯಾದ ಆ ಕುದುರೆಯು ಶ್ರಮಪರಿಹಾರವಾದಂತಾಗಿ ಅದರ ದೇಹದಲ್ಲಿ ಹೊಸ ಶಕ್ತಿಯು ಸಂಚಾರವಾಯಿತು. ಒಮ್ಮೆ ಅದು ಭುರುಗುಟ್ಟಿ ತನ್ನ ಒಡೆಯನು ಸೂಚಿಸಿದ ಕಡೆಗೆ ಒತ್ತರದಿಂದ ಸಾಗಹತ್ತಿತು. ಪ್ರತಾಪನು ಹಿಂದಿರುಗಿ ನೋಡಿದಾಗ ಇಬ್ಬರು ಮೊಗಲ ಸವಾರರು ಕುದುರೆಗಳನ್ನು ಓಡಿಸುತ್ತ ಬರುತ್ತಲಿದ್ದರು. ಅವರ ಕುದುರೆಗಳ ಖುರಗಳ ಧ್ವನಿಯು ಪರ್ವತ ಪ್ರದೇಶದಲ್ಲಿ ಪ್ರತಿಧ್ವನಿಗೊಡುತ್ತಲಿತ್ತು. ಪ್ರತಾಪನು ಕುದುರೆಯನ್ನು ವೇಗದಿಂದ ನಡಿಸಹತ್ತಿದನು. ನಿಜವಾಗಿ ನೋಡಿದರೆ ಚಿತ್ತಕವು ಬಹಳವಾಗಿ ದಣಿದಿತ್ತು. ಅದು ತನಗಾದ ಗಾಯಗಳ ನೋವಿನಿಂದ ಜರ್ಜರವಾಗಿತ್ತು. ಆದರೂ ತನ್ನ ಯಜಮಾನನಿಗೊದಗಿದ ಸಂಕಟವನ್ನರಿತು, ತನ್ನಲ್ಲಿದ್ದಷ್ಟು ಸಾಮರ್ಥ್ಯದಿಂದ ಓಡತೊಡಗಿತು; ಆದರೆ ಮೊಗಲರ ದಣಿಯದ ದೊಡ್ಡ ಕುದುರೆಗಳು ಚಿತ್ತಕನನ್ನು ಹಿಂದೆ ಕೆಡವುತ್ತ ಪ್ರತಾಪನ ತೀರ ಸನಿಯಕ್ಕೆ ಬಂದವು. ಅಷ್ಟರಲ್ಲಿ ಗುಡ್ಡದೊಳಗಿನದೊಂದು ಚಿಕ್ಕ ಹೊಳೆಯು ಹತ್ತಿತು. ಮತ್ತೊಂದು ಕುದುರೆಯಾಗಿದ್ದರೆ ಈ ಪ್ರಸಂಗದಲ್ಲಿ ಕಲ್ಲಿನಹಾಗೆ ನಿಂತುಬಿಟ್ಟು ಪ್ರತಾಪನಿಗೆ ಪ್ರಾಣಸಂಕಟವನ್ನುಂಟುಮಾಡಬಹುದಾಗಿತ್ತು; ಆದರೆ ಚಿತ್ತಕನ ಶೌರ್ಯಶಾಲಿತ್ವವೇ ವಿಲಕ್ಷಣವಾದದ್ದು; ಆ ಸ್ವಾಮಿನಿಷ್ಠ ಪಶುವು ಹೊಳೆಯನ್ನು ಟಣ್ಣನೇ ಜಿಗಿದು ಪಾರಾಗಿ ಹೋಯಿತು. ಅಷ್ಟು ಸತ್ವವು ಮೊಗಲರ ಕುದುರೆಗಳಲ್ಲಿ ಇಲ್ಲದ್ದರಿಂದ, ಅವರು ಹೊಳೆಯನ್ನು ದಾಟಲಿಕ್ಕೆ ಸ್ವಲ್ಪ ವಿಲಂಬವಾಯಿತು. ಅಷ್ಟರಲ್ಲಿ ಚಿತ್ತಕನು ತನ್ನ ಒಡೆಯನನ್ನು ಮೃತ್ಯುವಿನ ಮುಖದಿಂದ ಹೊರಗೆ ಜಗ್ಗಿಕೊಂಡು ದೂರ ಕರಕೊಂಡು ಹೋಗಿದ್ದನು! ಆದರೂ ಮೊಗಲರು ಮತ್ತೆ ಬೆನ್ನಟ್ಟಿ ಭರದಿಂದ ಬರುತ್ತಲೇ ಇದ್ದರು. ಬರಬರುತ್ತ ಚಿತ್ತಕನ ಶಕ್ತಿಯು ಕ್ಷೀಣವಾಗಹತ್ತಿದ್ದನ್ನು ಪ್ರತಾಪಸಿಂಹನು ಅರಿತನು. ಆ ಮೂಕಪ್ರಾಣಿಯು ಕಡಿದಿಗೆ ಬಿದ್ದು ಬಡಿದಾಡುವದು ಆತನಿಗೆ ಗೊತ್ತಾಯಿತು. ಇಷ್ಟಾದರೂ ಚಿತ್ತಕವು ತನ್ನ ವೇಗವನ್ನು ಕಡಿಮೆಮಾಡಿದ್ದಿಲ್ಲ. ಪ್ರತಾಪನು ತನ್ನ ಚಿತ್ತಕನನ್ನು ದಣಿಸಲಾರದೆ ಇನ್ನು ಕೆಳಗಿಳಿದು ಪಾದಚಾರಿಯಾಗಿಯೇ ಮೊಗ

ಲರ ಸಮಾಚಾರವನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದನು. ಅಷ್ಟರಲ್ಲಿ ಯಾರೋ ಪ್ರತಾಪನಿಗೆ ಸ್ವದೇಶ ಭಾಷೆಯಿಂದ—"ಎಲೈ ನೀಲಿಯ ಬಣ್ಣದ ಕುದುರೆಯ ಸವಾರನೇ, ಬೆದರಬೇಡ-ಬೆದರಬೇಡ," ಎಂದು ಕೂಗಲು, ಪ್ರತಾಪನು ಹೊರಳಿ ನೋಡಿದನು. ಆಗ ಆ ಇಬ್ಬರು ಮೊಗಲ ಸವಾರರ ಬದಲು ಒಬ್ಬ ರಜಪೂತ ಸವಾರನು ತನ್ನನ್ನು ಬೆನ್ನಟ್ಟಿ ಬರುತ್ತಲಿದ್ದನು. ಆದನ್ನು ನೋಡಿ ಪ್ರತಾಪನಿಗೆ ಆಶ್ಚರ್ಯವಾಯಿತು. ಆ ಬರುವ ರಜಪೂತನ ಗುರುತು ಸ್ವಲ್ಪ ಸ್ವಲ್ಪ ಹತ್ತಿದಂತೆ ಆಗುತ್ತಿದ್ದರೂ, ಆತನು ಇಂಥವನೇ ಎಂಬದು ಪ್ರತಾಪನಿಗೆ ಗೊತ್ತಾಗಲೊಲ್ಲದು! ಆತನು ಕೌತುಕದಿಂದ ಆ ಸರದಾರನನ್ನು ನೋಡಹತ್ತಿದನು.

ಬರಬರುತ್ತ ಪ್ರತಾಪಸಿಂಹನ ಸನಿಯಕ್ಕೆ ಬಂದ ಆ ರಜಪೂತನು, ಪ್ರತಾಪನ ತಮ್ಮನಾದ ಶಕ್ತಿಸಿಂಹನಾಗಿದ್ದನು. ಶಕ್ತಿಯು ಬೇಟೆಯ ಪ್ರಸಂಗದಲ್ಲಿ ಪ್ರತಾಪಸಿಂಹನೊಡನೆ ದ್ವೇಷಕಟ್ಟಿಕೊಂಡು ಅಕಬರ ಬಾದಶಹನನ್ನು ಕೂಡಿಕೊಂಡದ್ದನ್ನು ವಾಚಕರು ಮರೆತಿರಲಿಕ್ಕಿಲ್ಲ. ತನ್ನ ತಮ್ಮನಾದ ಶಕ್ತಿಯನ್ನು ನೋಡಿ ಪ್ರತಾಪಸಿಂಹನು ಮನಸ್ಸಿನಲ್ಲಿ—ಈತನು ಮೊಗಲಸರದಾರನನ್ನು ಯಾವ ಉದ್ದೇಶದಿಂದ ಸಂಹರಿಸಿರಬಹುದು! ತಾನು ಮೊಗಲರ ಪಕ್ಷದವನಿದ್ದು, ಮೊಗಲ ಸರದಾರನನ್ನು ಸಂಹರಿಸಲಿಕ್ಕೆ ಕಾರಣವೇನು? ತನ್ನ ಕೈಮುಟ್ಟಿ ನನ್ನನ್ನು ಸಂಹರಿಸಿ ತನ್ನ ಹಟವನ್ನು ಸಾಧಿಸಿಕೊಳ್ಳಬೇಕೆಂದು ಶಕ್ತಿಯು ಯೋಚಿಸಿರಬಹುದೇನು? ಅಹುದು, ಅಧಮನಾದ ಶಕ್ತಿಸಿಂಹನು ಹೀಗೆಯೇ ಯೋಚಿಸಿರಬಹುದು. ಹಾಗಲ್ಲದಿದ್ದರೆ—ಸಿಸೋದಿಯಾ ಕುಲದ ಅಭಿಮಾನವು ಆತನಿಗಿರುತ್ತಿದ್ದರೆ, ಆತನು ಅಕಬರನನ್ನು ಕೂಡಿಕೊಳ್ಳುತ್ತಿದ್ದನೆ? ಹಾಯ್ ಹಾಯ್! ಆತನಿಗೆ ಯಾಕೆ ಅನ್ನಬೇಕು? ನನ್ನ ಪೌರುಷವಾದರೂ ಏನು ಉಳಿದದೆ? ಸಾತ್ವಿಕೆಯ ಅಪ್ಪಣೆಯಂತೆ ನಾನು ಸಮರಭೂಮಿಯಿಂದ ಓಡಿಹೋಗುತ್ತಿದ್ದರೂ, ಇದು ಕ್ಷಾತ್ರಧರ್ಮಕ್ಕೆ ಲಾಂಛನವಾಗಿರುವದು! ಅನಾಯಾಸವೇ ಶಕ್ತಿಸಿಂಹನು ನನ್ನನ್ನು ಸಂಹರಿಸುವದಕ್ಕಾಗಿ ಬರುತ್ತಿರಲು, ನಾನು ಮುಂದಕ್ಕೆ ಹೆಜ್ಜೆಯನ್ನು ಯಾಕೆ ಇಡಬೇಕು? ಎಂದು ಯೋಚಿಸಿ, ಪ್ರತಾಪಸಿಂಹನು ಚಿತ್ತಕನನ್ನು ತಡೆದು ಶಕ್ತಿಸಿಂಹನ ಹಾದಿಯನ್ನು ನೋಡುತ್ತ ನಿಂತುಬಿಟ್ಟನು. ಶಕ್ತಿಸಿಂಹನು ತೀರ

ಹತ್ತಿರ ಬರಲು, ಪ್ರತಾಪಸಿಂಹನು ತನ್ನ ಕೈಯೊಳಗಿನ ಖಡ್ಗವನ್ನು ದೂರ ಒಗೆದು ಶಕ್ತಿಸಿಂಹನನ್ನು ಕುರಿತು—ಶಕ್ತಿಸಿಂಹ, ಬಾ, ನನ್ನ ಹೃದಯದಲ್ಲಿ ನಿನ್ನ ಖಡ್ಗವನ್ನು ಚುಚ್ಚಿ ಬಹುದಿವಸದ ನಿನ್ನ ದ್ವೇಷವನ್ನು ಸಾಧಿಸಿಕೋ! ಇಂಥ ಸಂಧಿಯು ಮುಂದೆ ನಿನಗೆ ಎಂದೂ ಸಿಗಲಿಕ್ಕಿಲ್ಲ. ಸ್ವದೇಶದ ಸ್ವಾತಂತ್ರ್ಯ ವನ್ನು ರಕ್ಷಿಸಲಾರದೆ ಸಮರಭೂಮಿಯನ್ನು ಬಿಟ್ಟು ಓಡಿಹೋಗುವ ನನ್ನಂಥ ಅಧಮ ರಜಪೂತನಿಗೆ ದೇಹಾಂತ ಪ್ರಾಯಶ್ಚಿತ್ತವು ಅವಶ್ಯವಾಗಿ ಆಗತಕ್ಕದ್ದು; ಅಂತೇ ನಾನು ಖಡ್ಗವನ್ನು ಚಲ್ಲಿಕೊಟ್ಟು ನಿಶ್ಶಸ್ತ್ರನಾಗಿ ನಿನ್ನ ಮುಂದೆ ನಿಂತು ಕೊಂಡಿದ್ದೇನೆ, ಎಂದು ನುಡಿಯಲು, ಶಕ್ತಿಸಿಂಹನು ಏನೂ ಮಾತಾಡದೆ ಪ್ರತಾಪನನ್ನು ಎವೆಯಿಕ್ಕದೆ ನೋಡುತ್ತ ಸುಮ್ಮನೆ ನಿಂತುಕೊಂಡನು. ಆಗ ಪ್ರತಾಪನು—ಯಾಕೆ ? ಶಕ್ತಿಸಿಂಹ , ಸುಮ್ಮನೆಯಾಕೆ ನಿಂತುಕೊಂಡೆ? ನನಗೆ ತಕ್ಕ ಪ್ರಾಯಶ್ಚಿತ್ತವನ್ನು ಕೊಟ್ಟು ನನ್ನ ಪಾಪದ ಕಸುವನ್ನು ಕಡಮೆ ಮಾಡುವದು ನಿನ್ನ ಮನಸ್ಸಿಗೆ ಬಾರದಿದ್ದರೆ, ನಿನ್ನ ಖಡ್ಗವನ್ನಾದರೂ ನನ್ನ ಕೈಯಲ್ಲಿ ಕೊಡು. ನಾನು ಕುದುರೆಯನ್ನು ಇಳಿಯದೆ ಆತ್ಮಹತ್ಯವನ್ನು ಮಾಡಿಕೊಂಡು ಯಾವತ್ತು ಸಂಕಟಗಳಿಂದ ಮುಕ್ತನಾಗುವೆನು, ಅನ್ನಲು, ಶಕ್ತಿಸಿಂಹನ ಕಣ್ಣುಗಳೊಳಗಿಂದ ದುಃಖಾಶ್ರುಗಳು ದಳದಳ ಸುರಿಯಹತ್ತಿ ದವು. ಶಕ್ತಿಸಿಂಹನು ತನ್ನ ಕುದುರೆಯಿಂದ ಕೆಳಗಿಳಿದು ತನ್ನ ಕೈಯೊಳಗಿನ ಖಡ್ಗವನ್ನು ಬಿಸುಟ, ಕೈಜೋಡಿಸಿಕೊಂಡು ಮೊಣಕಾಲೂರಿ ನಿಂತುಕೊಂಡು ಭಯಭಕ್ತಿಯಿಂದ ಅಣ್ಣನ ಮೋರೆಯನ್ನು ನೋಡಹತ್ತಿದನು. ಇದನ್ನು ನೋಡಿ ಪ್ರತಾಪನ ಹೃದಯವು ಕರಗಲು, ಆತನು ಕುದುರೆಯಿಂದಿಳಿದು ಶಕ್ತಿ ಸಿಂಹನ ಕೈಯನ್ನು ಹಿಡಿದು ಆತನನ್ನು ಎಬ್ಬಿಸಿ ಪ್ರೇಮದಿಂದ ಆಲಿಂಗಿಸಿದನು. ಈ ಆಕಸ್ಮಿಕ ಪ್ರಸಂಗದಿಂದ ಉಭಯ ಬಂಧುಗಳ ಕುತ್ತಿಗೆಯ ಶಿರಗಳು ಬಿಗಿದು ಆನಂದಾಶ್ರುಗಳುದುರಿದವು. ಶಕ್ತಿಸಿಂಹನು ಪ್ರತಾಪಸಿಂಹನ ಚರಣ ಧೂಲಿಯನ್ನು ಮಸ್ತಕದಲ್ಲಿ ಧರಿಸಿ ಆತನನ್ನು ಕುರಿತು—ಅಣ್ಣಾ, ಪ್ರತ್ಯಕ್ಷ ಪರಮೇಶ್ವರನ ದರ್ಶನವು ನನಗೆ ಎಂದೂ ಆಗಿರುವದಿಲ್ಲ; ಆದರೆ ಈಗ ನಿನ್ನನ್ನೇ ನಾನು ಪರಮೇಶ್ವರನೆಂದು ತಿಳಿಯುವೆನು! ಇಂದಿನವರೆಗೆ ನಾನು ಕಣ್ಣುಗಳಿದ್ದು ಕುರುಡನಾಗಿದ್ದೆನು. ಇಂದು ನನ್ನ ಕಣ್ಣುಗಳು ತೆರೆದವು; ಅಂತೇ ನಾನು ನಿನ್ನನ್ನು, ಹಾಗು ನಿನ್ನ ಸತ್ಯ ಶಕ್ತಿಯನ್ನು ತಿಳಿಯಲು ಸಮ

ರ್ಥನಾದೆನು, ಅನ್ನಲು, ಪ್ರತಾಪನು ದೊಡ್ಡ ದನಿಯಿಂದ ಅಳಹತ್ತಿದನು. ಆಗ ಶಕ್ತಿಯು—ಅಣ್ಣಾ, ನಿನ್ನ ರೋದನವು ನಿನ್ನ ಮಹಾ ಶೌರ್ಯಕ್ಕೆ ಒಪ್ಪುತ್ತದೆ; ಯಾಕಂದರೆ, ಅಸತ್ಯವನ್ನೂ-ಅನ್ಯಾಯವನ್ನೂ ಸೈರಿಸವೆ ವಜ್ರ ದಂತೆ ಕಠಿಣವಾಗುವ ನಿನ್ನ ಹೃದಯವು; ನಿಜವಾದ ಪ್ರೇಮದ ದರ್ಶನದಿಂದ ಬೆಣ್ಣೆಯಂತೆ ಕರಗಿ ಅದು ಅಶ್ರುರೂಪದಿಂದ ನೇತ್ರಗಳ ದ್ವಾರದಿಂದ ಹೊರ ಸೂಸುವದನ್ನು ನಾನು ಇಂದು ಮನಗಂಡೆನು! ಪೂಜ್ಯನಾದ ಬಂಧುವೇ, ಜ್ಯೇಷ್ಠನಾದ ನೀನು ನನಗೆ ತಂದೆಗೆ ಸಮಾನನು. ಜನ್ಮವಿರುವತನಕ ನಿನ್ನ ಚರಣದಲ್ಲಿ ಲೀನವಾಗಿರುವಂತೆ ನನ್ನನ್ನು ಆಶೀರ್ವದಿಸು; ಮತ್ತು ಸ್ವದೇಶದ ಸ್ವಾತಂತ್ರ್ಯದ ಸಲುವಾಗಿ ಪ್ರಾಣಾಹುತಿಯನ್ನು ಕೊಡುವ ಸಾಮರ್ಥ್ಯವನ್ನು ನನಗೆ ಕೊಡು, ಅನ್ನಲು, ಪ್ರತಾಪನು ಗದ್ಗದ ಸ್ವರದಿಂದ—ಪ್ರಿಯಬಂಧುವೇ, ಇದಕ್ಕಾಗಿಯೇ ನೀನು ಮೊಗಲ ಸರದಾರರನ್ನು ಸಂಹರಿಸಿ ನನಗೆ ಪ್ರಾಣ ದಾನವನ್ನು ಮಾಡಿದೆಯಾ? ನಾನು ಬದುಕಿರಬೇಕೆಂದು ನೀನು ಇಚ್ಛಿಸು ತ್ತಿದ್ದ ಬಳಿಕ, ಶಕ್ತೀ, ಇನ್ನು ನಾನು ಸಾಯುವದಿಲ್ಲ. ಮೊಗಲರಿಗೆ ತಲೆ ಬಾಗಿಸಲಿಕ್ಕಿಲ್ಲೆಂಬ ನನ್ನ ವ್ರತವನ್ನು ಪಾಲಿಸುತ್ತ ಕಷ್ಟಗಳನ್ನು ಲಕ್ಷಿಸದೆ ಸ್ವದೇಶದ ಸ್ವಾತಂತ್ರ್ಯರಕ್ಷಣಕ್ಕಾಗಿ ಹೆಣಗುವೆನು. ಫಲಪ್ರಾಪ್ತಿಯಾಗುವದು ಈಶ್ವರಾಧೀನವು. ಆದರೆ ಪ್ರಿಯಬಂಧುವೇ, ದ್ವೇಷಾಸೂಯೆಗಳನ್ನು ತೊಳೆದು ಹೃದಯವನ್ನು ಸ್ವಚ್ಛ ಮಾಡಿಕೊಂಡು, ಅದನ್ನು ಬಂಧು ಪ್ರೇಮದಿಂದ ತುಂಬಿದ ನೀನು ಧನ್ಯನೇ ಸರಿ, ಎಂದು ಬಂಧುವನ್ನು ಶ್ಲಾಘಿಸಿದನು.

ಅಣ್ಣನ ಈ ಮಾತುಗಳನ್ನು ಕೇಳಿ ಶಕ್ತಿಸಿಂಹನು ಆತನ ಚರಣಗಳ ಮೇಲೆ ಮಸ್ತಕವನ್ನಿಟ್ಟು—ಕುಲದೀಪಕನಾದ ಪ್ರತಾಪಸಿಂಹರಾಣಾ, ಪೂಜ್ಯ ನಾದ ಪ್ರಿಯ ಅಗ್ರಜನೇ, ಮೇವಾಡದ ಸ್ವಾತಂತ್ರ್ಯರಕ್ಷಣದ ಪವಿತ್ರ ಕಾರ್ಯ ದಲ್ಲಿ ನಿನಗೆ ಸಹಾಯ ಮಾಡದೆ ಮಾತ್ಸರ್ಯದಿಂದ ಅಕಬರನನ್ನು ಕೂಡಿದ ಈ ನೀಚ ಶಕ್ತಿಯನ್ನು-ದೇಶದ್ರೋಹಿಯನ್ನು-ಧರ್ಮದ್ರೋಹಿಯನ್ನು ಬಂಧು ಪ್ರೇಮದಿಂದ ಕ್ಷಮಿಸಿ ಅನುಗ್ರಹಿಸು. ನೀನು ಸಾಮಾನ್ಯ ಪುರುಷನಲ್ಲ. ಇಂದು ನಿನ್ನ ರಣಸಾಹಸವನ್ನು ನೋಡಿದ ವೈರಿಗಳು ಕೂಡ ನಿನ್ನನ್ನು ಶ್ಲಾಘಿ ಸುತ್ತಿರಲು, ನಿನ್ನ ತಮ್ಮನೆನಿಸುವವನು, ನಿನ್ನ ಬೆನ್ನಟ್ಟಿ ಬರುತ್ತಿದ್ದ ಮೊಗಲ

ಸವಾರರನ್ನು ಸಂಹರಿಸಿ ನಿನಗೆ ಶರಣು ಬಂದದ್ದೇನಾಶ್ಚರ್ಯವು! ನಿನ್ನ ಗುಣಗಳಿಗೆ ಲುಬ್ಧವಾಗಿ ನಿನ್ನನ್ನು ಏಕನಿಷ್ಠೆಯಿಂದ ಸೇವಿಸುತ್ತಿದ್ದ ಪಶುವಾದ ಈ ಚಿತ್ತ್ರಕನ ಯೋಗ್ಯತೆಯು ಸಹ ನನಗೆ ಬರಲಿಲ್ಲ! ನೋಡು, ಪ್ರಿಯ ಬಂಧುವೇ, ಅತ್ತನೋಡು; ನಿನ್ನ ಬಹಿಪ್ರಾಣವೆನಿಸುತ್ತಿದ್ದ ಚಿತ್ತ್ರಕನು, ನೀನು ಪ್ರಾಣಸಂಕಟದಿಂದ ಮುಕ್ತವಾದದ್ದನ್ನು ನೋಡಿ ಕೃತಕೃತ್ಯವಾದಂತೆ ತನ್ನ ಇಹಲೋಕದ ಯಾತ್ರೆಯನ್ನು ತೀರಿಸಿಕೊಂಡು ಹ್ಯಾಗೆ ಸ್ವರ್ಗವನ್ನು ಕುರಿತು ಪ್ರಯಾಣಮಾಡತೊಡಗಿರುತ್ತದೆ! ದಮ್ಮುಕಟ್ಟಿದ ಆ ಅಶ್ವವು, ನೀನು ಕೆಳಗೆ ಇಳಿದ ಕೂಡಲೆ ನೆಲಕ್ಕೆ ಬಿದ್ದಿತು, ಅನ್ನಲು, ಪ್ರತಾಪನು ಹಿಂದಿರುಗಿ ತನ್ನ ಚಿತ್ತ್ರಕನು ಪ್ರಾಣಸಂಕಟಕ್ಕೆ ಗುರಿಯಾಗಿ ಒದ್ದಾಡುತ್ತಿರುವದನ್ನು ನೋಡಿದನು. ಕೂಡಲೆ ಪ್ರತಾಪನು ವ್ಯಥೆಪಟ್ಟು ತನ್ನ ಏಕನಿಷ್ಠ ಸೇವಕನ ಬಳಿಗೆ ಹೋಗಲು, ಚಿತ್ತ್ರಕನು ತನ್ನ ಒಡೆಯನನ್ನು ಕೃತಜ್ಞಭಾವದಿಂದ ನೋಡಿ ಪರಲೋಕಕ್ಕೆ ತೆರಳಿತು!! ಅದನ್ನು ನೋಡಿ ಪ್ರತಾಪನು ಬಹಳ ವ್ಯಸನ ಪಟ್ಟನು. ಚಿತ್ತ್ರಕನು ಹೋದದ್ದರಿಂದ ಪ್ರತಾಪನಿಗೆ ಸಂಕಟಕಾಲದಲ್ಲಿ ಒಬ್ಬ ಪರಮ ಆಪ್ತನು ಕೈಬಿಟ್ಟಂತೆ ಆಯಿತು! ಪ್ರತಾಪನು ಕಣ್ಣುತುಂಬ ನೀರು ತಂದು ಚಿತ್ತ್ರಕನನ್ನು ನೋಡುತ್ತ ಮೂಕಭಾವದಿಂದ ರೋದನ ಮಾಡಹತ್ತಿದನು. ಅಷ್ಟರಲ್ಲಿ ಅವನ ಸೈನಿಕರು ಒಬ್ಬೊಬ್ಬರೇ ಬಂದು ಅವನನ್ನು ಕೂಡಿಕೊಳ್ಳಹತ್ತಿದರು. ಆಗ ಶಕ್ತಿಯು ಅಣ್ಣನನ್ನು ಕುರಿತು—"ಪ್ರಿಯಬಂಧುವೇ, ಮಹಾರಾಣಾ, ಇನ್ನು ನನಗೆ ಅಪ್ಪಣೆಯನ್ನು ಕೊಡಬೇಕು" ಎಂದು ಕೇಳಿಕೊಳ್ಳಲು, ಪ್ರತಾಪನು ಆತನನ್ನು ಕುರಿತು—ಶಕ್ತೀ, ನಿನ್ನಿಂದ ನನ್ನ ಪ್ರಾಣ ರಕ್ಷಣವಾಯಿತು. ಈ ಉಪಕೃತಿಗಾಗಿ ನಾನು ಮೇವಾಡದ ಸ್ವಾತಂತ್ರ್ಯವನ್ನು ರಕ್ಷಿಸಲು ಅಕಬರನೊಡನೆ ಕಾದುತ್ತ ಈ ಚಿತ್ತ್ರಕನಂತೆ ಒಂದು ದಿನ ಪರಲೋಕಕ್ಕೆ ತೆರಳುವೆನು. ಪ್ರಿಯಬಂಧುವೇ, ಇನ್ನು ನಡೆ. ಬಂಧು ಪ್ರೇಮದಿಂದ ಅಂಧನಾದ ನೀನು ನನ್ನನ್ನು ಬದುಕಿಸಿದ್ದರಿಂದ ನಿನ್ನ ಸ್ವಾಮಿಯಾದ ಅಕಬರನ ದ್ರೋಹವನ್ನು ಬಗೆದಂತಾಯಿತು! ಉಪಾಯವಿಲ್ಲ. ಈ ಮೊದಲೇ ನೀನು ನಿನ್ನ ಬಂಧುವಿನ ವಿಷಯವಾಗಿ ನಿರ್ದಯನಾಗಿ ದೇಶಾಭಿಮಾನವನ್ನು ಬಿಟ್ಟು ಮೊಗಲರನ್ನು ಕೂಡಿದ್ದರಿಂದ ಈಗ ನೀನು ಈ ಅಪಕೀರ್ತಿಗೆ ಗುರಿಯಾಗಬೇಕಾಯಿತು! ಎಂದು ನುಡಿದು ಬಂಧುವನ್ನು

ಪ್ರೇಮದಿಂದ ಆಲಿಂಗಿಸಿ ಅಪ್ಪಣೆಕೊಡಲು, ಶಕ್ತಿಸಿಂಹನು ತನ್ನ ಸ್ವಾಮಿಯಾದ ಸೇಲೀಮನ ಕಡೆಗೆ ಹೊರಟುಹೋದನು. ಇತ್ತ ಪ್ರತಾಪಸಿಂಹನು ತನ್ನ ಚಿತ್ತಕನು ಮರಣಹೊಂದಿದ ಸ್ಥಳದಲ್ಲಿಯೇ ಅದನ್ನು ಹುಗಿಸಿ, ಆ ಹುಗಿದ ಸ್ಥಳದ ಮೇಲೆ ಸಮಾಧಿಯನ್ನು ಕಟ್ಟಿಸಿದನು! ಆ ಸಮಾಧಿಯು ಈವೊತ್ತಿಗೂ "ಬಾರೋಳ" ಎಂಬ ಊರಹತ್ತರ "ಚಿತ್ತಕಕಾ ಕಬುತರಾ" ಎಂಬ ಹೆಸರಿನಿಂದ ಸ್ಥಿರವಾಗಿರುತ್ತದೆ.

ಶಕ್ತಿಸಿಂಹನು ಸೇಲೀಮನ ಬಳಿಗೆ ಹೋದಾಗ ಆ ಯುವರಾಜನು ತನ್ನ ಡೇರೆಯಲ್ಲಿ ಒಬ್ಬನೇ ಕುಳಿತಿದ್ದನು. ಜಯಪ್ರಾಪ್ತಿಯಾದದ್ದರಿಂದ ಅವನ ಮುಖಮುದ್ರೆಯು ಉಲ್ಲಸಿತವಾಗಿತ್ತು. ಪ್ರತಾಪನನ್ನು ಬೆನ್ನಟ್ಟಿ ಹೋಗಿದ್ದ ತನ್ನ ರಾವುತರು ಆತನನ್ನು ಸೆರೆ ಹಿಡಕೊಂಡು ಬರುವರೆಂದು ಸೇಲೀಮನು ಹಾದಿಯನ್ನು ನೋಡುತ್ತಿದ್ದನು. ಅಷ್ಟರಲ್ಲಿ ಶಕ್ತಿಯು ಅಲ್ಲಿಗೆ ಹೋಗಿ—ಖಾವಿಂದ, ಪ್ರತಾಪನು ತನ್ನ ಬೆನ್ನ ಹತ್ತಿದ ಯಾವತ್ತು ಜನರನ್ನು ಸಂಹರಿಸಿ ಪಾರಾಗಿ ಹೋದನು, ಎಂದು ಹೇಳಿದನು. ಇದನ್ನು ಕೇಳಿದ ಕೂಡಲೆ ಸೇಲೀಮನಿಗೆ ಸಂಶಯವು ಉತ್ಪನ್ನವಾಯಿತು. ಒಬ್ಬ ಪ್ರತಾಪನು ಎಲ್ಲ ರಾವುತರನ್ನು ಸಂಹರಿಸುವದು ಅಶಕ್ಯವೆಂತಲೂ, ಬಂಧುಪ್ರೇಮದಿಂದ ಶಕ್ತಿಸಿಂಹನೇ ಆತನಿಗೆ ಸಹಾಯ ಮಾಡಿ ಆತನನ್ನು ಪಾರಮಾಡಿರುವನೆಂತಲೂ ಆತನು ತರ್ಕಿಸಿದನು. ಆಗ ಸೇಲೀಮನು ಶಕ್ತಿಸಿಂಹನನ್ನು ಕುರಿತು—ಶಕ್ತಿಸಿಂಹ, ನೀನು ನಿಜವಾದ ಸಂಗತಿಯನ್ನು ಹೇಳು, ನಿನಗೆ ಅಭಯವಿರುತ್ತದೆ, ಪ್ರತಾಪಸಿಂಹನನ್ನು ನೀನು ಪಾರಮಾಡಿದೆಯೋ ಇಲ್ಲವೋ, ಎಂದು ಕೇಳಿದನು. ಸೇಲೀಮನು ಬಹು ದೊಡ್ಡ ಮನುಷ್ಯನು. ಆತನು ಅಭಯವನ್ನಿತ್ತ ಬಳಿಕ ಯಾವ ಬಗೆಯ ಕೇಡನ್ನೂ ಮಾಡನೆಂಬದು ಎಲ್ಲರಿಗೂ ಗೊತ್ತಿತ್ತು. ಅದರಂತೆ "ಅಭಯ"ವೆಂಬ ಶಬ್ದವು ಶಕ್ತಿಸಿಂಹನ ಕಿವಿಗೆ ಬಿದ್ದ ಕೂಡಲೆ ಆತನು ಸೇಲೀಮನನ್ನು ಕುರಿತು—ಖಾವಿಂದ, ನನ್ನ ಬಂಧುವು ಕುದುರೆಯ ಮೇಲೆ ಕುಳಿತುಕೊಂಡು ಒಬ್ಬನೇ ಹೋಗುತ್ತ ಸಂಕಟಕ್ಕೆ ಗುರಿಯಾಗಿರುವದನ್ನು ನೋಡುವದು ನನ್ನಿಂದಾಗಲಿಲ್ಲ. ಬಂಧುಪ್ರೇಮವು ನನ್ನಲ್ಲಿ ಜಾಗ್ರುತವಾದದ್ದರಿಂದಲೂ, ಇಂದಿನ ರಣರಂಗದಲ್ಲಿ ಪ್ರತಾಪನು ತೋರಿಸಿದ ಶೌರ್ಯವನ್ನು ನೋಡಿ ನನ್ನಲ್ಲಿ ಪೂಜ್ಯಬುದ್ಧಿಯು ಹುಟ್ಟಿದ್ದ

ರಿಂದಲೂ ಬೆನ್ನಟ್ಟಿದ ಮೊಗಲ ರಾವುತರನ್ನು ಸಂಹರಿಸಿ ಪ್ರತಾಪನನ್ನು ನಾನು ಪ್ರಾಣಸಂಕಟದಿಂದ ಉಳಿಸಿದ್ದು ನಿಜವು, ಎಂದು ಹೇಳಿದನು. ಅದನ್ನು ಕೇಳಿ ಸೇಲೀಮನಿಗೆ ಬಹಳ ಸಿಟ್ಟು ಬಂದಿತು; ಆದರೆ ಆತನು ಮೊದಲು ಅಭಯವನ್ನು ಕೊಟ್ಟಿದ್ದರಿಂದ ಶಕ್ತಿಸಿಂಹನನ್ನು ದಂಡಿಸುವಂತೆಯಿದ್ದಿಲ್ಲ. ಆತನು ಶಕ್ತಿಸಿಂಹನ ಸೈನ್ಯಾಧಿಕಾರವನ್ನು ಕಸಿದುಕೊಂಡನು; ಆದರಿಂದ ಆ ರಜಪೂತ ಸರದಾರನ ಅಪಮಾನವಾಗಿ ಆತನು ಸೇಲೀಮನ ಪಕ್ಷವನ್ನು ಬಿಟ್ಟು ತನ್ನ ಅಣ್ಣನನ್ನು ಕೂಡಿಕೊಳ್ಳುವದಕ್ಕಾಗಿ ಕಮಳನೇರಕ್ಕೆ ಹೋದನು. ಆತನು ಅಣ್ಣನನ್ನು ವಂದಿಸಿ ತನಗೆ ಆಶ್ರಯ ಕೊಡಬೇಕೆಂದು ಬೇಡಿಕೊಳ್ಳಲು, ಪ್ರತಾಪನು ಸಂತೋಷದಿಂದ ತಮ್ಮನಿಗೆ ಆಶ್ರಯ ಕೊಟ್ಟನು.

———

೧೧ ನೆಯ ಪ್ರಕರಣ

# ಅಧಮುತನವು.

ಈ ಮೇರೆಗೆ ಶ್ರಾವಣಮಾಸದ ಆರಂಭದಲ್ಲಿ ಹಳದಿಯಘಾಟದ ಘನ ಘೋರ ಯುದ್ಧವು ಮುಗಿಯಿತು. ಮಳೆಗಾಲವಾದದ್ದರಿಂದ ಮೊಗಲ ಸೈನ್ಯದ ಆಟವು ನಡೆಯದಾಯಿತು. ಆಗ ಸೇಲೀಮನೂ, ಮಾನಸಿಂಗನೂ ಮೇವಾಡವನ್ನು ಬಿಟ್ಟು ಸೈನ್ಯದೊಡನೆ ದಿಲ್ಲಿಗೆ ಸಾಗಿದರು. ಯುದ್ಧದಲ್ಲಿ ಬಹಳವಾಗಿ ದಣಿದಿದ್ದ ಪ್ರತಾಪನಿಗೆ ಮಳೆಗಾಲದ ಕೃಪೆಯಿಂದ ಕೆಲವು ತಿಂಗಳು ಸ್ವಲ್ಪ ವಿಶ್ರಾಂತಿಯು ದೊರೆಯಿತು; ಆದರೆ ಮೊಗಲರು ಮೇವಾಡ ವನ್ನು ಮರೆಯಲಿಲ್ಲ! ಮಳೆಗಾಲವಾಗುತ್ತಲೆ ಅವರು ಪುನಃ ಮೇವಾಡದ ಮೇಲೆ ದಂಡೆತ್ತಿ ಬಂದರು. ಮೊಗಲ ಸರದಾರರು ಮೇವಾಡದ ಬೇರೆ ಬೇರೆ ಭಾಗಗಳನ್ನು ಪ್ರವೇಸಿಸಿ ಹೊಸ ಹೊಸ ಪ್ರದೇಶಗಳನ್ನು ಕೈವಶಮಾಡಿಕೊಳ್ಳ ಹತ್ತಿದರು. ಈ ವರ್ತಮಾನವನ್ನು ಚಾರರು ಪ್ರತಾಪಸಿಂಹನ ಮುಂದೆ ಹೇಳಿದಾಗ, ಆತನು ಅರಮನೆಯ ಉಪವನದಲ್ಲಿ ಒಬ್ಬನೇ ವಿಚಾರಮಾ ಡುತ್ತ ಕುಳಿತುಕೊಂಡಿದ್ದನು. ಮೊಗಲರ ದಂಡು ಪುನಃ ಯುದ್ಧಕ್ಕೆ ಬಂದ ದ್ದನ್ನು ಕೇಳಿ, ಹೀಗೆ ತಾನು ಮೊಗಲರೊಡನೆ ಎಷ್ಟುದಿವಸ ಯುದ್ಧಮಾಡಿ ತಡಕೊಳ್ಳಬಹುದೆಂದು ಆತನು ಆಲೋಚಿಸಹತ್ತಿದನು. ಬಾದಶಹನು ತನ್ನ ಗೊಡವೆಗೆ ಬಾರದಂತೆ ಏನು ಮಾಡಬೇಕೆಂಬದು ಆತನಿಗೆ ತೋಚದಾಯಿತು. ಸುಮ್ಮನೆ ಹೀಗೆ ಯುದ್ಧಮಾಡುತ್ತ ಹೋದರೆ, ತನ್ನ ಬಲವು ಕಡಿಮೆಯಾ ಗುತ್ತ ಹೋಗಿ ಕಡೆಗೆ ತಾನು ಬಾದಶಹನಿಗೆ ತಲೆಬಾಗಿಸುವ ಪ್ರಸಂಗವಾಗಲಿ, ದೇಶತ್ಯಾಗಮಾಡುವ ಪ್ರಸಂಗವಾಗಲಿ ಬರಬಹುದೆಂದು ಆತನು ಚಿಂತಿಸ

ತೊಡಗಿದನು. ಮೊಗಲರ ಬಲವು ದಿನದಿನಕ್ಕೆ ಹೆಚ್ಚುತ್ತಹೋಗಿ, ರಾಣಾನ ಬಲವು ಮಾತ್ರ ಕುಗ್ಗುತ್ತ ನಡೆದದ್ದರಿಂದ ಆತನು ಹೀಗೆ ಚಿಂತೆಗೊಳಗಾದದ್ದು ಆಶ್ಚರ್ಯವಲ್ಲ. ಬಹಳ ಹೊತ್ತಾದರೂ ಪ್ರತಾಪನು ಕುಳಿತ ಸ್ಥಳವನ್ನು ಬಿಟ್ಟು ಏಳಲಿಲ್ಲ. ಅಷ್ಟರಲ್ಲಿ ಅಬೂದ ಅರಸನಾದ ದೇವರಾ ಎಂಬವನು ದರ್ಶನಕ್ಕೆ ಬಂದಿರುವನೆಂದು ಪರಿಚಾರಕನು ಪ್ರತಾಪನಿಗೆ ಹೇಳಿದನು. ದೇವರಾನು ಆಕಸ್ಮಿಕವಾಗಿ ತನ್ನ ದರ್ಶನಕ್ಕೆ ಬಂದದ್ದನ್ನು ಕೇಳಿ ಪ್ರತಾಪನಿಗೆ ಬಹಳ ಆಶ್ಚರ್ಯವಾಯಿತು. ದೇವರಾನು ಹೊರಗೆ ಪ್ರತಾಪನಿಗೆ ಅನುಕೂಲವಾಗಿರುವಂತೆ ತೋರಿಸುತ್ತಿದ್ದರೂ, ಸ್ವಾರ್ಥಪರಾಯಣನಾದ ಆ ಅರಸನು ಅಂತರಂಗದಿಂದ ಆಕಬರಬಾದಶಹನನ್ನು ಕೂಡಿರುವನೆಂಬದು ಪ್ರತಾಪನಿಗೆ ಗೊತ್ತಿತ್ತು. ಅಂಥವನು ಆಕಲ್ಪಿತವಾಗಿ ದರ್ಶನಕ್ಕೆ ಯಾಕೆ ಬಂದಿರಬಹುದೆಂದು ಯೋಚಿಸುತ್ತ, ಆತನನ್ನು ಕರತರಬಹುದೆಂದು ರಾಣಾನು ಪರಿಚಾರಕನಿಗೆ ಹೇಳಿದನು. ಅಪ್ಪಣೆಯಂತೆ ಪರಿಚಾರಕನು ದೇವರಾನನ್ನು ಒಳಗೆ ಕರತರಲು, ದೇವರಾನು ರಜಪೂತರ ಸಾಂಪ್ರದಾಯದಂತೆ ರಾಣಾನಿಗೆ ಬಹು ವಿನಯದಿಂದ ನಮಸ್ಕರಿಸಿದನು. ಆತನ ಈಪರಿಯ ವಿನಯವು ರಾಣಾನಿಗೆ ವಿಲಕ್ಷಣವಾಗಿ ತೋರಿತು. ಆಗ ರಾಣಾನು ದೇವರಾನನ್ನು ಸನ್ಮಾನದಿಂದ ಕುಳ್ಳಿರಿಸಿಕೊಂಡು ಕುಶಲ ಪ್ರಶ್ನೆಗಳನ್ನು ಕೇಳಿದ ಮೇಲೆ, ಆತನಿಗೆ—ಮಿತ್ರನೇ, ನೀನು ರಾಣಾನ ಬಡತನದ ಆತಿಥ್ಯವನ್ನು ಸ್ವೀಕರಿಸುವದಕ್ಕಾಗಿ ಬಂದದ್ದನ್ನು ನೋಡಿ ನನಗೆ ಬಹಳಸಂತೋಷವಾಗಿದೆ. ನಿಮ್ಮಂಥ ವೀರರ ಸಹಾಯದಿಂದ ಕಾದುತ್ತಿರುವ ನನಗೆ, ನಿನ್ನ ಈಗಿನ ಆಗಮನದಿಂದ ಬಹಳ ಸಮಾಧಾನವಾಯಿತು. ಸೇಲೀಮನು ದಂಡೆತ್ತಿ ಬಂದಿರುವನೆಂಬ ಸುದ್ದಿಯು ಬಂದಿರುವದರಿಂದ, ಅವನೊಡನೆ ಇನ್ನು ಯುದ್ಧಕ್ಕೆ ಹೊರಡಬೇಕಾಗಿದೆ. ಮಿತ್ರನೇ, ಮೇವಾಡದ ಸ್ವಾತಂತ್ರ್ಯರಕ್ಷಣದ ಕಾರ್ಯಕ್ಕೆ ನಿನ್ನ ಸಾಮರ್ಥ್ಯದ ಉಪಯೋಗವು ಈವೊತ್ತಿನವರೆಗೆ ಹೇಳಿಕೊಳ್ಳುವಹಾಗೆ ಆಗಿರುವದಿಲ್ಲ; ಆದ್ದರಿಂದ ಈಸಾರೆ ಮೊಗಲರೊಡನೆ ಯುದ್ಧಕ್ಕೆ ನೀನು ಮುಂದುವರಿದು ಕೀರ್ತಿಶಾಲಿಯಾಗತಕ್ಕದ್ದು. ರಜಪೂತರ ಗೌರವವನ್ನು ಸಂಪಾದಿಸಿದ ಶ್ರೇಯಸ್ಸು ನಿನ್ನ ಯೋಗದಿಂದ ಪ್ರಾಪ್ತವಾಗುವಂತೆ ಇದ್ದರೆ ಆಗಲಿ, ಅನ್ನಲು, ದೇವರಾನು ರಾಣಾನ ಈ ಮಾತಿನಿಂದ ಬಹಳ ಸಂತೋಷ

ಪಟ್ಟವನಂತೆ ತೋರಿಸುತ್ತ, ಆತನನ್ನು ಕುರಿತು—ರಾಣಾಜೀ, ಇಡಿಯ ರಜಪೂತ ಕುಲಕ್ಕೇ ತಾವು ಪೂಜ್ಯರು. ಹೀಗಿದ್ದು ಇಂದಿನವರೆಗೆ ನಾನು ತಮ್ಮ ಅಹಿತವನ್ನು ಚಿಂತಿಸುತ್ತ ಬಂದದ್ದು ಅಧಮತನವೇ ಸರಿ. ನಾನು ಹೊರಗೆ ತಮಗೆ ಅನುಕೂಲವಾಗಿದ್ದಂತೆ ತೋರಿಸುತ್ತಿದ್ದಗೂ, ಅಂತರಂಗ ಡಿಂದ ಅಕಬರ ಬಾದಶಹನನ್ನು ಕೂಡಿದ್ದೆನು. ಒಟ್ಟಿಗೆ ಸ್ವಾರ್ಥಾಭಿಲಾಷೆ ಯಿಂದ ಇಲ್ಲಿಯವರೆಗೆ ನಾನು ನೀಚ ಮೊಗಲರಿಗೆ ಸಹಾಯ ಮಾಡುತ್ತ ಬಂದೆನು; ಆದರೆ ನಿಮ್ಮ ಅತುಲ ಪರಾಕ್ರಮವನ್ನೂ, ಮೇವಾಡದ ಸ್ವಾತಂ ತ್ರ್ಯರಕ್ಷಣಕ್ಕಾಗಿ ನೀವು ಮಹಾ ತಪಸ್ವಿಯಂತೆ ಅನುಭವಿಸುತ್ತಿರುವ ಕಷ್ಟ ವನ್ನೂ ನೋಡಿ ನನಗೆ ಪಶ್ಚಾತ್ತಾಪವಾಗಿದೆ. ನಿಮ್ಮಲ್ಲಿರುವ ನಿಜವಾದ ಕ್ಷಾತ್ರತೇಜಸ್ಸಿನ ಪ್ರಕಾಶವು ಎಲ್ಲಕಡೆಗೆ ಬೀಳುವಂತೆಮಾಡುವದು ಯಾವತ್ತು ರಜಪೂತರ ಕರ್ತವ್ಯವಾಗಿರುತ್ತದೆ; ಆದ್ದರಿಂದ ಸನ್ಮಾನನೀಯರಾದ ರಾಣಾಜೀ, ನನಗೆ ಉಂಟಾಗಿರುವ ತೀವ್ರವಾದ ಪಶ್ಚಾತ್ತಾಪವನ್ನು ಸರಳ ಮನಸ್ಸಿನಿಂದ ವ್ಯಕ್ತಮಾಡುವದಕ್ಕಾಗಿ ಈಗ ತಮ್ಮ ಸನ್ನಿಧಿಗೆ ಬಂದಿದ್ದೇನೆ. ತಮ್ಮ ಬಳಿಗೆ ಬರಲಿಕ್ಕೆ ಇನ್ನೊಂದು ಮಹತ್ವದ ಕಾರಣವೂ ಇರುತ್ತದೆ. ಅಕಬರ ಬಾದಶಹನು ನನ್ನ ಮನೆತನದೊಡನೆ ಶರೀರಸಂಬಂಧ ಮಾಡುವ ಇಚ್ಛೆಯನ್ನು ಪ್ರಕಟಿಸಿರುತ್ತಾನೆ. ಹೀಗೆ ಬಾದಶಹನು ರಜಪೂತರ ಒಂದೊಂದೇ ಪವಿತ್ರ ಕುಲವನ್ನು ಕೆಡಿಸುತ್ತಿರುವದು ಅನುಚಿತವು. ಈ ಪ್ರಸಂಗದಲ್ಲಿ ಯಾವತ್ತು ರಜಪೂತರು ಒಟ್ಟುಗೂಡಿ, ಇನ್ನು ಮೇಲೆ ಆತನು ರಜಪೂತರ ಗೊಡವೆಗೆ ಬಾರದಂತೆ ಮಾಡುವದು ಅವಶ್ಯವು. ತಮ್ಮ ಅಪ್ಪಣೆಯಂತೆ ನಾನು ಯುದ್ಧಕ್ಕೆ ಸಿದ್ಧನಿದ್ದೇನೆ; ಆದರೆ ಬಾದಶಹನಿಗೆ ಸೈನ್ಯದೊಡನೆ ಸರಳ ತನದಿಂದ ಯುದ್ಧಮಾಡುವದಕ್ಕಿಂತ ಕಪಟವನ್ನು ಆಚರಿಸುವದು ತಕ್ಕದ್ದಾಗಿ ತೋರುತ್ತದೆ. ಹಾಗೆ ಮಾಡದಿದ್ದರೆ ವೈಭವಶಾಲಿಯೂ ಬಲಶಾಲಿಯೂ ಆದ ಬಾದಶಹನು ಹಣ್ಣಿಗೆ ಬರಲಾರನು. ಇದಕ್ಕಾಗಿ ನಾನೊಂದು ಯುಕ್ತಿಯನ್ನು ಯೋಚಿಸಿದ್ದೇನೆ, ಅಪ್ಪಣೆಯಾದರೆ ಅರಿಕೆಮಾಡಿಕೊಳ್ಳುವೆನು.

ದೇವರಾನ ಈ ಮಾತುಗಳನ್ನು ಕೇಳಿ ಪ್ರತಾಪಸಿಂಹನಿಗೆ ಆಶ್ಚರ್ಯ ವಾಯಿತು. ಇಷ್ಟು ಸರಳತನದಿಂದ ತನ್ನ ತಪ್ಪನ್ನು ಒಪ್ಪಿಕೊಂಡು, ತನಗೆ ಹಿತದ ಮಾತುಗಳನ್ನು ಮೇಲುಬಿದ್ದು ಹೇಳುವದರ ಮೇಲೆ ರಾಣಾನ ವಿಶ್ವಾ

ಸವು ಕೂಡ್ರುಲಿಲ್ಲ; ಆದರೆ ಈ ಆಗಂತುಕನು ಯಾವ ಕಪಟೋಪಾಯದಿಂದ ಬಾದಶಹನನ್ನು ಹಣ್ಣಿಗೆ ತರಲು ಯೋಚಿಸಿರುತ್ತಾನೆಂಬದನ್ನು ತಿಳಕೊಳ್ಳಲಿಕ್ಕೆ ಮಾತ್ರ ರಾಣಾನು ಆತುರಪಟ್ಟನು. ಆತನು ದೇವರಾನನ್ನು ಕುರಿತು—ಪ್ರಿಯ ಮಿತ್ರನೇ, ನಿನ್ನ ಸರಳತನಕ್ಕಾಗಿ ನಾನು ಕೃತಜ್ಞನಾಗಿದ್ದೇನೆ. ನಿಮ್ಮಂಥ ಹಿತಕರ್ತರ ಉಪಾಯಗಳನ್ನು ಕೇಳಿಕೊಳ್ಳಲು ಸಿದ್ಧನಿರುವೆನು. ಹೇಳುವದನ್ನು ಸಂಕೋಚಪಡದೆ ಹೇಳಬೇಕು, ಅನ್ನಲು, ದೇವರಾನು—ರಾಣಾಜೀ, ಫೀವು ರಾಜಧಾನಿಯಿಂದ ಹೊರಬಿದ್ದು ಬಂದು ಮೊಗಲ ಸೈನ್ಯದೊಡನೆ ಯುದ್ಧಮಾಡುವದರ ಬದಲು, ಈ ಸಾರೆ ರಾಜಧಾನಿಯಲ್ಲಿಯೇ ಇದ್ದು ಯುದ್ಧಮಾಡಬೇಕು. ತಾವು ಹೊರಬೀಳದ್ದನ್ನು ನೋಡಿ ಮೊಗಲ ಸೈನ್ಯವು ರಾಜಧಾನಿಯನ್ನು ಮುತ್ತುವದು. ಕಮಳನೇರ ದುರ್ಗವು ಬಹು ಭದ್ರವಾಗಿರುವದರಿಂದ ಇದರ ಮೇಲೆ ಮೊಗಲರ ಆಟವು ನಡೆಯದು. ಮೊಗಲರು ಬಲವಾದ ಮುತ್ತಿಗೆಯನ್ನು ಹಾಕಿರುವಾಗ ಅವರಿಗೊದಗುವ ಅನ್ನ ಸಾಮಗ್ರಿಯನ್ನು ಕಪಟದಿಂದ ಅಪಹರಿಸುವ ಕಾರ್ಯವನ್ನು ನಾನು ಮಾಡುವೆನಲ್ಲದೆ, ಬೇರೆ ಜರಪೂತ ಅರಸರ ಸಹಾಯದಿಂದ ಹೊತ್ತುಸಾಧಿಸಿ ಮೊಗಲ ಸೈನ್ಯದ ಮೇಲೆ ಹೊರಗಿನಿಂದ ಬೀಳುವೆನು. ಕಮಳನೇರದಿಂದ ದಿಲ್ಲಿಗೆ ಹೋಗುವ ಇಕ್ಕಟ್ಟಿನ ಮಾರ್ಗವನ್ನು ಪ್ರತಿಬಂಧಿಸಲಿಕ್ಕೆ ನಾನು ಉಪಾಯವನ್ನು ಯೋಚಿಸಿದ್ದೇನೆ. ಮಹಾರಾಣಾಜೀ, ನನ್ನ ಈ ಯೋಚನೆಯನ್ನು ತಮ್ಮ ವಿಶಾಲವಾದ ಬುದ್ಧಿಸಾಮರ್ಥ್ಯದ ಯೋಗದಿಂದ ಪರಿಪೂರ್ಣ ಮಾಡಿ, ಮನಃಪೂರ್ವಕವಾಗಿ ಯತ್ನಿಸಿದರೆ, ಕಮಳನೇರವನ್ನು ಮುತ್ತಿದ ಮೊಗಲ ಸೈನಿಕರಲ್ಲಿ ಒಬ್ಬನಾದರೂ ತಿರುಗಿ ದಿಲ್ಲಿಗೆ ಹೋಗಲಿಕ್ಕಿಲ್ಲ! ಕಮಳನೇರವನ್ನು ಮುತ್ತಲಿಕ್ಕೆ ಸೇಲೀಮನೇ ಬರುವ ಸಂಭವವಿರುವದರಿಂದ, ಈ ಪ್ರಸಂಗದಲ್ಲಿ ಅನಾಯಾಸವಾಗಿ ಸೇಲೀಮನನ್ನು ಸೆರೆಹಿಡಿಯಬಹುದಾಗಿದೆ. ಪ್ರಭುಗಳು ಅಪ್ಪಣೆ ಮಾಡಿದಂತೆ ನಡೆಯಲು ಸಿದ್ಧನಿದ್ದೇನೆ, ಅನ್ನಲು, ಪ್ರತಾಪನಿಗೆ ಈ ಉಪಾಯವು ಹಿತಕರವಾಗಿ ತೋರಲಿಲ್ಲ. ಆತನು ದೇವರಾನ ಈ ಉಪಾಯವನ್ನು ನಿಷೇಧಿಸಬೇಕೆನ್ನುತ್ತಿರಲು, ಮೊಗಲ ಸೇನಾಪತಿಯಾದ ಶಹಾಬಾಜಖಾನನ ಸೈನ್ಯವು ಕಮಳನೇರದ ತೀರ ಸಮೀಪಕ್ಕೆ ಬಂತೆಂದು ಒಬ್ಬ ಚಾರನು ಸುದ್ದಿಯನ್ನು ಹೇಳಿದನು. ಅದನ್ನು ಕೇಳಿ

ಪ್ರತಾಪಸಿಂಹನು ಆಶ್ಚರ್ಯಪಟ್ಟು ದೇವರಾನಿಗೆ—ಮಿತ್ರನೇ, ಮೊಗಲ ಸೈನ್ಯವು ಇಷ್ಟು ಬೇಗ ಬಂದದ್ದು ಆಶ್ಚರ್ಯವೇ ಸರಿ. ಆದರೊಡನೆ ಬೈಲಿಗೆ ನಿಂತು ಯುದ್ಧಮಾಡುವ ಪ್ರಸಂಗವು ತಾನಾಗಿಯೇ ತಪ್ಪಿದಂತಾಯಿತು. ಆಗಲಿ, ನಿನ್ನ ಯೋಚನೆಯಂತೆಯೇ ನಾನು ರಾಜಧಾನಿಯೊಳಗಿದ್ದು, ಮೊಗಲರ ಮುತ್ತಿಗೆಯ ನಿವಾರಣ ಮಾಡತೊಡಗುವೆನು. ನೀನು ಬೇರೆ ರಜಪೂತ ಸಂಸ್ಥಾನಿಕರ ಸೈನ್ಯವನ್ನು ಒಟ್ಟುಗೂಡಿಸಿ ಹೊರಗಿನಿಂದ ಬಾದಶಹನ ಸೈನ್ಯಕ್ಕೆ ತೊಂದರೆ ಕೊಡುವ ಕಾರ್ಯವನ್ನು ಅತ್ಯಂತ ದಕ್ಷತೆಯಿಂದ ಮಾಡತಕ್ಕದ್ದು. ಇಡಿಯ ವರ್ಷ ಮುತ್ತಿಗೆಯನ್ನು ಹಾಕಿದರೂ ಸಾಲುವಷ್ಟು ಅನ್ನ ಸಂಗ್ರಹವು ರಾಜಧಾನಿಯಲ್ಲಿರುತ್ತದೆ. ಈ ದುರ್ಗದ ಭದ್ರತೆಯಂತು ನಿನಗೆ ಗೊತ್ತೇ ಇರುತ್ತದೆ. ನೀನು ಈಗಲೇ ಇಲ್ಲಿಂದ ಹೊರಟು ಹೋಗಿ ನಿನ್ನ ಕಾರ್ಯವನ್ನು ಕೈಕೊಳ್ಳಬೇಕು. ಕಾರ್ಯವನ್ನು ಸಾಧಿಸದೆ ನೀನು ನನಗೆ ಮುಖವನ್ನು ತೋರಿಸಲಾಗದು; ಎಂದು ಹೇಳಿ, ತನ್ನ ಸೇವಕರಿಗೆ—ಕೋಟೆಯ ಯಾವತ್ತು ಸ್ಥಿತಿಯನ್ನು ಈ ದೇವರಾನಿಗೆ ತೋರಿಸಿ ಈತನನ್ನು ಈಗಲೇ ಕೋಟೆಬಿಟ್ಟು ದಾಟಿಸಬೇಕೆಂದು ಅಪ್ಪಣೆಮಾಡಿದನು. ದೇವರಾನ ವಿಷಯದಲ್ಲಿ ಪ್ರತಾಪನಿಗೆ ಎಳ್ಳಷ್ಟು ವಿಶ್ವಾಸವು ಉತ್ಪನ್ನವಾಗಲಿಲ್ಲ. ಅಂತೇ ಆತನು ತನ್ನ ಭದ್ರವಾದ ರಾಜಧಾನಿಯ ದುರ್ಗಮತೆಯನ್ನೂ, ಅನ್ನ ಸಾಮುಗ್ರಿಯ ವಿಪುಲತೆಯನ್ನೂ ವೈರಿಗಳ ಕಡೆಯುವನು ನೋಡಲವಶ್ಯವೆಂದು ತಿಳಿದು, ಎಲ್ಲವನ್ನು ಆತನ ಕಣ್ಣಿಗೆ ಹಾಕಿಸಿ, ಕೋಟೆಯಿಂದ ಹೊರಗೆ ಹಾಕಲು ಅಪ್ಪಣೆಮಾಡಿದನು. ಇದರಿಂದ ದೇವರಾನು ತನ್ನ ಕಪಟೋಪಾಯವುಸಫಲವಾಗಲಿಲ್ಲೆಂದು ಅಸಮಾಧಾನಪಟ್ಟು, ಕಮಳನೇರದಿಂದ ಹೊರಟುಹೋದನು. ಪ್ರತಾಪಸಿಂಹನ ಯುದ್ಧದ ಸಿದ್ಧತೆಯನ್ನೂ, ಕಮಳನೇರದ ಭದ್ರತೆಯನ್ನೂ ನೋಡಿ, ಆತನಿಗೆ ಆಶ್ಚರ್ಯವಾಯಿತು. ದೇವರಾನು ಹೋದ ಮರುದಿವಸವೇ ಶಹಾಬಾಜಖಾನನೆಂಬವನು ಕಮಳನೇರವನ್ನು ಮುತ್ತಿದನು.

ಹೀಗೆ ಮೊಗಲರು ಆಕಸ್ಮಿಕವಾಗಿ ತನ್ನ ರಾಜಧಾನಿಯನ್ನು ಮುತ್ತಿದರೂ ಪ್ರತಾಪನು ಎದೆಗುಂದಲಿಲ್ಲ. ಸ್ವೀಕೃತ ಕಾರ್ಯದಲ್ಲಿ ತನ್ನ ದೇಹವನ್ನೇ ಅರ್ಪಿಸಲು ಸಿದ್ಧನಾದವನಿಗೆ ಯಾತರ ಹಂಗೇನು? ಮೇಲಾಗಿ ಸೋನೀ

ಗಡದ ಠಾಕೂರನಾದ ಭಾಣನಂಥ ಹಲವು ವೀರರು ಪ್ರತಾಪನ ಬಳಿಯಲ್ಲಿದ್ದರು. ಮೇವಾಡದೊಳಗಿನ ಒಬ್ಬ ಸುಪ್ರಸಿದ್ಧ ಭಾಟನು ಪ್ರತಾಪನ ಪೂರ್ವಜರ ಚರಿತ್ರಗಳನ್ನು ಸ್ಫೂರ್ತಿದಾಯಕವಾಗಿ ವರ್ಣಿಸಿ ಉತ್ತೇಜನಗೊಳಿಸುತ್ತಿದ್ದನು. ತಿಂಗಳಗಟ್ಟಲೇ ಮುತ್ತಿಗೆಯು ಕೆಲಸವು ನಡೆದರೂ ಪ್ರತಾಪನು ಹಣಿಯಲೊಲ್ಲನು. ಕೋಟೆಗೆ ಲಗ್ಗೆಹತ್ತುವ ಮೊಗಲರನ್ನು ಪ್ರತಾಪನು ಕೂಡಲೆ ಹಿಂದಕ್ಕಟ್ಟುತ್ತಿದ್ದನು. ಮೊಗಲರು ಮುತ್ತಿಗೆ ಹಾಕಿ ಬೇಸತ್ತರು. ವೀರಶಿರೋಮಣಿಯೆನಿಸುವ ತಾನು ಪ್ರತ್ಯಕ್ಷ ಯುವರಾಜನಾದ ಸೇಲೀಮನನ್ನು ಕರಕೊಂಡು ಬಂದು ಇಷ್ಟುದಿನ ಮುತ್ತಿಗೆ ಹಾಕಿ ಕುಳಿತುಕೊಂಡಿದ್ದು, ಮಾನಸಿಂಗನ ಮಾನಕ್ಕೆ ಸಾಲಲಿಲ್ಲ. ಅದರಂತೆ ಒಬ್ಬ ಕ್ಷುದ್ರ ಸಂಸ್ಥಾನಿಕನು ತನ್ನಂಥ ಬಲಾಢ್ಯ ರಾಜಕುಮಾರನ ಮುತ್ತಿಗೆಯನ್ನು ಇಷ್ಟುದಿವಸ ತಡೆದದ್ದು ಸೇಲೀಮನ ಅಭಿಮಾನಸ್ವಭಾವಕ್ಕೆ ಸಹನವಾಗಲಿಲ್ಲ; ಆದರೆ ಮಾಡುತ್ತಾರೇನು? ತಮ್ಮ ಸೇನಾಪತಿಯಾದ ಶಹಾಬಾಜಖಾನನು ಕೋಟೆಯನ್ನು ತಕ್ಕೊಳ್ಳಲೇಬೇಕೆಂದು ಮಾಡಿದ ಪ್ರಯತ್ನಗಳೆಲ್ಲ ವ್ಯರ್ಥವಾಗಿದ್ದವು. ಅವರು ಖಾನನಿಗೆ, ಇನ್ನು ಬೇಗನೆ ಕೋಟೆಯನ್ನು ತಕ್ಕೊಳ್ಳಬೇಕೆಂದು ಆಗ್ರಹದಿಂದ ಅಪ್ಪಣೆಕೊಟ್ಟದ್ದಲ್ಲದೆ, ಪ್ರಸಂಗಬಿದ್ದರೆ ಅಬೂದ, ಅರಸನಾದ ದೇವರಾನ ಸಹಾಯವನ್ನು ತಕ್ಕೊಳ್ಳಬಹುದೆಂದು ಸೂಚಿಸಿದರು. ಯುವರಾಜನ, ಹಾಗು ಮಾನಸಿಂಗನ ಈ ನಿಗ್ಗರದ ಅಪ್ಪಣೆಯಿಂದ ಶಹಾಬಾಜಖಾನನು ಚಿಂತೆಗೊಳಗಾದನು. ರಜಪೂತರ ಗಟ್ಟಿಗತನದ ಅನುಭವವು ಆತನಿಗೆ ಪೂರಾ ಬಂದದ್ದರಿಂದ, ಕೋಟೆಯನ್ನು ಬಲಾತ್ಕಾರದಿಂದ ತಕ್ಕೊಳ್ಳುವದು ಅಸಂಭವವೆಂದು ಆತನು ನಿಶ್ಚಯಿಸಿದ್ದನು; ಆದರೆ ಕೋಟೆಯನ್ನು ವಶಮಾಡಿಕೊಳ್ಳದಿದ್ದರೆ ಸ್ವಾಮಿಯ ಕ್ಷೋಭಕ್ಕೆ ಗುರಿಯಾಗಬೇಕಾಗುವದೆಂಬ ಭಯವು ಆತನನ್ನು ಬಾಧಿಸಹತ್ತಿತು. ಖಾನನು ಚಿಂತಾಮಗ್ನನಾದನು. ಇನ್ನೊಂದುಸಾರೆ ಪರಮಾವಧಿಯಾದ ಶೌರ್ಯದಿಂದ ಕೋಟೆಯನ್ನು ವಶಮಾಡಿಕೊಳ್ಳಬೇಕೆಂದು ನಿಶ್ಚಯಿಸಿ, ಸೈನಿಕರನ್ನು ಹುರಿದುಂಬಿಸಿ ಮರುದಿವಸ ಕೋಟೆಯ ಮೇಲೆ ಏರಿಹೋದನು. ಮುಸಲ್ಮಾನರು ಎಷ್ಟು ಶೌರ್ಯದಿಂದ ಏರಿ ಹೋದರೂ ರಜಪೂತರ ಮುಂದೆ ಅವರ ಆಟವು ನಡೆಯಲಿಲ್ಲ. ಮೊಗಲರು ಪೆಟ್ಟುತಿಂದು ಸೋತು ಹಿಂದಿರುಗಬೇಕಾಯಿತು. ವರ್ಷಗಟ್ಟಲೆ

ಮುತ್ತಿದರೂ ಕೋಟೆಯು ವಶವಾಗುವ ಆಶೆಯು ತೋರದಾಯಿತು. ಪ್ರತಾಪನ ಯಾವತ್ತು ಆಶ್ರಯ ಸ್ಥಾನಗಳಲ್ಲಿ ಕಮಳನೇರವು ಅತ್ಯಂತ ಭದ್ರವಾದದ್ದಿತ್ತು; ಅದರ ಆಶ್ರಯವು ತಪ್ಪಿದರೆ, ಪ್ರತಾಪನ ಶಕ್ತಿಯು ಬಹುಮಟ್ಟಿಗೆ ಕಡಿಮೆಯಾಗುವಂತೆಯಿತ್ತು. ಅಂತೇ ಸೇಲೀಮನು ಈ ಸಾರೆ ಕಮಳನೇರವನ್ನು ತಕ್ಕೊಂಡೇತೀರಬೇಕೆಂದು ಮಾನಸಿಂಗನ ಆಲೋಚನೆಯಂತೆ ನಿಶ್ಚಯಿಸಿ, ಶೂರನಾದ ಶಹಾಬಾಜಖಾನನನ್ನು ಆ ಕಠಿಣ ಕಾರ್ಯಸಾಧನಕ್ಕಾಗಿ ಕಳಿಸಿದ್ದನು.

ಅಭಿಮಾನಿಯಾದ ಶಹಾಬಾಜಖಾನನು ಕಡೆಗೆ ನಿರ್ವಾಹವಿಲ್ಲದೆ ದೇವರಾನನ್ನು ಕರೆಕಳುಹಬೇಕಾಯಿತು. ಖಾನನ ನಿಮಂತ್ರಣದಂತೆ ದೇವರಾನು ಬಂದನು. ಅವರಿಬ್ಬರು ಮುಂದೆ ಏನುಮಾಡಬೇಕೆಂಬದನ್ನು ಕುರಿತು ಆಲೋಚಿಸಹತ್ತಿದರು. ಆಗ ದೇವರಾನು ಖಾನನನ್ನು ಕುರಿತು:- ಖಾನಸಾಹೇಬ, ರಾಣಾನನ್ನು ಮುತ್ತಿಗೆಯಿಂದ ಹಣ್ಣುಮಾಡಿ ಕಮಳನೇರ ದುರ್ಗವನ್ನು ವಶಮಾಡಿಕೊಳ್ಳುವದು ಸುಲಭಸಾಧ್ಯವಲ್ಲ. ದುರ್ಗವು ಬಹು ಭದ್ರವಾದದ್ದು. ಅದರಲ್ಲಿ ಅನ್ನ ಸಂಗ್ರಹವು ವಿಪುಲವಾಗಿರುತ್ತದೆ. ಭಾಣಠಾಕೂರನಂಥ ಹಲವು ರಜಪೂತವೀರರು ಜೀವದ ಪರಿವೆಯಿಲ್ಲದೆ ಕಾದಲಿಕ್ಕೆ ಸಿದ್ಧರಿದ್ದಾರೆ. ವರ್ಷಗಟ್ಟಲೆ ನಾವು ಕೋಟೆಯನ್ನು ಮುತ್ತಿದರೂ ಪ್ರತಾಪನು ಹಣಿಯನು. ಯಾವತ್ತು ಸ್ಥಿತಿಯನ್ನು ನಾನು ಕಣ್ಣುಮುಟ್ಟನೋಡಿ ಬಂದಿರುತ್ತೇನೆ. ಬಾದಶಹನ ಅನುಗ್ರಹವನ್ನು ಸಂಪಾದಿಸುವ ಇಚ್ಛೆಯಿಂದ ನಾನು ಕಮಳನೇರಕ್ಕೆ ಹೋಗಿ ರಾಣಾನ ಮನಸ್ಸಿನ ಸ್ಥಿತಿಯನ್ನೂ, ದುರ್ಗದ ಭದ್ರತೆಯನ್ನೂ, ಅನ್ನಸಂಗ್ರಹದ ಮಾನವನ್ನೂ ಅರಿತುಕೊಂಡಿರುತ್ತೇನೆ. ರಾಣಾನು ಮಹಾತಪಸ್ವಿಯು, ಸ್ವಾರ್ಥರಹಿತನು, ಸ್ವದೇಶೋದ್ಧಾರಕ್ಕಾಗಿ ಪ್ರಾಣವನ್ನೇ ಅರ್ಪಿಸಿದವನು! ಎಂಥ ಕಷ್ಟಗಳಿಗೂ ಆತನು ಸೊಪ್ಪುಹಾಕುವ ಹಾಗಿಲ್ಲ; ದುರ್ಗವಂತು ಬಹು ಭದ್ರವಾದದ್ದು, ಅನ್ನಸಂಗ್ರಹಕ್ಕೆ ಕೊರತೆಯಿಲ್ಲ; ಅಂದಬಳಿಕ ಖಾನಸಾಹೇಬ, ಈವರ್ಷವಂತು ಕೋಟೆಯು ನಮ್ಮ ಕೈಸೇರೀತೆಂದು ನನಗೆ ತೋರುವದಿಲ್ಲ. ನಾನು ಪ್ರತಾಪಸಿಂಹನ ಬಳಿಗೆ ಹೋದಾಗ ಆತನು ನನ್ನ ಕಪಟವನ್ನು ಅರಿತು, ನಮ್ಮ ವಿಷಯವಾಗಿ ನಿರ್ಭಯವಾಗಿರುವಂತೆ, ತನ್ನ ಕೋಟೆಯ ಯಾವತ್ತು ಸ್ಥಿತಿಯನ್ನು ನನಗೆ

ತೋರಿಸಿ, ದುರ್ಗದಿಂದ ನನ್ನನ್ನು ಕೂಡಲೆ ದಾಟಹಾಕಿದನು, ಎಂದು ಹೇಳಿದನು. ಅದನ್ನು ಕೇಳಿ ಶಹಾಬಾಜಖಾನನು ಹುಬ್ಬು ಗಂಟಿಕ್ಕಿ—ದೇವರಾಯ, ಪ್ರತಾಪನ ಗುಣಗಳನ್ನು ವರ್ಣಿಸುವದಕ್ಕಾಗಿ ನಾನು ನಿಮ್ಮನ್ನು ಕರೆಸಿರುವದಿಲ್ಲ. ಬಾದಶಹನ ಪಕ್ಷವನ್ನು ವಹಿಸಿರುವ ನಿಮ್ಮಂಥವರಿಗೆ ಹೀಗೆ ಮಾತಾಡುವದು ಒಪ್ಪುವದಿಲ್ಲ. ಪ್ರತಾಪನ ಯೋಗ್ಯತೆಯನ್ನು ನಾನು ಅರಿತಿರುವದಿಲ್ಲೆಂದು ನೀವು ತಿಳಿಯಬೇಡಿರಿ. ಎದುರಿಗೆ ನಿಂತು ಯಾವ ಕೆಲಸವನ್ನೂ ಮಾಡದೆ ಮರೆಮೋಸದಿಂದ ಕಾಲಕಳೆಯುವ ನಿಮ್ಮಂಥ ಸ್ವಾರ್ಥಪರರಿಗಿಂತ, ಪ್ರತಾಪನಿಂದ ಚೆನ್ನಾಗಿ ಪೆಟ್ಟುತಿಂದಿರುವ ನಮ್ಮಂಥ ಕಾರ್ಯತತ್ಪರರು ಪ್ರತಾಪನ ಯೋಗ್ಯತೆಯನ್ನು ಚೆನ್ನಾಗಿ ಅರಿತುಕೊಳ್ಳುತ್ತಾರೆಂಬದನ್ನು ನೆನಪಿನಲ್ಲಿಡಿರಿ. ನನ್ನ ಕಾರ್ಯಕ್ಕೆ ನಿಮ್ಮಿಂದ ಏನಾದರೂ ಸಹಾಯವಾದೀತೆಂದು ಕರೆಸಿದ್ದೇನೆ. ಇದು ನೋಡಿರಿ ಯುವರಾಜರ ಪತ್ರವನ್ನು. ಯುವರಾಜರವರಿಗೂ, ರಾಜಾಮಾನಸಿಂಗರವರಿಗೂ ನಿಮ್ಮ ವಿಷಯವಾಗಿ ನಾನು ಏನೆಂದು ಪತ್ರಬರೆದು ತಿಳಿಸಲಿ, ಎಂದು ಕೇಳಲು, ದೇವರಾಯನು ಬೆದರಿದನು. ಆ ಸ್ವಾರ್ಥಪರನು ಸೇಲೀಮನ ಪತ್ರವನ್ನು ನೋಡಿ, ನಾನು ಈ ಕಾರ್ಯದಲ್ಲಿ ಸಹಾಯವನ್ನು ಮಾಡಿದರೆ ಬಾದಶಹನ ಅನುಗ್ರಹಕ್ಕೆ ನಿಶ್ಚಯವಾಗಿ ಪಾತ್ರನಾಗುವೆನೆಂದು ಆಶಿಸಿದನು. ಸ್ವಾರ್ಥಪರರು ಬಹುರೂಪಿಗಳಿರುತ್ತಾರೆಂಬದು ಸುಳ್ಳಲ್ಲ. ದೇವರಾಯನು ಖಾನನನ್ನು ಕುರಿತು ಬಹು ದೈನ್ಯದಿಂದ—ಖಾನಸಾಹೇಬ, ನನ್ನ ಅಪರಾಧವನ್ನು ಕ್ಷಮಿಸಬೇಕು. ನಿಜವಾದ ಸಂಗತಿಯನ್ನು ಹೇಳಿದೆನಲ್ಲದೆ, ತಮ್ಮ ಮನಸ್ಸನ್ನು ನೋಯಿಸುವ ಉದ್ದೇಶದಿಂದ ಹೇಳಲಿಲ್ಲ. ತಮ್ಮ ಅಪ್ಪಣೆಗೆ ನಾನು ಹೊರಗಾದವನಲ್ಲ. ತಮ್ಮ ಕೃಪೆಯನ್ನು ಸಂಪಾದಿಸದ ನಾನು ಬಾದಶಹನ ಕೃಪೆಗೆ ಹ್ಯಾಗೆ ಪಾತ್ರನಾಗುವೆನು? ನಿಮ್ಮ ಅಪ್ಪಣೆಯಂತೆ ನಡಕೊಳ್ಳುವೆನು, ಉಪಾಯವನ್ನು ಸೂಚಿಸಿರಿ, ಅನ್ನಲು ಶಹಾಬಾಜಖಾನನು—ದೇವರಾಯ, ನನ್ನ ಉಪಾಯವು ನಿಂತದ್ದರಿಂದಲೇ ನಿಮ್ಮನ್ನು ಕರೆಸಿದ್ದೇನೆ. ಯುದ್ಧದ ಹೊರತು ಅನ್ಯ ಉಪಾಯಗಳು ನನನೆ ಗೊತ್ತಿಲ್ಲ. ಯುದ್ಧದಿಂದಂತು ಕೋಟೆಯು ವಶವಾಗುವಹಾಗಿಲ್ಲೆಂದು ನೀವೇ ಈಗ ಹೇಳುತ್ತಿರುವಿರಿ, ಅಂದಬಳಿಕ ಯುದ್ಧದ ಹೊರತು ಉಳಿದ ಯಾವ ಉಪಾಯವನ್ನು ಯೋಚಿಸಬೇಕೆಂಬದನ್ನು

ನೀವೇ ವಿಚಾರಮಾಡಿರಿ. ಯುವರಾಜರ ಪತ್ರವನ್ನು ನಿಮಗೆ ತೋರಿಸಿ ರುತ್ತೇನೆ. ಇನ್ನು ಮೇಲೆ ನೀವು ಮಾಡಿದ ಸಹಾಯವನ್ನು ಅವರ ಸನ್ನಿ ಧಿಗೆ ಬರೆದು ತಿಳಿಸುವೆನು. ರಜಪೂತರಾದ ನಿಮಗೆ ರಜಪೂತರ ನೆಲೆಯು ಗೊತ್ತಿರುವದರಿಂದ ಏನು ಮಾಡಬೇಕೆಂಬದನ್ನು ನೀವೇ ಯೋಚಿಸಿರಿ. ಯುದ್ಧಪ್ರಸಂಗವಿದ್ದಲ್ಲಿ ಮಾತ್ರ ನನ್ನ ಆಲೋಚನೆಯು. ಉಳಿದ ಮಾತು ನಮಗೆ ಗೊತ್ತಿಲ್ಲ.

ಹೀಗೆ ಶಹಾಬಾಜಖಾನನು ತನ್ನನ್ನು ಎಷ್ಟು ಜರಿದಾಡಿ ನುಡಿದರೂ ದೇವರಾನಿಗೆ ನಾಚಿಕೆ ಬರಲಿಲ್ಲ. ನಾಯಿಯಂತೆ ಬಾಲಗುಂಡಾಡಿಸುವ ಅಧ ಮರ ರೀತಿಯೇ ಹೀಗೆ. ಅವರು ಹೇವ-ನಾಚಿಕೆಗಳನ್ನು ಪೂರಾ ಬಿಟ್ಟಿರು ವರು. ನ್ಯಾಯಾನ್ಯಾಯಗಳ ವಿಚಾರವು ಅವರಲ್ಲಿರುವದಿಲ್ಲ. ಪಾಪಪುಣ್ಯ ಗಳ ಭಯವನ್ನು ಅವರು ತೊರೆದಿರುವರು. ಏನೇ ಆಗಲಿ, ತಮ್ಮ ಹೋಳಿಗೆ ಯುಷ್ಟು ತುಪ್ಪದಲ್ಲಿ ಬಿದ್ದರೆ ತೀರಿತೆಂದು ಅವರು ತಿಳಿದಿರುವರು! ದೇವರಾನು ಈ ಬಗೆಯ ಮನುಷ್ಯನೇ ಆಗಿದ್ದನು. ಆತನು ಏನುಮಾಡಿದರೆ ಕಮಳ ನೇರವು ಮೊಗಲರ ಕೈಸೇರೀತೆಂದು ಆಲೋಚಿಸತೊಡಗಿದನು. ಆತನು ಖಾನನ ಅಪ್ಪಣೆಯನ್ನು ಪಡೆದು ಮನೆಗೆ ಬಂದು, ಬಗೆಬಗೆಯಾಗಿ ಆಲೋ ಚಿಸಹತ್ತಿದನು. ಈ ಮೊದಲೆ ಪ್ರತಾಪನ ಮುಂದೆ ಹೇಳಿದಂತೆ ದೇವರಾನು ಹೊರಗಿನಿಂದ ಆತನಿಗೆ ಯಾವ ಬಗೆಯಿಂದಲೂ ಸಹಾಯ ಮಾಡಲಿಲ್ಲ. ಆದ್ದರಿಂದ, ಆತನು ಪ್ರಸಿದ್ಧರೀತಿಯಿಂದ ಕಮಳನೇರವನ್ನು ಪ್ರವೇಶಿಸುವ ಹಾಗಿದ್ದಿಲ್ಲ; ಕೋಟೆಯ ಕಾವಲುಗಾರರಾದ ಶೂರ ರಜಪೂತರು ಕಣ್ಣಲ್ಲಿ ಎಣ್ಣೆಹಾಕಿಕೊಂಡು ದುರ್ಗವನ್ನು ಹಗಲು-ರಾತ್ರಿ ಒಂದೇಸವನೆ ಕಾಯುತ್ತಿದ್ದ ದ್ದರಿಂದ ದೇವರಾನು ಮರೆಮೋಸದಿಂದಲೂ ಕೋಟೆಯನ್ನು ಪ್ರವೇಶಿಸುವ ಹಾಗಿದ್ದಿಲ್ಲ; ಹೀಗಾಗಿ ಆತನು ಆಲೋಚಿಸಹತ್ತಿದನು. ಆ ಸ್ವಾರ್ಥಪರನು ಬಾದಶಹನ ಪ್ರೇಮಸಂಪಾದನೆಗಾಗಿ ಎಂಥ ನೀಚಕಾರ್ಯವನ್ನಾದರೂ ಮಾಡ ಲಿಕ್ಕೆ ಹೇಸುವಹಾಗಿದ್ದಿಲ್ಲ. ಜಗತ್ತಿನಲ್ಲಿ ದುಷ್ಕೃತ್ಯಗಳಿಗೆ ಬಲುಬೇಗ ಯಶಸ್ಸು ಬರುತ್ತದೆಂದು ಜನರಾಡುವ ಮಾತು ದೇವರಾನ ಕೃತಿಯಿಂದ ಸಿದ್ಧವಾಯಿತು. ಕೈಲಾಗದ ದೇವರಾನಿಗೆ ಒಂದು ಹೇಡಿತನದ ನೀಚವಾದ ಉಪಾಯವು ತೋಚಿತು. ಪ್ರತ್ಯಕ್ಷ ಪ್ರತಾಪಸಿಂಹನ ರಾಜಧಾನಿಯಲ್ಲಿಯೂ ದುಡ್ಡಿಗೆ

ಬಾಯಿತೆರೆದು ಕುತ್ತಿಗೆ ಕೊಯ್ಯುವ ಜನರು ಇದ್ದೇ ಇದ್ದರು! ದೇವರಾನು ಅಂಥ ನೀಚರಲ್ಲಿ ಒಬ್ಬನನ್ನು ಲಂಚದಿಂದ ಒಲಿಸಿಕೊಂಡು, ದುರ್ಗದೊಳಗಿನ ಜಲಾಶಯದಲ್ಲಿ ವಿಷ ಕೂಡಿಸಿ ಸ್ವಜನಘಾತದ ಪಾಪವನ್ನು ಕಟ್ಟಿಕೊಂಡನು! ಕಮಳನೇರದೊಳಗಿನ "ನೋಗಣ" ವೆಂಬ ಒಂದು ಬಾವಿಯಿಂದ ಜನರ ನಿರ್ವಾಹವಾಗುತ್ತಿತ್ತು. ಆ ಬಾವಿಯೊಳಗಿನ ನೀರು ವಿಷಮಯವಾಗಿ, ಅದನ್ನು ಕುಡಿದ ನೂರಾರು ಜನರು ಒಮ್ಮೆಲೆ ಸತ್ತದ್ದರಿಂದಲೂ, ಬಹು ಜನರು ರೋಗಪೀಡಿತರಾದದ್ದರಿಂದಲೂ ಪ್ರತಾಪಸಿಂಹನು ಆ ದುರ್ಗವನ್ನು ಬಿಟ್ಟು ಎರಡನೆಯ ಕಡೆಗೆ ಹೋಗಬೇಕಾಯಿತು. ಪ್ರತಾಪನು ಶತ್ರುಗಳ ಕೈಯೊಳಗಿಂದ ಪಾರಾಗಿ ಹೋದಬಳಿಕ, ಸೋನೀಗಡದ ಠಾಕೂರನಾದ ಭಾಣನು ಕಡೆತನಕ ಶತ್ರುಗಳೊಡನೆ ಕಾದಿದನು; ಆತನು ಸಮರ ಭೂಮಿಯಲ್ಲಿ ದೇಹವಿಡಲು, ಕಮಳನೇರವನ್ನು ಸ್ವಾಧೀನಪಡಿಸಿಕೊಂಡ ಶ್ರೇಯಸ್ಸು ಮೇಲೆ ಹೇಳಿದ ಶಹಾಬಾಜಖಾನ ಕೋಕಾ ಎಂಬವನ ಪಾಲಿಗೆ ಬಂದಿತು. ಕಮಳನೇರವು ಶತ್ರುಗಳ ಕೈ ಸೇರಿದ್ದರಿಂದ ಪ್ರತಾಪಸಿಂಹನ ಪಕ್ಷದ ಕಸುವು ಕದಿಮೆಯಾಯಿತು; ಆದರೆ ಪ್ರತಾಪನ ಧೈರ್ಯವು ಮಾತ್ರ ಕುಗ್ಗಲಿಲ್ಲ!

೧೨ ನೆಯ ಪ್ರಕರಣ

# ವಿಚಿತ್ರಧೈರ್ಯ.

ಈ ಮೇರೆಗೆ ದೇವರಾನ ವಿಶ್ವಾಸಘಾತಕತನದಿಂದ ವೀರಮಣಿ ಪ್ರತಾಪಸಿಂಹನು ಕಮಳನೇರ ರಾಜಧಾನಿಯನ್ನು ಬಿಟ್ಟು ಮೊಗಲರ ಕೈಯೊಳಗಿಂದ ಪಾರಾಗಿ ಬಂದನೆಂದು ಹಿಂದಿನ ಪ್ರಕರಣದಲ್ಲಿ ಹೇಳಿದೆಯಷ್ಟೆ? ಅಲ್ಲಿಂದ ಆತನು ಮೇವಾಡದ ನೈಋತ್ಯದಲ್ಲಿರುವ ಚಪ್ಪನ್ನವೆಂಬ ಪ್ರದೇಶದೊಳಗಿನ ಚಾವಂದವೆಂಬ ಕೋಟೆಯಲ್ಲಿ ಬಂದು ನಿಂತನು. ಇದು ಗುಡ್ಡಗಾಡ ಪ್ರದೇಶವಾಗಿದ್ದು, ಅತ್ಯಂತ ದುರ್ಗಮವಾಗಿತ್ತು. ಈ ಪ್ರದೇಶದಲ್ಲಿ ಗುಡ್ಡಗಾಡಿನ ಭಿಲ್ಲಜನರೇ ವಾಸಿಸುತ್ತಿದ್ದರು. ವಿಪತ್ಕಾಲದಲ್ಲಿ ರಜಪೂತರಿಗೆ ಜೀವದಹಂಗುದೊರೆದು ಸಹಾಯಮಾಡುವದು ಭಿಲ್ಲರ ಕುಲಪರಂಪರಾಗತ ಕ್ರಮವಾಗಿತ್ತು. ಅದರಂತೆ ಭಿಲ್ಲರು ಪ್ರತಾಪನಿಗೆ ಅಮೂಲ್ಯ ಸಹಾಯ ಮಾಡಿದರು. ಅವರ ಸಹಾಯದಿಂದ ಪ್ರತಾಪನು ಚಾವಂದ ದುರ್ಗದಲ್ಲಿ ಸುರಕ್ಷಿತವಾಗಿ ಇರಹತ್ತಿದನು; ಆದರೆ ಆ ವೀರನ ಸುತ್ತು ಕೈತೊಳಕೊಂಡು ಬೆನ್ನುಹತ್ತಿದ್ದ ಮೊಗಲರು ಅಲ್ಲಿಯೂ ಆತನನ್ನು ಇರಗೊಡಲಿಲ್ಲ. ಶಹಾಬಾಜಖಾನನು ಪ್ರತಾಪನ ರಾಜಧಾನಿಯನ್ನು ತಕ್ಕೊಂಡಬಳಿಕ, ಧೃಢ ಪ್ರತಿಜ್ಞನಾದ ಮಾನಸಿಂಗನು ಧರ್ಮೇತಿ, ಗೋಗುಂಡ ಎಂಬ ಎರಡು ಕೋಟೆಗಳನ್ನು ಮುತ್ತಿದನು. ಅತ್ತ ಸೇನಾಪತಿಯಾದ ಮೋಹಬತ ಖಾನನು ಉದಯಪುರವನ್ನು ಸ್ವಾಧೀನಪಡಿಸಿಕೊಂಡನು. ಫರೀದಖಾನನು ಪ್ರತಾಪನ ವಾಸಸ್ಥಳವಾಗಿದ್ದ ಚಾವಂದ ದುರ್ಗದ ಕಡೆಗೆ ದಂಡೆತ್ತಿ ಬರಹತ್ತಿದನು. ಈ ಮೇರೆಗೆ ನಾಲ್ಕೂಕಡೆಯಿಂದ ಮೊಗಲರು ಮುತ್ತಹತ್ತಿದರು; ಆದರೂ ಕೆಚ್ಚೆ

ದೆಯು ಪ್ರತಾಪನ ಧೈರ್ಯವು ಎಳ್ಳಷ್ಟಾದರೂ ಕುಗ್ಗಲಿಲ್ಲ. ಆತನ ಅಪೂರ್ವ ಸಾಹಸವೂ, ಪ್ರಸಂಗಾವಧಾನವೂ ಅಚ್ಚಳಿಯದೆ ಇದ್ದಕ್ಕಿದ್ದ ಹಾಗೆ ಇದ್ದವು. ಪರಮಪ್ರಿಯ ಮಾತೃಭೂಮಿಯಾದ ಮೇವಾಡದೊಳಗಿನ ಒಂದಾನೊಂದು ಪರ್ವತ ದುರ್ಗವಾಗಲಿ, ಅಲ್ಪ ಸ್ವಲ್ಪ ಗುಡ್ಡಗಾಡ ಪ್ರದೇಶವಾಗಲಿ ತನ್ನ ಕೈಸೇರುವವರೆಗೆ, ಪರ್ವತ ಕಂದರಗಳಲ್ಲಿಯೂ, ಘೋರವಾದ ಅರಣ್ಯದಲ್ಲಿಯೂ ಭಿಲ್ಲರೊಡನೆ ಇದ್ದುಕೊಂಡು, ಸಿಸೋದಿಯಾಕುಲದ ಕೀರ್ತಿಯನ್ನು ಕಾದುಕೊಳ್ಳಬೇಕೆಂದು ಆ ಸಾಹಸಿಯು ನಿಶ್ಚಯಿಸಿದ್ದನು. ಪ್ರತಾಪನ ಸೈನ್ಯವು ದರಿಕಂದರಗಳಲ್ಲಿಯೂ, ಗುಡ್ಡಗಾಡುಗಳಲ್ಲಿಯೂ ಅಡಗಿಕೊಂಡಿರುವದು. ಪ್ರತಾಪನ ಗುಪ್ತ ಅನುಚರರು ಆತನ ಅಪ್ಪಣೆಯನ್ನು ಅಲ್ಲಲ್ಲಿ ಸೈನಿಕರಿಗೆ ತಿಳಿಸುತ್ತಿದ್ದರು. ಮಧ್ಯರಾತ್ರಿಯಲ್ಲಿ ಪರ್ವತ ಶಿಖರಗಳ ಮೇಲೆ ಹೊತ್ತಿಸಿದ ಅಗ್ನಿಜ್ವಾಲೆಯ ಗುರುತಿನಿಂದ ಸೈನಿಕರು ಪ್ರತಾಪನ ಮನೋದಯವನ್ನು ತಿಳಿದುಕೊಳ್ಳುತ್ತಿದ್ದರು. ಈ ಪ್ರಕಾರ ಬೇರೆ ಬೇರೆ ಗುಪ್ತ ಸಂಜ್ಞೆಗಳಿಂದ ಪ್ರತಾಪನು ಪ್ರಸಂಗವಶಾತ್ ತನ್ನ ಸೈನ್ಯವನ್ನು ಒಟ್ಟುಗೂಡಿಸಿ, ಮೈಮರೆತು ಕುಳಿತಿದ್ದ ಮೊಗಲರ ಮೇಲೆ ಒಮ್ಮಿಂದೊಮ್ಮೆ ಮುಗಿಬಿದ್ದು ಅವರನ್ನು ತುಂಡರಿಸುತ್ತಿದ್ದನು! ಚಿತ್ತೂರು ಮೊದಲೇ ಹೋಗಿತ್ತು; ಉದಯಪುರವು ಈಗ ಕೈಬಿಟ್ಟಿತು; ಕಮಳನೇರವು ಶತ್ರುಗಳ ಸ್ವಾಧೀನವಾಯಿತು; ಒಂದೊಂದೇ ಪರ್ವತದುರ್ಗಗಳನ್ನು ಮೊಗಲ ಸೈನಿಕರು ಆಕ್ರಮಿಸುತ್ತ ನಡೆದರು; ಪ್ರತಿ ಪರ್ವತದ ಮೇಲೆಯೂ, ಖಿಂಡಿಯಲ್ಲಿಯೂ ಶತ್ರು ಸೈನ್ಯವು ಕಾಣಹತ್ತಿತು; ಮಾನಸಿಂಗ, ಶಹಾಬಾಜಖಾನ, ಫರೀದಖಾನ, ಮೋಹಬತಖಾನರಂಥ ವೀರಾಧಿವೀರರು ಅಸಂಖ್ಯ ಸೈನ್ಯವನ್ನೊಡಗೊಂಡು ನಾಲ್ಕೂ ಕಡೆಯಿಂದ ಬರಹತ್ತಿದ್ದರು. ಇಂಥ ಭಯಂಕರ ಸ್ಥಿತಿಯಲ್ಲಿಯೂ ಮೇವಾಡದ ವೀರಮಣಿಯು ಅವಿಚಲ ಹೃದಯದಿಂದ ಯಾವತ್ತು ಸಂಕಟಗಳಿಗೆ ಎದುರಾಗುತ್ತಲಿದ್ದನು! ಅಂಥ ದೃಢಪ್ರತಿಜ್ಞನಾದ್ದರಿಂದಲೇ ಆತನು ಸಿಸೋದಿಯಾ ಕುಲದ ಸ್ವಾತಂತ್ರ್ಯವನ್ನು ರಕ್ಷಿಸಲು ಸಮರ್ಥನಾದನು.

ಮೇಲೆ ಹೇಳಿದಂತೆ ಫರೀದಖಾನನು ಚಾವಂದ ದುರ್ಗವನ್ನು ವಶಮಾಡಿಕೊಂಡು, ಅಲ್ಲಿರುವ ಪ್ರತಾಪಸಿಂಹನನ್ನು ಸಕುಟುಂಬ ಸೆರೆಹಿಡಕೊಂಡು ಹೋಗಬೇಕೆಂಬ ಉಬ್ಬಿನಿಂದ ಅಲ್ಲಿಗೆ ಸೈನ್ಯದೊಡನೆ ವೇಗಹಾಗಿ

ಸಾಗಿಬರುತ್ತಲಿದ್ದನು; ಆದರೆ ಪ್ರತಾಪಸಿಂಹನು ಬುದ್ಧಿಗೇಡಿಯಿದ್ದಿಲ್ಲ. ಆತನ ಗುಪ್ತವಾದ ಅಪ್ಪಣೆಯು ಗುಡ್ಡಗಾಡಿನೊಳಗೆ ನಾಲ್ಕೂಕಡೆಯಲ್ಲಿ ಅಡಗಿಕೊಂಡಿದ್ದ ಸೈನ್ಯಕ್ಕೆ ಚಾರರ ಮುಖದಿಂದ ಗೊತ್ತಾಯಿತು. ಅದರಂತೆ ಬೇರೆ ಸಂಕೇತಗಳಿಂದಲೂ ಆತನ ಅಪ್ಪಣೆಯು ಹಾ ಹಾ ಅನ್ನುವದರೊಳಗೆ ಎಲ್ಲರಿಗೂ ಮುಟ್ಟಿತು. ನಾಲ್ಕೂಕಡೆಯಿಂದ ಸಮುದ್ರದ ತೆರೆಗಳಂತೆ ರಜಪೂತ ಸೈನ್ಯವು ತನ್ನ ಮೇಲೆ ಸಾಗಿಬರುವದನ್ನು ಫರೀದಖಾನನು ನೋಡಿದನು. ರಜಪೂತರ ಆವೇಶದ ಈ ದೌಡಿನಲ್ಲಿ ಫರೀದಖಾನನ ಸೈನಿಕರೊಬ್ಬರೂ ಜೀವದಿಂದ ಉಳಿಯಲಿಲ್ಲ! ಖಾನನು ಸಸೈನ್ಯವಾಗಿ ಸಮರಭೂಮಿಯಲ್ಲಿ ತುಂಡರಿಸಲ್ಪಟ್ಟನು. ಅಷ್ಟರಲ್ಲಿ ಮಳೆಗಾಲವು ಬಂದದ್ದರಿಂದ ಮಾನಸಿಂಗನೇ ಮೊದಲಾದವರು ತಮ್ಮ ಸೈನ್ಯದೊಡನೆ ದಿಲ್ಲಿಗೆ ತಿರುಗಿ ಹೋದರು. ಕೆಚ್ಚೆದೆಯ ಪ್ರತಾಪನ ನಿಶ್ಚಯುವು ಬಣ್ಣಿಸತಕ್ಕದ್ದೇ ಸರಿ. ಬಳಿಯಲ್ಲಿದ್ದ ದ್ರವ್ಯವೂ, ಸ್ವಾಧೀನದಲ್ಲಿದ್ದ ಪರ್ವತ ದುರ್ಗಗಳೂ ಕೈಬಿಟ್ಟು ಹೋದ ಹೋದಂತೆ, ನಿರ್ಭಯನಾದ ಆ ಪ್ರತಾಪನ ಸಾಹಸವೂ, ಪರಾಕ್ರಮವೂ, ಉದ್ಯೋಗಶಾಲಿತ್ವವೂ ಅಭಿವೃದ್ಧವಾಗಹತ್ತಿದವು. “ತಾನು ಬದುಕಿರುವವರೆಗೆ ಇಡಿಯ ಜಗತ್ತಿನ ವಿರುದ್ಧವಾಗಿ ತಾನೊಬ್ಬನೇ ಹೋರಾಡಿ, ತನ್ನ ಜಯಶಾಲಿಯಾದ ಖಡ್ಗದ ಸಹಾಯದಿಂದ ಮೇವಾಡವನ್ನು ಸಂರಕ್ಷಿಸುವೆನು; ಮೇವಾಡದ ಪರ್ವತಗಳಮೇಲಿನ ಪ್ರತಿಯೊಂದು ಬಂಡೆಗಲ್ಲ ಮೇಲೆ ನನ್ನವೀರತ್ವದ ಹೆಸರನ್ನು ಕೊರಿಸಿದಂತೆ ಮಾಡುವೆನು,”ಎಂದು ಆ ವೀರಮಣಿಯು ದೃಢಪ್ರತಿಜ್ಞೆಯನ್ನು ಮಾಡಿದನು. ಪ್ರತಿವರ್ಷ ಮಳೆಗಾಲದಲ್ಲಿ ಆತನಿಗೆ ವಿಶ್ರಾಂತಿಯು ದೊರೆಯುತ್ತಲಿತ್ತು. ಮಳೆಗಾಲ ತೀರುತ್ತಲೇ ಮೊಗಲ ಸೈನ್ಯವು ಮತ್ತೆ ದಂಡೆತ್ತಿ ಬರುತ್ತಲಿತ್ತು. ಪ್ರತಾಪನ ಪರಾಕ್ರಮದ, ಹಾಗು ಸಾಹಸ-ದೃಢನಿಶ್ಚಯಗಳ ಸುದ್ದಿಯು ದಿಲ್ಲಿಯುವರೆಗೆ ಮುಟ್ಟಿ, ಬರಬರುತ್ತ ಅದು ಬಾದಶಹನ ಕಿವಿಯುವರೆಗೆ ಹೋಯಿತು. ವೈರಿಗಳು ಕೂಡ ಪ್ರತಾಪನ ಚರಿತ್ರ ಶ್ರವಣದಿಂದ ತಲೆದೂಗಹತ್ತಿದರು. ಇದು ವೀರಾಗ್ರಣಿಯಾದ ಮಾನಸಿಂಗನಿಗೆ ಸಹನವಾಗುತ್ತಿದ್ದಿಲ್ಲ. ಆತನು ಪ್ರತಾಪನನ್ನು ಗೊತ್ತಿಗೆ ಹಚ್ಚಿಯೇ ಬಿಡಬೇಕೆಂದು ನಿಶ್ಚಯಿಸಿದ್ದನು. ವಸಂತಕಾಲವು ಬರುತ್ತಲೆ ಮಾನಸಿಂಗನು ಮತ್ತೆ ಮೇವಾಡದ ಮೇಲೆ ದಂಡೆತ್ತಿ ಬಂದನು. ಮೇವಾ

ಡದ ಪರ್ವತರಾಶಿಗಳೂ, ಯಾವತ್ತು ಗುಡ್ಡಗಾಡ ಪ್ರದೇಶವೂ ಮೊಗಲ ಸೈನ್ಯದಿಂದ ಆಚ್ಛಾದಿಸಲ್ಪಟ್ಟವು. ಮೊಗಲ ಸೇನಾಪತಿಯು ಒಂದೇಸವನೆ ವಿಜಯವನ್ನು ಸಂಪಾದಿಸುತ್ತ ಮುಂದಕ್ಕೆ ಸಾಗಹತ್ತಿದನು. ಚಪ್ಪನ್ನ ದೇಶ ದೊಳಗಿನ ಒಂದೊಂದೇ ಪರ್ವತದುರ್ಗಗಳು ಮೊಗಲರ ಕೈಸೇರಹತ್ತಿದವು. ಅಲ್ಲಲ್ಲಿ ಅಡಗಿಕೊಂಡು ಕುಳಿತಿದ್ದ ರಜಪೂತ ವೀರರ ಸಣ್ಣ ಸಣ್ಣ ಗುಂಪುಗಳು ಹೊಡೆದೋಡಿಸಲ್ಪಟ್ಟವು! ಹೀಗೆ ಆ ವರ್ಷ ಮೊಗಲ ಸೈನ್ಯವು ಮಿತಿಮೀರಿ ಸಾಹಸ ಮಾಡಿದರೂ ಅದರ ಪ್ರಯತ್ನವು ಆ ವರ್ಷವೂ ಸಫಲವಾಗದೆ ವ್ಯರ್ಥವಾಯಿತು. ಮತ್ತೆ ಹೊಸವರ್ಷ ಬಂದಿತು; ಅದೂ ವ್ಯರ್ಥವಾಯಿತು. ಮತ್ತೆ ಮೂರನೆಯ ವರ್ಷವು ಬಂದಿತು, ಅದೂ ವ್ಯರ್ಥವಾಯಿತು. ಹೀಗೆ ಹಲವು ವರ್ಷಗಳು ಕ್ರಮಿಸಿಹೋಗಿ, ಅನಂತ ಯುದ್ಧಗಳ ಅಂತವಾಯಿತು; ಆದರೆ ಮೊಗಲರ ಪರಾಕ್ರಮವು ಸಫಲವಾಗಲಿಲ್ಲ, ಮೇವಾಡವನ್ನು ಸಂಪೂರ್ಣ ಗೆಲ್ಲುವದು ಅವರಿಂದಾಗಲಿಲ್ಲ; ಪ್ರತಾಪನು ತಲೆಬಾಗಿಸಲಿಲ್ಲ!

ದಿಲ್ಲೀಶ್ವರನಾದ ಅಕಬರ ಬಾದಶಹನಾದರೂ ಕಡಿಮೆ ದೃಢನಿಶ್ಚಯದವನಿದ್ದಿಲ್ಲ. ಅಂಥ ವಿಲಕ್ಷಣ ಬುದ್ಧಿಶಾಲಿಯಾದ ವೀರಾಗ್ರೇಸರನ ದೀರ್ಘ ಪ್ರಯತ್ನಕ್ಕೂ ಹಣಿಯದೆ, ಪ್ರತಾಪಸಿಂಹನು ತನ್ನ ಸ್ವಾತಂತ್ರ್ಯವನ್ನು ಕಾಯ್ದುಕೊಂಡದ್ದರಿಂದಲೇ, ಆ ರಜಪೂತ ವೀರನ ಕೀರ್ತಿಯು ಅಜರಾಮರವಾಗಿ ಉಳಿದಿರುತ್ತದೆ. ಪ್ರತಾಪಸಿಂಹನನ್ನು ಗೆದ್ದ ಹೊರತು ನಿಶ್ಚಿಂತನಾಗಲಿಕ್ಕಿಲ್ಲೆಂದು ಬಾದಶಹನು ನಿಶ್ಚಯಿಸಿದ್ದನು. ಆತನು ಉತ್ಸಾಹಶಾಲಿಗಳಾದ ಸೈನಿಕರನ್ನು ಮೇವಾಡದ ಮೇಲೆ ಕಳಿಸಹತ್ತಿದನು. ಪ್ರತಿವರ್ಷ ದೊಡ್ಡ ದೊಡ್ಡ ಸೈನ್ಯಗಳು ಮೇವಾಡದ ಮೇಲೆ ಸಾಗಿಬರಹತ್ತಿದವು. ದಿಲ್ಲಿಯ ಸಾಮ್ರಾಜ್ಯದೊಳಗಿನ ಪ್ರಮುಖ ಸೇನಾಪತಿಗಳು, ಯುದ್ಧಕಲಾಕುಶಲರಾದ ಸೈನಿಕರೊಡನೆ ಮೇವಾಡದ ಮೇಲೆ ಸಾಗಿಬರಹತ್ತಿದರು; ಆದರೆ ಪ್ರತಾಪಶಾಲಿಯಾದ ಪ್ರತಾಪನು ಅನುಪಮೇಯವಾದ ಧೈರ್ಯದಿಂದ ಮೊಗಲರೊಡನೆ ಒಂದೇಸವನೆ ಕಾದುತ್ತಲಿದ್ದನು. ಕಡೆಗೆ ಮೊಗಲರು, ಆತನು ವಾಸಿಸುತ್ತಿದ್ದ ಚಾವಂದದುರ್ಗವನ್ನು ತಮ್ಮ ವಶಮಾಡಿಕೊಂಡರು. ಆಗ ಪ್ರತಾಪಸಿಂಹನು ಯಾವಾಗಲೂ ಪರ್ವತಕಂದರಗಳಲ್ಲಿಯೂ, ನಿರ್ಜನವಾದ

ಗಹನ ಅರಣ್ಯಗಳಲ್ಲಿಯೂ ವಾಸಮಾಡಬೇಕಾಯಿತು! ಮೇವಾಡದ ಪಟ್ಟಾಭಿಷಕ್ತ ರಾಣಿಯೂ, ರಾಜಪುತ್ರನೂ, ರಾಜಸ್ನುಷೆಯೂ, ರಾಜಕನ್ನೆಯರೂ ಗಿರಿಗಂಹ್ವರಗಳಲ್ಲಿಯೇ ವಾಸಿಸುತ್ತಿದ್ದರು. ವರ್ಷಾನುವರ್ಷ ಪ್ರತಾಪನಿಗೂ ಆತನ ಕುಟುಂಬದವರಿಗೂ ಭೆಟ್ಟಿಯಾಗುತ್ತಿದ್ದಿಲ್ಲ. ಪ್ರತಾಪನೊತ್ತಟ್ಟಿಗೆ ಯುದ್ಧಮಾಡುವದರಲ್ಲಿ ತೊಡಗಿದ್ದರೆ, ಅವನ ಕುಟುಂಬದವರೊತ್ತಟ್ಟಿಗೆ ಆತ್ಮಸಂರಕ್ಷಣದಲ್ಲಿ ತೊಡಗಿರುತ್ತಿದ್ದರು; ಆದರೆ ಆ ರಾಜಕುಟುಂಬದವರ ದುರ್ದೈವವು ಅವರನ್ನು ಒಂದುಗವಿಯಲ್ಲಾದರೂ ಸ್ವಸ್ಥವಾಗಿ ಇರಗೊಡುತ್ತಿದ್ದಿಲ್ಲ! ಈ ಗವಿಯಿಂದ ಆ ಗವಿಗೆ, ಆ ಕಂದರದಿಂದ ಈ ಕಂದರಕ್ಕೆ, ಈ ಅಡವಿಯಿಂದ ಆ ಆಡವಿಗೆ, ಹೀಗೆ, ಬೆಕ್ಕು ಮರಿಗಳನ್ನು ಕಚ್ಚಿಕೊಂಡು ಮನೆಯಿಂದ ಮನೆಗೆ ಓಡಾಡುವಂತೆ ಪಟ್ಟಾಭಿಷಕ್ತ ಮಹಾರಾಣಿಯೂ, ಯುವರಾಜನಾದ ಅಮರಸಿಂಗನೂ ಓಡಾಡಬೇಕಾಗುತ್ತಿತ್ತು. ಶತ್ರುಸೈನ್ಯವು ಹತ್ತಿರ ಬಂದಕೂಡಲೆ ಹಾಗೇ ಉಪವಾಸವೇ ಒಂದು ಪರ್ವತದಿಂದ ಮತ್ತೊಂದು ಪರ್ವತಕ್ಕೆ ಅವರು ಹೋಗಬೇಕಾಗುತ್ತಿತ್ತು! ಒಮ್ಮೊಮ್ಮೆ ಅವರು ಕಾಡುಭಿಲ್ಲರ ಗುಡಿಸಲಲ್ಲಿ ಕಾಲಹರಣ ಮಾಡಿದರೆ, ಮತ್ತೊಮ್ಮೆ ಕ್ರೂರಮೃಗಗಳ ಗವಿಯಲ್ಲಿ ಅಡಗಿಕೊಂಡು ಕುಳಿತುಕೊಳ್ಳಬೇಕಾಗುತ್ತಿತ್ತು! ಆದರೂ ಆ ಮಹಾತ್ಮನಾದ ಪ್ರತಾಪನ ಕುಟುಂಬವು, ಈ ಭಯಂಕರವಾದ ತಾಪಕ್ಲೇಶಗಳನ್ನು ಸ್ವದೇಶದ ಸ್ವಾತಂತ್ರ್ಯರಕ್ಷಣಕ್ಕಾಗಿ ಆನಂದದಿಂದ ಸಹಿಸುತ್ತಲಿತ್ತು! ತಡೆಯಲಾಗದ ಚಳಿಯ, ಹಾಗು ಸಹಿಸಲಾರದ ಬಿಸಿಲಿನ, ಆದರಂತೆ ನಿಲ್ಲಲಾಗದ ಮಳೆಯ ಬಾಧೆಗಳಲ್ಲಿ, ಪರ್ವತಗಳ ಹೊರತು ಬೇರೆ ಆಶ್ರಯಸ್ಥಾನಗಳೇನೂ ಅವರಿಗೆ ಇದ್ದಿಲ್ಲ. ಒಂದುವೇಳೆ ಅವರಿಗೆ ಅಶನಕ್ಕೆ ಸಹ ಅಭಾವವಾಗಹತ್ತಿತು. ಒಮ್ಮೊಮ್ಮೆ ಅವರು ಅಡವಿಯೊಳಗಿನ ಒಂದು ಪ್ರಕಾರದ ಹುಲ್ಲಿನ ಹಿಟ್ಟಿನ ಬಕ್ಕರಿಯನ್ನು ತಿಂದು ಕಾಲಹರಣ ಮಾಡಬೇಕಾಗುತ್ತಿತ್ತು! ಒಮ್ಮೊಮ್ಮೆ ದರಿಕಂದರಗಳಲ್ಲಿ ಸಿಂಹ, ಹುಲಿ, ಕರಡಿಗಳ ಉಪದ್ರವದ ಭಯದಿಂದ ಗಿಡಗಳಿಗೆ ತೊಟ್ಟಿಲು ಕಟ್ಟಿ, ಅವುಗಳಲ್ಲಿ ಅವರು ತಮ್ಮ ಹುಡುಗರನ್ನು ಇಡಬೇಕಾಗುತ್ತಿತ್ತು. ಆ ತೊಟ್ಟಿಲುಗಳನ್ನು ಕಟ್ಟಿದ ಒಂಕಿಗಳೂ, ಸರಪಳಿಗಳೂ ಜಾವಡಾ ಹಾಗು ಚೋಂಡ ಎಂಬಲ್ಲಿಯ ಅರಣ್ಯಗಳಲ್ಲಿ ಈಗಲೂ ಇರುತ್ತವಂತೆ! ಆ ತೊಟ್ಟಿಲು ಕಟ್ಟಿದಗಿಡಗಳನ್ನೂ ಸ್ಥಳಗಳನ್ನೂ ಈಗಲೂ ಅಲ್ಲಿಯ

ಜನರು ತೋರಿಸುತ್ತಾರಂತೆ! ಇಂಥ ದಾರುಣ ಕ್ಲೇಶವನ್ನು ಸಹನಮಾಡುತ್ತ ಪ್ರತಾಪನು ಮೊಗಲರೊಡನೆ ಹೋರಾಡಿದನು!

ಪ್ರತಾಪಸಿಂಹನ ಪ್ರಖರವಾದ ಈ ತಪಃಕಾಂತಿಯು ದಿಲ್ಲಿಯವರೆಗೆ ಹಬ್ಬಿ, ಅದು ಜನರ ಕಣ್ಣುಗಳನ್ನು ಕುಕ್ಕಹತ್ತಿತು! ಪ್ರತಾಪನ ವೀರ್ಯದ ಸಮಗ್ರ ವೃತ್ತಾಂತದಿಂದ ದಿಲ್ಲಿಯವರ ಕಿವಿಗಳು ಗಡಚಿಕ್ಕಹತ್ತಿದವು. ಸಮಸ್ತವಾದ ಭರತಖಂಡದಲ್ಲಿ ಆತನ ಪ್ರತಾಪದ ದುಂದುಭಿಯು ಗರ್ಜಿಸಹತ್ತಿತು. ಪ್ರತಾಪಸಿಂಹನ ಅದ್ಭುತ ಪರಾಕ್ರಮವನ್ನೂ, ಅಪೂರ್ವ ಸಾಹಸವನ್ನೂ, ವಿಲಕ್ಷಣ ದೃಢನಿಶ್ಚಯವನ್ನೂ, ಅತುಲವಾದ ಸ್ವದೇಶಭಕ್ತಿಯನ್ನೂ ಕೇಳಿದವರು ಹಿಂದುಗಳಾಗಿರಲಿ, ಮುಸಲ್ಮಾನರಾಗಿರಲಿ ಅವರು ಪ್ರತಾಪನ ವಿಷಯವಾಗಿ ಶತಶಃ ಧನ್ಯವಾದವನ್ನು ಮಾಡದೆಯಿರುತ್ತಿದ್ದಿಲ್ಲ! ಸ್ವತಃ ಪ್ರತಾಪಸಿಂಹನೊಡನೆ ಹೋರಾಡುತ್ತಿದ್ದ ಸೈನಿಕರು ಕೂಡ ಪ್ರತಾಪಸಿಂಹನನ್ನು ಹೊಗಳದೆಯಿರಲಿಲ್ಲ! ಈ ಕ್ಷತ್ರಿಯ ವೀರನ ಅದ್ಭುತ ಪರಾಕ್ರಮವನ್ನು ಕೇಳಿ, ಮಹಾನುಭಾವನಾದ ಅಕಬರ ಬಾದಶಹನು ಕೂಡ ಆಶ್ಚರ್ಯಚಕಿತನಾಗುತ್ತಿದ್ದನು. ಆ ಸಾರ್ವಭೌಮನೂ, ಆತನ ಪರಿವಾರವೂ ಪ್ರತಾಪನ ಭೀಮ ಪರಾಕ್ರಮದಿಂದ ಸಂತುಷ್ಟರಾಗಿ ಧನ್ಯೋದ್ಗಾರಗಳನ್ನು ಹೊರಡಿಸುತ್ತಲಿದ್ದರು. ದಿಲ್ಲಿಯ ವೈಭವಶಾಲಿಯಾದ ರತ್ನಖಚಿತಸಿಂಹಾಸನದ ಮೇಲಿಂದ, ಗಿರಿಗಂಹ್ವರಗಳಲ್ಲಿ ವಾಸಿಸುವ ದರಿದ್ರನಾದ ಪ್ರತಾಪಸಿಂಹನ ಮೇಲೆ ಸ್ತುತಿಸ್ತೋತ್ರಗಳ ಮಳೆಯು ಸುರಿಯಹತ್ತಿತು! ಸಮಗ್ರವಾದ ಭಾರತವರ್ಷವು ಪ್ರತಾಪಸಿಂಹನ ಜಯಜಯಕಾರದಿಂದ ಗಜಬಜಿಸಿ ಹೋಯಿತು! ಆ ವೀರಶಿಖಾಮಣಿಯ ವೀರ್ಯದ ಪ್ರಸಂಗಗಳನ್ನು ಕೇಳಿದರೆ, ಪ್ರಾಚೀನಕಾಲದ ಭಾರತೀಯ ಮಹಾವೀರರ ಪರಾಕ್ರಮದ ಸ್ಮರಣವಾಗುವದು! ಮಹಾಭಾರತದೊಳಗಿನ ಅರ್ಜುನನೇ ಮೊದಲಾದ ವೀರ ಪುಂಗವರ ಪರಾಕ್ರಮವನ್ನು ಓದಿದರೆ, ಇತಿಹಾಸಜ್ಞರಿಗೆ ಪ್ರತಾಪಶಾಲಿಯಾದ ಪ್ರತಾಪನ ವೀರತ್ವದ ಸ್ಮರಣವಾಗುವದು. ಪ್ರತಾಪನು, ಏಳುಕೋಟಿ ಪ್ರಜೆಗಳ ಚಕ್ರವರ್ತಿಯಾದ ಭಾರತ ಸಾರ್ವಭೌಮಶಿಖಾಮಣಿ ಅಕಬರನೊಡನೆ ಎದೆಗೊಟ್ಟು ಕಾದಿದ್ದು ಸಾಮಾನ್ಯವಲ್ಲ! ಕುರುಕ್ಷೇತ್ರದ ಮಹಾಯುದ್ಧವು ಹದಿನೆಂಟು ದಿವಸಗಳಲ್ಲಿ ಮುಗಿಯಿತು; ಆದರೆ ಪ್ರತಾಪನು ಒಂದೇಸವನೆ ಪ್ರಬಲ ಶತ್ರುವಿ

ನೊಡನೆ ಇಪ್ಪತ್ತೈದು ವರ್ಷ ಕಾದಿ, ಯುದ್ಧಮಾಡುವ ಇಚ್ಛೆಯು ತೃಪ್ತಿಯಾಗದೆ ತಳಮಳಿಸುತ್ತ ಪ್ರಾಣಬಿಟ್ಟನು; ಆದರೆ ತನ್ನ ದೇಶದ ಸ್ವಾತಂತ್ರ್ಯವನ್ನು ಕಳಕೊಳ್ಳಲಿಲ್ಲ!!

ಪ್ರತಾಪನ ವೀರತ್ವದ ಕಥೆಯು ಅದ್ಭುತಕಾದಂಬರಿಗಿಂತಲೂ ವಿಸ್ಮಯಕಾರಕವಾಗಿರುತ್ತದೆ; ಆದರೆ ಅದು ಕಲ್ಪಿತ ಕಾದಂಬರಿಯೆಂದು ವಾಚಕರು ತಿಳಿಯಬಾರದು. ಬರಿಯ ಹಿಂದೂ ಜನರೇ ಪ್ರತಾಪನನ್ನು ಹೊಗಳಿರುತ್ತಾರೆಂದು ತಿಳಿಯಬಾರದು; ಅದರಂತೆ, ಸರ್ವಸಾಧಾರಣ ಯೋಗ್ಯತೆಯ ಜನರು ಮಾತ್ರ ಅವನನ್ನು ಹೊಗಳಿರುತ್ತಾರೆಂತಲೂ ತಿಳಿಯಬಾರದು. ಪ್ರತಾಪನ ಶತ್ರುಗಳೊಳಗಿನ ಪ್ರಮುಖರು ಪ್ರತಾಪನನ್ನು ಹೊಗಳಿರುವರು. ಸ್ವತಃ ಅಕಬರ ಬಾದಶಹನು ಪ್ರತಾಪನ ಚರಿತ್ರವನ್ನು ಕೇಳಿ ಆಶ್ಚರ್ಯಪಟ್ಟು, ಇಂಥ ವಿಪನ್ನಸ್ಥಿತಿಯಲ್ಲಿ ಪ್ರತಾಪನಿಗೆ ಎಷ್ಟರಮಟ್ಟಿಗೆ ಗೌರವವಿರುತ್ತದೆಂಬದನ್ನೂ, ಆತನ ಅನುಯಾಯಿಗಳು ಆತನನ್ನು ಎಷ್ಟರಮಟ್ಟಿಗೆ ಮನ್ನಿಸುತ್ತಾರೆಂಬದನ್ನೂ ತಿಳಕೊಂಡು ಬರುವದಕ್ಕಾಗಿ, ತನ್ನ ಒಬ್ಬ ನಂಬಿಗೆಯ ಮುಸಲ್ಮಾನನನ್ನು ರಜಪೂತನ ವೇಷದಿಂದ ಪ್ರತಾಪಸಿಂಹನ ಕಡೆಗೆ ಕಳಿಸಿದನು. ಆತನು ಪ್ರತಾಪಸಿಂಹನ ಯಾವತ್ತು ಸ್ಥಿತಿಯನ್ನು ನೋಡಿ ಬಂದು ಬಾದಶಹನಿಗೆ--ಖಾವಿಂದ, ರಾಣಾನು ಅರಣ್ಯದಲ್ಲಿ ಸಂಚರಿಸುತ್ತಿದ್ದು, ದುಸ್ಸಹವಾದ ವಿಪತ್ತಿನಲ್ಲಿರುವನು; ಆದರೆ ಆತನ ಅನುಯಾಯಿಗಳು ಆತನಿಗೆ ಬಹಳ ಸನ್ಮಾನ ಮಾಡುವರು. ತಮ್ಮ ಒಡೆಯನ ಬಗ್ಗೆ ಅವರಲ್ಲಿ ವಿಚಿತ್ರವಾದ ಆಭಿಮಾನವಿರುವದು. ರಾಣಾನ ಕೈಯಿಂದ ದೊರೆಯುವ ÷"ದೂನಾ" ಎಂಬ ಪದಾರ್ಥವು ಕಂದಮೂಲಗಳದು, ಅಥವಾ ಯಾತರದಾದರೂ ಮಾಡಿದ ಅನ್ನದ್ದು ಇದ್ದರೂ, ಅದನ್ನು ಸಂಪಾದಿಸಿದವನು ತನ್ನನ್ನು ಭಾಗ್ಯಶಾಲಿ

---

÷"ದೂನಾ" ಅಂದರೆ, ರಾಣಾನ ಭೋಜನ ಪಾತ್ರವನ್ನು ಬಡಿಸಿದ ಬಳಿಕ ರಾಣಾನು ತನ್ನ ಪ್ರೀತಿಯಜನರಿಗೆ ಆದರೊಳಗಿಂದ ಕೊಡುವ ಅನ್ನವು. "ದೂನಾ" ಕೊಡುವ ಪದ್ಧತಿಯು ಮೊದಲಿನಿಂದ ನಡೆಯುತ್ತ ಬಂದದ್ದು, ಆದನ್ನು ಸಂಪಾದಿಸಿದವನು ರಾಣಾನಿಂದ ಬಹುಮಾನ ಹೊಂದಿದನೆಂದು ಜನರು ತಿಳಿಯುವರು.

ಯೆಂದು ತಿಳಿಯುವನು! ವೈಭವಕಾಲದಲ್ಲಿ ಆತನ ಮೇಲೆ ಸಾದರ ಪ್ರೇಮ ಮಾಡುತ್ತಿದ್ದಂತೆ, ಆತನ ಜನರು ಈಗಿನ ವಿಪತ್ಕಾಲದಲ್ಲಿಯಾದರೂ ನಿರಿಚ್ಛೆಯಿಂದ ಅವನನ್ನು ಪ್ರೀತಿಸುವರು, ಎಂದು ಹೇಳಿದನು. ಅದನ್ನು ಕೇಳಿ ಆಕಬರನು ಪರಮಾಶ್ಚರ್ಯಪಟ್ಟನು. ಪ್ರತಾಪನ ಪ್ರಶಂಸನೀಯ ಗುಣಗಳನ್ನು ಕೇಳಿ ಆಕಬರನ ದರ್ಬಾರದ ಜನರು ಪ್ರಸಿದ್ಧರೀತಿಯಿಂದ ಆತನನ್ನು ವರ್ಣಿಸುತ್ತಿದ್ದರು. ದಿಲ್ಲಿಯ ಮೊದಲನೆಯ ಪ್ರಧಾನನಾದ ಖಾನಖಾನನೆಂಬ ವೀರಾಗ್ರೇಸರನು ಪ್ರತಾಪನ ಧೀರೋದಾತ್ತ ಚರಿತ್ರವನ್ನು ಕೇಳಿ, ಪದ್ಯರೂಪದಿಂದ ಆತನನ್ನು ವರ್ಣಿಸಿ, ಆ ವರ್ಣನಪರವಾದ ಪತ್ರವನ್ನು ಪ್ರತಾಪಸಿಂಹನ ಕಡೆಗೆ ಕಳಿಸಿದನು. ಆ ಪತ್ರದೊಳಗಿನ ಕೆಲವು ಪದ್ಯಗಳನ್ನು ಮೇವಾಡದ ಭಾಟರು ಇದ್ದಕ್ಕಿದ್ದಹಾಗೆ ತಮ್ಮ ಕಾವ್ಯದಲ್ಲಿ ಹಾಕಿಕೊಂಡಿರುವರು. ಆ ಪತ್ರದಲ್ಲಿ ಖಾನಖಾನನು ಮೊದಲು ಪ್ರತಾಪನ ಧೀರಗಂಭೀರತೆಯನ್ನು ವರ್ಣಿಸಿ, ಆ ಮೇಲೆ ಆತನನ್ನು ಕುರಿತು--"ಪುತ್ರಾ, ಮನುಷ್ಯನನ್ನು ಆಶ್ರಯಿಸಿರುವ ಅಧಿಕಾರ-ಸಂಪತ್ತುಗಳು ಜಗತ್ತಿನ ಕ್ರಮದಂತೆ ನಶ್ವರವಾಗಿರುತ್ತವೆ; ಆದರೆ ಮನುಷ್ಯನ ಸದ್ಗುಣ, ಸತ್ಕೃತ್ಯಗಳ ಪ್ರಶಂಸೆಯು ಜಗತ್ತಿನಲ್ಲಿ ಬಹುಕಾಲದವರೆಗೆ ಇರುತ್ತದೆ; ಆದ್ದರಿಂದ ಪುತ್ರೋ, ನೀನು ಪರಮ ಧನ್ಯನು ಕಂಡೆಯಾ! ಯಾಕಂದರೆ, ಇಂಥ ಸಂಕಟಾವಸ್ಥೆಯಲ್ಲಿಯೂ ನೀನು ಬಾದಶಹನಿಗೆ ಶರಣುಬರಲೊಲ್ಲೆ; ಮತ್ತು ನಿನ್ನ ಕೀರ್ತಿಯನ್ನೂ, ಮರ್ಯಾದೆಯನ್ನೂ ಕಾಯ್ದುಕೊಳ್ಳುವದಕ್ಕಾಗಿ ಯೋಗ್ಯವಾದ ಪ್ರಯತ್ನವನ್ನು ಮಾಡುತ್ತಿರುವೆ. ಈ ಗುಣಗಳು ಹಿಂದೂ ರಾಜರಲ್ಲಿ ಅಸಾಧಾರಣವಾಗಿರುವವು. ಇದರಿಂದ ನೀನು ನಿನ್ನ ಜಾತಿಯ ಅಭಿಮಾನವನ್ನು ವಿಲಕ್ಷಣ ರೀತಿಯಿಂದ ರಕ್ಷಿಸುತ್ತಿರುವೆ. ನೀನು ರಾಜವೈಭವವನ್ನೂ, ಸುಖಪ್ರಾಪ್ತಿಯನ್ನೂ ಕವಡಿಗೆ ಸರಿಯೆಂದು ಭಾವಿಸಿ, ನಿನ್ನ ಪೂಜ್ಯವಾದ ಕುಲದ ಹೆಸರನ್ನು ಅಜರಾಮರವಾಗಿ ಮಾಡುತ್ತಿರುವೆ!" ಎಂದು ಶ್ಲಾಘಿಸಿರುತ್ತಾನೆ.

ಹೀಗೆ ಆಕಬರಬಾದಶಹನು ಪ್ರತಾಪಸಿಂಹನನ್ನು ಕೌತುಕದಿಂದ ಶ್ಲಾಘಿಸಿದರೂ, ಅದರಂತೆ ಬಾದಶಹನ ಮಂತ್ರಿಯಾದ ಖಾನಖಾನನು ಪದ್ಯರೂಪದಿಂದ ರಾಣಾನನ್ನು ವರ್ಣಿಸಿದರೂ ಆ ತಪಸ್ವಿಯ ತಾಪವೇನೂ ಕಡಿಮೆಯಾಗಲಿಲ್ಲ. ಬಾದಶಹನು ಒಂದೇಸವನೆ ಪ್ರತಾಪನ ಬೆನ್ನುಹತ್ತಿದ್ದನು.

ಪ್ರತಿವರ್ಷ ಮಳೆಗಾಲವು ಹೋದ ಮೇಲೆ ಜಿಟ್ಟಿಯು ಹಿಂಡಿನಂತೆ, ಮೊಗಲ ಸೈನ್ಯವು ಮೇವಾಡವನ್ನು ಮುಗಿಬಿದ್ದು ಮುತ್ತುತ್ತಿತ್ತು. ಆ ಸೈನ್ಯದೊಡನೆ ಪ್ರತಾಪಸಿಂಹನು ತನ್ನ ಚಿಕ್ಕ ಸೈನ್ಯವನ್ನು ಕೂಡಿಕೊಂಡು ಒಂದೇಸವನೆ ಕಾದುತ್ತಲಿದ್ದನು. ಆದರೆ ಅತುಲ ಶಕ್ತಿಸಂಪನ್ನನಾದ ಭಾರತ ಸಾಮ್ರಾಟನ ಮುಂದೆ ರಜಪೂತರು ಎಷ್ಟು ದಿವಸ ತಡೆದು ನಿಲ್ಲುವರು? ಪ್ರತಾಪಸಿಂಹನು ದಿನದಿನಕ್ಕೆ ಹಣ್ಣಾಗಹತ್ತಿದನು; ಆದರೂ ಅವನ ಕೆಚ್ಚೆದೆಗೆ ಕಚ್ಚುಬಿದ್ದಿದ್ದಿಲ್ಲ. ಅವನು ಅಡವಡವಿ ತಿರುಗುವಾಗ ಹೆಂಡಿರುಮಕ್ಕಳೊಡನೆ ಅರವೊಟ್ಟೆ ಉಂಡು ಇರಬೇಕಾಗುತ್ತಿತ್ತು; ಒಮ್ಮೊಮ್ಮೆ ಉಪವಾಸವಿರಬೇಕಾಗುತ್ತಿತ್ತು. ಹೊಟ್ಟೆಗೆ ಏನೂ ಇಲ್ಲದ ಹಾಗಾದಾಗ ಸಣ್ಣಸಣ್ಣ ಮಕ್ಕಳು ಸುತ್ತಲೆ ನೆರೆದು ಸಂಕಟದಿಂದ ಆಕ್ರೋಶಮಾಡುವದನ್ನು ಕಂಡು, ಪ್ರತಾಪನ ಹೊಟ್ಟೆಯಲ್ಲಿ ದುಃಖವು ಹಿಡಿಸಲಾರದೆ ಹೊರಬೀಳುತ್ತಿತ್ತು; ಆದರೆ ಆ ಧೀರನು ಅದನ್ನು ಹಾಗೇ ನುಂಗಿಕೊಳ್ಳುತ್ತಿದ್ದನು. ಒಂದುದಿನ ಆತನ ಹೆಂಡತಿಯೂ, ಸೊಸೆಯೂ ಕೂಡಿ ಒಂದು ಪ್ರಕಾರದ ಗಡ್ಡೆಯ ಹಿಟ್ಟಿನ ರೊಟ್ಟಿಯನ್ನು ಮಾಡಿ ಎಲ್ಲ ಹುಡುಗರಿಗೆ ಒಂದೊಂದು ಬಕ್ಕರಿಯನ್ನು ಕೊಟ್ಟು-—"ಮಕ್ಕಳೇ, ಇದರಲ್ಲಿ ಅರ್ಧರೊಟ್ಟಿಯನ್ನು ಈಗ ತಿಂದು ಅರ್ಧವನ್ನು ಸಂಜೆಗೆ ಇಟ್ಟುಕೊಳ್ಳಿರಿ" ಎಂದು ಹೇಳಿದರು. ಅದರಂತೆ ಹುಡುಗರು ಮಾಡಿದರು. ಆಗ ಪ್ರತಾಪಸಿಂಹನು ತನಗೆ ಬಂದೊದಗಿದ್ದ ಸಂಕಟವನ್ನು ಕುರಿತು ಆಲೋಚಿಸುತ್ತ ಅಲ್ಲಿಯೇ ಹತ್ತರ ಕುಳಿತುಕೊಂಡಿದ್ದನು. ಅಷ್ಟರಲ್ಲಿ ಆತನ ಚಿಕ್ಕಮಗಳು ಸಂಜೆಗೆಂದು ತಾನು ಇಟ್ಟಿದ್ದ ಅರ್ಧರೊಟ್ಟಿಯನ್ನು ಒಂದು ಅಡವಿಯ ಬೆಕ್ಕು ಕಚ್ಚಿಕೊಂಡು ಹೋಗುವದನ್ನು ನೋಡಿ ಚಿಟ್ಟನೆ ಚೀರಿತು! ಉಳಿದ ಹುಡುಗರೂ ಹಸಿವೆಯಿಂದ ಕಂಗಾಲಾಗಿ ಒದರುತ್ತಲಿದ್ದವು. ಇದನ್ನು ನೋಡಿ ಪ್ರತಾಪಸಿಂಹನ ಧೈರ್ಯವು ಕುಗ್ಗಿತು! ಭಯಂಕರ ಯುದ್ಧದಲ್ಲಿ ತನ್ನ ಸುತ್ತುಮುತ್ತು ಮಕ್ಕಳೂ, ಆಪ್ತರೂ ಸತ್ತು ಬಿದ್ದಿರಲು ಲೆಕ್ಕಿಸದ ಆ ಧೀರನು, ಕೂಸುಗಳ ಈ ಕ್ಷುದ್ಬಾಧೆಯನ್ನು ನೋಡಿ ಹತವೀರ್ಯನಾದನು. ಎಂಥ ಸಂಕಟ ಒದಗಿದರೂ ಅದಕ್ಕೆ ಸೊಪ್ಪುಹಾಕದೆ, "ಇದಕ್ಕಾಗಿಯೇ ರಜಪೂತರ ಜನ್ಮವಿರುತ್ತದೆ" ಎಂದು ಸಮಾಧಾನಪಡುತ್ತಿದ್ದ ಆ ಗಂಭೀರನು, ಚಿಕ್ಕಮಕ್ಕಳ ಇಂದಿನ ಕಷ್ಟವನ್ನು ನೋಡಿ

ಸಹಿಸಲಾರದಾದನು. ಆತನು ತನ್ನೊಳಗೆ—"ನಾನು ಹೆಸರಿಗೆ ಮಾತ್ರ ಅರಸನು, ಕಷ್ಟನೋಡಿದರೆ ಈ ಬಗೆಯದು, ಅಂದಬಳಿಕ ರಾಜ್ಯಪದವನ್ನು ಹೊಂದಿ ನಾನು ಹೀಗೇ ಕಷ್ಟಪಡುವದಾಗಿದ್ದರೆ ಆ ರಾಜಪದವನ್ನು ಸುಡತಕ್ಕದ್ದು" ಎಂದು ನುಡಿದು, ಬಾಡಿದಮೋರೆಯಿಂದ ತನ್ನ ಪಟ್ಟಾಭಿಷಿಕ್ತ ರಾಣಿಯನ್ನು ನೋಡಿದನು. ಆಗ ಆ ವೀರಪತ್ನಿಯಾದ ಪದ್ಮಾವತಿಯು, ಪತಿಯನ್ನು ಕುರಿತು--ಇದೆಲ್ಲಿಯ ಕೆಟ್ಟಮೋಹವು ಪ್ರಭುಗಳನ್ನು ಆಕ್ರಮಿಸಿತು! ಬಾಪ್ಪಾರಾವಳನ ವಂಶಜರಿಗೆ, ಹಮ್ಮೀರ ಕುಲದೀಪಕ ವೀರರಿಗೆ, ಉದೇಪುರದ ವಂಶೋದ್ಧಾರಕರಿಗೆ, ರಜಪೂತ ಕುಲತಿಲಕರಿಗೆ ಈ ನೀಚಮೋಹವು ಸಲ್ಲದು! ಪ್ರಭುಗಳು ಧೈರ್ಯತಾಳಬೇಕು, ಇದೇ ಕಾಲವು ಕಡೆತನಕ ಇರಲಿಕ್ಕಿಲ್ಲ, ಏಕಲಿಂಗೇಶ್ವರನು ಕರುಣಾಳು ವಿದ್ದಾನೆ, ಇನ್ನೊಂದುಕ್ಷಣದಲ್ಲಿ ಮಹಾರಾಜರು ಧೈರ್ಯಗೊಳ್ಳಬಹುದು; ಆದರೂ ಸಥಿಯಿಂದ ಬೇಡಿಕೊಂಡದ್ದಕ್ಕೆ ಕ್ಷಮೆಯಿರಬೇಕು, ಎಂದು ಬಿನ್ನಯಿಸಲು, ಪ್ರತಾಪನು ಜಾಗರೂಕನಾಗಿ ಧೈರ್ಯಗೊಂಡು ಹೆಂಡತಿಯನ್ನು ಶ್ಲಾಘಿಸಿದನು!

———·—

## ೧೩ ನೆಯ ಪ್ರಕರಣ

# ಚಂದನಸಿಂಹ !

ಮೇವಾಡದ ಪಟ್ಟಾಭಿಷಿಕ್ತರಾಣಿಯು ಸಾಧಾರಣಯೋಗ್ಯತೆಯವಳಲ್ಲ. ಆಕೆಯು ನಿಜವಾಗಿ ಪ್ರತಾಪನ ಅರ್ಧಾಂಗಿಯಾಗಿದ್ದಳು. ಕೆಚ್ಚೆದೆಯ ಪ್ರತಾಪನು ಹೀಗೆ ಸಾಂಸಾರಿಕಮೋಹದಿಂದ ಪ್ರಸಂಗವಶಾತ್ ಹಣ್ಣಾದಾಗ ಆಕೆಯು ಧೈರ್ಯ ಹೇಳುವದು ಆಶ್ಚರ್ಯಕರವೇ ಸರಿ. ಹೆಂಗಸರ ಹೃದಯವು ಕೋಮಲವು, ಚಂಚಲವು, ಕಷ್ಟವನ್ನು ತಡೆಯಲಾರದ್ದು; ಆದರೆ ಸ್ವಾತಂತ್ರ್ಯರಕ್ಷಣಕ್ಕಾಗಿ ಎಲ್ಲದರ ಹಂಗುದೊರೆದಿದ್ದ ಮಹಾರಾಣಿಯ ಹೃದಯವು, ಪತಿಯ ಹೃದಯದ ಅನುಸರಣಕ್ಕಾಗಿಯೋ ಅನ್ನುವಂತೆ ಕೆಚ್ಚುಗಟ್ಟಿತ್ತು. ಆಕೆಯು ಮಹಾತಪಸ್ವಿನಿಯಂತೆ ಪತಿಯೊಡನೆ ಘೋರವಾದ ತಪಸ್ಸನ್ನಾಚರಿಸುತ್ತಿದ್ದಳು. ಆ ವೀರಪತ್ನಿಯ ನಿಲುವಿಕೆಯು ಸಾಧಾರಣ ಎತ್ತರ, ಮೈಕಟ್ಟು ಮಧ್ಯಮತರದ್ದು. ಆಕೆಯ ಪ್ರಶಸ್ತವಾದ ಲಲಾಟದಲ್ಲಿ ಬಹು ಮೂಲ್ಯವಾದ ರತ್ನದ್ದೊಂದು ಅಲಂಕಾರವು ಯಾವಾಗಲೂ ಲಕಲಕಿಸುತ್ತಿತ್ತು. ಆಕೆಯ ಎರಡೂ ಕಣ್ಣುಗಳೊಳಗಿಂದ ಅತ್ಯಂತ ಉಜ್ವಲವಾದ ಜ್ಯೋತಿಕಿರಣಗಳು ಹೊರಬೀಳುತ್ತಲಿದ್ದವು. ಆಕೆಯು ಕೊರಳಲ್ಲಿ ದೊಡ್ಡ ಮುತ್ತಿನದೊಂದು ಅನರ್ಘ್ಯವಾದ ಹಾರವನ್ನು ಧರಿಸಿದ್ದಳು. ಆಕೆಯ ಉನ್ನತವಾದ ಅವಯವಗಳೂ, ತೇಜಃಪುಂಜವಾದ ಮುಖಮಂಡಲವೂ ಆಕೆಯ ಕುಲೀನತೆಯನ್ನು ವ್ಯಕ್ತಗೊಳಿಸುತ್ತಿದ್ದವು; ಆದರೂ ಅಪಾರವಾದ ಪರಿಶ್ರಮ, ಭಯಂಕರವಾದ ಕ್ಲೇಶ, ದಾರುಣವಾದಚಿಂತೆ ಇವುಗಳಿಂದ ಮಹಾರಾಣಿಯ ಕಾಂತಿಮಯವಾದ ನೇತ್ರಗಳ ಒಳನಟ್ಟಿದ್ದವು. ಬಹುತರ

ಆಕೆಯ ಮುಖವು ಯಾವಾಗಲೂ ಪ್ರಸನ್ನವಾಗಿರುತ್ತಿತ್ತು. ಆ ವೈಭವಶಾಲಿಯಾದ ರಾಣಿಯ ವಯಸ್ಸು ಈಗ ನಾಲ್ವತ್ತು ವರ್ಷವಾಗಿರಬಹುದು. ಆಕೆಯು ಸಿಸೋದಿಯಾ ಕುಲದ ದೇವತೆಯಂತೆ ಸರ್ವಥೈವಪೂಜ್ಯಳೂ, ಲೋಕಾದರಣೀಯಳೂ ಆಗಿದ್ದಳು. ಆ ಮಹಾರಾಜ್ಞಿಯು ಕಷ್ಟಪರಂಪರೆಯಿಂದ ಜರ್ಜರಳಾಗಿದ್ದರೂ, ದಿಲ್ಲೀಶ್ವರನೊಡನೆ ಒಡಂಬಡಿಕೆಯನ್ನು ಮಾಡಿಕೊಳ್ಳಲಿಕ್ಕೆ ತನ್ನ ವೀರಶ್ರೇಷ್ಠನಾದ ಪತಿಯನ್ನು ಎಂದೂ ಬೇಡಿಕೊಳ್ಳಲಿಲ್ಲ! ಆಕೆಯ ಜನ್ಮವು ಬಹು ಕಷ್ಟದ್ದು, ವ್ಯಾಘ್ರಾದಿ ಹಿಂಸ್ರಪಶುಗಳ ಗುಹೆಯಲ್ಲಿ ಮಹಾರಾಣಿಯು ತನ್ನ ಚಿಕ್ಕಮಕ್ಕಳೊಡನೆ ಆಶ್ರಯವನ್ನು ಪಡೆಯಬೇಕಾಗುತ್ತಿತ್ತು. ಪರ್ವತಗಳಮೇಲೆ ಬೆಂಕಿಯನ್ನು ಹೊತ್ತಿಸಿ ಆಕೆಯು ತನ್ನ ಮಕ್ಕಳ ಶೀತನಿವಾರಣೆಯನ್ನು ಮಾಡಬೇಕಾಗುತ್ತಿತ್ತು. ಮಳೆಗಾಲದಲ್ಲಿಯಂತು ಪ್ರತಾಪಸಿಂಹನ ಪರಿವಾರದ ಕಷ್ಟವನ್ನು ವರ್ಣಿಸಲಾಸಲ್ಲ. ಒಮ್ಮೊಮ್ಮೆ ತೊಯ್ದ ಸೀರೆಯನ್ನುಟ್ಟು ತೊಡೆಯಮೇಲೆ ಮಕ್ಕಳನ್ನು ಮಲಗಿಸಿಕೊಂಡು ರಾಣಿಯು ಎಚ್ಚತ್ತು ಇಡಿಯ ರಾತ್ರಿಯನ್ನು ಕಳೆಯಬೇಕಾಗುತ್ತಿತ್ತು. ಒಮ್ಮೊಮ್ಮೆ ಮಹಾರಾಣಾನ ಸಣ್ಣಸಂಸಾರವು ನೀರಿನ ಪ್ರವಾಹದ ಸಂಗಡ ತೇಲಿಹೋದೀತೆಂದು ಆ ಮಹಾರಾಣಿಯು ಅಹೋರಾತ್ರ ದಕ್ಷಳಾಗಿರಬೇಕಾಗುತ್ತಿತ್ತು! ಹಾಯ್ ಹಾಯ್, ಇಂಥ ಭಯಂಕರ ಕ್ಲೇಶವನ್ನು ಸಹನಮಾಡಿಯೂ ಮಹಾರಾಣಿಯು ಒಡಂಬಡಿಕೆಯನ್ನು ಮಾಡಿಕೊಳ್ಳುವದಕ್ಕಾಗಿ ಪತಿಯಮುಂದೆ ಚಕಾರಶಬ್ದವನ್ನು ಎಂದೂ ನುಡಿಯಲಿಲ್ಲ! ಯುದ್ಧದಿಂದ ದಣಿದ ತನ್ನ ಪತಿಯಮುಂದೆ ತನ್ನ ಕಷ್ಟದ ಕಥೆಯನ್ನು ಆಕೆಯು ಎಂದೂ ಹೇಳಲಿಲ್ಲ! ಪತಿಯು ತನ್ನ ಅತ್ಯುಚ್ಚಕಾರ್ಯವನ್ನು ಸಾಧಿಸುವಂತೆ ಆಕೆಯು ಪ್ರಸನ್ನಮುಖಳಾಗಿ ಆತನನ್ನು ಯಾವಾಗಲೂ ಪ್ರೋತ್ಸಾಹಿಸುತ್ತಿದ್ದಳು! ಈ ಸಾಧ್ವಿಯು ಮೊಗಲರ ಭಯದಿಂದ ಹಲವು ಕಡೆಯಲ್ಲಿ ಸಂಚರಿಸುತ್ತ ಸಂಚರಿಸುತ್ತ ಭೀಮಗಡವೆಂಬ ಭದ್ರವಾದ ದುರ್ಗದಲ್ಲಿ ಶೂರ ರಜಪೂತರಿಂದ ರಕ್ಷಿತಳಾಗಿ ಇರಹತ್ತಿದಳು; ಆದರೆ ಕೆಲವು ದಿನಗಳ ಮೇಲೆ ಮೊಗಲರು ಆ ದುರ್ಗವನ್ನೂ ಮುತ್ತಿದರು.

ಪ್ರತಾಪಸಿಂಹನು ಮಳೆಗಾಲದ ಹೊರತು ಉಳಿದ ಕಾಲದಲ್ಲೆಲ್ಲ ಯುದ್ಧದಲ್ಲಿ ತೊಡಗಿರುತ್ತಿದ್ದನು. ಮೊಗಲರು ಭೀಮಗಡವನ್ನು ಮುತ್ತಿ

ದಾಗ ಆತನು ಬೇರೆಕಡೆಯಲ್ಲಿ ಮೊಗಲರೊಡನೆ, ಒಮ್ಮೆ ಅಡಗಿಕೊಂಡು, ಒಮ್ಮೆ ಬೈಲಿಗೆ ಬಿದ್ದು ಕಾದುತ್ತಿದ್ದದ್ದರಿಂದ ಆಗ, ಆತನು ತನ್ನ ಕುಟುಂಬ ದವರ ಬಳಿಯಲ್ಲಿದ್ದಿಲ್ಲ. ಭೀಮುಗಡದ ಒಡೆಯನಾದ ದೇವೀಸಿಂಹನು ತನ್ನ ಸೈನ್ಯದೊಳಗಿನ ೫೦೦ ಜನ ರಾಠೋಡರನ್ನು ಕರಕೊಂಡು ಪ್ರತಾಪಸಿಂಹ ನೊಡನೆ ಗುಡ್ಡ ಗುಡ್ಡ ತಿರುಗುತ್ತಿದ್ದನು. ದೇವೀಸಿಂಹನ ಮಗನಾದ ಚಂದ ನಸಿಂಹನೆಂಬ ಹದಿನಾಲ್ಕುವರ್ಷದ ಕುಮಾರನು ಬರಿಯ ೫೦೦ ಜನ ರಾಠೋ ಡರನ್ನು ಕೂಡಿಕೊಂಡು ಭೀಮಗಡವನ್ನು ರಕ್ಷಿಸುತ್ತಲಿದ್ದನು. ತೇಜಸಿಂಹ ನೆಂಬ ಮಹಾಪ್ರತಾಪಿಯೊಬ್ಬನು ಮಾತ್ರ ದುರ್ಗದಲ್ಲಿದ್ದನು. ರಾಜಪರಿವಾ ರದ ಸಂರಕ್ಷಣದ ಭಾರವನ್ನು ಪ್ರತಾಪಸಿಂಹನು ತೇಜಸಿಂಹನ ಮೇಲೆ ಹಾಕಿ ದ್ದರಿಂದ, ಆತನು ದುರ್ಗವನ್ನು ಬಿಟ್ಟುಹೋಗುವಹಾಗಿದ್ದಿಲ್ಲ. ಈ ಸ್ಥಿತಿ ಯಲ್ಲಿ ಒಂದು ದಿನ ರಾತ್ರಿ ಎರಡುಸಾವಿರ ಜನ ಮೊಗಲರು ಅಕಸ್ಮಾತ್ತಾಗಿ ಬಂದು ಭೀಮಗಡವನ್ನು ಮುತ್ತಿದರು. ಪ್ರತಾಪಸಿಂಹನ ಪಟ್ಟರಾಣಿಯೂ, ಬೇರೆ ಕುಟುಂಬದವರೂ ಭೀಮಗಡದಲ್ಲಿದ್ದದ್ದನ್ನು ಕೇಳಿ ಅವರನ್ನು ಸೆರೆಹಿ ಡಿದು ದಿಲ್ಲಿಗೆ ಕಳಿಸಿದರೆ ಅವರನ್ನು ಬಿಡಿಸುವದಕ್ಕಾಗಿಯಾದರೂ ಪ್ರತಾಪಸಿಂ ಹನು ದಿಲ್ಲೀಪತಿಗೆ ಶರಣುಹೋದಾನೆಂದು ಅವರು ತಿಳಿದಿದ್ದರು. ಶತ್ರುಗಳು ದುರ್ಗವನ್ನು ಹೀಗೆ ಅಕಸ್ಮಾತ್ತಾಗಿ ಮುತ್ತುವರೆಂಬ ಕಲ್ಪನೆಯು ಕೂಡ ರಜ ಪೂತರಿಗಿದ್ದಿಲ್ಲ! ಅದ್ದರಿಂದ ಆ ದಿನ ರಾತ್ರಿ ಇರಬೇಕಾಗಿದ್ದಷ್ಟು ಜಾಗ್ರತೆಯು ಅವರಲ್ಲಿದ್ದಿಲ್ಲ. ದುರ್ಗವನ್ನು ಶತ್ರುಗಳು ಮುತ್ತಿದರೆಂಬ ವರ್ತಮಾನವನ್ನು ಕಾವಲುಗಾರರು ತೇಜಸಿಂಹನಿಗೆ ಹೇಳಿದಕೂಡಲೆ, ಆತನ ಮುಖವು ಗಂಭೀ ರವಾಯಿತು. ಆತನ ವಿಸ್ತೀರ್ಣವಾದ ಹಣೆಯಲ್ಲಿ ಚಿಂತೆಯ ರೇಷೆಗಳು ಕಾಣಹತ್ತಿದವು. ಬಹಳ ಹೊತ್ತಿನವರೆಗೆ ಆತನು ಸ್ತಬ್ಧವಾಗಿ ಕುಳಿತುಕೊಂ ಡಿದ್ದನು. ಆ ಮೇಲೆ ಆತನು ಕುಮಾರನಾದ ಚಂದನಸಿಂಹನನ್ನು ಕರ ಕೊಂಡು ಕೋಟೆಯ ಗೋಡೆಯನ್ನು ಹತ್ತಿ ನೋಡಲು, ಇರುವೆಗಳ ಸಾಲಿ ನಂತೆ ಮೊಗಲರು ನಾಲ್ಕೂಕಡೆಯಿಂದ ದುರ್ಗವನ್ನು ಮುತ್ತಿ ದಾಳಿ ಇಡುವ ಸಿದ್ಧತೆಯಲ್ಲಿ ತೊಡಗಿದ್ದರು. ಆಗ ತೇಜಸಿಂಹನು ಕುಮಾರನ ಹೆಗಲಮೇಲೆ ಕೈಹಾಕಿ ಗಂಭೀರ ಸ್ವರದಿಂದ—ಚಂದನ, ಮೊಗಲರು ಕಡೆಗೆ ಭೀಮಗಡ ವನ್ನು ಮುತ್ತಿದರು! ಈ ದುರ್ಗಕ್ಕೆ ಇದೊಂದು ಮಹಾ ಸಂಕಟವು ಒದಗಿ

ದಂತಾಯಿತು. ಇಂಥ ಪ್ರಸಂಗದಲ್ಲಿ ಮಹಾರಾಣಾನವರ ಪರಿವಾರವನ್ನು ಈ ದುರ್ಗದಲ್ಲಿಡುವದು ಸುರಕ್ಷಿತವಲ್ಲೆಂಬದು ಸ್ಪಷ್ಟವಾಗಿ ಕಾಣುತ್ತದೆ. ಎಂಥ ಸಂಕಟಗಳೊದಗಿದರೂ ಯುಕ್ತಿ-ಪ್ರಯುಕ್ತಿಗಳಿಂದ ರಾಜಪರಿವಾರವನ್ನು ಇಲ್ಲಿಂದ ಹೊರಡಿಸಿ ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯುವದು ಅತ್ಯಂತ ಅವಶ್ಯವು. ಭೀಮಗಡದಿಂದ ಗುಪ್ತವಾಗಿ ಹೋಗುವ ಮಾರ್ಗವು ನನಗೂ, ನನ್ನ ವಿಶ್ವಾಸದ ಭಿಲ್ಲರಿಗೂ ಮಾತ್ರ ಗೊತ್ತಿರುವದು. ಆ ಮಾರ್ಗವು ಅತ್ಯಂತ ಕಠಿಣವಾಗಿರುವದು. ಆ ದಾರಿಯಿಂದ ನಿರ್ಭಯಸ್ಥಳಕ್ಕೆ ಮುಟ್ಟಬೇಕಾದರೆ ಇಡಿಯ ರಾತ್ರಿ ಹಾದಿಯ ನಡೆಯಬೇಕಾದೀತು. ರಾಜ ಪರಿವಾರವನ್ನು ಕರಕೊಂಡು ನಾನಂತು ಈಗ ಹೊರಟೇಹೊರಡುವೆನು! ಆದರೆ ಚಂದನಸಿಂಹ, ನೀನು ವೀರಪುತ್ರನಿರುತ್ತೀ-ರಾಠೋಡಕುಲದಲ್ಲಿ ಜನಿಸಿದವನಿರುತ್ತೀ, ಐದುನೂರು ಜನ ರಾಠೋಡರೊಡನೆ "ಇಂದಿನ ರಾತ್ರಿ ದುರ್ಗವನ್ನು ಸಂರಕ್ಷಿಸುವ ಭಾರವನ್ನು ನಿನ್ನ ಮೇಲೆ ಹಾಕುತ್ತೇನೆ. ನೋಡುವಾ ಅಭಿಮನ್ಯುವಿನಂತೆ ಇದ್ದ ನೀನು ಹ್ಯಾಗೆ ಪೌರುಷವನ್ನು ಪ್ರಕಟಿಸುತ್ತೀಯೆಂಬದನ್ನು!

ಚಂದನಸಿಂಹನ ತಂದೆಯಾದ ದೇವೀಸಿಂಹನು ತೇಜಸಿಂಗನ ಆಶ್ರಿತ ಸಂಸ್ಥಾನಿಕನಾಗಿದ್ದನು. ತೇಜಸಿಂಹನ ಈ ಮಾತುಗಳನ್ನು ಕೇಳಿ ಬಾಲಕನಾದ ಚಂದನಸಿಂಹನು ಉಲ್ಲಾಸದಿಂದ—ಪ್ರಭುಗಳ ಅಪ್ಪಣೆಯು ನನಗೆ ಶಿರಸಾಮಾನ್ಯವದೆ. ನಮ್ಮ ಧನವು, ನಮ್ಮ ಸಂಪತ್ತು, ಬಹಳವೇಕೆ ನಮ್ಮ ಪ್ರಾಣಗಳು ಸಹ ಮಹಾರಾಣಾನವರವೇ ಇರುತ್ತವೆ! ಅವರ ಸಲುವಾಗಿ ಪ್ರಾಣಸಮರ್ಪಣ ಮಾಡಲಿಕ್ಕೆ ರಾಠೋಡರು ಯಾವಾಗಲೂ ಸಿದ್ಧರಾಗಿರುವರು. ಮಹಾರಾಣಾನವರ ಸಲುವಾಗಿ ಈ ದಾಸನು ಇಂದು ಮೊಗಲರ ಸಂಗಡ ಘನಘೋರ ಯುದ್ಧವನ್ನು ಮಾಡುವನು. ಪ್ರಭುಗಳು ದುರ್ಗರಕ್ಷಣದ ಭಾರವನ್ನು ನಿಶ್ಶಂಕೆಯಿಂದ ನನ್ನ ಮೇಲೆ ಹೊರಿಸಿ, ರಾಜಪರಿವಾರವನ್ನು ಕರಕೊಂಡು ಇಲ್ಲಿಂದ ಹೊರಟುಹೋಗತಕ್ಕದ್ದು. ಸೂರ್ಯೋದಯವಾಗುವವರೆಗೆ ದುರ್ಗವು ಮೊಗಲರ ಕೈಸೇರಲಾರದು. ಅಷ್ಟರಲ್ಲಿ ರಾಜಪರಿವಾರವನ್ನು ಸುರಕ್ಷಿತ ಸ್ಥಳಕ್ಕೆ ಮುಟ್ಟಿಸಬಹುದು. ಎಂದು ಹೇಳಿದನು. ಕುಮಾರನ ಈ ಕ್ಷಾತ್ರತೇಜೋಚ್ಚಿತವಾದ ಗರ್ವಿತ ಉತ್ತರದಿಂದ ತೇಜಸಿಂ

ಹನು ಆನಂದಪಟ್ಟನು. ಪ್ರಸನ್ನಮುದ್ರೆಯಿಂದ ಆತನು ಚಂದನಸಿಂಹನನ್ನು ಕುರಿತು—ಚಂದನಸಿಂಹ, ನೀನು ದುರ್ಗರಕ್ಷಣದ ಭಾರವನ್ನು ಹೊತ್ತಿದ್ದ ರಿಂದ ಭೀಮಗಡದ ವಿಷಯವಾಗಿ ನನಗೆ ಚಿಂತೆಯಿಲ್ಲ; ಆದರೆ ಕಾರ್ಯವು ಬಹಳ ಕಠಿಣವದೆ. ಎರಡುಸಾವಿರ ಮೊಗಲರೊಡನೆ ಬಾಲಕನಾದ ನೀನು ಐದುನೂರು ಜನ ರಾಠೋಡರಿಂದ ಕೂಡಿ ಯುದ್ಧಮಾಡತಕ್ಕವನು. ಏನಾದರೂ ಅನರ್ಥ ಒದಗಿದ ಪ್ರಸಂಗದಲ್ಲಿ, ಕುಮಾರಾ, ಚಂದನಸಿಂಹಾ, ನಿಮ್ಮ ಮುಪ್ಪಿನ ತಂದೆಯು ಎಷ್ಟು ದುಃಖಪಟ್ಟಾನಲ್ಲ! ಆತನಿಗೆ ನೀನು ಏಕಪುತ್ರನಿಷಯವಲ್ಲವೆ? ಆತನು ನನ್ನ ಕೂಸಿನ ವರ್ತಮಾನವೇನೆಂದು ಕೇಳಿದರೆ, ನಾನು ಆತನಿಗೆ ಯಾವಬಗೆಯ ಉತ್ತರವನ್ನು ಕೊಡಬೇಕಾಗುವದೋ ಏನೋ! ಕುಮಾರಾ, ಇಂಥ ಕಠಿಣಪ್ರಸಂಗದಲ್ಲಿ ನಿನ್ನನ್ನು ಬಿಟ್ಟು ನಾನು ಹೋಗುವದು ಧರ್ಮವಲ್ಲ; ಆದರೆ ಏನುಮಾಡಲಿ? ಸ್ವಾಮಿಕಾರ್ಯಕ್ಕಿಂತ ಅಧಿಕವಾದದ್ದು ಮತ್ತೊಂದಿಲ್ಲ. ಬಹಳಹೊತ್ತು ಮಾತಾಡುತ್ತ ನಿಂತರೆ, ಕೆಲಸಕ್ಕೆ ವಿಘ್ನವೊದಗುವ ಸಂಭವವಿರುತ್ತದೆ; ಆದ್ದರಿಂದ ನಾನು ಹೊರಟುಹೋಗುತ್ತೇನೆ, ಎಂದು ಹೇಳಿ ವಸ್ತ್ರದಿಂದ ಕಣ್ಣೀರನ್ನು ಒರಿಸಿಕೊಳ್ಳುತ್ತ ಕುಮಾರನ ಕಡೆಗೆ ನೋಡುತ್ತ ತಟ್ಟನೆ ಅಲ್ಲಿಂದ ನಡೆದನು! ಆತನು ಭಿಲ್ಲರ ವೇಷದಿಂದ ರಾಜಪರಿವಾರವನ್ನು ಕರಕೊಂಡು, ಭಿಲ್ಲರ ಸಹಾಯದಿಂದ ಗುಪ್ತ ಮಾರ್ಗವಾಗಿ ಸಾಗಿದನು. ಇಡಿಯ ರಾತ್ರಿಯೆಲ್ಲ ನಡೆದು, ಅಂಕಡೊಂಕಾದ ಬಿಕ್ಕಟ್ಟಿನ ಹಾದಿಯನ್ನು ಕ್ರಮಿಸಿದ ಬಳಿಕ ಅವರಿಗೆ ಒಂದು ಗುಪ್ತವಾದ ಪರ್ವತಗುಹೆಯು ಹತ್ತಿತು. ಅಲ್ಲಿ ತೇಜಸಿಂಹನು ರಾಜಪರಿವಾರವನ್ನು ಇಟ್ಟು, ಜಾಗ್ರತೆಯಿಂದ ರಕ್ಷಿಸುತ್ತಲಿದ್ದನು.

ಇತ್ತ ದುರ್ಗದಲ್ಲಿ ಅಲ್ಪಾವಕಾಶದೊಳಗೆ ಗಡಿಬಿಡಿಯು ಉತ್ಪನ್ನವಾಯಿತು. ಅಲ್ಲಲ್ಲಿ ದೀವಟಿಗೆಗಳು ಹತ್ತಿದವು. ಒಂದೆ ವೃತ್ತಿಯ ೩೦೦ ಜನ ರಾಠೋಡ ವೀರರು ದುರ್ಗದ ಬಾಗಿಲವನ್ನು ತೆರೆದು ಹೊರಗೆ ಬಂದು, ಮೊಗಲರು ದುರ್ಗವನ್ನು ಏರಿಬರುವದರ ಹಾದಿಯನ್ನು ನೋಡುತ್ತ ಅಲ್ಲಲ್ಲಿ ನಿಂತುಕೊಂಡರು. ರಜಪೂತ ವೀರರು ಸಂಖ್ಯೆಯಿಂದ ಸ್ವಲ್ಪವಾಗಿದ್ದರೂ ಅವರ ಧೈರ್ಯವೂ ಸಾಹಸವೂ ವಿಲಕ್ಷಣವಾಗಿದ್ದವು. ಅವರು ನಿಂತುಕೊಂಡಿದ್ದ ಪರ್ವತಕ್ಕಿಂತಲೂ ಅವರ ಹೃದಯಗಳು ಸ್ಥಿರವಾಗಿದ್ದವು. ಕುಮಾರ ಚಂದ

ನಸಿಂಹನಿಗೆ ಇಂದು ಸ್ವರ್ಗೀಯ ಜ್ಞಾನವು ಪ್ರಾಪ್ತವಾದಂತಾಗಿತ್ತು. ಆತನು ಇಂದು ದೈವಬಲದಿಂದ ಬಲಿಷ್ಠನಾಗಿದ್ದನು! ನಿರ್ಭಯದಿಂದ ಆತನು ಶತ್ರುಗಳ ಮಾರ್ಗಪ್ರತೀಕ್ಷೆ ಮಾಡುತ್ತಿದ್ದನು. ಆತನು ವಯಸ್ಸಿನಿಂದ ತೀರ ಚಿಕ್ಕವನಾಗಿದ್ದರೂ ಅಭಿಮನ್ಯು ಕುಮಾರನಂತೆ ಪರಾಕ್ರಮದಲ್ಲಿಯೂ, ರಣಕೌಶಲ್ಯದಲ್ಲಿಯೂ ವೃದ್ಧನೇ ಆಗಿದ್ದನು. ಉಳಿದ ೨೦೦ ಜನ ರಾಠೋಡರನ್ನು ಚಂದನಸಿಂಹನು ದುರ್ಗದಲ್ಲಿ ಇಟ್ಟಿದ್ದನು. ನೋಡನೋಡುತ್ತ ಮೊಗಲ ಸೈನ್ಯವು ಕ್ಷುಬ್ಧವಾದ ಸಮುದ್ರದ ತೆರೆಗಳಂತೆ ಕೋಟೆಯ ಮೇಲೆ ಸಾಗಿ ಬಂದಿತು. ಆ ಸೈನ್ಯದ ಆವೇಶವು ವರ್ಣನಾತೀತವಾಗಿತ್ತು! ಯುದ್ಧದ ವಜ್ರನಾದದಿಂದ ಆಕಾಶವೂ, ಭೂಮಿಯೂ ಕಂಪಾಯಮಾನವಾಗಹತ್ತಿದವು. ಆ ದಿನ ನಡೆದ ಘನಘೋರಯುದ್ಧವನ್ನು ವರ್ಣಿಸುವದು, ಯುದ್ಧದ ಸುದ್ದಿಯನ್ನು ಕೇಳಿ ಸಹ ಗೊತ್ತಿಲ್ಲದ ನಮಗೆ ಶಕ್ಯವಲ್ಲ. "ಹಾ ಹಾ ಅನ್ನುವದರೊಳಗಾಗಿ ಭೀಮಗಡವು ಕೈಸೇರುವದು, ತಮ್ಮ ಪರಮ ಶತ್ರುವಾದ ಪ್ರತಾಪಸಿಂಹನ ಕುಟುಂಬದವರನ್ನು ಕ್ಷಣಮಾತ್ರದಲ್ಲಿ ಸೆರೆಹಿಡಿಯುವೆವು" ಎಂಬ ಉಬ್ಬಿನಿಂದ ಮೊಗಲ ಸೈನ್ಯವು ರಜಪೂತರ ಮೇಲೆ ಮುಗಿಬಿದ್ದಿತು. ಮೊಗಲರ ಸೈನ್ಯವು ದೊಡ್ಡದಿದ್ದರೂ ದುರ್ಗವನ್ನು ಏರಿಬರಲಿಕ್ಕೆ ಒಂದೇ ಮಾರ್ಗವಿದ್ದದ್ದರಿಂದ, ರಜಪೂತರನ್ನು ಅಬ್ಬರಿಸಿ ಮುತ್ತಿ ಬಗ್ಗುಬಡಿಯಲಿಕ್ಕೆ ಅದಕ್ಕೆ ಅನುಕೂಲವಾಗಲಿಲ್ಲ. ತಮ್ಮ ಉದ್ದೇಶವು ಕೊನೆಗಾಣದೆ, ಕಾರ್ಯಸಾಧನಕ್ಕೆ ವಿಲಂಬವಾಗುವ ಲಕ್ಷಣವನ್ನು ನೋಡಿ ಮೊಗಲರು ಕ್ರೋಧಸಂತಪ್ತರಾದರು. ಅವರು ಝುಂಝಾವಾತದಿಂದ ಉತ್ಪನ್ನವಾದ ಸಮುದ್ರದ ತೆರೆಗಳಂತೆ ರಜಪೂತರ ಮೇಲೆ ಬೀಳಲು, ವೀರಾಗ್ರಣಿಗಳಾದ ಆ ರಾಠೋಡರು ಸಮುದ್ರದ ದಂಡೆಯ ಮೇಲಿದ್ದ ಪ್ರಚಂಡ ಬಂಡೆಗಳಂತೆ ಮೊಗಲರ ದಾಳಿರೂಪವಾದ ತೆರೆಗಳನ್ನು ಹಿಂದಕ್ಕೆ ದೂಡುತ್ತಿದ್ದರು! ಹೀಗೆ ಮೊಗಲವೀರರು ರಜಪೂತರ ಸೈನ್ಯರೇಖೆಯ ಮೇಲೆ ಏರಿಹೋದಾಗೆಲ್ಲ ಅವರನ್ನು ರಜಪೂತ ವೀರರು ಹಿಂದಕ್ಕಟ್ಟುತ್ತಲಿದ್ದರು. ಮಹಾರಾಣಾನ ಸನ್ಮಾನವು, ಮೇವಾಡದ ಗೌರವವು, ಎಲ್ಲ ರಣಪೂತರ ಜೀವನವು, ತಮ್ಮ ತಾಯಿ–ತಂಗಿ–ಹೆಂಡಿರೇ ಮೊದಲಾದವರ ಪವಿತ್ರವಾದ ನಾರೀ ಧರ್ಮವು ಇವೆಲ್ಲ ನಮ್ಮ ಕೈಯಲ್ಲಿರುವ ಈ ಖಡ್ಗಗಳನ್ನವಲಂಬಿಸಿರುತ್ತವೆಂದು ಪ್ರತಿ ಒಬ್ಬ ರಾಠೋಡ

ವೀರನು ಆಗ ನಂಬಿದ್ದನು. ಅಂತೇ ಅಲ್ಪ ಸಂಖ್ಯಾಕರಾದ ರಜಪೂತರು ಮೊಗಲರ ಮಹಾಸೈನ್ಯದೊಡನೆ ಎದೆಗೊಟ್ಟು ಕಾದುತ್ತಿದ್ದರು. ಈ ಮೇರೆಗೆ ಇಡಿಯ ರಾತ್ರಿ ಘನಘೋರ ಯುದ್ಧವು ನಡೆದಿತ್ತು. ರಾಠೋಡ ವೀರರಲ್ಲಿ ಬಹು ಜನರು ತಮ್ಮ ಅತುಲ ಪರಾಕ್ರಮದ ತೇಜದಿಂದ ಮೊಗಲ ವೀರರ ಕಣ್ಣುಗಳನ್ನು ಕುಕ್ಕಿ, ರಣಭೂಮಿಯಲ್ಲಿ ಬಿದ್ದರು. ಮೂಡಲ ಕೆಂಪುಹರಿಯು ಹತ್ತಿತು. ಅಸಂಖ್ಯ ಮೊಗಲವೀರರು ಭಯಂಕರವಾಗಿ ಗರ್ಜಿಸಿ, ಬದುಕಿ ಉಳಿದಿರುವ ಸ್ವಲ್ಪಜನ ರಜಪೂತವೀರರ ಮೇಲೆ ಮುಗಿಬಿದ್ದರು; ಆದರೆ ರಾಠೋಡ ವೀರರು ಎಳ್ಳಷ್ಟಾದರೂ ಹಿಂಜರಿಯಲಿಲ್ಲ. ಒಂದೇಸವನೆ ತಮ್ಮ ಕೈಖಡ್ಗಗಳಿಂದ ಅವರು ಮೊಗಲರನ್ನು ತುಂಡರಿಸುತ್ತಲಿದ್ದರು. ಧನ್ಯರು, ಆ ರಣಧೀರ ರಾಠೋಡರು ಪರಮ ಧನ್ಯರು!

ಸೂರ್ಯೋದಯವಾಯಿತು. ರಕ್ತದಿಂದ ಅಭಿಷಕ್ತನಾದ ಕುಮಾರ ಚಂದನಸಿಂಹನು ಧೀರಗಂಭೀರ ಗಮನದಿಂದ ಪರಿವಾರದೊಡನೆ ದುರ್ಗವನ್ನು ಸೇರಿದನು. ರಾತ್ರಿ ದುರ್ಗದ ಹೊರಗೆ ಬಂದಿದ್ದ ಮುನ್ನೂರು ಜನ ವೀರರಲ್ಲಿ ೨೫೦ ಜನರು ಮಡಿದು, ಐವತ್ತು ಜನರು ಮಾತ್ರ ಚಂದನಸಿಂಹನೊಡನೆ ದುರ್ಗವನ್ನು ಸೇರಿದ್ದರು! ಅವರೆಲ್ಲರ ಕೆಂಪಡರಿದ ಕಣ್ಣುಗಳು, ರಕ್ತದಿಂದ ತೊಯ್ದು ತಪ್ಪಡಿಯಾದ ಉಡಿಗೆ-ತೊಡಿಗೆಗಳು, ಉನ್ನತವಾದ ಶರೀರಗಳು, ರಕ್ತಹತ್ತಿ ಭಯಂಕರವಾಗಿ ತೋರುವ ಮುಖಮಂಡಲಗಳು ನೋಡುವವರಿಗೆ ಅವರ ರಣಸಾಹಸವನ್ನು ತೋರಿಸುತ್ತಿದ್ದವು. ಹೀಗೆ ರಜಪೂತ ವೀರರು ಹಿಂದಿರುಗಿದ್ದನ್ನು ಕಂಡು ಮೊಗಲರು ಹೆಚ್ಚು ಸ್ಫೂರ್ತಿಗೊಂಡು ಭಯಂಕರ ಜಯನಾದವನ್ನು ಮಾಡುತ್ತ ಪರ್ವತವನ್ನು ಏರುತ್ತ ದುರ್ಗವನ್ನು ಪ್ರವೇಶಿಸಲು ಆನಂದದಿಂದ ಮುಂದುವರಿದರು; ಆದರೆ ಅವರ ಪ್ರಯತ್ನಗಳು ನಿಷ್ಫಲವಾಗಿ, ದುರ್ಗದ ಬಾಗಿಲು "ಝುಣ್ ಝುಣಣ" ಎಂದು ಧ್ವನಿಮಾಡುತ್ತ ಇಕ್ಕಲ್ಪಟ್ಟಿತು. ಉಳಿದ ರಜಪೂತ ವೀರರು ಬಾಗಿಲ ಹಿಂದೆ ಒಟ್ಟುಗೂಡಿದರು. ದುರ್ಗಪ್ರವೇಶಕ್ಕೆ ಪ್ರತಿಬಂಧವಾದದ್ದನ್ನು ನೋಡಿ ಮುಸಲ್ಮಾನ ವೀರರು, "ತಾವು ಬೆಳತನಕ ಇಷ್ಟು ಶ್ರಮಬಟ್ಟು, ಸಾವಿರಾರು ಜನರನ್ನು ಸಮರ ದೇವತೆಗೆ ಬಲಿಕೊಟ್ಟದ್ದು ವ್ಯರ್ಥವಾಯಿತೆ"ಂದು ಬಗೆದು ಅಸಮಾಧಾನಪಟ್ಟರು. ಮತ್ತು "ಇನ್ನು ಮತ್ತೆ ಸಂಜೆಯವರೆಗೆ ಯುದ್ಧಮಾಡಿ

ಪರಾಕ್ರಮದಿಂದ ಕೋಟೆಯ ಗೋಡೆಗಳನ್ನೇರಿ ಹೋಗಿ, ಇಲ್ಲವೆ ಬಾಗಿಲು ಒಡೆದು ಒಳಗೆ ಹೋದಹೊರತು ದುರ್ಗವು ವಶವಾಗದೆ"ಂದು ಅವರು ಸ್ವಲ್ಪ ಉದಾಸೀನರಾದರು. ಸೈನಿಕರು ಬೆಳತನಕ ಯುದ್ಧಮಾಡಿ ದಣಿದಿರುವ ರೆಂದು ಮೊಗಲ ಸೇನಾಪತಿಯು ಅವರಿಗೆ ಸ್ವಲ್ಪ ವಿಶ್ರಾಂತಿಯನ್ನು ಹೊಂದ ಬೇಕೆಂದು ಸೂಚಿಸಿದನು; ಅದರಿಂದ ಸೂರ್ಯೋದಯವಾದನಂತರ ಮೊಗ ಲರ ಸದ್ದು ಅಡಗಿತು.

ಹೊರಗೆ ಗದ್ದಲವು ಕಡಿಮೆಯಾದದ್ದನ್ನು ನೋಡಿ ಚಂದನಕುಮಾ ರನು ಕೋಟೆಯ ಗೋಡೆಯನ್ನು ಹತ್ತಿ ನೋಡಿದನು; ಕೋಟೆಯ ಬಾಗಿಲ ಬಳಿಯಲ್ಲಿ ಮೊಗಲ ಸೈನಿಕರು ವಿಶ್ರಾಂತಿಯನ್ನು ಹೊಂದುತ್ತಲಿದ್ದರು; ಆದ್ದ ರಿಂದ ಅವನು, ಇನ್ನೂ ಯುದ್ಧವು ನಿಂತಿರುವದಿಲ್ಲೆಂತಲೂ, ಯುದ್ಧಕ್ಕಾ ಗಿಯೇ ಮೊಗಲ ಸೈನಿಕರು ಕೋಟೆಯ ಹೊರಗೆ ಬಾಗಿಲಲ್ಲಿ ವಿಶ್ರಾಂತಿಯನ್ನು ಹೊಂದುತ್ತಿರುವರೆಂತಲೂ ತಿಳಿದನು. ಮೊಗಲ ಸೈನ್ಯದಲ್ಲಿ ಸಾವಿರ ಜನರಿರ ಬಹುದೆಂದು ಕುಮಾರನಿಗೆ ತೋರಿತು. ಇತ್ತ ಕೋಟೆಯಲ್ಲಿ ಇನ್ನೂರಾ ಐವತ್ತು ಜನ ರಜಪೂತರು ಮಾತ್ರ ಉಳಿದದ್ದನ್ನು ಆತನು ನೋಡಿದ್ದನು. ಬರಿಯ ಇನ್ನೂರಾಐವತ್ತು ಜನರು ಸಾವಿರ ಜನರೊಡನೆ ಯುದ್ಧಮಾಡಬೇ ಕಾಗುವದೆಂದು ಬಗೆದು ಆ ಬಾಲಕನು ಖಿನ್ನನಾದನು. ಆತನ ಹುಬ್ಬುಗಳು ಗಂಟಿಕ್ಕಿದವು, ಮುಖವು ಗಂಭೀರವಾಯಿತು. ಆತನು ಒಂದುಕ್ಷಣ ಆಲೋ ಚಿಸಿ, ಒಂದು ವಿಚಾರವು ಹೊಳೆಯಲು, ಮುಗುಳುನಗೆ ನಕ್ಕು ಆತನು ಕೋಟೆಯ ಗೋಡೆಯಿಂದ ಕೆಳಗಿಳಿದನು. ಬಳಿಕ ಕೋಟೆಯಲ್ಲಿ ಅಲ್ಲಲ್ಲಿ ಇರಿಸಲ್ಪಟ್ಟಿದ್ದ ಜನರನ್ನು ಒಟ್ಟುಗೂಡಿಸಿ ಕುಮಾರನು ಅವರನ್ನುದ್ದೇಶಿಸಿ— ರಜಪೂತ ವೀರರೇ, ನಿನ್ನೆ ರಾತ್ರಿ ನೀವೆಲ್ಲರು ಜೀವದಹಂಗುದೊರೆದು ಕಾದಿ ಪ್ರತಿಜ್ಞೆಯನ್ನು ಪೂರ್ಣಮಾಡಿದಿರಿ. ಅಗೋ ನೋಡಿರಿ, ಭಗವಾನ್ ಸೂರ್ಯನಾರಾಯಣನು ಉದಯ ಹೊಂದಿದನು; ಕೋಟೆಯು ಇನ್ನೂ ನಮ್ಮ ಕೈಯಲ್ಲಿಯೇ ಇರುತ್ತದೆ. ದುರ್ಗದ ಹೊರಗೆ ಸಾವಿರ ಜನ ಮೊಗ ಲರು ಯುದ್ಧಸನ್ನದ್ಧರಾಗಿ ನಿಂತಿರುವರು. ನಾವು ಇನ್ನೂರಾಐವತ್ತು ಜನರು ಮಾತ್ರ ದುರ್ಗದಲ್ಲಿ ಉಳಿದಿರುವೆವು. ರಾಠೋಡ ವೀರರೇ, ಇಂಥ ಸ್ಥಿತಿ ಯಲ್ಲಿ ನಾವು ಯಾವ ಮಾರ್ಗವನ್ನವಲಂಬಿಸಬೇಕೆಂಬದನ್ನು ನೀವು ನನಗೆ

ಸೂಚಿಸತಕ್ಕದ್ದು, ಎಂದು ನುಡಿಯಲು, ಬಳಿಯಲ್ಲಿಯೇ ನಿಂತಿದ್ದ ಒಬ್ಬ ರಾಠೋಡ ವೀರನು ಉತ್ತೇಜಿತವಾದ ಸ್ವರದಿಂದ—ಕುಮಾರ, ರಣಾಂಗಣ ದಲ್ಲಿ ಶತ್ರುಗಳಿಗೆ ತಮ್ಮ ಪರಾಕ್ರಮವನ್ನು ತೋರಿಸಿ ಧಾರಾತೀರ್ಥದಲ್ಲಿ ಸುಖ ದಿಂದ ಪತನಹೊಂದುವದೊಂದೇ ಧರ್ಮವು ರಾಠೋಡ ವೀರರಿಗೆ ಗೊತ್ತಿರು ತ್ತದೆ, ಎಂದು ನುಡಿದನು. ಚಂದನಸಿಂಹನು ಅವನ ಕಡೆಗೆ ತಿರುಗಿ—ಆದರೆ ಮುಂದಿನ ವಿಚಾರವೇನು? ನಾವೆಲ್ಲರೂ ರಣಭೂಮಿಯಲ್ಲಿ ಶಯನಮಾಡಿದ ಬಳಿಕ ನಮ್ಮ ತಾಯಂದಿರ, ಅಕ್ಕ-ತಂಗಿಯರ, ಹೆಂಡಿರ ಗತಿಯು ಏನಾದೀ ತೆಂಬದನ್ನು ವಿಚಾರಮಾಡಬೇಕಲ್ಲವೆ? ಅವರು ಮೊಗಲರ ದಾಸಿಗಳಾಗ ಬೇಕಾದೀತಲ್ಲ! ರಜಪೂತರಮಣಿಯರು ದಿಲ್ಲಿಯ ರಂಗಮಹಾಲಿನಲ್ಲಿ ಮೊಗಲರ ವಿಲಾಸದ ವಸ್ತುಗಳಾದಾರು; ಹಾಗಾಗದಂತೆ ಉಪಾಯವನ್ನೇನು ಹೇಳುವಿರಿ?

ಕುಮಾರನ ಈ ಮಾತುಗಳನ್ನು ಕೇಳಿ ಎಲ್ಲ ರಜಪೂತರ ಮುಖಮಂಡ ಲಗಳು ಕೆಂಡದಂತೆ ಕೆಂಪಾದವು. ಎಲ್ಲರ ಖಡ್ಗಗಳು ಸರಕ್ಕನೆ ಒರೆಯಿಂದ ಹೊರಬಿದ್ದವು; ಆದರೆ ಎಲ್ಲ ರಜಪೂತ ವೀರರು ಸ್ತಬ್ಧವಾಗಿ ನೆಲವನ್ನು ನೋಡುತ್ತ ನಿಂತುಕೊಂಡಿದ್ದರು. ಕೆಲಹೊತ್ತಿನ ಮೇಲೆ ಕೆಲಕೆಲವರು ಅಸ್ಪಷ್ಟ ಸ್ವರದಿಂದ—"ಚಿತಾರೋಹಣ" "ಜೋಹಾರ" ಎಂಬ ಭಯಂಕರ ಉಪಾಯವನ್ನು ಮೆಲ್ಲನೆ ಸೂಚಿಸಿದರು. ಅದನ್ನು ಕೇಳಿ ಎಲ್ಲ ಜನರು ಉತ್ತೇಜಿತ ಸ್ವರದಿಂದ ಒದರಿ—"ಪುರುಷರಿಗೆ ವೀರಶಯ್ಯೆಯು, ಸ್ತ್ರೀಯರಿಗೆ ಜೋಹಾರವು" ಎಂದು ನುಡಿದರು. ಅದನ್ನು ಕೇಳಿ ಕುಮಾರನು ಸಂತೋ ಷಪಟ್ಟು ತನ್ನ ವೀರ ಪರಿವಾರದ ಯೋಚನೆಗೆ ಸಂಪೂರ್ಣವಾಗಿ ಒಪ್ಪಿಕೊಂ ಡನು. ಆತನು ಕೂಡಲೆ ತನ್ನ ಅನುಚರರನ್ನು ಬಿಟ್ಟು ಅಂತಃಪುರವನ್ನು ಹೊಕ್ಕನು. ಅಲ್ಲಿ ಅನೇಕ ರಾಠೋಡ ರಮಣಿಯರಿಂದ ಸುತ್ತಗಟ್ಟಿದವಳಾಗಿ ಆತನ ತಾಯಿಯು ಯುದ್ಧದಚಿಂತೆಮಾಡುತ್ತ ಕುಳಿತುಕೊಂಡಿದ್ದಳು. ಚಂದ ನಸಿಂಹನು ಮಾತೆಯ ಚರಣಗಳ ಮೇಲೆ ಮಸ್ತಕವನ್ನಿಟ್ಟನು. ಆಗ ಆ ವೀರ ಮಾತೆಯು ತನ್ನ ಪ್ರಿಯಕುಮಾರನನ್ನು ವಾತ್ಸಲ್ಯದಿಂದ ಹಿಡಿದೆತ್ತಿ ಎದೆಗವಚಿ ಕೊಂಡು ನೆತ್ತಿಯನ್ನು ಮೂಸಿನೋಡಿ, ಮೈಮೇಲೆ ಕೈಯಾಡಿಸುತ್ತ—

ವೀರಮಾತೆ—ಬಾಳಾ ಯುದ್ಧದ ಸುದ್ದಿಯೇನು?

ಚಂದನಸಿಂಹ—ಸುದ್ದಿಯು ಬಹಳ ಒಳ್ಳೆಯದದೆ. ಇಲ್ಲಿಯವರೆಗೆ ಒಬ್ಬ ರಜಪೂತವೀರನೂ ಶತ್ರುಗಳಿಗೆ ಬೆನ್ನುತೋರಿಸಿ ರಣರಂಗವನ್ನು ಬಿಟ್ಟು ಹೋಗಿರುವದಿಲ್ಲ. ಎಲ್ಲ ರಾಠೋಡರು ಜೀವದಪರಿವೆಯಿಲ್ಲದೆ ತಮ್ಮ ಶಕ್ತಿ ಸರ್ವಸ್ವವನ್ನೆಲ್ಲ ಒಟ್ಟುಗೂಡಿಸಿ ಬೆಳತನಕ ಶತ್ರುಗಳೊಡನೆ ಕಾದಿದರು. ಈಗ ಸೂರ್ಯೋದಯವಾಗಿರುವದು; ದುರ್ಗವು ಇನ್ನೂ ನಮ್ಮ ಕೈಯಲ್ಲಿಯೇ ಇರುವದು!

ವೀರಮಾತೆ—ಬಾಳಾ, ನಿನಗೆ ಶುಭವಾಗಲಿ, ನಿನ್ನ ಕ್ಷಾತ್ರತೇಜವು ಹೀಗೆಯೇ ಅಭಿವೃದ್ಧವಾಗಲಿ. ಇದು ನನ್ನ ಪೂರ್ಣಾಶೀರ್ವಾದವು.

ಚಂದನಸಿಂಹ—ಅವ್ವಾ, ಅಪ್ಪಣೆಯಾದರೆ ನಿನಗೆ ಇನ್ನೂ ಯುದ್ಧದ ವೃತ್ತಾಂತವನ್ನು ಹೇಳುವೆನು. ರಾತ್ರಿಯ ಯುದ್ಧದಲ್ಲಿ ಸನಿಸನಿಯಕ್ಕೆ ಮುನ್ನೂರುಜನ ರಾಠೋಡ ವೀರರು ಶತ್ರುಗಳೊಡನೆ ಭೀಮಪರಾಕ್ರಮದಿಂದ ಕಾದಿ ಸಮರಭೂಮಿಯಲ್ಲಿ ದೇಹವಿಟ್ಟರು. ಸದ್ಯಕ್ಕೆ ದುರ್ಗದಲ್ಲಿ ೨೫೦ಜನ ಸೈನಿಕರಿಗಿಂತ ಹೆಚ್ಚು ಜನರಿಲ್ಲ. ಕೋಟೆಯ ಹೊರಗೆ ಸಾವಿರಜನ ಮೊಗಲ ವೀರರು ಕಾದಲು ಸಿದ್ಧರಾಗಿದ್ದಾರೆ. ಸ್ವಲ್ಪ ಹೊತ್ತಿನಲ್ಲಿ ಪುನಃ ಯುದ್ಧವು ಆರಂಭವಾಗಬಹುದು!

ಮುಂದಿನ ಮಾತುಗಳು ಕುಮಾರನ ಮುಖದಿಂದ ಹೊರಬೀಳಲಿಲ್ಲ. ಆತನು ತನ್ನಕಣ್ಣೊಳಗಿಂದ ಉದುರುವ ಎರಡು ಅಶ್ರುಬಿಂದುಗಳನ್ನು ಮೆಲ್ಲಗೆ ಒರಸಿಕೊಂಡನು. ಅಷ್ಟರಲ್ಲಿ ಆ ವೀರಮಾತೆಯು—

ವೀರಮಾತೆ—(ಕರ್ಕಶಧ್ವನಿಯಿಂದ) ೨೫೦ಜನ ರಜಪೂತರು ೧೦೦೦ ಜನ ಮೊಗಲರೊಡನೆ ಯುದ್ಧಮಾಡಲಿಕ್ಕೆ ಹೆದರುತ್ತಾರೋ ಏನು?

ಚಂದನಸಿಂಹ—(ಸ್ಥಿರಗಂಭೀರಸ್ವರದಿಂದ) ಇಲ್ಲ. ರಜಪೂತರು ಬೇಕಾದಷ್ಟು ಶತ್ರುಸೈನ್ಯದೊಡನೆ ಯುದ್ಧಮಾಡುವರು. ಅವರು ಯುದ್ಧಕ್ಕೆ ಎಂದೂ ಹೆದರುವವರಲ್ಲ. ಈಗ ಅವರು ಸಿಂಹಗಳಂತೆ ಮೊಗಲ ಸೈನ್ಯದ ಮೇಲೆ ಮುಗಿಬೀಳುವರು; ಆದರೆ ರಜಪೂತ ರಮಣಿಯರ ಪಾತಿವ್ರತ್ಯದ ಸಂರಕ್ಷಣವು ಮೊದಲು ಆಗಬೇಕಷ್ಟೇ?

ವೀರಮಾತೆ—(ನಗುನಗುತ್ತ) ಬಾಳಾ, ಈ ಮಾತನ್ನು ಹೇಳಲಿಕ್ಕೆ ನೀನು ಇಷ್ಟೊಂದು ಹೆದರುವೆಯೇನು? ಇಂಥ ಭಯಂಕರ ಮಾತನ್ನು

ಬಾಯಿಬಿಚ್ಚಿ ಹ್ಯಾಗೆ ಹೇಳಲೆಂಬ ಅಂತಃಕರಣದಿಂದ ಎರಡು ಅಶ್ರುಬಿಂದುಗಳನ್ನು ಸುರಿಸಿದಿಯಾ? ಆದರೆ ರಜಪೂತ ವೀರರಿಗೆ ತಮ್ಮ ಕುಲಗೌರವದ ಸಂರಕ್ಷಣಕ್ಕಾಗಿ ಹ್ಯಾಗೆ ಸಾಯಬೇಕೆಂಬದು ಗೊತ್ತಿರಲು, ರಜಪೂತ ರಮಣಿಯರು ಮಾತ್ರ ತಮ್ಮ ಪಾತಿವ್ರತ್ಯದ ಸಂರಕ್ಷಣಕ್ಕಾಗಿ ಏನು ಮಾಡಬೇಕೆಂಬದನ್ನು ಅರಿಯದಿರಬಹುದೋ? ಕುಮಾರಾ, ಇಂಥ ಭಯಕ್ಕೂ-ಮೋಹಕ್ಕೂ ನೀನು ಒಳಗಾಗಬಹುದೇ? ಹೋಗು, ಚಂದನ! ಯುದ್ಧಕ್ಕಾಗಿ ನೀವು ಸಿದ್ಧರಾಗಿರಿ; ಇತ್ತ ನಾವೆಲ್ಲರೂ ಚಿತಾರೋಹಣಕ್ಕೆ ಸಿದ್ಧರಾಗುವೆವು!

ತಾಯಿಯ ಈ ಮಾತುಗಳನ್ನು ಕೇಳಿ ಚಂದನಸಿಂಹನು ಮತ್ತೆ ಆಕೆಯ ಪಾದಗಳ ಮೇಲೆ ಮಸ್ತಕವನ್ನಿಟ್ಟು ಅಲ್ಲಿಂದ ಹೊರಟುಹೋದನು. ಆಗ ದೇವೀಸಿಂಗನ ವೀರಪತ್ನಿಯು ಯಾವತ್ತುರಜಪೂತ ಸ್ತ್ರೀಯರನ್ನು ಕುರಿತು— "ಸಖಿಯರೇ, ಇಂದು ನಾವು ಸತಿಯರ ಪವಿತ್ರವ್ರತವನ್ನು ಕೈಕೊಳ್ಳಬೇಕಾಗಿರುವದು. ವೀರ ಪತ್ನಿಯರಿಗೆ ಉಚಿತವಾದ ಕರ್ಮವೇ ಇಂದು ನಮ್ಮಿಂದ ಘಟಿಸಬೇಕಾಗಿರುತ್ತದೆ. ಸ್ವಾಮಿಯ ಸೌಖ್ಯಕ್ಕಿಂತ ಹೆಚ್ಚಿನ ಸುಖಕರವಾದ ಸಂಗತಿಯು ಆರ್ಯ ಸ್ತ್ರೀಯರಿಗೆ ಬೇರೆಯಾವದಿರುವದು? ರಜಪೂತ ಯೋಧರು ನಿಜವಾಗಿ ವೀರರಿರುವಂತೆ, ರಜಪೂತ ರಮಣಿಯರಾದರೂ ನಿಜವಾಗಿ ವೀರಪತ್ನಿಯರೇ ಇರುತ್ತಾರೆಂಬ ಸಂಗತಿಯನ್ನು ತುರ್ಕರು ಅರಿತುಕೊಳ್ಳಲಿ" ಎಂದು ನುಡಿದಳು. ಆಗ ಸಾವಿರಾರು ಜನ ರಜಪೂತಸ್ತ್ರೀಯರು, ಅದೇ ಉದಯ ಹೊಂದುತ್ತಿರುವ ಶ್ರೀ ಸೂರ್ಯನಾರಾಯಣನನ್ನು ವಂದಿಸಿ, ಸ್ನಾನವೊದಲಾದ ಕೃತ್ಯಗಳನ್ನು ಯಥಾಸಾಂಗವಾಗಿ ತೀರಿಸಿಕೊಂಡರು. ಅವರು ಶುಭ್ರವಸ್ತ್ರವನ್ನುಟ್ಟುಕೊಂಡು ತಮ್ಮತಮ್ಮ ಆರಾಧ್ಯದೇವತೆಯನ್ನು ಯಥಾಸಾಂಗ ಭಕ್ತಿಪೂರ್ವಕವಾಗಿ ಪೂಜಿಸಿದರು. ಆ ಮೇಲೆ ಯಾವತ್ತು ಸ್ತ್ರೀಯರು ಅರಮನೆಯ ವಿಶಾಲವಾದ ಪಟಾಂಗಣದಲ್ಲಿ ಒಟ್ಟುಗೂಡಿದರು. ಆ ಸ್ತ್ರೀಸಮೂಹದಲ್ಲಿ ತರುಣಿಯರು, ಪ್ರೌಢರು, ವೃದ್ಧರು, ಇವರೆಲ್ಲರ, ಹಾಗು ಉಚ್ಚ-ನೀಚ ಯೋಗ್ಯತೆಯವರ ಸಮಾವೇಶವಾಗಿತ್ತು. ಎಲ್ಲರು ಆನಂದದಿಂದ ತಮ್ಮ ತಮ್ಮ ಪತಿ ದೇವತೆಯ, ಹಾಗು ಇಷ್ಟ ದೇವತೆಗಳ ಸ್ಮರಣವನ್ನು ಮನಸ್ಸಿನಲ್ಲಿ ಮಾಡತೊಡಗಿದರು. ಅವರು ರಜಪೂತರ ಚಿರ

ಪರಂಪರಾಗತವಾದ ಧರ್ಮದಂತೆ ನಾನಾಪ್ರಕಾರದ ಅಲಂಕಾರಗಳಿಂದ ಅಲಂಕೃತರಾಗಿ, ಇಷ್ಟದೇವತೆಯ ನಾಮಘೋಷಮಾಡುತ್ತ ಪ್ರದೀಪ್ತವಾದ ಚಿತೆಯನ್ನು ಪ್ರವೇಶಿಸಿದರು! ಚಿತೆಯ ಪ್ರಚಂಡವಾದ ಅಗ್ನಿ ಜ್ವಾಲೆಯಲ್ಲಿ ಸಾವಿರಾರು ಜನ ಅಬಲೆಯರ ಶರೀರಗಳು ಧಡಧಡನೆ ಉರಿಯಹತ್ತಿದವು; ಆದರೆ ಯಾರ ಮುಖದಿಂದಲೂ ದುಃಖ ಧ್ವನಿಯು ಹೊರಬೀಳಲಿಲ್ಲ! ಪರಾಜಯವು, ಅಪಮಾನವು, ಧರ್ಮನಾಶವು ಅನಿವಾರವಾದಾಗೆಲ್ಲ ರಜಪೂತ ಸ್ತ್ರೀಯರು ಹೀಗೆಯೇ ತಮ್ಮ ಸತೀತ್ವದ ರಕ್ಷಣಮಾಡಿಕೊಳ್ಳುತ್ತ ಬಂದಿದ್ದರು!

ಸತಿಯರ ಆ ಪ್ರಚಂಡವಾದ ಅಗ್ನಿಜ್ವಾಲೆಯು ನಾಲ್ಕು ದಿಕ್ಕುಗಳಲ್ಲಿ, ಇನ್ನೂರು ಮುನ್ನೂರು ಜನ ರಾಠೋಡ ವೀರರು ಸ್ಥಿರಮನಸ್ಸಿನಿಂದ ನಿಂತುಕೊಂಡಿದ್ದರು. ತಮ್ಮ ತಾಯಂದಿರನ್ನೂ, ಹೆಂಡಿರನ್ನೂ, ಅಕ್ಕತಂಗಿಯರನ್ನೂ ಶತ್ರುಗಳ ಅತ್ಯಾಚಾರದಿಂದ ಮುಕ್ತಮಾಡುವ ಅಗ್ನಿನಾರಾಯಣನ ಜ್ವಾಲೆಗಳು ಆಕಾಶಕ್ಕಡರುವದನ್ನು ಅವರು ಸ್ವಸ್ಥ ಚಿತ್ತದಿಂದ ನೋಡುತ್ತಿದ್ದರು. ಇನ್ನು ಅವರ ಜೀವನದ ಯಾವ ಮಾಯಾ ಮೋಹವೂ ಉಳಿಯಲಿಲ್ಲ; ಜಗತ್ತಿನಲ್ಲಿ ಅವರ ಯಾವ ಆಶೆಯೂ ಉಳಿಯಲಿಲ್ಲ. ಯಾವತ್ತು ರಾಠೋಡರು ಶಾಂತಮನಸ್ಸಿನಿಂದ ತಮ್ಮ ಪವಿತ್ರ ಪ್ರಾತಃಸ್ನಾನವನ್ನು ತೀರಿಸಿಕೊಂಡು, ಪವಿತ್ರ ವಸ್ತ್ರಗಳನ್ನು ಧರಿಸಿ ದೇವರ ಪೂಜೆಯನ್ನು ಮಾಡಿದರು. ಆ ಮೇಲೆ ಆ ವೀರರು ಉಕ್ಕಿನ ಕವಚಗಳನ್ನು ತೊಟ್ಟು, ಅದರ ಮೇಲೆ ಒಂದೇ ಜಾತಿಯ ಕೇಶರೀ ಬಣ್ಣದ ಉಡಿಗೆ-ತೊಡಿಗೆಗಳನ್ನು ಧರಿಸಿದರು. ಮಸ್ತಕದ ಮೇಲಿನ ಶಿರಸ್ತ್ರಾಣಕ್ಕೆ ಕೇಶರೀಬಣ್ಣದ ವಸ್ತ್ರವನ್ನು ಸುತ್ತಿ, ಅದರಲ್ಲಿ ತುಲಸೀದಲಗಳನ್ನು ಮುಡಕೊಂಡರು; ಅವರು ಕೊರಳಲ್ಲಿ ರುದ್ರಾಕ್ಷಮಾಲೆಯನ್ನೂ ಸಾಲಿಗ್ರಾಮವನ್ನೂ ಧರಿಸಿ, ಪರಸ್ಪರರು ಕಟ್ಟಕಡೆಯ ಪ್ರೇಮಾಲಿಂಗನದಿಂದ ಉತ್ತೇಜಿತರಾದರು. ಈ ಮೇರೆಗೆ ಅವರು ಪ್ರಾಣತ್ಯಾಗದ ಯಾವತ್ತು ಸಿದ್ಧತೆಯನ್ನು ಮಾಡಿ ಸುಮಾರು ಮೂರುತಾಸುಹೊತ್ತು ಏರಿರಲು, ಚಂದನಸಿಂಹನೂ, ಅವನ ಅನುಚರರಾದ ರಾಠೋಡರೂ ಯುದ್ಧಕ್ಕೆ ಸಿದ್ಧರಾದರು. ಕುಮಾರನ ಅಪ್ಪಣೆಯಿಂದ ದುರ್ಗದ ಬಾಗಿಲು ತೆರೆಯಲ್ಪಟ್ಟಿತು. ಆಗ ಹೊರಗೆ ವಿಶ್ರಾಂತಿಯನ್ನು ಹೊಂದುತ್ತಿದ್ದ ಮೊಗ

ಲರು ವಿಸ್ಮಿತರಾಗಿ ನೋಡುತ್ತಿರಲು, ಕೇಶರೀಬಣ್ಣದ ಪೋಷಾಕನ್ನು ಧರಿಸಿದ ಇನ್ನೂರು-ಇನ್ನೂರಾಐವತ್ತು ಜನ ರಜಪೂತರು ಅವರ ಮೇಲೆ ಬಿದ್ದರು. ಕ್ಷಣದಲ್ಲಿ ಮೊಗಲರು ಯುದ್ಧಕ್ಕೆ ಸಿದ್ಧರಾದರು. ಅಲ್ಪ ಸಂಖ್ಯಾಕರಾದ ಆ ರಜಪೂತ ವೀರರು ಸ್ವಲ್ಪ ವೇಳೆಯಲ್ಲಿ ರಣಭೂಮಿಯಲ್ಲಿ ಶಯನಮಾಡಿದರು. ಭೀಮಗಡವು ಮೊಗಲರ ಕೈಸೇರಿತು; ಆದರೆ ಆ ಭಯಂಕರವಾದ ಯುದ್ಧದಲ್ಲಿ ಬದುಕಿ ಉಳಿದ ಮೊಗಲ ವೀರರು, ಆ ಇನ್ನೂರಾಐವತ್ತು ಜನ ರಾಠೋಡ ವೀರರ ಭಯಂಕರ ಪರಾಕ್ರಮವನ್ನೂ, ರಣಾವೇಶವನ್ನೂ, ಜನ್ಮವಿರುವತನಕ ಮರೆಯಲಿಲ್ಲ. ಭೀಮಗಡವು ಉಧ್ವಸ್ತವಾದ ಐವತ್ತು ವರ್ಷಗಳ ಮೇಲೆಸಹ ದಿಲ್ಲಿಯಲ್ಲಿ ಮೊಗಲರು ಆ ಭೀಷಣವಿಜಯದ ಸಂಗತಿಯನ್ನು ತಮ್ಮ ಮಕ್ಕಳಿಗೂ, ಆಪ್ತೇಷ್ಟರಿಗೂ ಕಥೆಮಾಡಿಹೇಳುತ್ತಲಿದ್ದರು. ರಾಠೋಡ ವೀರರ ಅಮಾನುಷ ಪರಾಕ್ರಮದ ಅದ್ಭುತ ವೃತ್ತಾಂತವನ್ನು ಹೇಳುವಾಗ ಅವರು ಪರವಶರಾಗಿ ಹೋಗುತ್ತಿದ್ದರು!

೧೪ ನೆಯ ಪ್ರಕರಣ

# ಮಾನುಷೀವೃತ್ತಿಯು.

ಇತ್ತ ತೇಜಸಿಂಹನು ಮಹಾರಾಣಾನ ಪರಿವಾರವನ್ನು ಕಟ್ಟಿಕೊಂಡು ಒಬ್ಬ ಭಿಲ್ಲನ ಗುಪ್ತವಾದ ಗುಹೆಗೆ ಹೋಗಿ ಅಲ್ಲಿ ಅವರನ್ನು ಸುರಕ್ಷಿತವಾಗಿ ಇಟ್ಟನೆಂದು ಮೇಲೆ ಹೇಳಿದೆಯಷ್ಟೆ? ಮೊಗಲರು ಭೀಮಗಡವನ್ನು ನಾಶ ಮಾಡಿದ ದಿವಸವೇ ಪ್ರತಾಪಸಿಂಹನು ಮೊಗಲ ಸೈನ್ಯದ ಮೇಲೆ ಅಕಸ್ಮಾತ್ತಾಗಿ ಬಿದ್ದು ಕೈಗೆ ಸಿಕ್ಕವರನ್ನು ತುಂಡರಿಸಿದನು. ಮೊಗಲರನ್ನು ನಾಶ ಮಾಡುವದಕ್ಕಾಗಿ ಪ್ರತಾಪನು ತನ್ನ ಪರಾಕ್ರಮದ ಪರಮಾವಧಿಯನ್ನು ತೋರಿಸಿದನು; ಒಂದು ಹಗಲು, ಅರ್ಧರಾತ್ರಿ ಆತನು ಒಂದುಕ್ಷಣವಾದರೂ ವಿಶ್ರಮಿಸದೆ ಯುದ್ಧಮಾಡಿದನು; ಆದರೆ ಅಸಂಖ್ಯ ಮೊಗಲ ಸೈನ್ಯದ ಮುಂದೆ ಆತನ ಆಟ ನಡೆಯಲಿಲ್ಲ! ಆತನು ತನ್ನ ಬಹು ಜನ ಶೂರ ಪರಿವಾರವನ್ನು ಕಳಕೊಂಡು ಪುನಃ ಚಾವಂದ ದುರ್ಗವನ್ನು ಸೇರಬೇಕಾಯಿತು. ಅತ್ತ ಮೊಗಲ ಸೈನಿಕರು ಭೀಮಗಡವನ್ನು ತಕ್ಕೊಂಡಬಳಿಕ ಪ್ರತಾಪಸಿಂಹನ ಕುಟುಂಬದವರು ಇರುತ್ತಿದ್ದ ಭಿಲ್ಲರ ಗುಹೆಯಕಡೆಗೆ ಬರಹತ್ತಿದರು. ಇದನ್ನು ನೋಡಿ ತೇಜಸಿಂಹನು ಮಹಾರಾಣಾನ ಪರಿವಾರವನ್ನು ಅಲ್ಲಿಂದ ಹೊರಡಿಸಿ ಸಮೀಪದಲ್ಲಿಯೇ ಭೂಗರ್ಭದಲ್ಲಿರುವ ಜಾವುರದ ಖಣಿಯಲ್ಲಿ ಅವರನ್ನು ಇಟ್ಟನು. ಇತ್ತ ಮೊಗಲರು ಭಿಲ್ಲರ ಗುಹೆಗೆ ಹೋಗಿ ನಿರಾಶೆಪಟ್ಟು ಹೊರಟು ಹೋದರು. ನಾಲ್ಕೂಕಡೆಗೆ ಸದ್ದು ಅಡಗಿದ್ದನ್ನು ನೋಡಿ, ತೇಜಸಿಂಹನು ಮಹಾರಾಜ್ಞಿಯೇ ಮೊದಲಾದ ರಾಣಾನ ಪರಿವಾರವನ್ನು ಚಾವಂದದುರ್ಗಕ್ಕೆ ಕರಕೊಂಡು ಬಂದು, ರಾಣಾನನ್ನು ಕೂಡಿಸಿದನು; ಆದರೆ ಇನ್ನು ಮೇಲೆ

ಚಾವಂದ ದುರ್ಗವನ್ನು ಶತ್ರುಗಳಿಂದ ರಕ್ಷಿಸುವದು ಪ್ರತಾಪಸಿಂಹನಿಗೆ ಕಠಿಣ ವಾಗಿ ತೋರಹತ್ತಿತು. ಮೆಲ್ಲ ಮೆಲ್ಲನೆ ಸೈನ್ಯಕ್ಕೆ ಅನ್ನಸಾಮುಗ್ರಿಯ ಕೊರತೆ ಯಾಗಹತ್ತಿತು. ದಿನದಿನಕ್ಕೆ ರಜಪೂತ ಸೈನ್ಯವು ಹೀನ ಬಲವಾಗಹತ್ತಿತು. ದುರ್ಗದ ನಾಲ್ಕೂ ದಿಕ್ಕಿಗೆ ಶತ್ರುಗಳ ಶಿಬಿರಗಳು ಕಾಣಹತ್ತಿದವು. ಮಹಾ ರಾಣಾನ, ಹಾಗು ಆತನ ಪರಿವಾರದ ಸಂರಕ್ಷಣವು ಹ್ಯಾಗಾದೀತೆಂದು ಯಾವತ್ತು ರಜಪೂತರು ಚಿಂತಿಸತೊಡಗಿದ್ದರು. ಒಂದು ದಿನ ಪ್ರತಾಪ ಸಿಂಹನು ಮುಂದೆ ಏನು ಮಾಡಬೇಕೆಂಬದನ್ನು ನಿರ್ಧರಿಸುವದಕ್ಕಾಗಿ ತನ್ನ ಮುಖ್ಯ ಮುಖ್ಯ ವೀರರನ್ನು ದುರ್ಗದೊಳಗೆ ಕರೆಸಿಕೊಂಡಿದ್ದನು. ದುರ್ಗ ದೊಳಗಿನ ರಾಜಪ್ರಸಾದದೊಳಗಿನ ಭವ್ಯವಾದ ದಿವಾಣಖಾನೆಯಲ್ಲಿ ಎಲ್ಲ ಜನರು ಒಟ್ಟುಗೂಡಿದ್ದರು. ಪ್ರತಾಪಸಿಂಹನ ಸುತ್ತು ಮುತ್ತು ಬೇರೆ ಬೇರೆ ರಜಪೂತ ಕುಲಪತಿಗಳು ಕುಳಿತುಕೊಂಡಿದ್ದರು. ದಿಲ್ಲೀಪತಿಯೊಡನೆ ಮಹಾ ಯುದ್ಧವನ್ನು ಆರಂಭಿಸುವ ಮೊದಲು ಕಮಳನೇರದಲ್ಲಿ ಪ್ರತಾಪಸಿಂಹನ ಸುತ್ತು ಮುತ್ತು ಕುಳಿತುಕೊಂಡಿದ್ದ ವೀರರಲ್ಲಿ ಈಗ ಎಷ್ಟು ಜನರು ಉಳಿದಿ ದ್ದರು? ದೇಲವಾಡದ ಝಾಲಾ ಕುಲಾಧಿಪತಿಯು ಯುದ್ಧದಲ್ಲಿ ಮರಣ ಹೊಂದಿದ್ದನು. ಬಿಜಲಿಯ ಪ್ರಮಾರಕುಲೇಶ್ವರನ ಗತಿಯೂ ಅದರಂತೆಯೇ ಆಗಿತ್ತು. ಬೇರೆ ಅನೇಕ ವೃದ್ಧ ಕುಲಾಧಿಪತಿಗಳು ಮಹಾರಾಣಾನ ಸಲು ವಾಗಿ ಯುದ್ಧದಲ್ಲಿ ಮರಣಹೊಂದಿದ್ದರು. ಪ್ರತಾಪಸಿಂಹನು ಅಸಮಾಧಾನ ದಿಂದ ತನ್ನ ಸುತ್ತು ಮುತ್ತು ಕುಳಿತಿರುವ ವೀರರನ್ನು ನೋಡಿ ದುಃಖಪೀಡಿತ ನಾದನು. ತನ್ನ ಪುರಾತನ ಸಹಾಯಕರ್ತರಾದ ರಜಪೂತ ವೀರರಲ್ಲಿ ಬಹು ಜನ ವೀರರು ಈಗ ಭೂಮಿಯಲ್ಲಿಲ್ಲೆಂಬ ವಿಚಾರದಿಂದ ಆತನ ಅಂತಃಕರು ಣವು ವ್ಯಥಿತವಾಯಿತು. ಅನುಭವಿಕರಾದ ವೃದ್ಧ ಕುಲಪತಿಗಳ ಸ್ಥಳದಲ್ಲಿ ತರುಣರೂ ಅನುಭವವಿಲ್ಲದವರೂ ಆದ ಕುಲಪತಿಗಳು ಕುಳಿತುಕೊಂಡಿದ್ದರು. ತಂದೆಯು ಮರಣಹೊಂದಲು, ಮಗನು ಮಹಾರಾಣಾನ ಸಲುವಾಗಿ ಪ್ರಾಣ ವನ್ನು ಕೊಡಲಿಕ್ಕೆ ಸಿದ್ಧನಾಗಿ ಕುಳಿತುಕೊಂಡಿದ್ದನು. ಪ್ರತಾಪಸಿಂಹನು ತನ್ನ ಹಿಂದೆ ತಿರುಗಿ ನೋಡಲು, ಆತನ ಹಿರಿಯ ಮಗನಾದ ಅಮರಸಿಂಹನು ಬಳಿಯಲ್ಲಿ ಕುಳಿತಿದ್ದನು. ಬಾಲ್ಯದಿಂದ ಪರ್ವತಗಳಲ್ಲಿಯೂ, ಭಯಂಕರ ವನಪ್ರದೇಶಗಳಲ್ಲಿಯೂ ವಾಸಿಸಿ ಆತನು ಯುದ್ಧವಿದ್ಯೆಯನ್ನು ಕಲಿಯುತ್ತಲಿ

ದ್ದನು. ತಂದೆಯ ತರುವಾಯ ಆತನ ಪವಿತ್ರ ವ್ರತವನ್ನು ಹ್ಯಾಗೆ ನಡಿಸಬೇಕೆಂಬದನ್ನು ಆ ಸತ್ಪುತ್ರನು ಮಹಾನುಭಾವನಾದ ತನ್ನ ತಂದೆಯ ಬಳಿಯಲ್ಲಿ ಕಲಿಯುತ್ತಿದ್ದನು. ಘನಘೋರ ಯುದ್ಧದಲ್ಲಿ ಅಮರಸಿಂಹನು ತನ್ನ ತಂದೆಯ ಸಹಚರನಾಗಿದ್ದನಲ್ಲದೆ, ಯಾವತ್ತು ಸಂಕಟಗಳಲ್ಲಿ ಆತನು ತಂದೆಯಪ್ರಮುಖ ಪಾಲುಗಾರನಾಗಿದ್ದನು!

ಮುಂದೆ ಏನು ಮಾಡಬೇಕೆಂಬ ಬಗ್ಗೆ ಆ ವೀರಮಂಡಲದಲ್ಲಿ ಬಹಳ ಹೊತ್ತಿನವರೆಗೆ ವಿಚಾರಗಳು ನಡೆದವು. ಅವು ಮುಗಿದ ಮೇಲೆ ಸೇವಕರು ಊಟದ ಪದಾರ್ಥಗಳನ್ನು ತಂದಿಟ್ಟರು. ಹಚ್ಚನ್ನ ಹಸಿ ಎಲೆಯಲ್ಲಿ ಸರ್ವಸಾಧಾರಣವಾದ ಆಹಾರದ ಪದಾರ್ಥಗಳನ್ನು ಬಡಿಸಿದ್ದರು. ಎಲ್ಲ ಜನರು ಮುಖಪ್ರಕ್ಷಾಲನ ಮಾಡಿಕೊಂಡು ಎಲೆಗಳ ಮೇಲೆ ಹೋಗಿ ಕುಳಿತುಕೊಂಡರು. ಆ ಪ್ರೀತಿಯ ಭೋಜನವು ಪ್ರತಾಪಸಿಂಹನ ವಿಪತ್ಕಾಲದ್ದಾಗಿದ್ದರೂ, ಮೇವಾಡದ ವೈಭವಕಾಲದಲ್ಲಿ ರಾಜಸಭೆಯೊಳಗೆ ನಡೆಯುತ್ತಿದ್ದ ನಡತೆ-ನಡಾವಳಿಗಳೆಲ್ಲ ಅದರಲ್ಲಿ ನಡೆಯುತ್ತಿದ್ದವು. ಸಭೆಗೆ ಬಂದಿದ್ದ ರಜಪೂತ ಮಂಡಲಿಯಲ್ಲಿ ಅತ್ಯಂತ ಸಾಹಸಿಯೂ, ಸನ್ಮಾನನೀಯನೂ ಆದ ವೀರನಿಗೆ ಮಹಾರಾಣಾನ ಕೈಯಿಂದ ಆತನ ಸ್ವಂತದ ಪಾತ್ರೆಯೊಳಗಿನ ಫಲಗಳು, ಅಥವಾ ಬೇರೆ ಆಹಾರದ ಪದಾರ್ಥಗಳು ಕೊಡಲ್ಪಡುತ್ತಿದ್ದವು. ಹೀಗೆ ಕೊಡುವದಕ್ಕೆ "ದೂನಾ" ಅನ್ನುತ್ತಾರೆಂದು ಹಿಂದೆಯೊಮ್ಮೆ ನಾವು ವಾಚಕರಿಗೆ ಹೇಳಿದ್ದೇವೆ. ತನ್ನ ಸುತ್ತಲು ಕುಳಿತಿರುವ ವೀರರಲ್ಲಿ ಈ ದಿನ "ದೂನಾ"ವನ್ನು ಕೊಟ್ಟು ಯಾರನ್ನು ಸನ್ಮಾನಿಸಬೇಕೆಂಬದನ್ನು ನಿರ್ಧರಿಸುವದಕ್ಕಾಗಿ ಮಹಾರಾಣಾನು ನಾಲ್ಕೂದಿಕ್ಕಿಗೂ ಸೂಕ್ಷ್ಮದೃಷ್ಟಿಯಿಂದ ನೋಡಹತ್ತಿದನು. ಪ್ರತಾಪಸಿಂಹನ ಬಳಿಯಲ್ಲಿಯೇ ಆತನ ಹಿರಿಯ ಮಗನಾದ ಅಮರಸಿಂಹನು ಕುಳಿತಿದ್ದನು. ಅಲ್ಪವಯಸ್ಸಿನ ಆತನು ಹಲವು ಯುದ್ಧಗಳಲ್ಲಿ ತನ್ನ ಅದ್ಭುತ ಪರಾಕ್ರಮವನ್ನು ಪ್ರಕಟಮಾಡಿದ್ದನು. ಆತನನ್ನು ಕುರಿತು ಪ್ರತಾಪಸಿಂಹನು—ಅಮರಸಿಂಹ, ನೀನು ನನ್ನ ಹಿರಿಯಮಗನು. ಈ ಘೋರಸಂಕಟಕಾಲದಲ್ಲಿ ನೀನು ಯುದ್ಧವಿದ್ಯೆಯನ್ನು ಪ್ರತ್ಯಕ್ಷ ಅನುಭವದಿಂದ ಕಲಿಯುತ್ತಿರುವೆ; ಅದರಂತೆ ಯುದ್ಧದಲ್ಲಿ ಅಸಾಧಾರಣ ಕೌಶಲ್ಯವನ್ನಾದರೂ ತೋರಿಸುತ್ತಿರುವೆ; ಆದರೆ ನನ್ನಿಂದ ನಿನಗೆ ಇಂದು "ದೂನಾ" ದೊರೆಯಲಾರದು.

ಎರಡನೆಯವನೊಬ್ಬ ವೀರನು ನನ್ನ ಖಾದ್ಯದ ಪಾಲುಗಾರನಾಗಿರುತ್ತಾನೆ, ಎಂದನು. ವೀರರಾದ ದುರ್ಜಯಸಿಂಹ–ತೇಜಸಿಂಹರು ಕೆಲವು ಅಂತರದ ಮೇಲೆ ಕುಳಿತುಕೊಂಡಿದ್ದರು. ಅವರನ್ನುದ್ದೇಶಿಸಿ ಪ್ರತಾಪಸಿಂಹನು— ”ವೀರಶ್ರೇಷ್ಠರೇ, ನಿಮ್ಮ ವೀರತ್ವದ, ಹಾಗು ಸಾಹಸದ ಧನ್ಯವಾದವನ್ನು ಎಷ್ಟುಮಾಡಿದರೂ ಸ್ವಲ್ಪವೇ ಇರುತ್ತದೆ. ನೀವಿಬ್ಬರು ನನ್ನ ಸಲುವಾಗಿ ಜೀವದ ಪರಿವೆಯನ್ನು ಬಿಟ್ಟಿರುವಿರಿ. ವಿಪತ್ಕಾಲದಲ್ಲಿ ವಿಲಕ್ಷಣ ಸಂಕಟವನ್ನನುಭವಿಸಿ ನನ್ನ ಪರಿವಾರಕ್ಕೆ ನೀವು ಆಶ್ರಯಕೊಟ್ಟು ಸಹಾಯಮಾಡಿ ಸಂರಕ್ಷಿಸಿದಿರಿ. ನಿಮ್ಮಿಬ್ಬರಲ್ಲಿ ವಂಶಪರಂಪರೆಯಿಂದ ಸ್ಥಿರವಾದ ವೈರವಿದ್ದರೂ, ಬಂಧುಗಳಂತೆ ಭುಜಕ್ಕೆ ಭುಜವನ್ನು ಆನಿಸಿ, ನೀವು ನನ್ನಸಲುವಾಗಿ ಅಸಂಖ್ಯ ಶತ್ರುಗಳೊಡನೆ ಕಾದಿ ಭೀಷಣ ಪರಾಕ್ರಮವನ್ನು ತೋರಿಸಿದಿರಿ! ನೀವಿಬ್ಬರೂ ಅಸಾಮಾನ್ಯ ವೀರರಾಗಿರುತ್ತೀರಿ; ಆದರೆ ಈವೊತ್ತು ನಿಮಗೆ “ದೂಸಾ” ಕೊಡುವ ವಿಚಾರವಿಲ್ಲ, ಎರಡನೆಯವನೊಬ್ಬ ವೀರನು ಇಂದು ನನ್ನಖಾದ್ಯದ ಪಾಲುಗಾರನಾಗಿರುತ್ತಾನೆ.

ವೃದ್ಧ ರಾಠೋಡವೀರನಾದ ದೇವೀಸಿಂಹನು ಮಹಾರಾಣಾನ ಎದುರಿಗೇ ಕುಳಿತಿದ್ದನು. ಆತನನ್ನುದ್ದೇಶಿಸಿ ಮಹಾರಾಣಾನು—ರಾಠೋಡ ಕುಲತಿಲಕ ದೇವೀಸಿಂಹ! ಈ ಘೋರವಾದ ಸಮರ ಜ್ವಾಲೆಯಲ್ಲಿ ಕೇವಲ ನನ್ನ ಸಲುವಾಗಿ ನೀವು ನಿಮ್ಮ ಸರ್ವಸ್ವದ ಆಹುತಿಯನ್ನು ಕೊಟ್ಟಿರಿ. ನಿಮ್ಮಂಥ ಏಕನಿಷ್ಠ ವೀರರು ದೇಶದ ಸ್ವಾತಂತ್ರ್ಯರಕ್ಷಣಕ್ಕಾಗಿ ಸಿದ್ಧವಾಗಿ ನಿಂತಿರುವ ದೇಶವು ಧನ್ಯವಾದದ್ದು! ದೇವೀಸಿಂಹ, ನಿಮ್ಮ ವೀರತ್ವಕ್ಕಾಗಿಯೂ, ಸ್ವಾಮಿಧರ್ಮಕ್ಕಾಗಿಯೂ ನಿಮಗೆ ನಾನೇನು ಇನಾಮು ಕೊಡಲಿ? ಈ ಭಯಂಕರವಾದ ಯುದ್ಧದಲ್ಲಿ ಕೇವಲ ನನ್ನ ಸಲುವಾಗಿ ನಿಮ್ಮ ಭೀಮಗಡವು ಹೋಯಿತು, ಒಬ್ಬನೇ ಒಬ್ಬ ಮಗನು ಹೋದನು, ನಿಮ್ಮ ವೀರಪತ್ನಿಯೂ–ಬೇರೆ ರಜಪೂತ ಸ್ತ್ರೀಯರೂ ಅಗ್ನಿನಾರಾಯಣನಿಗೆ ಆಹುತಿಯಾದರು! ಆದರೂ ನೀವು ಕೈಯಲ್ಲಿ ಖಡ್ಗವನ್ನು ಹಿಡಕೊಂಡು ನನ್ನ ಸಂಗಡ ಪರ್ವತದಿಂದ ಪರ್ವತಕ್ಕೆ, ಅರಣ್ಯದಿಂದ ಅರಣ್ಯಕ್ಕೆ ತಿರುಗಲು ಸಿದ್ಧರಾಗಿರುವಿರಿ! ನಿಮ್ಮ ಸ್ವಾಮಿನಿಷ್ಠೆಯು ಧನ್ಯವು–ಪರಮ ಧನ್ಯವು! ಅನೇಕ ದಾರುಣ ಕಷ್ಟಗಳನ್ನು ಸಹಿಸುವ ಸಾಧನವನ್ನೇ ಮಾಡುತ್ತಿರುವ ಈ ಪ್ರತಾ

ಪನ ವಜ್ರ ಹೃದಯವು ಕೂಡ ನಿಮ್ಮಂಥ ಸ್ವಾಮಿನಿಷ್ಠ ವೃದ್ಧ ವೀರರ ದುರವಸ್ಥೆಯನ್ನು ನೋಡಿ ನಡುಗಹತ್ತಿದೆ–ಸೀಳಹತ್ತಿದೆ–ಕರಗಹತ್ತಿದೆ! ವೀರಕುಲ ಚೂಡಾಮಣಿಯೇ, ನಿನ್ನ ವೀರತ್ವಕ್ಕೆ, ಸಾಹಸಕ್ಕೆ, ಏಕನಿಷ್ಠ ಸ್ವಾಮಿಧರ್ಮಕ್ಕೆ ಯೋಗ್ಯವಾದ ಉಚಿತವನ್ನು ಕೊಡುವದು ಯಾರಿಗೂ ಶಕ್ಯವಲ್ಲ! ಇಂದು ನೀನು ನನ್ನ "ದೂನಾ"ವನ್ನು ಸ್ವೀಕರಿಸಿ ನನ್ನನ್ನು ಉಪಕಾರಬದ್ಧನಾಗಮಾಡು!

ಮಹಾರಾಣಾನ ಈ ಅಂತಃಕರಣದ ವಿನಮ್ರವಚನಗಳನ್ನು ಕೇಳಿ ಆ ವೃದ್ಧ ವೀರಶ್ರೇಷ್ಠನ ಹೃದಯವು ನಾನಾವಿಧವಾದ ಪರಸ್ಪರ ವಿರೋಧಿ ವಿಕಾರಗಳಿಂದ ಉಕ್ಕಿಬಂದಿತು. ಆತನ ಮುಖದಿಂದ ಶಬ್ದಗಳು ಹೊರಡಲೊಲ್ಲವು. ಆ ವೃದ್ಧ ದೇವೀಸಿಂಹನ ನೇತ್ರಗಳೊಳಗಿಂದ ಎರಡೇ ಎರಡು ಆಶ್ರುಬಿಂದುಗಳು ಕಳಕ್ಕನೆ ಉದುರಿದವು. ಕೆಲವು ಹೊತ್ತಿನ ಮೇಲೆ ಕಣ್ಣೀರು ಸುರಿಸುತ್ತ ನಡುಗುವ ದನಿಯಿಂದ ಆ ವೃದ್ಧ ಸರದಾರನು—ಮಹಾರಾಣಾಜೀ, ನನ್ನ ಈ ಹೃದಯ ದೌರ್ಬಲ್ಯಕ್ಕಾಗಿ ನನ್ನನ್ನು ಕ್ಷಮಿಸಿರಿ. ಅಪಾರವಾದ ದುಃಖದಿಂದ ಹುರಪಳಿಸಿ ಹೋಗಿದ್ದ ಈ ವೃದ್ಧನ ಕಣ್ಣೊಳಗಿಂದ ಅಶ್ರುಬಿಂದುಗಳು ಉದರಬಾರದೆ ಉದುರಿದವು! ಮುಪ್ಪಿನ ಕಾಲದಲ್ಲಿ ನನ್ನ ಕುಮಾರ ಚಂದನನ ಮೇಲೆ ದುರ್ಗರಕ್ಷಣದ ಭಾರವನ್ನು ಹೊರಿಸಿ, ಪಿತೃದತ್ತವಾದ ಈ ಖಡ್ಗವನ್ನು ಸ್ವಾಮಿಸೇವೆಗಾಗಿ ಆತನ ಕೈಯಲ್ಲಿ ಕೊಟ್ಟು ನನ್ನ ಉಳಿದ ಆಯುಷ್ಯವನ್ನು ಸಮಾಧಾನದಿಂದ ಕಳೆಯಬೇಕೆಂದು ಮಾಡಿದ್ದೆನು; ಆದರೆ ಭಗವದಿಚ್ಛೆಯು ಬೇರೆ ವಿಧವಾಗಿತ್ತು! ದೇವರು ಇಟ್ಟ ಹಾಗೆ ನಾವು ಸಮಾಧಾನದಿಂದ ಇರಲಿಕ್ಕೇ ಬೇಕು. ಪರಮೇಶ್ವರನ ಕೃಪೆಯು ನನ್ನ ಮೇಲೆ ಇರುವದರಿಂದಲೇ ನನ್ನ ಕುಮಾರನು ತನ್ನ ವೀರನಾಮಕ್ಕೆ ಕುಂದುಬಾರದಂತೆ ಮಹಾರಾಣಾನವರ ಸೇವೆಮಾಡುತ್ತ ಧಾರಾ ತೀರ್ಥದಲ್ಲಿ ಪತನ ಹೊಂದಿದನು! ಈ ವೃದ್ಧ ದೇವೀಸಿಂಹನಾದರೂ ತನ್ನ ವೀರನಾಮಕ್ಕೆ ಕಲಂಕ ವುಂಟಾಗದಂತೆ ಮಹಾರಾಣಾನವರ ಸೇವೆಯಲ್ಲಿ ತನ್ನ ಪ್ರಾಣವಿಸರ್ಜನವನ್ನು ಮಾಡುವನು!

ದೇವೀಸಿಂಗನ ಈ ಮಾತುಗಳನ್ನು ಕೇಳಿ ಸಭಾಗೃಹವು ಸ್ತಬ್ಧವಾಯಿತು; ಎಲ್ಲರ ಕಣ್ಣೊಳಗಿಂದ ನೀರುಗಳು ಸುರಿಯಹತ್ತಿದವು. ಕಷ್ಟದಿಂದ

ಅವರ ಭೋಜನ ಸಮಾರಂಭವು ಮುಗಿಯಿತು. ಕೆಲವು ಹೊತ್ತಿನ ಮೇಲೆ ಎಲ್ಲರಿಗೆ ನಿರೂಪ ಕೊಟ್ಟು ಮಹಾರಾಣಾನು ಮಹಾರಾಜ್ಞಿಯ ಬಳಿಗೆ ಹೊರಟು ಹೋದನು. ಈ ಕಾಲದಲ್ಲಿ ಪ್ರತಾಪಸಿಂಹನು ಬಹಳ ಹೀನಸ್ಥಿತಿಯಲ್ಲಿದ್ದನು. ಆತನ ದುರ್ಗಗಳಲ್ಲಿ ಬಹುತರ ಎಲ್ಲ ದುರ್ಗಗಳು ಮೊಗಲರ ಕೈಸೇರಿದ್ದವು. ಆತನ ಸೈನ್ಯವು ಕಡಿಮೆಯಾಗುತ್ತ ನಡೆದಿತ್ತು, ಆತನ ಬಳಿಯಲ್ಲಿ ದ್ರವ್ಯವಿದ್ದಿಲ್ಲ, ಅನ್ನಸಂಗ್ರಹವಿದ್ದಿಲ್ಲ, ರಾಜಧಾನಿಯಿದ್ದಿಲ್ಲ, ಪರ್ವತಗಳೊಳಗಿನ ಪ್ರಶಸ್ತವಾದ ಕಲ್ಲುಬಂಡೆಗಳ ಹೊರತು ಆತನಿಗೆ ತಲೆಯಿಡಲಿಕ್ಕೆ ಬೇರೆ ಸ್ಥಳವಿದ್ದಿಲ್ಲ; ಕೇವಲ ತನ್ನ ಎರಡನೆಯ ಹೃದಯದಂತಿರುವ ಮಹಾರಾಣಿಯನ್ನೂ, ತನ್ನ ಮಕ್ಕಳು—ಸೊಸೆಯಂದಿರನ್ನೂ ಸುರಕ್ಷಿತವಾಗಿ ಇಡಲಿಕ್ಕೆ ಸ್ಥಳವಿದ್ದಿಲ್ಲ. ಇಂಥ ಭಯಂಕರ ಸ್ಥಿತಿಯಲ್ಲಿದ್ದರೂ ಆ ಧೀರನ ಧೈರ್ಯವು ಲವಮಾತ್ರವೂ ಕುಗ್ಗಿದ್ದಿಲ್ಲ. ಆ ಎಲ್ಲ ಕ್ಲೇಶಗಳನ್ನು ಹುಲ್ಲಿಗೆ ಸರಿಯೆಂದು ಆತನು ತುಚ್ಛೀಕರಿಸುತ್ತಿದ್ದನು! ಇಂಥ ಕಷ್ಟದ ಪ್ರಸಂಗಗಳಿಂದ ಆತನ ವೀರಹೃದಯವು ದುಃಖಿತವಾಗಲಿಲ್ಲ!

ಒಮ್ಮೊಮ್ಮೆ ಆತನ ಕುಟುಂಬದ ಮೇಲೆ ಭಯಂಕರ ಪ್ರಸಂಗಗಳು ಬಂದೊದಗುತ್ತಿದ್ದವು. ಯಾವದೊಂದು ಪರ್ವತದ ಗವಿಯಲ್ಲಿ ರಾಜಮಹಿಷಿಯು ಅಡಿಗೆ ಮಾಡುತ್ತಿರುವಾಗ ಒಮ್ಮಿಂದೊಮ್ಮೆ ಶತ್ರುಗಳು ಅಲ್ಲಿಗೆ ಬಂದರೆಂಬ ಸುದ್ದಿಯು ರಾಣಾನಿಗೆ ಹತ್ತುತ್ತಿತ್ತು. ಕೂಡಲೆ ಸಿದ್ಧವಾದ ಅಡಿಗೆಯನ್ನು ಅಲ್ಲಿಯೇ ಚಲ್ಲಿಕೊಟ್ಟು ಆತನು ತನ್ನ ಮಕ್ಕಳೊಡನೆ ಪಟ್ಟರಾಣಿಯನ್ನು ಎರಡನೆಯ ನಿರ್ಭಯಸ್ಥಳಕ್ಕೆ ಕರಕೊಂಡು ಹೋಗಬೇಕಾಗುತ್ತಿತ್ತು. ಅಲ್ಲಿ ಅಡಿಗೆಯನ್ನು ಮಾಡುತ್ತಿರುವಾಗ ಅಲ್ಲಿಗೂ ಶತ್ರುಗಳು ಬಂದರೆಂಬ ಸುದ್ದಿಯು ಹತ್ತಲು, ಆ ಅಡಿಗೆಯನ್ನು ಅಲ್ಲಿಯೇ ಚಲ್ಲಿಕೊಟ್ಟು "ಹೊಟ್ಟೆ ಹೊಟ್ಟೆ"ಯೆಂದು ಒದರುವ ಮಕ್ಕಳನ್ನು ಕಟ್ಟಿಕೊಂಡು ಮೂರನೆಯ ಸುರಕ್ಷಿತ ಸ್ಥಳಕ್ಕೆ ಅವಸರದಿಂದ ಹೋಗಬೇಕಾಗುತ್ತಿತ್ತು! ಕಡೆಗೆ ಇಡಿಯ ಮೇವಾಡ ಪ್ರಾಂತದಲ್ಲಿ ರಾಜಮಹಿಷಿಗೆ ಇರಲಿಕ್ಕೆ ಎಲ್ಲಿಯೂ ಸ್ಥಳವು ದೊರೆಯದಂತಾಯಿತು. ಭಿಲ್ಲರ ಆಶ್ರಯದಿಂದ ಗುಹೆಗಳಲ್ಲಿ, ಖನಿಗಳಲ್ಲಿ, ಘೋರಾರಣ್ಯದಲ್ಲಿ ಅಡಗಿಕೊಂಡು ಹ್ಯಾಗಾದರೂ ಕಾಲಹರಣ ಮಾಡಬೇಕಾಗುತ್ತಿತ್ತು. ಅಲ್ಲಿ ಭಿಲ್ಲರು ರಾಜಕುಟುಂಬವನ್ನು ರಕ್ಷಿಸುತ್ತಿದ್ದರು, ಕಂದಮೂಲಗಳನ್ನು ಅವರಿಗೆ

ಒದಗಿಸಿಕೊಡುತ್ತಿದ್ದರು; ಆದರೆ ಆ ಎಲ್ಲ ಸಂಕಟಗಳನ್ನು ಪ್ರತಾಪನು ಹುಲ್ಲಿಗೆ ಸರಿಯೆಂದು ತುಚ್ಛೀಕರಿಸುತ್ತಿದ್ದನು. ಇಂಥ ಕಷ್ಟದ ಪ್ರಸಂಗಗಳಿಂದಲೂ ಆತನ ವೀರಹೃದಯವು ದುಃಖಿತವಾಗಲಿಲ್ಲ.

ಒಮ್ಮೊಮ್ಮೆ ರಾತ್ರಿ ರಾಜಮಹಿಷಿಯು ತನ್ನ ಪತಿಯ ಬಳಿಯಲ್ಲಿ ಮಲಗಿಕೊಂಡು ನಿದ್ದೆಮಾಡುತ್ತಿರುವಾಗ, ಒಮ್ಮಿಂದೊಮ್ಮೆ ಪ್ರಚಂಡವಾಗಿ ಗರ್ಜಿಸಿ ಕಲ್ಲುಸುರಿದಹಾಗೆ ಮಳೆಯು ಸುರಿಯಹತ್ತುತ್ತಿತ್ತು. ಮೇಲೆ ಏನೂ ಮರೆಯಿಲ್ಲದ್ದರಿಂದ ಮಹಾರಾಣಾನ ಪುಟ್ಟ ಕುಟುಂಬವು ಮಳೆಯ ನೀರಿನಿಂದ ತೇಲಿಹೋಗುವ ಪ್ರಸಂಗವು ಬರುತ್ತಿತ್ತು. ಮಳೆಯಿಂದ ತೊಪ್ಪನೆ ತೊಯ್ದಿದ್ದ ಸೀರೆಯಿಂದಲೇ ಮಹಾರಾಣಿಯು ರಾತ್ರಿಯೆಲ್ಲ ನಿದ್ದೆಗೆಟ್ಟು, ಥಂಡಿಯಿಂದ ಅಳುವ ಮಕ್ಕಳನ್ನು ತೊಡೆಯ ಮೇಲೆ ಮಲಗಿಸಿ ಚುಕ್ಕು ತೊಟ್ಟುತ್ತ ಇಡಿಯ ರಾತ್ರಿಯನ್ನು ಕುಳಿತುಕೊಂಡೇ ಕಳೆಯಬೇಕಾಗುತ್ತಿತ್ತು; ಆದರೆ ಆ ಎಲ್ಲ ಸಂಕಟಗಳನ್ನು ಪ್ರತಾಪನು ಹುಲ್ಲಿಗೆ ಸರಿಯೆಂದು ತುಚ್ಛೀಕರಿಸುತ್ತಿದ್ದನು. ಇಂಥ ಕಷ್ಟದ ಪ್ರಸಂಗಗಳಿಂದಲೂ ಆತನ ವೀರಹೃದಯವು ದುಃಖಿತವಾಗಲಿಲ್ಲ.

ಒಮ್ಮೊಮ್ಮೆ ರಾಜಪರಿವಾರವು ಉಪವಾಸ ಗುಡ್ಡದಿಂದ ಗುಡ್ಡಕ್ಕೆ, ಅಡವಿಯಿಂದ ಅಡವಿಗೆ ಒಂದೇಸವನೆ ಎಡತಾಕಬೇಕಾಗುತ್ತಿತ್ತು. ರಾತ್ರಿ ಯಾವದೊಂದು ಸುರಕ್ಷಿತವಾದ ಪರ್ವತಗುಹೆಯಲ್ಲಿ ಆಶ್ರಯವನ್ನು ಪಡೆದು ರಾಜಮಹಿಷಿಯು ಅಡಿಗೆಯನ್ನು ಮಾಡಬೇಕಾಗುತ್ತಿತ್ತು; ಆದರೆ ಯಾವಾಗಲೂ ಅಡಿಗೆಯ ಸಾಮಾನುಗಳು ಆಕೆಗೆ ದೊರೆಯುತ್ತವೆಂಬ ನಿಯಮವಿದ್ದಿಲ್ಲ. ಒಮ್ಮೊಮ್ಮೆಯಂತು ಒಂದುಜಾತಿಯ ಕರಿಕೆಯ ಹಿಟ್ಟನಿಂದ ಕೈಮುಟ್ಟಿ ರೊಟ್ಟಿಯನ್ನು ಮಾಡಿ ಮಹಾರಾಣಿಯು ತನ್ನ ಮಕ್ಕಳಿಗೆ ಕೊಡಬೇಕಾಗುತ್ತಿತ್ತು. ಒಮ್ಮೆ ರಾಜಪರಿವಾದವು ಇಂಥ ಸಂಕಟಕ್ಕೆ ಗುರಿಯಾಗಿರುವಾಗ ರಾಣಿಯು ಕರಿಕೆಯ ಹಿಟ್ಟಿನದೊಂದು ಭಕ್ಕರಿಯನ್ನು ಸುಟ್ಟು ಮಕ್ಕಳಿಗೆ ಕೊಟ್ಟಿದ್ದಳು. ಅಷ್ಟರಲ್ಲಿ ಅದೇ ಕಂದಕದಲ್ಲಿದ್ದ ಅಡವಿಯ ಬೆಕ್ಕು ಪಟಕ್ಕನೆ ಹಾರಿ ಬಂದು ಒಂದು ಕೂಸಿನ ಕೈಯೊಳಗಿನ ಭಕ್ಕರಿಯ ಚೂರನ್ನು ಕಸಿದುಕೊಂಡು ಓಡಿ ಹೋಯಿತು! ಪಾಪ! ಆ ಕೂಸು ರಾತ್ರಿಯೆಲ್ಲ ಉಪವಾಸ ತಳಮಳಿಸಬೇಕಾಯಿತು. ಅತ್ತು ಅತ್ತು ಕಡೆಗೆ ಆ ಕೂಸು ತಾಯಿಯ

ಎದೆಯ ಮೇಲೆ ನಿದ್ದೆಹತ್ತಿ ಮಲಗಿಕೊಂಡಿತು. ಆದರೆ ಇಂಥ ಹೃದಯದ್ರಾವಕ ಪ್ರಸಂಗವನ್ನು ಸಹ ಪ್ರತಾಪನು, ರಾಣಿಯು ಹೇಳುವ ಧೈರ್ಯದಿಂದ ಹುಲ್ಲಿಗೆ ಸರಿಯೆಂದು ತುಚ್ಛೀಕರಿಸಿದನು. ಆತನ ವೀರಹೃದಯವು ದುಃಖಿತವಾಗಲಿಲ್ಲ.

ಆದರೆ ಇಂಥ ಮಹಾರಾಣಾನ ಹೃದಯವು ಇಂದು ಚಿಂತೆಯಿಂದ ದುಃಖಿತವಾಗಿತ್ತು. ಆತನ ಪ್ರಶಸ್ತವಾದ ಹಣೆಯಲ್ಲಿ ಚಿಂತೆಯ ರೇಷೆಗಳು ವ್ಯಕ್ತವಾಗಿ ಕಾಣುತ್ತಿದ್ದವು. ಮಹಾರಾಣಾನು ದೂರ ನಿಂತದ್ದನ್ನು ನೋಡಿ ರಾಣಿಯು ಕೈಯೊಳಗಿನ ಬಕ್ಕರಿಯನ್ನು ಸೊಸೆಯ ಕೈಯಲ್ಲಿ ಕೊಟ್ಟು ರಾಣಾನನ್ನು ಉಪಚರಿಸುವದಕ್ಕಾಗಿ ಆತನ ಬಳಿಗೆ ಅವಸರದಿಂದ ಬಂದಳು; ಆದರೆ ಮಹಾರಾಣಾನ ಕಣ್ಣುಗಳಲ್ಲಿ ಇಂದು ಅಶ್ರುಬಿಂದುಗಳು ಬಂದಿರುವದನ್ನು ಆಕೆಯು ನೋಡಿದಳು. ಆಗ ವಿಸ್ಮಯದರ್ಶಕ ಸ್ವರದಿಂದ ಆಕೆಯು ಪತಿಯನ್ನು ಕುರಿತು--ಪ್ರಾಣನಾಥ, ಇದೇನು ಇಂದು ವಿಪರೀತ ಪ್ರಸಂಗವು! ಮಹಾರಾಣಾನವರಿಗೆ ಅಂಥ ದುಃಖದ ಪ್ರಸಂಗವೇನು ಒದಗಿತು! "ಕಡೆಗೆ ಮಹಾರಾಣಾಜಿಯವರು ಯುದ್ಧದಿಂದ ಜರ್ಜರರಾಗಿ ಕಣ್ಣೀರು ಹಾಕುತ್ತ ಕೈಕಾಲುಗೆಟ್ಟು ಕುಳಿತರೆ"ಂದು ಮೊಗಲರು ಅನ್ನಲಿಕ್ಕಿಲ್ಲವೆ? ಆದ್ದರಿಂದ ಪ್ರಭುವೇ, ಮೇವಾಡದ ಸ್ವಾತಂತ್ರ್ಯಪ್ರಿಯ ವೀರರಿಗೆ ಈ ಪ್ರಸಂಗದಲ್ಲಿ ಹೃದಯದ ಕೋಮಲತೆಯೂ, ಹೇಡಿತನವೂ ಒಪ್ಪುವದಿಲ್ಲ! ಅಂಥ ಕಷ್ಟದ ಪ್ರಸಂಗವಾದರೂ ಏನು ಬಂದಿದೆ ಈಗ !!

ಪ್ರತಾಪ—ಮಹಾರಾಜ್ಞೀ, ಅನಂತ ದುಃಖಗಳೊದಗಿದರೂ ಪ್ರತಾಪನು ಎಂದೂ ಜರ್ಜರನಾಗಲಾರನು; ಯಾವ ಸಂಕಟಕ್ಕೂ ಹೆದರಿ ಆತನು ಕಣ್ಣೀರು ಸುರಿಸತಕ್ಕವನಲ್ಲ. ಈ ಮಾತು ಆ ಜಗದೀಶ್ವರನಾದ ಏಕಲಿಂಗೇಶ್ವರನಿಗಾದರೂ ಗೊತ್ತಿರುವದು!

ರಾಣಿ—ಹಾಗಾದರೆ ಮಕ್ಕಳ ಈ ವಿಪನ್ನಸ್ಥಿತಿಯನ್ನು ನೋಡಿ ಮಹಾರಾಜರಿಗೆ ಇಂದು ದುಃಖವಾಗುತ್ತಿರುವದೇನು? ಸ್ವತಃ ಮಹಾರಾಜರು ಕಷ್ಟಪಡುತ್ತಿರಲು, ಇಂಥ ಕ್ಷುದ್ರವಾದ ಸಂಕಟಗಳನ್ನು ಅನುಭವಿಸುವದು ನಮಗೆ ದುಸ್ತರವಾಗಬೇಕೆ?

ಪ್ರತಾಪ—ಆ ದಯಾಘನನಾದ ಜಗದೀಶ್ವರನ ಕೃಪೆಯಿಂದ ನನ್ನ

ಮಕ್ಕಳು ಸುಖದಿಂದ ಇರುವರು. ಪ್ರಿಯೇ, ಆ ಪರಮೇಶ್ವರನ ಕೃಪೆಯಿಂದ ನೀನಾದರೂ ಸುಖದಿಂದಲೇ ಇರುವೆ; ಆದರೆ ಅನಂತ ಘೋರಸಮರಗಳಲ್ಲಿ ಅನೇಕ ರಜಪೂತರ ವೀರ ಪುತ್ರರು ಪತನಹೊಂದಿರುತ್ತಾರೆ. ನಮ್ಮ ಅಮರ ಸಿಂಹನ ಓರಿಗೆಯ ಅನೇಕ ರಜಪೂತ ವೀರಪುತ್ರರು ಪರಲೋಕಕ್ಕೆ ತೆರಳಿರುತ್ತಾರೆ. ಅನೇಕರ ವೀರಮಾತೆಯರು, ಅನೇಕರ ವೀರಪತ್ನಿಯರು ಮೊಗಲರ ಅತ್ಯಾಚಾರದ ಭಯದಿಂದ ಅಗ್ನಿಪ್ರವೇಶ ಮಾಡಿ ಸ್ವರ್ಗದ್ವಾರವನ್ನು ಒಡೆದು ಒಳಗೆ ಪ್ರವೇಶಿಸಿರುತ್ತಾರೆ! ತಮ್ಮ ಆಪ್ತರಿಷ್ಟರು ಯುದ್ಧದಲ್ಲಿ ಮರಣಹೊಂದಿಲ್ಲೆಂದು ಹೇಳಿಕೊಳ್ಳುವಂಥ ಒಬ್ಬ ವ್ಯಕ್ತಿಯಾದರೂ ಮೇವಾಡದ ರಾಜ್ಯದಲ್ಲಿ ಇರಲಿಕ್ಕಿಲ್ಲ! ಮಹಾರಾಜ್ಞೀ, ಈ ಭಯಂಕರವಾದ ಸಂಗ್ರಾಮದಲ್ಲಿ ಅನೇಕ ರಜಪೂತವೀರರ ಬಂಗಾರದಂಥ ಸಂಸಾರಗಳು ಮಣ್ಣುಗೂಡಿ ಹೋಗಿರುತ್ತವೆ! ಅವರ ಜೀವನವು ಶೂನ್ಯವಾಗಿ ಹೋಗಿರುತ್ತದೆ.

ರಾಣಿ—ಭವಾನೀಮಾತೆಯು ಅವರ ದುಃಖಗಳನ್ನೆಲ್ಲ ಶಾಂತಮಾಡಲಿ! ಮಹಾರಾಜರು ವರ್ಣಿಸಿದ ದುಃಖಗಳು ಮನುಷ್ಯರಿಗೆ ಅಸಹ್ಯವಾಗಿರುತ್ತವೆಂಬದು ನಿಜವು!

ಪ್ರತಾಪ—ಪ್ರಿಯೇ, ದೇವೀಸಿಂಹನೆಂಬ ಒಬ್ಬ ರಾಠೋಡ ವೀರನ ಕಪ್ಪು ಕೂದಲುಗಳು, ನಾನು ಹೂಡಿದ ಯುದ್ಧಗಳಲ್ಲಿ ಕಾದಿ ಕಾದಿ ಬೆಳ್ಳಗಾಗಿ ಹೋಗಿರುತ್ತವೆ. ನನ್ನ ಯಾವತ್ತು ರಾಠೋಡ ಅನುಚರರಲ್ಲಿ ಅವನಂಥ ವೀರನು ಯಾವನೂ ಇಲ್ಲ. ನನ್ನ ಯಾವತ್ತು ಸೇನಾಪತಿಗಳಲ್ಲಿ ಅವನಂಥ ಸ್ವಾಮಿನಿಷ್ಠ ಸೇನಾಪತಿಯು ಮತ್ತೊಬ್ಬನಿಲ್ಲ. ಅಂಥ ದೇವೀಸಿಂಗನಿಗೊದಗಿದ ಅನರ್ಥ ಪ್ರಸಂಗಗಳನ್ನು ನಿನ್ನ ಮುಂದೆ ಎಷ್ಟಂತ ಹೇಳಲಿ? ಮೊಗಲರು ಮೊನ್ನೆ ಮೊನ್ನೆ ಆತನ ಭೀಮಗಡವನ್ನು ಕೈವಶಮಾಡಿಕೊಂಡರು. ಆತನ ವೀರಪತ್ನಿಯು, ದುರ್ಗವು ಶತ್ರುಗಳ ಕೈಸೇರುವದೆಂದು ತಿಳಿದು, ಸಾವಿರಾರು ಜನ ರಜಪೂತ ರಮಣಿಯರೊಡನೆ ಅಗ್ನಿಪ್ರವೇಶ ಮಾಡಿದಳು! ದೇವೀಸಿಂಹನ ಒಬ್ಬನೇ ಒಬ್ಬ ಮಗನಾದ ಕುಮಾರ ಚಂದನಸಿಂಹನು, ಅರ್ಜುನ ಪುತ್ರನಾದ ಅಭಿಮನ್ಯುವಿನಂತೆ ಅದ್ಭುತ ಪರಾಕ್ರಮವನ್ನು ಪ್ರಕಟಮಾಡಿ ಮೊಗಲರ ಶಸ್ತ್ರಗಳಿಂದ ಹತನಾದನು! ಇಂಥ ಕಷ್ಟಗಳೊದಗಿದ್ದರೂ ವೃದ್ಧದೇವೀಸಿಂಹನು ಸ್ವಾಮಿಧರ್ಮವನ್ನು ಪಾಲಿಸುತ್ತ, "ರಾಣಾನ

ಸಲುವಾಗಿ ಪ್ರಾಣವನ್ನರ್ಪಿಸುವ ಪ್ರಸಂಗವು ಯಾವಾಗ ಬಂದೀತೆ"ಂದು ಹಾದಿಯು ನೋಡುತ್ತ ಕೈಯಲ್ಲಿ ಶಸ್ತ್ರವನ್ನು ಧರಿಸಿ ಇಂದಿಗೂ ಬದುಕಿ ಉಳಿದಿರುತ್ತಾನೆ !!

ಪತಿಯ ಮುಖದಿಂದ ಹೊರಟ ಈ ಮಾತುಗಳನ್ನು ಕೇಳಕೇಳುತ್ತ ರಾಜ್ಞಿಯ ನೇತ್ರಗಳು ಅಶ್ರುಪೂರ್ಣವಾದವು. ದೇವೀಸಿಂಗನ ಸರ್ವನಾಶದ ವೃತ್ತಾಂತವನ್ನು ಕೇಳಲಿಕ್ಕೆ ಆಕೆಯ ಕುಸುಮ ಕೋಮಲ ಹೃದಯವು ತಡೆಯಲಿಲ್ಲ. ಆಕೆಯ ಕಣ್ಣುಗಳೊಳಗಿಂದ ಅಶ್ರುಗಳು ಸುರಿಯಹತ್ತಿದವು. ಆಕೆಯು ಪತಿಯನ್ನು ಕುರಿತು—ಹಾಯ್ ಹಾಯ್! ಇದೇನು ಹೇಳೋಣವಾಯಿತು? ಸ್ವಾಮಿನಿಷ್ಠನಾದ ದೇವೀಸಿಂಹನ ಯಾವತ್ತು ಪರಿವಾರವು ಈ ಸಮರವಹ್ನಿಗೆ ಆಹುತಿಯಾಯಿತೇ? ದೇವೀಸಿಂಹನ ಒಬ್ಬನೇ ಒಬ್ಬ ಮಗನು ಸಮರಾಂಗಣದಲ್ಲಿ ಮರಣಹೊಂದಿದನೇ? ಅಯ್ಯೋ ಕೆಟ್ಟ ದೈವವೇ? ಪುತ್ರಶೋಕಕ್ಕಿಂತ ಭಯಂಕರವಾದ ವಜ್ರವನ್ನು ಪ್ರತ್ಯಕ್ಷ ಬ್ರಹ್ಮದೇವನೂ ಸೃಷ್ಟಿಸಲಾರನು, ಅನ್ನಲು, ಪ್ರತಾಪಸಿಂಹನು—ಹೌದು ಪ್ರಿಯೇ, ದೇವೀಸಿಂಹನ ಸರ್ವಸ್ವದ ನಾಶವಾಯಿತು. ಆತನ ದುರ್ಗವು ಹೋಯಿತು, ಪರಿವಾರವು ಹೋಯಿತು, ವೀರಪುತ್ರನು ಹೋದನು, ಆತನ ವಂಶವು ಸಂಪೂರ್ಣವಿನಾಶವನ್ನು ಹೊಂದಿತು! ಹೀಗಿದ್ದು ದೇವೀಸಿಂಹನು ಇಂದಿನ ರಾಜಸಭೆಯಲ್ಲಿ ನನ್ನನ್ನು ಕುರಿತು—"ಪರಮೇಶ್ವರನ ಕೃಪೆಯು ನನ್ನ ಮೇಲೆ ಇರುವದರಿಂದಲೇ ನನ್ನ ಕುಮಾರನು ತನ್ನ ವೀರನಾಮಕ್ಕೆ ಕುಂದುಬಾರದಂತೆ ಮಹಾರಾಣಾನವರ ಸೇವೆಮಾಡುತ್ತ ಧಾರಾತೀರ್ಥದಲ್ಲಿ ಪತನಹೊಂದಿದನು. ಈ ವೃದ್ಧ ದೇವೀಸಿಂಹನಾದರೂ ತನ್ನ ವೀರನಾಮಕ್ಕೆ ಕಲಂಕವುಂಟಾಗದಂತೆ ಮಹಾರಾಣಾನವರ ಸೇವೆಯಲ್ಲಿ ತನ್ನ ಪ್ರಾಣವಿಸರ್ಜನವನ್ನು ಮಾಡುವನು" ಎಂದು ನುಡಿದನು! ಮಹಾರಾಜ್ಞೀ, ಸ್ವಾಮಿನಿಷ್ಠರಿಗೆ ಇದೇ ಫಲವೇನು? ಇಂಥ ಸ್ವಾಮಿನಿಷ್ಠರಾದ ವೀರ ಅನುಚರರನ್ನು ಸಮೂಲವಾಗಿ ನಾಶಗೊಳಿಸಿ ಮೇವಾಡವನ್ನು ರಕ್ಷಿಸುವದರಲ್ಲಿ ಲಾಭವೇನಿರುವದು? ಎಂದು ಕೇಳಿದನು. ಆಗ ರಾಣಿಯು ಮಾತಾಡಲಾರದೆ, ಅಶ್ರುಪೂರ್ಣಾಲೋಚನಗಳಿಂದ ತನ್ನ ಹುಡುಗರಿಗೆ ಊಟಕ್ಕೆ ಬಡಿಸುವ ನೆವದಿಂದ ಪತಿಯ ಬಳಿಯಿಂದ ಸುಮ್ಮನೆ ಹೋದಳು! ಪ್ರತಾಪಸಿಂಹನು ಈ ದಾರುಣವಾದ ಚಿಂತೆಯಿಂದ ಒಂದೇಸವನೆ

ತಳಮಳಿಸುತ್ತಿದ್ದನು. ಕೆಲಹೊತ್ತಿನಮೇಲೆ ಆತನು ದುಃಖವೇಗವನ್ನು ಸಹಿಸಲಾರದೆ--ಹಾಯ್ ಹಾಯ್! ದುರ್ದೈವವೇ, ನನ್ನ ಪ್ರಯತ್ನಕ್ಕೆ ರಾಜ್ಯಲೋಭದ ದಾರುಣಕ್ಲೇಶವೇ ಫಲವಾಗಿದ್ದ ಪಕ್ಷದಲ್ಲಿ, ಪ್ರತಾಪಸಿಂಹನಿಗೆ ರಾಜ್ಯದ ಅವಶ್ಯಕತೆಯು ಇಲ್ಲವೇ ಇಲ್ಲ; ಆತನು ಸಂತೋಷದಿಂದ ರಾಜ್ಯದ ಮೇಲೆ ತಿಲಾಂಜಲಿಯನ್ನು ಬಿಡುವನು!

ಮರುದಿವಸವೇ ಮಹಾರಾಣಾನು ಅಕಬರ ಬಾದಶಹನಿಗೆ ಪತ್ರಬರೆದು ಒಡಂಬಡಿಕೆಯನ್ನು ಮಾಡಿಕೊಳ್ಳುವದಕ್ಕಾಗಿ ಆತನನ್ನು ಪ್ರಾರ್ಥಿಸಿದನು! ಇಂಥ ಪ್ರತಾಪಿಯ ಮೇಲೆಯೂ ಮಾನುಷೀವೃತ್ತಿಯು ತನ್ನ ಅಧಿಕಾರವನ್ನು ಕೂಡ್ರಿಸದೆ ಬಿಡಲಿಲ್ಲ!

---

೧೫ ನೆಯ ಪ್ರಕರಣ

# ಪಶ್ಚಾತ್ತಾಪ.

ಪ್ರತಾಪನು, ತಾನು ಅಕಬರನಿಗೆ ಬರೆದಿದ್ದ ಸಂಧಿಯ ಪತ್ರವನ್ನು ಓದಿ ತೋರಿಸಿ ತನ್ನ ಪರಿವಾರದ ಒಪ್ಪಿಗೆಯನ್ನು ಪಡೆಯುವದಕ್ಕಾಗಿ ಮರುದಿನ ರಾತ್ರಿ ಮತ್ತೆ ದರ್ಬಾರು ನೆರಿಸಿದನು. ಆಗ ಯಾವತ್ತು ರಜಪೂತ ವೀರರು ಸಭೆಯಲ್ಲಿ ಕುಳಿತುಕೊಂಡಿದ್ದರು. ಅವರ ಮುಖಗಳು ಇಂದು ನಿಸ್ತೇಜವಾಗಿದ್ದವು. ಮೊಗಲರಿಗೆ ಶರಣುಹೋಗುವ ಪ್ರಸಂಗವು ತಮ್ಮ ಮಹಾರಾಣಾನಿಗೆ ಒದಗಿದ್ದಕ್ಕಾಗಿ ಅವರು ದುಃಖಿತರಾಗಿದ್ದರು. ರಾಣಾನ ಸ್ಥಿತಿಯನ್ನು ಅವರು ಸಂಪೂರ್ಣವಾಗಿ ಅರಿತಿದ್ದರು. ಆತನು ತೀರ ಉದಾಸೀನನಾಗಿದ್ದನು; ಆತನ ಜೀವವು ಸಹ ಆತನಿಗೆ ಭಾರವಾಗಿರಲು, ಆತನ ಕುಟುಂಬವು ಆತನಿಗೆ ಭಾರವಾದದ್ದೇನಾಶ್ಚರ್ಯವು? ಆತನ ಅಂತಃಕರುಣವು ದುಃಖದಿಂದ ವ್ಯಾಪ್ತವಾಗಿ, ಅದರೊಳಗಿನ ಆಶಾ-ಸುಖ-ಶಾಂತಿ-ವಿಶ್ವಾಸಗಳು ತೀರ ನಷ್ಟವಾಗಿ ಹೋಗಿದ್ದವು. ಆತನಲ್ಲಿ ಉದಾರವಾದ ಸ್ವದೇಶಭಕ್ತಿ, ಉಚ್ಚತಮ ಕಲ್ಪನೆ, ಸ್ಥೈರ್ಯ ಈ ಮೂರು ಗುಣಗಳು ಮಾತ್ರ ಅಲ್ಪ ಸ್ವಲ್ಪ ಉಳಿದಿದ್ದವು. ಒಂದುಕಡೆಯಲ್ಲಿ ಮೊಗಲರ ಹೊಡತವು, ಮತ್ತೊಂದು ಕಡೆಯಲ್ಲಿ ಕುಟುಂಬ ಪೋಷಣದ ತ್ರಾಸವು; ಹೀಗಾಗಿ ರಾಣಾನು ಬಹಳ ಹಣ್ಣಾಗಿದ್ದನು. ಪ್ರತಾಪನಿಗೆ ಚಿಂತೆಯು ಒಂದಲ್ಲ, ಎರಡಲ್ಲ; ಆತನು ಹಲವು ಚಿಂತೆಗಳಿಂದ ಮಗ್ನನಾಗಿದ್ದನು. ಆತನಿಗೆ ಒಂದು ಕ್ಷಣವಾದರೂ ಸಮಾಧಾನದಿಂದ ವಿಚಾರಮಾಡಲಿಕ್ಕೆ ಆಸ್ಪದವು ದೊರೆಯುತ್ತಿದ್ದಿಲ್ಲ. ಅಕಸ್ಮಾ

ತ್ತಾಗಿ ಮೊಗಲರು ಮುಗಿಬಿದ್ದು ತನ್ನ ಕುಟುಂಬದವರನ್ನು ಎಲ್ಲಿ ಕೊಲ್ಲುವರೋ; ಅವರು ತನ್ನ ಕುಟುಂಬದವರ ಲಜ್ಜಾ ಹರಣವನ್ನು ಎಲ್ಲಿ ಮಾಡುವರೋ; ತನ್ನ ವಂಶದವರು ಇಲ್ಲಿಯವರೆಗೆ ಪರಿಪರಿಯ ಕಷ್ಟಗಳನ್ನು ಭೋಗಿಸಿ ಕಾಯ್ದುಕೊಳ್ಳುತ್ತ ಬಂದಿದ್ದ ಸ್ವಾತಂತ್ರ್ಯವನ್ನು ಅವರು ಎಲ್ಲಿ ನಷ್ಟಪಡಿಸುವರೋ ಎಂಬಿವೇ ಮೊದಲಾದ ಚಿಂತೆಗಳಿಂದ ಆತನ ಮನಸ್ಸು ಯಾವಾಗಲೂ ಚಂಚಲವಾಗುತ್ತಿತ್ತು. ಹೊಟ್ಟೆಯ ಸಲುವಾಗಿ ಆಶ್ರಯಿಸಿದ್ದ ಆತನ ಅನುಯಾಯಿಗಳೆಲ್ಲ ಒಬ್ಬೊಬ್ಬರೇ ಬಿಟ್ಟುಹೋಗಿ, ಆತನ ಕುಟುಂಬದೊಳಗಿನ ಜನರೂ, ಏಕನಿಷ್ಠ ಸೇವಕರೂ ಮಾತ್ರ ಸ್ಥಿರಮನಸ್ಸಿನಿಂದ ಆತನನ್ನು ಆಶ್ರಯಿಸಿ ಉಳಿದಿದ್ದರು. ವಿಸ್ತೀರ್ಣವಾದ ಮೇವಾಡ ದೇಶದಲ್ಲಿ ಅಕಬರನ ಭಯದಿಂದ ಒಬ್ಬರೂ ಪ್ರತಾಪನಿಗೆ ಆಶ್ರಯ ಕೊಡುವಹಾಗಿದ್ದಿಲ್ಲ. ಮೇವಾಡದೊಳಗಿನ ಗೇಣು ಭೂಮಿಯು ಸಹ ಆತನ ವಶದಲ್ಲಿದ್ದಂತೆ ಆಗಿದ್ದಿಲ್ಲ. ಯುದ್ಧದಲ್ಲಿ ನಾಶವಾಗಿ ಉಳಿದ ಆತನ ಅಲ್ಪ ಸ್ವಲ್ಪ ಸೈನ್ಯವನ್ನು ಮೊಗಲರು ಮುತ್ತಿ ಉಲುಕದಂತೆ ಮಾಡಿ ನಾಲ್ಕೂಕಡೆಯಿಂದ ನಿರಾತಂಕವಾಗಿ ಆತನ ಮೇಲೆ ಸಾಗಿಬರುತ್ತಲಿದ್ದರು. ಈ ಸ್ಥಿತಿಯಲ್ಲಿ ಪ್ರತಾಪನು ಅಕಬರ ಬಾದಶಹನೊಡನೆ ಹ್ಯಾಗೆ ಯುದ್ಧಮಾಡಬೇಕು? ಆವನ ವೀರ ಅನುಚರರಾದರೂ ಯುದ್ಧಮಾಡಬೇಕೆಂದು ತಮ್ಮ ಆ ಮಹಾರಾಣಾನಿಗೆ ಹ್ಯಾಗೆ ಹೇಳಬೇಕು? ಯುದ್ಧಮಾಡಬೇಕೆಂದು ಹೇಳಿದರೆ, ಸಕುಟುಂಬ ಮೊಗಲರ ಸೆರೆಯಾಳಾಗೆಂದು ಆತನಿಗೆ ಹೇಳಿದ ಹಾಗಾಗುತ್ತಿತು; ಅದರಂತೆ ಯುದ್ಧಮಾಡಬಾರದೆಂದು ಹೇಳಿದರೆ ಪವಿತ್ರ ಸಿಸೋದಿಯಾ ಕುಲದ ಸ್ವಾತಂತ್ರ್ಯವನ್ನು ಕಳಕೊಳ್ಳೆಂದು ಹೇಳಿದಹಾಗಾಗುತ್ತಿತ್ತು. ಇವೆರಡರಲ್ಲಿ ಯಾವ ಮಾತನ್ನೂ ಹೇಳಲಾರದೆ ರಾಣಾನ ವೀರ ಪರಿವಾರವು ತಲೆಬಗ್ಗಿಸಿಕೊಂಡು ನೆಲವನ್ನು ನೋಡುತ್ತ ಚಿಂತಾಮಗ್ನವಾಗಿ ಸುಮ್ಮನೆ ಕುಳಿತುಕೊಂಡಿತ್ತು! ಆದನ್ನು ನೋಡಿ ಪ್ರತಾಪಸಿಂಹನು ತನ್ನ ಆ ವೀರ ಅನುಚರರನ್ನು ಕುರಿತು—ಸತ್ವಶಾಲಿಗಳಾದ ಪ್ರಿಯ ದೇಶಬಾಂಧವರೇ, ಮೇವಾಡದ ರಾಣಾನ ಸಲುವಾಗಿ ನೀವು ನಿಮ್ಮ ಸರ್ವಸ್ವದ ಆಹುತಿಕೊಟ್ಟಂತಾಗಿರುತ್ತದೆ. ನಿಮ್ಮ ಅಕೃತ್ರಿಮ ಸ್ವಾಮಿನಿಷ್ಠೆಗೆ ಇಂಥ ಅನಿಷ್ಟ ಫಲವು ದೊರೆತದ್ದಕ್ಕಾಗಿ ನನಗೆ ಬಹಳ ಪಶ್ಚಾತ್ತಾಪವಾಗಿರುವದು. ಪ್ರತಾಪನ ಪ್ರಯತ್ನವು ಗುಡ್ಡಕ್ಕೆ ಕಲ್ಲು

ಹೊತ್ತಂತಾಯಿತು. ಹೋದವರು ಹೋದರು, ಉಳಿದವರಾದರೂ ಹೊತ್ತು ಬಿದ್ದಂತೆ ಕೊಡೆಹಿಡಿದು ಸುಖವನ್ನು ಹೊಂದಿರಿ. ವೃದ್ಧ ದೇವೀಸಿಂಹರವರಿ ಗೊದಗಿದ ಭಯಂಕರ ದುಃಖದಿಂದ ನನ್ನ ಹೃದಯವಿದಾರಣವಾಗಿರುತ್ತದೆ. ಪ್ರಿಯ ಮಿತ್ರರೇ, ರಾಣಾನಿಂದ ಯಾರಿಗೆ ಸುಖವಾಯಿತು ಹೇಳಿರಿ. ಸ್ವತಃ ಅವನಿಗೆ ಸುಖವಿಲ್ಲ; ಅವನ ಕುಟುಂಬದವರಿಗೆ ಸುಖವಿಲ್ಲ; ಅವನ ಸ್ವಾಮಿ ನಿಷ್ಠ ವೀರ ಅನುಚರರಿಗೆ ಸುಖವಿಲ್ಲ; ಅವನ ಪ್ರಜೆಗಳಿಗೆ ಸುಖವಿಲ್ಲ! ಹೀಗೆ ಸರ್ವರಸುಖಸರ್ವಸ್ವವನ್ನು ಹಾಳುಮಾಡಿ ಪ್ರತಾಪಸಿಂಹನು ಈಗ ಸಂಪೂರ್ಣ ಪಶ್ಚಾತ್ತಾಪಪಡುತ್ತಲಿದ್ದಾನೆ. ವೀರರೇ, ಅಕಬರಬಾದಶಹನಿಗೆ ಒಡಂಬಡಿ ಕೆಯ ಸಲುವಾಗಿ ಪ್ರಾರ್ಥಿಸಿರುವ ಈ ಪತ್ರವನ್ನು ಇಂದು ನಾನು ದಿಲ್ಲಿಗೆ ಕಳಿ ಸುವೆನು. ನಿಮ್ಮ ರಾಣಾನ ಕ್ಷುದ್ರಹೃದಯಕ್ಕಾಗಿ ನೀವೆಲ್ಲರು ಆತನನ್ನು ಕ್ಷಮಿ ಸಿರಿ, ಎಂದು ನುಡಿದು ಸುಮ್ಮನಾದನು.

ಪ್ರತಾಪನ ಈ ಮಾತುಗಳನ್ನು ಕೇಳಿ ಬೇರೆ ಬೇರೆ ಜನರು ಬೇರೆ ಬೇರೆ ವಿಧವಾಗಿ ಆಲೋಚಿಸತೊಡಗಿದರು. ಸದ್ಯಕ್ಕೆ ರಾಣಾನು ದಿಲ್ಲೀಶ್ವರನ ದಾಸ್ಯ ವನ್ನು ಒಪ್ಪಿಕೊಳ್ಳುವದರಲ್ಲಿಯೇ ಜಾಣತನ ಉಂಟೆಂಬ ವಿಚಾರವು ಎಷ್ಟೋ ಹೆಣ್ಣುಗಳ್ಳಿನ ವೀರರ ಮನಸ್ಸಿನಲ್ಲಿ ಬರಹತ್ತಿತು. ಅಕಬರ ಬಾದಶಹನು ಮಹಾ ಪರಾಕ್ರಮಿಯೂ, ಅತಿಶಯ ಬುದ್ಧಿಶಾಲಿಯೂ, ಬಹು ದೂರದ ರ್ಶಿಯೂ ಇದ್ದಂತೆ, ಅವನ ತರುವಾಯ ಸಿಂಹಾಸನವೇರುವ ಸಾಮ್ರಾಟರು ಅವನಂತೆ ಸರ್ವಗುಣಸಂಪನ್ನರಿರುವರೆಂಬ ನಿಯಮವಿಲ್ಲದ್ದರಿಂದ, ಪುನಃ ಅವರ ಕಾಲದಲ್ಲಿ ಮೇವಾಡದ ಸ್ವಾತಂತ್ರ್ಯವನ್ನು ಸಂಪಾದಿಸಿಕೊಳ್ಳಬಹುದಾ ದ್ದರಿಂದ, ಈಗೇ ಬಾದಶಹನ ವಿರುದ್ಧವಾಗಿ ನಡೆದು ಸಿಸೋದಿಯಾ ವಂಶದ ಸರ್ವಸ್ವದ ನಾಶಮಾಡಿಕೊಳ್ಳುವದು ಜಾಣತನವಲ್ಲೆಂಬ ಯುಕ್ತಿವಾದವು ಅವರ ಮನಸ್ಸಿನಲ್ಲಿ ಮೆಲ್ಲ ಮೆಲ್ಲನೆ ಹೊಳೆಯಹತ್ತಿತು. ಅದರಂತೆ ಪೌರುಷ ವೃತ್ತಿಯ ಕೆಲವು ವೀರರು--ಇಂಥ ಮಹಾಪ್ರತಾಪಿಯಾದ ಬಾದಶಹನ ಕಾಲ ದಲ್ಲಿಯೇ ತಮ್ಮ ಸ್ವಾತಂತ್ರ್ಯವನ್ನು ಕಾಯ್ದುಕೊಂಡರೆ ಕಾಯ್ದುಕೊಂಡಹಾ ಗೆಂದು ತಿಳಿದು, ಬಾದಶಹನಿಗೆ ಶರಣುಹೋಗುವದು ಅಯೋಗ್ಯವೆಂದು ತಿಳಿ ಯುಹತ್ತಿದರು. ಸದ್ಯದ ಮಟ್ಟಿಗೆಂದು ಸ್ವಾತಂತ್ರ್ಯವನ್ನು ಕಳಕೊಳ್ಳುವದು ನಿಜವಾದ ಶೌರ್ಯಕ್ಕೆ ಲಾಂಛನವೆಂತಲೂ, ಅದು ಮೇವಾಡದ ರಾಣಾನ

ಸಂತತಿಯವರಿಗೆ ಕುಂದಕವೆಂತಲೂ ಅವರು ಭಾವಿಸುತ್ತಲಿದ್ದರು. ಹೀಗೆ ಸಭಿಕರ ಮನಸ್ಸಿನಲ್ಲಿ ಯಾವ ಯುಕ್ತಿವಾದವೇ ಹೊಳೆಯಲಿ, ಅವರು ಹ್ಯಾಗೇ ತಿಳಿಯಲಿ, ಅವರು ಏನೇ ಭಾವಿಸಲಿ, ಪ್ರತಾಪಸಿಂಹನಿಗೆ ಹೀಗೆಯೇ ಮಾಡಬೇಕೆಂದು ಸೂಚಿಸಲಿಕ್ಕೆ ಯಾವಸರದಾರನೂ ಸಮರ್ಥನಾಗಲಿಲ್ಲ. ರಾಣಾನು ಮುಖ್ಯವಾಗಿ, ತನ್ನ ವೀರ ಅನುಚರರ ಕಷ್ಟನಿವಾರಣಕ್ಕಾಗಿ ಬಾದಶಹನೊಡನೆ ಒಡಂಬಡಿಕೆ ಮಾಡಿಕೊಳ್ಳಬೇಕೆನ್ನುತ್ತಿದ್ದನು; ಆತನ ಅನುಚರರು ರಾಣಾನ, ಹಾಗು ಆತನ ಕುಟುಂಬದವರ ಕಷ್ಟವನ್ನು ನೋಡಲಾರದೆ ಒಡಂಬಡಿಕೆ ಮಾಡಿಕೊಳ್ಳಬೇಕೆನ್ನುತ್ತಿದ್ದರು. ಹೀಗಾಗಿ ಪರಸ್ಪರರ ಹಿತದ ವಿಷಯವಾಗಿ ಯತ್ನಿಸುತ್ತಿರುವ ಆ ಸಮಾನ ಧರ್ಮದ ಸ್ವಾಮಿ—ಸೇವಕರು ಮೌನವೆಂಬ ಸಮಾನಧರ್ಮವನ್ನು ಸ್ವೀಕರಿಸಿ ಆಲೋಚಿಸುತ್ತ ಕುಳಿತುಕೊಂಡಿದ್ದರು. ಹೀಗೆ ದರ್ಬಾರವೆಲ್ಲ ಸ್ತಬ್ಧವಾಗಿರುವಾಗ, ಈ ವರೆಗೆ ತನ್ನಿಂದಾದ ರಜಪೂತರ ಕುಲಕ್ಷಯವೂ, ತನ್ನ ಕುಟುಂಬದವರು ಅನುಭವಿಸಿದ ಪರಿಪರಿಯ ಕಷ್ಟವೂ ಪ್ರತಾಪನ ಕಣ್ಣಿಗೆ ಕಟ್ಟಲು, ಅಸಮಾಧಾನಪಟ್ಟು ಆತನು ಸಂಧಿಯ ಪತ್ರವನ್ನು ಅಕಬರನ ಕಡೆಗೆ ಕಳಿಸಿಬಿಟ್ಟನು! ದರ್ಬಾರದ ಕಾರ್ಯವು ಮುಗಿದದ್ದರಿಂದ ಯಾವತ್ತು ವೀರರು ಖಿನ್ನಮನಸ್ಸಿನಿಂದ ತಮ್ಮ ತಮ್ಮ ಸ್ಥಳಗಳಿಗೆ ಹೊರಟುಹೋದರು. ಈ ಪ್ರಸಂಗದಲ್ಲಿ ಕವಿಕುಲ ಗುರುವಾದ ಕಾಲಿದಾಸನ ಉಕ್ತಿಯುಸ್ಮರಣಕ್ಕೆ ಬರುವದು"ತಪ್ತಮಯೋಪಿಮಾರ್ದವೀಂಭಜತೇ ಕೈವಕಥಾಶ್ಯರೀರುಷ." ಎಂದು ರಘುವಂಶದಲ್ಲಿ ಒತ್ತಟ್ಟಿಗೆ ಆತನು ಹೇಳಿದ್ದಾನೆ. ಕೆಂಪಗೆ ಕಾದ ಉಕ್ಕು ಮಿದುವಾಗುತ್ತವೆಂದಬಳಿಕ, ಮನುಷ್ಯರ ಶೋಕಸಂತಪ್ತ ಹೃದಯವು ಮಿದುವಾಗುವದೇನಾಶ್ಚರ್ಯವೆಂಬ ಆತನ ಭಾವವು ಯಥಾರ್ಥವಾದದ್ದೇ ಸರಿ!

ಪ್ರತಾಪನಾದರೂ ಖಿನ್ನನಾಗಿದ್ದನು. ಆತನು ಪರಮಾವಧಿ ಕ್ಲೇಶಪಟ್ಟು ಒಬ್ಬನೇ ಆಲೋಚಿಸುತ್ತ ಮಲಗಿಕೊಂಡನು. ರಾಣಾನಿಗೆ ನಿದ್ದೆಬರಲೊಲ್ಲದು. ಆತನು ಈ ಮಗ್ಗಲಿನಿಂದ ಆ ಮಗ್ಗಲಿಗೆ, ಆ ಮಗ್ಗಲಿನಿಂದ ಈ ಮಗ್ಗಲಿಗೆ ಹೊರಳಾಡುತ್ತ ಉಸುರ್ಗರೆಯುತ್ತಲಿದ್ದನು. ಮಧ್ಯರಾತ್ರಿಯು ಮೀರಿತು, ರಾಣಾನ ಶಯನಗೃಹದ ಬಾಗಿಲು ಇಕ್ಕಿದ್ದಿಲ್ಲ, ಎಲ್ಲರೂ ಗಾಢನಿದ್ರೆಯಲ್ಲಿದ್ದದ್ದರಿಂದ ಸ್ತಬ್ಧತೆಯ ಸಾಮ್ರಾಜ್ಯವು ಸ್ಥಾಪಿತವಾಗಿತ್ತು. ಅಷ್ಟ

ರಲ್ಲಿ ದಿವ್ಯತೇಜಸ್ಸು ಪ್ರಕಟವಾಗುತ್ತಿರಲು, ನೂಪುರದ ಮಂಜುಲ ನಾದದೊಡನೆ ಒಬ್ಬ ಸುಂದರ ಸ್ತ್ರೀಯು ಅಲ್ಲಿ ಪ್ರಕಟವಾದಳು. ಆಕೆಯ ದರ್ಶನವಾದ ಕೂಡಲೆ ಪ್ರತಾಪನು ಎದ್ದು ಕುಳಿತುಕೊಂಡನು. ಈ ಮೊದಲೆ ತನಗೆ ಎರಡುಸಾರೆ ದರ್ಶನಕೊಟ್ಟಿದ್ದ ಸಾತ್ವಿಕೆಯ ಮನೋಹರ ಮೂರ್ತಿಯೇ ಎದುರಿಗೆ ನಿಂತದ್ದನ್ನು ನೋಡಿ, ಆತನು ಎದ್ದುನಿಂತು ಭಕ್ತಿಯಿಂದ ನಮಿಸಿ ಕೈಜೋಡಿಸಿ ನಿಂತುಕೊಂಡನು. ಸಾತ್ವಿಕೆಯ ದರ್ಶನದಿಂದ ಪ್ರತಾಪನ ಮನಸ್ಸು ಸಮಾಧಾನಪಟ್ಟರೂ, ಆ ವೀರಮಣಿಯು ತಾನು ಅದೇದಿನ ಅಕಬರ ಬಾದಶಹನ ಕಡೆಗೆ ಒಡಂಬಡಿಕೆಯ ಪತ್ರ ಕಳಿಸಿದ್ದನ್ನು ಸ್ಮರಿಸಿ ನಾಚಿಕೊಂಡು ತಲೆಬಾಗಿಸಿ ನಿಂತುಕೊಂಡಿದ್ದನು. ಸಾತ್ವಿಕೆಯನ್ನು ನೋಡುವ ಧೈರ್ಯವು ಆತನಿಗಾಗಲಿಲ್ಲ. ತಾನು ಕ್ಷುದ್ರ ಮೋಹಕ್ಕೊಳಗಾಗಿ ಕ್ಷಾತ್ರತೇಜಸ್ಸನ್ನು ಕಳಕೊಂಡದ್ದಕ್ಕಾಗಿ ಆತನು ಬಹಳ ಅಸಮಾಧಾನಪಟ್ಟನು. ಹೀಗೆ ಸುಮ್ಮನೆ ನಿಂತುಕೊಂಡ ಮಹಾರಾಣಾನನ್ನು ನೋಡಿ ಮಹಾತ್ಮಳಾದ ಸಾತ್ವಿಕೆಯು--ಎಲೈ ಪ್ರತಾಪನಿಧಿಯಾದ ಮಹಾರಾಣಾ, ಪುತ್ರಾ, ಯಾವತ್ತು ಹಿಂದೂಜನರ ಸ್ವಾತಂತ್ರ್ಯವೆಂಬ ದೀಪಜ್ಯೋತಿಯು ಮೇವಾಡದ ಗುಡ್ಡಗಾಡಿನಲ್ಲಿ ನಿನ್ನ ಯೋಗದಿಂದ ಸಂರಕ್ಷಿಸಲ್ಪಟ್ಟು ಬೆಳಗುತ್ತಿರಲು, ನೀನು ಕ್ಷುದ್ರ ಮೋಹಕ್ಕೊಳಗಾಗಿ ಆ ಜ್ಯೋತಿಯನ್ನು ಆರಿಸುವ ಉದ್ಯೋಗಮಾಡ ಹತ್ತಿರುವೆಯಲ್ಲ! ಪ್ರತಾಪಾ, ನಿನ್ನ ಮೇಲಿನ ಭಕ್ತಿಯಿಂದ ಇಂದಿಗೆ ಬಹುಜನ ರಜಪೂತ ವೀರರು ರಣಭೂಮಿಯಲ್ಲಿ ದೇಹವಿಟ್ಟು, ವೀರಸ್ವರ್ಗದಲ್ಲಿ ನಿನ್ನ ಕೃತಿಯನ್ನು ನೋಡುತ್ತ ಕುಳಿತಿರಲು, ಕ್ಷುದ್ರ ಮೋಹಕ್ಕೊಳಗಾಗಿ ನೀನು ಅವರನ್ನು ನಿರಾಶೆಗೊಳಿಸಬಹುದೇ? ನಿನ್ನ ಈ ಕೃತಿಯಿಂದ ಸ್ವರ್ಗಸ್ಥರಾದ ನಿನ್ನ ಪೂರ್ವಜರೂ, ಶೂರಪರಿವಾರವೂ ದುಃಖಪಟ್ಟು ಅಧಃಪತನವನ್ನು ಹೊಂದಬೇಕಾಗುವದಲ್ಲ! ಇದಕ್ಕಾಗಿಯೇ ಬಹುಜನ ರಜಪೂತ ವೀರರು ಸಮರಭೂಮಿಯಲ್ಲಿ ಬಲಿಯಾದರೋ? ಇದಕ್ಕಾಗಿಯೇ ಸತ್ವಶೀಲೆಯಾದ ನಿನ್ನ ಮಹಾರಾಣಿಯೂ, ನಿನ್ನ ಹಿರಿಯಮಗನಾದ ಅಮರಸಿಂಹನೂ ಬೇರೆ ರಾಜಪರಿವಾರವೂ ಪರಿಪರಿಯ ಕಷ್ಟವನ್ನು ಅನುಭವಿಸಿದರೇನು? ಇದಕ್ಕಾಗಿಯೇ ಯಾವತ್ತು ರಜಪೂತ ಸ್ಥಾನವು, ಆದೇಕೆ, ಸಮಗ್ರ ಭರತಖಂಡವು ಪೂಜ್ಯಬುದ್ಧಿಯಿಂದ ನಿನ್ನನ್ನು ನೋಡುತ್ತಿರುವದೇನು? ಇದಕ್ಕಾಗಿಯೇ

ಕೃತಜ್ಞನಾದ ಶಕ್ತಿಸಿಂಹನೆಂಬ ಬಂಧುವು ಕೃತಘ್ನನಾಗಿ ಮೊಗಲರ ಪಕ್ಷವನ್ನು ಬಿಟ್ಟು ನಿನ್ನನ್ನು ಕೂಡಿದನೇನು? ಇದಕ್ಕಾಗಿಯೇ ದಿಲ್ಲಿಯ ಮಂತ್ರಿಯಾದ ಖಾನಖಾನನೂ, ಬೇರೆ ಯವನ ವೀರರೂ, ಪ್ರತ್ಯಕ್ಷ ದಿಲ್ಲಿಶ್ವರನೂ ಕೂಡ ನಿನ್ನನ್ನು ವರ್ಣಿಸುತ್ತಿರುವರೇನು? ಇದಕ್ಕಾಗಿಯೇ ನೀನು ಮೇವಾಡದ ರಾಜ್ಯವನ್ನು ಹಾಳಗೆಡವಿ, ಒತ್ತಾಯದಿಂದ ಪ್ರಜೆಗಳನ್ನು ಗುಡ್ಡಗಾಡಿಗಟ್ಟಿ ಇಪ್ಪತ್ತುವರ್ಷಗಟ್ಟಲೆ ಅಲ್ಲಿ ಘೋರವಾದ ಅರಣ್ಯವನ್ನು ಬೆಳಿಸಿದೆಯೇನು? ಇದಕ್ಕಾಗಿಯೇ ನಿನ್ನ ಚಿತ್ತಕ ಕುದುರೆಯು ತನ್ನ ಜೀವದ ಆಶೆಯನ್ನು ಬಿಟ್ಟು ನಿನ್ನನ್ನು ರಕ್ಷಿಸಿತೇನು? ಪುತ್ರಾ, ಏನು ನಿನ್ನ ಸುವಿಚಾರದ ರೀತಿಯಿದು! "ಆನೆಗೆ ಅನೆಯನ್ನು ಕಳಕೊಂಡು ಬಾಲಕ್ಕೆ ಬಡಿದಾಡಿದರೆ"ಂಬಂತೆ ಮಹಾ ಮಹಾ ವೀರರಾದ ಅಸಂಖ್ಯ ಜನರನ್ನು ಕಳಕೊಂಡು ಉಳಿದ ಸ್ವಲ್ಪ ಜನ ವೀರರ ಪ್ರಾಣರಕ್ಷಣಕ್ಕಾಗಿ ಬಾದಶಹನಿಗೆ ನೀನು ಶರಣುಹೋಗಬಹುದೇ? ಎಂಥ ಚಂಚಲವೃತ್ತಿಯಿದು! ಈ ಲೋಕದಲ್ಲಿ ಜೀವನವು ಅಸ್ಥಿರವಾಗಿದ್ದು ಧರ್ಮ—ಕೀರ್ತಿಗಳೆರಡು ಸ್ಥಿರವಾಗಿರುವವಲ್ಲವೆ? ಪ್ರತಾಪಸಿಂಹನೇ, ಯುದ್ಧಕ್ಕೆ ಹೆದರಿ, ಕ್ಷಾತ್ರಧರ್ಮಭ್ರಷ್ಟನಾಗಿ, ಈವೊತ್ತಿಗೂ ಕಳಕೊಳ್ಳದೆ ಯಿದ್ದ ಮೇವಾಡದಸ್ವಾತಂತ್ರ್ಯವನ್ನು ಕಳಕೊಂಡ ಅಪಕೀರ್ತಿಗೆ ಗುರಿಯಾಗಿ, ನೀನು ಸಂಪಾದಿಸುವ ಮಹತ್ಫಲವಾದರೂ ಯಾವದು? ಎರಡನೆಯ ಫಲ ವೇನಿರುವದು? ದಿಲ್ಲೀಶ್ವರನ ಚರಣದೆಡೆಯಲ್ಲಿ ನಾಯಿಯಂತೆ ಬಾಲಗುಂಡಾ ಡಿಸುವ ಶ್ವವೃತ್ತಿಯ ಫಲವೇ ನಿನ್ನ ಸಲುವಾಗಿ ಕಟ್ಟೆಯಿಟ್ಟಿರುವದು! ನಿನ್ನ ಕ್ಷುದ್ರ ಮಾಂಡಲಿಕನೆನಿಸುವ ಚಂದನಸಿಂಹನೆಂಬ ಕುಮಾರನು ಅಭಿಮನ್ಯುವಿ ನಂತೆ ಶೌರ್ಯದಿಂದ ಕಾದಿ ಪ್ರತಿಜ್ಞೆಯನ್ನು ಈಡೇರಿಸಿ ವೀರಸ್ವರ್ಗವನ್ನು ಹೊಂದಿರಲು, ಮಹಾರಾಣಾನೆಂದು ಹೊಗಳಿಸಿಕೊಳ್ಳುವ ನೀನು ಈಗ ಬಾದ ಶಹನಿಗೆ ಶರಣುಹೋಗುವೆಯಲ್ಲ! ಪ್ರತಾಪಾ, ನಿನ್ನ ಈ ಹೇಡಿತನವನ್ನು ನೋಡಿ ಕುಮಾರ ಚಂದನಸಿಂಹನು ಸ್ವರ್ಗದಲ್ಲಿ ತಲೆಬಾಗಿಸಿರಬಹುದಲ್ಲವೆ? ಎಂದು ನುಡಿಯುತ್ತಿರಲು, ತಪೋಧನನೂ ಅಲ್ಲಿ ಪ್ರಕಟವಾದನು!

ತಪೋಧನನನ್ನು ನೋಡಿ ಸಾತ್ವಿಕೆಯು ಸುಮ್ಮನಾಗಿ ವಿನಯದಿಂದ ಒತ್ತಟ್ಟಿಗೆ ಸರಿದು ನಿಂತುಕೊಂಡಳು. ಪ್ರತಾಪನು ತಪೋಧನನ ದಿವ್ಯತೇಜ ಸ್ಸನ್ನು ನೋಡಿ ಅತ್ಯಂತ ಲೀನತೆಯಿಂದ ನಮಸ್ಕರಿಸಿ ಕೈಜೋಡಿಸಿ ನಿಂತು

ಕೊಂಡನು. ಕೆಲಕಾಲದವರೆಗೆ ಯಾರ ಮುಖದಿಂದಲೂ ಶಬ್ದಗಳು ಹೊರಡ ಲಿಲ್ಲ. ಆಗ ತಪೋಧನನು ಸಾತ್ವಿಕೆಯನ್ನು ಕುರಿತು—ಶೋಭನಾಂಗಿಯೇ, ಸಾತ್ವಿಕೇ, ಸತ್ವರಕ್ಷಣಕ್ಕಾಗಿ ಪ್ರತಾಪನನ್ನು ನೀನು ಬೋಧಿಸಿದ್ದು ಬಹಳ ನೆಟ್ಟಗಾಯಿತು. ಸತ್ವವನ್ನು ಕಾಯ್ದುಕೊಳ್ಳಲಿಚ್ಛಿಸುವವನು ತಪಸ್ವಿಯಾಗ ಬೇಕಾಗುವದೆಂಬದನ್ನು ಆತನು ಮರೆಯುವನು! ತಪೋಭ್ರಷ್ಟನು ಸತ್ವ ವನ್ನು ಕಾಯ್ದುಕೊಳ್ಳಲಾರನು. ಆವನ ಇಷ್ಟಾರ್ಥವು ಕೈಗೂಡದು, ಪ್ರತಿ ಜ್ಞೆಯು ನೆರವೇರದು. ಪ್ರಿಯೇ, ತ್ರಿಮೂರ್ತಿಗಳು ತಪಸ್ಸಿನಿಂದಲೇ ಸೃಷ್ಟಿ-ಸ್ಥಿತಿ-ಲಯಗಳನ್ನು ಮಾಡಲು ಸಮರ್ಥರಾದರು. ಹರಿಶ್ಚಂದ್ರ, ಪಾಂಡವ ಮೊದಲಾದ ರಾಜ ಪುಂಗವರು ತಪಸ್ಸಿನಿಂದಲೇ ತಮ್ಮ ಸತ್ವವನ್ನು ಕಾಯ್ದು ಕೊಂಡು ಇವೊತ್ತಿಗೂ ಜಗತ್ತಿನಲ್ಲಿ ಕೀರ್ತಿಶೇಷರಾಗಿ ಉಳಿದಿರುವರು; ಆದರೆ ತಪಸ್ಸಿದ್ಧಿಯು ಸುಲಭಸಾಧ್ಯವಲ್ಲ. ವಿಶ್ವಾಮಿತ್ರನಂಥ ಮಹಾತ್ಮನೂ ತಪೋ ಭ್ರಷ್ಟನಾಗಿ ಸತ್ವಹಾನಿಯನ್ನು ಹೊಂದಿ ಪಶ್ಚಾತ್ತಾಪಪಟ್ಟಿರಲು, ಪ್ರತಾಪ ಸಿಂಹನ ಪಾಡೇನು? ಮಹಾಕಾರ್ಯವನ್ನು ಸಾಧಿಸುವವನು ಜನ್ಮಜನ್ಮಾಂ ತರದಲ್ಲಿ ತಪಸ್ಸನ್ನಾಚರಿಸಬೇಕಾಗುವದು; ಆದ್ದರಿಂದ ತರುಣನಾದ ಈ ಪ್ರತಾಪನು ತಪೋಭ್ರಷ್ಟನಾಗುವದು ಸರಿಯಲ್ಲ. ತರುಣರು ಅಂಗಸಾಧನ ದಿಂದ ಶರೀರಬಲವನ್ನು ಹೆಚ್ಚಿಸಿಕೊಳ್ಳುವಂತೆ, ಮಾನಸಿಕ ತಾಪವನ್ನು ಸಹಿಸಿ ಮನೋಬಲವನ್ನೂ ಹೆಚ್ಚಿಸಿಕೊಳ್ಳಬೇಕಾಗುವದು. ತಾರುಣ್ಯದಲ್ಲಿ ಪ್ರಾಪ್ತವಾ ಗುವಆಪತ್ತು,ಕ್ಲೇಶ, ಚಿಂತೆ, ಶೋಕ ಇವುಗಳನ್ನು ಸಹಿಸುವದರಿಂದಮನೋ ಬಲವು ಹೆಚ್ಚುತ್ತದೆ; ನಿಶಯವು ಅಥವಾ ಪ್ರತಿಜ್ಞೆಯು ನೆರವೇರುತ್ತದೆ; ಸಂಕ ಟಕ್ಕೆ ಎದುರಾಗಲು ಸ್ಫೂರ್ತಿಯು ಉಂಟಾಗುತ್ತದೆ. ಶಾರೀರಿಕ ಸದೃಢತೆಗೆ ಶಾರೀರಿಕಪರಿಶ್ರಮವು ಅವಶ್ಯವಾಗಿರುವಂತೆ, ಆಪತ್ತು-ಸಂಕಟಗಳ ಸಹನವು ಮಾನಸಿಕ ಸದೃಢತೆಗೆ ಅವಶ್ಯವಾಗಿರುತ್ತದೆಂಬದನ್ನು ಪುರುಷರಾದವರು ಅವಶ್ಯವಾಗಿ ಲಕ್ಷದಲ್ಲಿಡತಕ್ಕದ್ದು. ಮನಸ್ಸನ್ನು ತಿದ್ದಲಿಕ್ಕೆ ಚಿಂತಾ-ಕ್ಲೇಶ-ವಿಪತ್ತುಗಳಂಥ ಅನ್ಯ ಶಿಕ್ಷಕರು ದೊರೆಯಲಾರರು. ಮನಸ್ಸಿನ ದುರ್ಬಲ ತೆಯ ರೋಗವನ್ನು ದೂರಮಾಡಲಿಕ್ಕೆ ಇವರಂಥ ಉತ್ಕೃಷ್ಟ ವೈದ್ಯರು ಜಗತ್ತಿ ನಲ್ಲಿ ಬೇರೆ ಯಾರೂ ದೊರೆಯಲಾರರು. ಕಮ್ಮಾರನು ಸುತ್ತಿಗೆಯ ಪೆಟ್ಟಿ ನಿಂದ ಕಬ್ಬಿಣಕ್ಕೆ ಯಾವದೊಂದುಆಕಾರವನ್ನುಂಟು ಮಾಡುವಂತೆ, ಚಿಂತಾ-

ಕ್ಲೇಶಗಳು ನಿರ್ದಯದಿಂದ ಮನುಷ್ಯನ ಹೃದಯಕ್ಕೆ ಸಬಲವಾದ ಆಘಾತ ವನ್ನು ಮಾಡಿ ಆ ಹೃದಯವನ್ನು ಸದೃಢವಾಗಿ ಮಾಡುತ್ತವೆ. ಆ ಚಿಂತಾ-ಕ್ಲೇಶಗಳ ಆಘಾತದಿಂದ ನಾವು ದುಃಖಿತರಾಗುತ್ತೇವೆ; ದುಃಖವನ್ನು ಸಹಿಸ ಲಾರದೆ ಮನಸ್ಸು ಕರಗುವಂತೆ, ಆ ಚಿಂತಾ-ಕ್ಲೇಶಗಳನ್ನು ಕುರಿತು ಪ್ರಾರ್ಥಿ ಸುತ್ತೇವೆ; ಆದರೆ ಮನಸ್ಸನ್ನು ದೃಢಮಾಡುವದಕ್ಕಾಗಿ ಒಂದೇಸವನೆ ಆಘಾತ ಮಾಡುವ ಆ ಚಿಂತಾ-ಕ್ಲೇಶರೂಪ ಕಮ್ಮಾರರಿಗೆ ಎಳ್ಳಷ್ಟು ಅಂತಃಕರುಣವು ಹುಟ್ಟುವದಿಲ್ಲ. ಅವರು ಒಂದೇಸವನೆ ಸುತ್ತಿಗೆಯ ಪೆಟ್ಟುಗಳನ್ನು ಹಾಕು ತ್ತಿರುವರು. ಸುತ್ತಿಗೆಯ ಪೆಟ್ಟುಗಳನ್ನು ಸಹಿಸಲಾರದೆ ಓಡಿಹೋಗುವವನ ಮನಸ್ಸು ದೃಢವಾಗಲಾರದು. ಮನಸ್ಸು ಸದೃಢವೂ, ಸ್ಥಿರಪ್ರವೃತ್ತಿಯು ಳ್ಳದ್ದೂ, ದೃಢಪ್ರತಿಜ್ಞವೂ ಆಗಬೇಕೆಂದು ಇಚ್ಛಿಸುವವನು ಆ ಆಘಾತಗಳನ್ನು ಸಹಿಸಲೇಬೇಕು. ಆ ಆಘಾತಗಳನ್ನು ಸಹಿಸುವದೇ ತಪಶ್ಚರ್ಯವು. ಚಿಕ್ಕಂ ದಿನಿಂದ ತಾಯಿ-ತಂದೆಗಳ, ಅಥವಾ ಪಾಲಕರ ಆಚ್ಛೆಯಿಂದ ಬೆಳೆದವರ, ಹಾಗು ಎರಡನೆಯವರ ಪ್ರಯತ್ನದಿಂದಲೂ, ಪರಿಶ್ರಮದಿಂದಲೂ ದೊಡ್ಡವ ರಾದವರ, ಆದರಂತೆ ಎಂದೂ ಚಿಂತಾಕ್ಲೇಶಗಳ ಸ್ಪರ್ಶವಾಗದವರ ಹೃದಯ ಗಳು ಎಂದೂ ಸುದೃಢವಾಗವು. ಅವರ ಪ್ರತಿಜ್ಞೆಗಳು ಸ್ಥಿರವಾಗಲಾರವು. ಮನುಷ್ಯನಿಗೆ ಜನ್ಮದಲ್ಲಿ ಎಂದಾದರೂ ವಿಪತ್ತುಗಳು ಬರತಕ್ಕವೆ. ವಿಪತ್ತು ಗಳಿಂದ ಮುಕ್ತನಾದವನು ಯಾವನೂ ಇಲ್ಲ. ತಾರುಣ್ಯದಲ್ಲಿ ಚಿಂತಾಕ್ಲೇಶ ಗಳಿಂದ ಸುದೃಢವಾಗದ ಚಂಚಲ ಮನಸ್ಸಿನವರು ಸಂಕಟಗಳೊದಗಿದಾಗ ಅವನ್ನು ಸಹಿಸಲಾರದೆ ನೆಲಹಿಡಿದು ಹೊಟ್ಟೆಬೇನೆ ಹಚ್ಚಿಕೊಂಡು ಸಾಯ ಬೇಕಾಗುವದು. ಪಾಂಡವರಿಗೆ ಬಾಲ್ಯದಿಂದ ಸಂಕಟಗಳು ಒದಗುತ್ತ ಬಂದ ದ್ದರಿಂದಲೇ ಅವರು ಸತ್ವವನ್ನು ಕಾಯ್ದುಕೊಂಡು ಮಹಾಕಾರ್ಯಗಳನ್ನು ಮಾಡಿದರು. ಪ್ರಕೃತದ ಅಕಬರ ಬಾದಶಹನಿಗೆ ಬಾಲ್ಯದಿಂದ ಒದಗುತ್ತ ಬಂದಿದ್ದ ಚಿಂತಾಕ್ಲೇಶಗಳನ್ನು ಆತನು ಸಹಿಸಿದ್ದರಿಂದಲೇ, ಆತನು ಸದ್ಯಕ್ಕೆ ಕರ್ತೃತ್ವಶಾಲಿಗಳ ಕೋಟಿಯಲ್ಲಿ ಸೇರಿರುತ್ತಾನೆ. ಎಲೈ ಪುತ್ರಾ, ನೀನಾ ದರೂ ಇಂದಿನವರೆಗೆ ಚಿಂತಾ ಕ್ಲೇಶಗಳನ್ನು ಸಹಿಸುತ್ತ ಮೇವಾಡದ ಸ್ವಾತಂ ತ್ರ್ಯರಕ್ಷಣಕ್ಕಾಗಿ ಒಂದೇಸವನೆ ಘೋರ ತಪಸ್ಸನ್ನಾಚರಿಸಿದ್ದರಿಂದಲೇ ಕೀರ್ತಿ ಶಾಲಿಯೂ, ಸನ್ಮಾನನೀಯನೂ ಆಗಿರುತ್ತೀ; ಈ ಸ್ಥಿತಿಯು ಸ್ಥಿರವಾಗಿರ

ಬೇಕೆಂದು ನೀನು ಇಚ್ಛಿಸುತ್ತಿದ್ದರೆ, ಮೋಹರಹಿತನಾಗಿ ನೀನು ಮರಣ ಪರ್ಯಂತ ತಪಸ್ಸನ್ನಾಚರಿಸಬೇಕಾಗುವದು. ನಮ್ಮ ಪ್ರಿಯ ಸಾತ್ವಿಕೆಯು ಮಾಡಿದ ಬೋಧವನ್ನು ಮನನ ಮಾಡು. ಆನೆಗೆ ಆನೆಹೋಗಿರಲು ಬಾಲಕ್ಕೆ ಬಡಿದಾಡಿದಂತೆ ಮಾಡಬೇಡೆಂದು ಆಕೆಯು ಬೋಧಿಸಿದ್ದರಲ್ಲಿ ಬಹಳ ಮಹತ್ವ ವಿರುವದು. ಮೇವಾಡದ ವೀರಾಧಿವೀರರು ಸ್ವಾತಂತ್ರ್ಯರಕ್ಷಣಕ್ಕಾಗಿ ನಿನ್ನನ್ನು ಹಿಂಬಾಲಿಸಿ ರಣಭೂಮಿಯಲ್ಲಿ ದೇಹವಿಟ್ಟರು. ಅವರ ಅನುಸರಣವನ್ನು ನೀನು ಮಾಡದಿದ್ದರೆ, ಕೃತಘ್ನರಿಗೂ, ವಿಶ್ವಾಸಘಾತಕಿಗಳಿಗೂ ಆಗುವ ದುರ್ಗತಿಗೆ ನೀನು ಇಳಿಯಬೇಕಾದೀತು. ಪುತ್ರಾ, ಇಷ್ಟಾರ್ಥಪೂರ್ಣ ವಾಗುವದೇ ಕೀರ್ತಿಗೆ ಕಾರಣವೆಂದು ತಿಳಿಯಬೇಡ. ಇಷ್ಟಾರ್ಥಪೂರ್ತಿಯು ಆಗಲಿ-ಆಗದಿರಲಿ, ದೇಹವು ಉಳಿಯಲಿ-ಅಳಿಯಲಿ, ಜನರು ನಿಂದಿಸಲಿ-ವಂದಿಸಲಿ, ರಾಜ್ಯವು ಹೋಗಲಿ-ಬರಲಿ ನ್ಯಾಯ್ಯಮಾರ್ಗವನ್ನು ತಪ್ಪದಿರು ವದು ಕೀರ್ತಿಗೆ ಕಾರಣವೆಂಬದನ್ನು ಮರೆಯಬೇಡ. ನಿನ್ನ ಕುಲಪರಂಪ ರಾಗತ ಪದ್ಧತಿಯಂತೆಯೂ, ಇಲ್ಲಿಯವರೆಗೆ ನಿನ್ನ ಅನುಯಾಯಿಗಳಲ್ಲಿ ನೀನು ಉಂಟುಮಾಡುತ್ತ ಬಂದಿದ್ದ ಸಂಬಿಗೆಯಂತೆಯೂ, ನೀನು ದಿಲ್ಲೀಶ್ವರ ನಿಗೆ ಶರಣುಹೋಗದೆ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳುವದೇ ನ್ಯಾಯವು. ಪುತ್ರಾ, ಇದಕ್ಕೂ ಹೆಚ್ಚಿಗೆ ಬೋಧಿಸುವದು ಅವಶ್ಯವಿಲ್ಲ. ಯಾವತ್ತು ಭಾರತೀಯರ ಆಶೆಗೆ ನೀನು ಕಾರಣವಾಗಿರುವದರಿಂದ ನಿನಗೆ ಇಷ್ಟುಬೋಧ ಮಾಡಬೇಕಾಗುವದು. ಇನ್ನು ಎಂಟುದಿನ ಸುಮ್ಮನಿರು. ಆ ಮೇಲೆ ದಿಲ್ಲಿಯ ದರ್ಬಾರದಿಂದ ಒಂದು ಪತ್ರವನ್ನು ಓದಿನೋಡಿ ನಿನಗೆ ಸರಿದೋರಿ ದಂತೆ ಮಾಡು. ನ್ಯಾಯದ ಶ್ರಮಕ್ಕೆ ಪ್ರತಿಫಲವು ನಿಶ್ಚಿತವಾದದ್ದೆಂಬದನ್ನು ಮರೆಯಬೇಡ.

ಈ ಮೇರೆಗೆ ತಪೋಧನನು ಮಾಡಿದ ಉಪದೇಶವನ್ನು ಕೇಳುತ್ತ ಹೋದಂತೆ ಪಶ್ಚಾತ್ತಾಪದಿಂದ ರಾಣಾನ ಕಣ್ಣುಗಳು ಅಶ್ರುಪೂರ್ಣವಾದವು. ಆತನು ತನ್ನ ಉತ್ತರಿಯದಿಂದ ಕಣ್ಣೀರುಗಳನ್ನು ಒರಿಸಿಕೊಂಡು, ಸಾತ್ವಿಕೆ-ತಪೋಧನರ ಕಡೆಗೆ ನೋಡಲು, ಅವರಿಬ್ಬರೂ ಅಲ್ಲಿ ಇದ್ದಿಲ್ಲ. ಪ್ರತಾಪನು ಆಶ್ಚರ್ಯಮಗ್ನನಾದನು. ತಾನು ಸಂಧಿಗಾಗಿ ಅಕಬರನನ್ನು ಪ್ರಾರ್ಥಿಸಿದು ಅನ್ಯಾಯವಾಯಿತೆಂದು ಪಶ್ಚಾತ್ತಾಪಪಡುತ್ತ ಆತನು ಹಾಸಿಗೆಯ ಮೇಲೆ

ಬಿದ್ದುಕೊಂಡು ಚಿಂತಿಸತೊಡಗಿದನು. ಆತನು ಮೂಢನಂತೆ ಒಂದೇಸವನೆ ಕಣ್ಣೀರು ಸುರಿಸುತ್ತಿರಲು, ಪಟ್ಟಮಹಿಷಿಯು ಅಲ್ಲಿಗೆ ಬಂದಳು; ಆದರೆ ಚಿಂತಾಮಗ್ನನಾದ ಪ್ರತಾಪನಿಗೆ ಅದು ಗೊತ್ತಾಗಲಿಲ್ಲ. ರಾಣಿಯು ಪತಿಯ ಈ ಇರವನ್ನು ನೋಡಿ ಅಸಮಾಧಾನಪಟ್ಟು, ಪತಿಯ ಸಮೀಪಕ್ಕೆ ಹೋಗಿ ವಿನಯದಿಂದ--ರಾಣಾಜೀ, ಇದೇನು ವಿಚಿತ್ರವು! ಸ್ವಲ್ಪ ಸಮಾಧಾನ ತಾಳಬೇಕು. ನನ್ನ ಕನಸಿನಲ್ಲಿ ಒಬ್ಬ ತಪಸ್ವಿಯೂ, ತಪಸ್ವಿನಿಯೂ ಬಂದು ಶುಭವಾರ್ತೆಯನ್ನು ಹೇಳಿದ್ದಾರೆ, ದಯವಿಟ್ಟು ಲಾಲಿಸಬೇಕು. ದಿಲ್ಲೀಶ್ವರ ನಿಗೆ ಒಡಂಬಡಿಕೆಯ ಸಲುವಾಗಿ ತಾವು ಪ್ರಾರ್ಥಿಸಿದ್ದು ಪ್ರಮಾದವಾಯಿತೆಂಬ ದೇನೋ ನಿಜ; ಆದರೆ ಅದಕ್ಕಾಗಿ ಪ್ರಭುಗಳು ಅಷ್ಟು ಚಿಂತೆಯನ್ನು ಮಾಡ ಬಾರದು. ತಮ್ಮ ಪತ್ರವನ್ನು ಬಾದಶಹನು ನಿಜವೆಂದು ತಿಳಿಯುವ ಪ್ರಸಂ ಗವು ಬರುವದಿಲ್ಲೆಂತಲೂ, ಕಡೆಗೆ ಜಯಲಕ್ಷ್ಮಿಯು ನಿಮ್ಮ ಕೊರಳಿಗೇ ಮಾಲೆಹಾಕುವಳೆಂತಲೂ ಆ ಋಷಿ ದಂಪತಿಗಳು ನನ್ನ ಸ್ವಪ್ನದಲ್ಲಿ ಸ್ಪಷ್ಟವಾಗಿ ಹೇಳಿರುವರು. ಆ ಪುಣ್ಯಾತ್ಮರ ದರ್ಶನವಾದದ್ದರಿಂದ ನಮ್ಮ ಸರ್ವಾರಿಷ್ಟ ಗಳು ದೂರವಾದವೆಂದು ನಾನು ಭಾವಿಸಿದ್ದೇನೆ. ಪ್ರಭುಗಳ ಪ್ರತಿಜ್ಞೆಯು ನೆರವೇರುವದು; ಮೇವಾಡದ ಸ್ವಾತಂತ್ರ್ಯರಕ್ಷಣವಾಗುವದು. ನನ್ನ ಮಾತಿ ನಲ್ಲಿ ನಂಬಿಗೆ ಇಡುವ ಕೃಪೆಮಾಡಬೇಕು, ಎಂದು ಬೇಡಿಕೊಳ್ಳಲು, ಪ್ರತಾಪ ಸಿಂಹನು ಎದ್ದುಕುಳಿತು ಹೆಂಡತಿಯನ್ನು ಆಲಿಂಗಿಸಿ, ತಾನು ಕ್ಷುದ್ರಮೋಹಕ್ಕೆ ಒಳಗಾಗಿ ಬಾದಶಹನಿಗೆಶರಣುಹೋದದ್ದಕ್ಕಾಗಿ ಪಶ್ಚಾತ್ತಾಪಪಟ್ಟು, ಸಾತ್ವಿಕ ತಪೋಧನರು ತನ್ನನ್ನು ಬೋಧಿಸಿದ್ದರ ವೃತ್ತಾಂತವನ್ನು ಹೆಂಡತಿಗೆ ಹೇಳಿ ದನು. ಅದನ್ನು ಕೇಳಿ ಪದ್ಮಾವತಿಯು ಆಶ್ಚರ್ಯಪಟ್ಟು, ಇನ್ನು ಶುಭ ದಿನಗಳು ಬೇಗನೆ ಬರುವವಾದ್ದರಿಂದ ಸಮಾಧಾನ ತಾಳಬೇಕೆಂದು ಪತಿ ಯನ್ನು ಸಂತಯಿಸಿದಳು; ಮತ್ತು ತಪೋಧನನು ಹೇಳಿದಂತೆ ಇನ್ನು ಎಂಟುದಿನ ಸಮಾಧಾನದಿಂದ ಹಾದಿಯನ್ನು ನೋಡಬೇಕೆಂದು ಬೇಡಿ ಕೊಂಡಳು.

ಪತ್ನಿಯ ಈ ಸ್ವಪ್ನವೃತ್ತಾಂತವನ್ನೂ ಆಕೆಯ ಸಮಾಧಾನದ ಮಾತು ಗಳನ್ನೂ ಕೇಳಿ ರಾಣಾನಿಗೆ ಕೆಲಮಟ್ಟಿಗೆ ಸಮಾಧಾನವಾಯಿತು. ಆತನು ಹೆಂಡತಿಯನ್ನು ಕುರಿತು—ಪ್ರಿಯೇ, ಈಗ ನಮಗೊದಗಿರುವ ಕಡುವಿಪತ್ತನ್ನು

ಮನಸ್ಸಿನಲ್ಲಿ ತಂದರೆ, ಮೇವಾಡದ ಸ್ವಾತಂತ್ರ್ಯದ ರಕ್ಷಣವು ಹ್ಯಾಗಾಗುವ ದೆಂಬದನ್ನು ಏಕಲಿಂಗೇಶ್ವರನೇ ಬಲ್ಲನೆಂದು ಹೇಳಬೇಕಾಗುತ್ತದೆ. ಮಹಾರಾಜ್ಞೀ, ನನಗೆ ಆಧಾರವೇನು ಉಳಿದದೆ ಹೇಳು? ನಿನ್ನಂಥ ಸಹಧರ್ಮಿಣಿಯ ಮಂತ್ರಾಲೋಚನದ ಸಹಾಯವೂ, ನಿನ್ನ ಆಪದ್ಬಂಧುತ್ವದ ಬಲವೂ ಇಲ್ಲದಿದ್ದರೆ, ಮೇವಾಡದ ರಾಣಾನ ಆಶಾಂಕುರವು ಸಮೂಲ ನಷ್ಟವಾಗಿ, ಇಷ್ಟು ಹೊತ್ತಿಗೆ ಆತನ ಸತ್ವಹಾನಿಯಾಗಿ ಹೋಗುತ್ತಿತ್ತು. ನಿನ್ನ ಉಜ್ವಲ ಪಾತಿವೃತ್ಯಕ್ಕೆ ಪವಿತ್ರ ಸ್ವಾತಂತ್ರಾಭಿಮಾನದ ಜೋಡು ಇರುವದರಿಂದಲೇ, ನೀನು ಮೇವಾಡದ ರಾಣಾನ ಆದರಕ್ಕೆ ನಿಜವಾಗಿ ಪಾತ್ರಳಿರುತ್ತೀ. ನೀನು ಇಂಥ ಪವಿತ್ರ ಮೂರ್ತಿಯಾದದ್ದರಿಂದಲೇ ಯಾವತ್ತು ರಜಪೂತರಿಗೆ ವಂದ್ಯಳಾಗಿರುವೆ. ನಿಮ್ಮಂಥ ಸತ್ವಶೀಲೆಯರು ಮೇವಾಡದ ಮಹಾರಾಜ್ಞೀಪದವನ್ನು ಹೊಂದಿ, ವೀರಮಾತೃಪದವಿಯನ್ನು ಧರಿಸುತ್ತ ಬಂದದ್ದರಿಂದಲೇ, ಈವೊತ್ತಿಗೂ ಮೇವಾಡದ ಸ್ವಾತಂತ್ರ್ಯದ ರಕ್ಷಣವಾಗಿರುತ್ತದೆ, ಎಂದು ಹೆಂಡತಿಯನ್ನು ಶ್ಲಾಘಿಸಲು, ಮಹಾರಾಜ್ಞಿಯು ಅತ್ಯಂತ ಲಜ್ಜಾಯುಕ್ತಳಾಗಿ ಪತಿಯ ಮುಖವನ್ನು ನೋಡಿ ಕೃತಜ್ಞತೆಯನ್ನು ಪ್ರಕಟ ಮಾಡಿದಳು!

---

*

೧೬ ನೆಯ ಪ್ರಕರಣ

# ದೈವೀವೃತ್ತಿಯ ಪ್ರಾದುರ್ಭಾವ.

ಪ್ರತಾಪಸಿಂಹನು ಕಳಿಸಿದ ಸಂಧಿಯ ಪತ್ರವನ್ನು ನೋಡಿ ಅಕಬರ ಬಾದಶಹನಿಗೆ ಪರಮಾನಂದವಾಯಿತು. ಹಲವು ವರ್ಷಗಳ ಮೇಲೆಯೇ ಆಗಲೊಲ್ಲದೇಕೆ, ತನ್ನ ಉದ್ದೇಶವು ಕೊನೆಗಂಡಿತೆಂದು ತಿಳಿದು ಆತನು ತನ್ನನ್ನು ಕೃತಕೃತ್ಯನೆಂದು ಭಾವಿಸಿದನು. ಪ್ರತಾಪಸಿಂಹನಂಥ ಅಭಿಮಾನಿಯೂ, ಬಲಾಢ್ಯನೂ ಆದ ಶತ್ರುವನ್ನು ಅಕಬರನು ಕಂಡಿದ್ದಿಲ್ಲ. ರಾಣಾನಂಥ ಸ್ವಾತಂತ್ರ್ಯಪ್ರಿಯನಾದ ವೀರನು ಸಮಗ್ರ ಹಿಂದುಸ್ಥಾನದಲ್ಲಿ ಆಗ ಯಾವನೂ ಇದ್ದಿಲ್ಲ. ಇಂಥ ಧೀರಗಂಭೀರ ವೃತ್ತಿಯ ಪ್ರತಾಪನು ದೀನನಾಗಿ ಒಡಂಬಡಿಕೆ ಮಾಡಿಕೊಳ್ಳಬೇಕೆಂದು ತನ್ನನ್ನು ಪ್ರಾರ್ಥಿಸಿ, ತನ್ನ ಸಾರ್ವಭೌಮಾಧಿಕಾರಕ್ಕೆ ಒಳಪಡುವದನ್ನು ನೋಡಿ, ಅಕಬರನಂಥ ಗುಣಗ್ರಾಹಿಯಾದ ಮಹಾಪುರುಷನು ಆನಂದಪಟ್ಟದ್ದೇನಾಶ್ಚರ್ಯವು? ದಿಲ್ಲಿಯಲ್ಲಿ ಆನಂದೋತ್ಸವಗಳು ನಡೆಯುವಂತೆ ಬಾದಶಹನು ಆಜ್ಞಾಪಿಸಿದನು. ಆನಂದ ಸೂಚಕವಾದ ವಾದ್ಯಗಳು ನಾಲ್ಕೂಕಡೆಯಲ್ಲಿ ಬಾರಿಸಹತ್ತಿದವು. ಬಾದಶಹನು ದರ್ಬಾರು ನೆರೆಸಿ ಈ ಆನಂದದ ಸುದ್ದಿಯನ್ನು ಪ್ರಸ್ತಾಪಿಸಿ, ಪ್ರತಾಪನು ವಿನಯದಿಂದ ಬರೆದ ಪತ್ರವನ್ನು ದರ್ಬಾರದಲ್ಲಿ ಓದಹೇಳಿದನು. ಪ್ರತಾಪನು ಒಡಂಬಡಿಕೆಗಾಗಿ ಬಾದಶಹನನ್ನು ಪ್ರಾರ್ಥಿಸಿದ್ದನ್ನು ಕೇಳಿ ಕೆಲವರು ಆನಂದಪಟ್ಟರು, ಕೆಲವರು ಆಶ್ಚರ್ಯಪಟ್ಟರು, ಕೆಲವರು ದುಃಖಪಟ್ಟರು. ದುಃಖಪಡುವವರಲ್ಲಿ ಪೃಥ್ವೀರಾಜ ರಾಠೋಡನು ಮುಖ್ಯನಾಗಿದ್ದನು. ಪೃಥ್ವಿರಾಜನ ಪರಿಚಯವು ಹಿಂದೆಯೊಮ್ಮೆ ವಾಚಕರಿಗೆ ಆಗಿರುವದು.

ಪೃಥ್ವೀರಾಜನು ಮಹಾಶೂರನೂ, ಬುದ್ಧಿಶಾಲಿಯೂ, ಆಗಿನ ಕಾಲದಲ್ಲಿ ಕವಿಗಳಲ್ಲಿ ಒಳ್ಳೇ ಪ್ರಸಿದ್ಧನೂ ಆಗಿದ್ದನು. ಪ್ರತಾಪನ ಮೇಲೆ ಆತನ ಭಕ್ತಿ ಬಹಳ. ಪ್ರತಾಪನ ಧೀರ–ಗಂಭೀರ ವೃತ್ತಿಯನ್ನೂ, ಸ್ವಾತಂತ್ರ್ಯಪ್ರೀತಿಯನ್ನೂ, ಶೌರ್ಯವನ್ನೂ ನೋಡಿ ಪೃಥ್ವೀರಾಜನು ಆನಂದಭರಿತನಾಗಿದ್ದನು. ಆ ತೇಜಸ್ವಿಯ ಒಂದೊಂದು ಅಲೌಕಿಕ ಕೃತಿಗಳನ್ನು ಕೇಳಿ ಆತನು ಒಮ್ಮೊಮ್ಮೆ ಆನಂದದಿಂದ ಕುಣಿಯುತ್ತಿದ್ದನು. ಆತನು ಪ್ರತಾಪಸಿಂಹನನ್ನು ಅವತಾರಿಕನೆಂದು ತಿಳಿದು, ಆತನ ಮೂರ್ತಿಯನ್ನು ತನ್ನ ಹೃದಯ ಮಂದಿರದಲ್ಲಿ ಸ್ಥಾಪಿಸಿ, ಅದನ್ನು ಅಹೋರಾತ್ರ ಪೂಜಿಸುತ್ತಿದ್ದನೆಂದು ಹೇಳಬಹುದು! ಇಂಥವನಿಗೆ ರಾಣಾನ ವಿನಂತಿ ಪತ್ರವನ್ನು ಕೇಳಿ ಹ್ಯಾಗೆ ಸಮಾಧಾನವಾಗಬೇಕು? ಆತನು ಬಾದಶಹನನ್ನು ಕುರಿತು ಮಹಾಧೈರ್ಯದಿಂದ–ಖಾವಿಂದ, ಇದು ಕೇವಲ ಮೋಸವು, ತೀರ ಅಸತ್ಯವು; ಪ್ರತಾಪಸಿಂಹನ ಯಾವನೋ ಒಬ್ಬ ಶತ್ರುವು ಆತನ ನಿರ್ಮಲ ಕೀರ್ತಿಗೆ ಕಲಂಕವುಂಟಾಗುವದಕ್ಕಾಗಿ ಈ ಸುಳ್ಳು ಪತ್ರವನ್ನು ಕಳಿಸಿ ಬಾದಶಹರಿಗೆ ಆಶೆತೋರಿಸಲು ಯತ್ನಿಸಿರುತ್ತಾನೆ; ಆದರೆ ಪ್ರತಾಪಸಿಂಹನಿಗೆ ತಮ್ಮ ದಿಲ್ಲಿಯ ಸಿಂಹಾಸನವು ದೊರೆತರೂ, ಆತನು ಇಂಥ ಪತ್ರವನ್ನು ಬರೆದು ಬಾದಶಹರಿಗೆ ಶರಣುಬರಲಾರನೆಂದು ನಾನು ನಿಶ್ಚಯವಾಗಿ ಹೇಳುತ್ತೇನೆ. ಪ್ರತಾಪಸಿಂಹನನ್ನು ನಾನು ಪೂರಾ ಬಲ್ಲೆನು. ಅಪ್ಪಣೆಯಾದರೆ ನಿಜವಾದ ಸಂಗತಿಯನ್ನು ತಿಳಕೊಂಡು ಬರುವದಕ್ಕಾಗಿ ನಾನು ನನ್ನ ಒಬ್ಬ ನಂಬಿಗೆಯ ಸೇವಕನನ್ನು ಪ್ರತಾಪಸಿಂಹನ ಕಡೆಗೆ ಕಳಿಸುವೆನು. ಖಾವಿಂದರು ನಿಜವಾದ ಸಂಗತಿಯನ್ನು ತಿಳಕೊಂಡ ಮೇಲೆ ಮಾಡತಕ್ಕ ಉತ್ಸವಾದಿಗಳನ್ನು ಮಾಡಬೇಕು, ಎಂದು ಹೇಳಿದನು. ಬಾದಶಹನು ಈ ಮಾತಿಗೆ ಒಪ್ಪಿಕೊಳ್ಳಲು, ಪೃಥ್ವೀರಾಜನು ಒಂದು ಕವಿತಾಬದ್ಧವಾದ ಪತ್ರವನ್ನು ಬರೆದು, ತನ್ನ ಒಬ್ಬ ನಂಬಿಗೆಯ ಸೇವಕನ ಕೈಯಲ್ಲಿ ಕೊಟ್ಟು ಪ್ರತಾಪನ ಕಡೆಗೆ ಕಳಿಸಿದನು. ಶೂರರೂ, ಪರಾಕ್ರಮಿಗಳೂ ಆದ ಪುರುಷರನ್ನು ಪ್ರೋತ್ಸಾಹಿಸುವಂತೆ ಆ ಪತ್ರದ ಅಭಿಪ್ರಾಯವಿದ್ದದ್ದರಿಂದ, ಈವೊತ್ತಿಗೂ ರಜಪೂತರು ಪ್ರೇಮದಿಂದ ಆ ಪದ್ಯಗಳ ಗಾಯನ ಮಾಡುತ್ತಿರುವರು!

ತಪೋಧನನು ಹೇಳಿದ ಎಂಟುದಿವಸಗಳ ಅವಧಿಯು ಮುಗಿದದೆ;

ಮರುದಿನ ರಾಣಾನು ಬೆಳಗಿನಲ್ಲಿ ದರ್ಬಾರು ನೆರೆಸಿ, ತನ್ನ ವೀರ ಪರಿವಾರ ದೊಡನೆ ದಿಲ್ಲಿಯ ಪತ್ರದ ಹಾದಿಯನ್ನು ನೋಡುತ್ತ ಕುಳಿತುಕೊಂಡಿರು ತ್ತಾನೆ; ರಾಣಾನಂತೆ ಆತನ ಪರಿವಾರವಾದರೂ ಒಡಂಬಡಿಕೆಗೆ ಒಪ್ಪಿಕೊಂಡ ದ್ದಕ್ಕಾಗಿ ಪಶ್ಚಾತ್ತಾಪಪಡುತ್ತ ಸುಮ್ಮನೆ ಕುಳಿತುಕೊಂಡಿದೆ. ಅಷ್ಟರಲ್ಲಿ ದಿಲ್ಲಿ ಯಿಂದ ಒಬ್ಬ ಸಾಂಡಣಿಯ ಸವಾರನು ಬಂದಿದ್ದಾನೆಂದು ದ್ವಾರಪಾಲಕನು ಅರಿಕೆಮಾಡಿಕೊಂಡನು. ಪ್ರತಾಪಸಿಂಹನ ಅಪ್ಪಣೆಯಂತೆ ಸವಾರನು ಸಭಾ ಗೃಹವನ್ನು ಪ್ರವೇಶಿಸಿದನು. ಆತನು ಬಿಕಾನೇರದ ಮಾಲದೇವ ರಾಜನ ಕನಿಷ್ಠ ಬಂಧುವಾದ ಪೃಥ್ವೀರಾಜನ ಪತ್ರವನ್ನು ತಂದವನೆಂದು ವಾಚಕರು ತರ್ಕಿಸಿರಬಹುದು. ಪ್ರತಾಪಸಿಂಹನು ಪೃಥ್ವೀರಾಜನ ಆ ಕವಿತಾ ಬದ್ಧ ವಾದ ಪತ್ರವನ್ನು ಒದಿ ಉತ್ಸಾಹಗೊಂಡನು. ಆತನ ಅಪ್ಪಣೆಯಿಂದ ಆ ಪತ್ರದೊಳಗಿನ ಪದ್ಯಗಳು ದರ್ಬಾರದಲ್ಲಿ ಓದಿಸಲ್ಪಟ್ಟವು. ಅವುಗಳ ತಾತ್ಪ ರ್ಯವೇನಂದರೆ—

"ರಾಣಾಪ್ರತಾಪಸಿಂಗಜೀ, ಹಿಂದುಗಳೆನಿಸುವ ನಮ್ಮೆಲ್ಲರ ಆಶಾತಂ ತುವು ತಮ್ಮಂಥ ಪರಾಕ್ರಮಶಾಲಿಗಳಾದ ಹಿಂದೂ ರಾಜಪದಧಾರಿಗಳನ್ನೇ ಅವಲಂಬಿಸಿರುವದು. ಎಷ್ಟೋ ಜನರು ಆ ಆಶಾತಂತುವು ನಿರಾಶೆಯ ರೂಪವನ್ನು ಧರಿಸಿದ್ದರೂ, ಪ್ರತಾಪಸಿಂಹ ರಾಣಾನಿಂದಲೂ ಅದು ನಿರಾಶೆಯ ರೂಪವನ್ನೇ ಧರಿಸುವದು ದುಃಖದ ಸಂಗತಿಯು. ನಾವಂತು ದುರ್ದೈವ ದಿಂದ ನಮ್ಮ ಪರಾಕ್ರಮವನ್ನು ಕಳಕೊಂಡೆವು; ನಮ್ಮ ಹೆಂಡಿರ ಪಾತಿವ್ರತ್ಯವು ನಷ್ಟವಾಗಿ ಹೋಯಿತು. ನಮ್ಮ ಲಜ್ಜೆಯನ್ನೂ, ನಮ್ಮ ಹೆಂಡಿರ ಪಾತಿವ್ರ ತ್ಯವನ್ನೂ ನಾವು ಬಾದಶಹನಿಗೆ ಮಾರಿಕೊಂಡೆವು; ಮತ್ತು ಅಕಬರನು ಅವು ಗಳನ್ನು ಕೊಂಡುಕೊಂಡನು; ಆದರೆ ಉದೇಸಿಂಗ ಪುತ್ರರಾದ ತಾವು ಮಾತ್ರ ರಜಪೂತರ ಆ ಲಜ್ಜೆಯನ್ನೂ, ಸ್ತ್ರೀಯರ ಪಾತಿವ್ರತ್ಯವನ್ನೂ ತಮ್ಮ ಕಾಲ ದಲ್ಲಿ ಕಾಯ್ದುಕೊಂಡಿರುವಿರಿ. ಅದನ್ನು ಹಾಗೇ ನಿರ್ಬಾಧವಾಗಿ ಮುಂದೆ ಯಾದರೂ ಕಾಯ್ದುಕೊಳ್ಳಿರಿ. ರಾಜಾ, ಏನು ಹೇಳಲಿ? ಇಲ್ಲಿ ನಡೆಯು ತ್ತಿರುವ ನೌರೋಜ ಎಂಬ ಉರುಸಿನಲ್ಲಿ ನಿಜವಾದ ಯಾವ ರಜಪೂತನ ಮರ್ಯಾದೆಯು ಉಳಿದಿರುತ್ತದೆ? ಯಾರದೂ ಉಳಿದಿರುವದಿಲ್ಲ. ಆದ್ದ ರಿಂದ ಚಿತೋಡದ ಸುಪ್ರಸಿದ್ಧವೂ, ಪರಮ ಅಭಿಮಾನಶಾಲಿಯೂ ಆದ

ಸಿಸೋದಿಯಾ ಕುಲದ ಮರ್ಯಾದೆಯನ್ನು ಎಲ್ಲರಂತೆ ನೌರೋಜದ ಜಾತ್ರೆಯಲ್ಲಿ ಮಾರುವದಕ್ಕಾಗಿ ತರಬೇಡಿರೆಂದು ನಾನು ಬೇಡಿಕೊಳ್ಳುತ್ತೇನೆ. ರಾಣಾನೆನಿಸುವ ನಾನು ಎಲ್ಲವನ್ನು ಕಳಕೊಂಡು ದರಿದ್ರನಾದೆನೆಂದು ನೀವು ಭಾವಿಸುತ್ತಿರಬಹುದು; ಆದರೆ ಹಾಗೆ ತಿಳಿದುಕೊಳ್ಳಬಾರದು. ತಾವು ಕಳೆದುಕೊಂಡದ್ದನ್ನೆಲ್ಲ ಭದ್ರವಾಗಿ ಕಾಯ್ದುಕೊಂಡಿರುವಿರೆಂತಲೇ ಭಾವಿಸಿರಿ. ನಿರಾಶೆಯು ಕ್ಷತ್ರಿಯ ಕುಲೋದ್ಭವರಾದ ನಮ್ಮನ್ನು ಅನೇಕ ಅಪಮಾನಜನ್ಯ ದುಃಖಗಳಲ್ಲಿ ಸಂಪೂರ್ಣವಾಗಿ ಮುಣುಗಿಸಿ ಬಿಟ್ಟಿರುತ್ತದೆ; ಆದರೆ ಅಂಥ ಅಪಮಾನಜನ್ಯ ದುಃಖಗಳೂ, ಅಪಕೀರ್ತಿಯೂ ಹಮ್ಮೀರ ವಂಶಜರಾದ ತಮ್ಮನ್ನು ಈವೊತ್ತಿಗೆ ಸೋಂಕಿರುವದಿಲ್ಲ! ಆ ಪವಿತ್ರ ವಂಶಜರು ತಮ್ಮ ಮರ್ಯಾದೆಯನ್ನೂ, ಅಭಿಮಾನವನ್ನೂ ಈವೊತ್ತಿಗೂ ಕಾಯ್ದುಕೊಂಡಿರುತ್ತಾರೆಂಬದನ್ನು ತಾವು ನೆನಪಿನಲ್ಲಿಡಬೇಕು. ಯಾವತ್ತು ಜಗತ್ತಿನ ದೃಷ್ಟಿಯು ನಿಮ್ಮ ಕಡೆಗಿರುತ್ತದೆ. ಅತುಲ ಪರಾಕ್ರಮವನ್ನು ತೋರಿಸುವದೂ, ಹಿಂದೂಜನರಮರ್ಯಾದೆಯನ್ನು ರಕ್ಷಿಸುವದೂ ರಾಣಾಪ್ರತಾಪಸಿಂಹರವರಿಂದಲೇ ಆಗುವದೆಂದು ಜನರಿಗೆ ತೋರುತ್ತಿರುವದು. ನಿಮ್ಮ ಕುಲದ, ಹಾಗು ರಾಜವಂಶದ ಅಪಮಾನವು ಈವೊತ್ತಿನವರೆಗೂ ಆಗಿರುವದಿಲ್ಲ; ಮುಂದೆಯಾದರೂ ಅದು ಆಗಬಾರದೆಂದು ನಾವೆಲ್ಲರೂ ಇಚ್ಛಿಸುವೆವು. ನಿಮಗೆ ನಿಮ್ಮ ಸ್ವಾಭಿಮಾನದ ಆತ್ಮದ ಸಹಾಯವೂ, ಜಯಶಾಲಿಯಾದ ಖಡ್ಗದ ಸಹಾಯವೂ ಸಂಪೂರ್ಣವಾಗಿರುತ್ತವೆ. ಅವುಗಳ ಸಹಾಯದಿಂದ ನೀವು ಕ್ಷತ್ರಿಯರ ಬಿರುದನ್ನು ರಕ್ಷಿಸಿರಿ. ನಮ್ಮ ಮರ್ಯಾದೆಯನ್ನೂ, ನಮ್ಮ ಸ್ತ್ರೀಯರ ಪಾತಿವ್ರತ್ಯವನ್ನೂ ಸುಲಿದುಕೊಳ್ಳುವ, ಅಥವಾ ಕೊಂಡುಕೊಳ್ಳುವ ಈ ಮೊಗಲ ಬಾದಶಹನು ಉಚ್ಚಾಸನದಿಂದ ಎಂದಾದರೊಂದುದಿನ ಕೆಳಗೆ ಬಿದ್ದೇ ಬೀಳುವನು. ಆತನ ಈ ಉಚ್ಚಾಸನವೂ, ಉತ್ಕರ್ಷವೂ ಯಾವಾಗಲೂ ಹೀಗೆಯೇ ಅಖಂಡವಾಗಿ ಎಂದೂ ಉಳಿಯಲಾರವು. ಈ ಯಾವತ್ತು ಎಶಸ್ಸಿನ ಸಂಪಾದನವು ಆದರೆ ಪ್ರತಾಪಶಾಲಿಯಾದ ಪ್ರತಾಪಸಿಂಹನಿಂದಲೇ ಆಗುವದೆಂದು ನಾನಂತು ದೃಢವಾಗಿ ನಂಬಿರುವೆನು. ಹೀಗಾದ ಮೇಲೆ ಭ್ರಷ್ಟ ಬೀಜವಾಗಿರುವ ನಮ್ಮ ರಜಪೂತ ಕುಲವು ನಿಮ್ಮ ಬಳಿಗೆ ಬಂದು, ನಿಮ್ಮಿಂದ ನಿಷ್ಕಲಂಕವೂ, ಪವಿತ್ರವೂ ಆಗಿರುವ ಕ್ಷತ್ರಿಯ ಬೀಜವನ್ನು ಸಂಪಾದಿಸಿ, ಅದನ್ನು ತನ್ನ ರಣಗು

ಟ್ಟಿವ ಹಾಳು ರಜಪೂತಸ್ಥಾನದಲ್ಲಿ ಬಿತ್ತಬಹುದು. ರಾಣಾ ಪ್ರತಾಪಸಿಂಹ ಮಹಾರಾಜ, ಈಮೇರೆಗೆ ನಮ್ಮ ಜಾತಿಯು ಪುನಃ ತೇಜಸ್ವಿತೆಯನ್ನು ಹೊಂದಬಹುದು; ಹಾಗು ಮ್ಲೇಂಛರ ಆಡಳಿತವು ಮಣ್ಣುಗೂಡಬಹುದು. ದಿಲ್ಲಿಯ ನಿರ್ಲಜ್ಜವಾದ ಆಳಿಕೆಯಲ್ಲಿ ಏನೂ ಅರ್ಥವಿಲ್ಲ; ಆದ್ದರಿಂದ ನೀವು ಬಾದಶಹನಿಗೆ ಸರ್ವಥಾ ಶರಣು ಬರಲಾಗದು. ನಿಮ್ಮ ಸ್ವಾಭಿಮಾನಕ್ಕೂ ಯಶಸ್ಸಂಪಾದನೆಗೂ ಈಶ್ವರನ ಸಹಾಯವಿರುತ್ತದೆ."

ಪ್ರತಾಪಸಿಂಹನು ಈ ಪತ್ರವನ್ನು ಒಂದುಸಾರೆ, ಎರಡುಸಾರೆ, ಮೂರುಸಾರೆ ಓದಿದನು. ಪೃಥ್ವೀರಾಜನ ವೀರರಸಪ್ರಚುರವಾದ ಕಾವ್ಯದಿಂದ ರಾಣಾನ ಹೃದಯದಲ್ಲಿ ಅಪೂರ್ವವಾದ ಬಲಸಂಚಾರವಾಯಿತು. ಆತನಿಗೆ ಹತ್ತುಸಾವಿರ ಮನುಷ್ಯ ಬಲವು ಬಂದಂತಾಯಿತು. ಆತನ ಮೊದಲಿನ ವಿಚಾರಗಳೆಲ್ಲ ಲುಪ್ತವಾಗಿ, ಆತನಲ್ಲಿ ನವೀನವಾದ ಉತ್ಸಾಹವು ಉತ್ಪನ್ನವಾಯಿತು; ಯಾಕಂದರೆ, ಆತನು ಪೃಥ್ವೀರಾಜನ ಪತ್ರವನ್ನು ಮನಃಪೂರ್ವಕವಾಗಿ ಓದಿವಿಚಾರಮಾಡಲು,ಇಂದಿಗೆ ಗತವೈಭವವೂ, ಹತವೀರ್ಯವೂ ಆಗಿರುವ ರಜಪೂತಕುಲವು, ತನ್ನ ಉನ್ನತಿಯ ಸಲುವಾಗಿ ನನ್ನನ್ನು ನೋಡಿದಹೊರತು ಅನ್ಯ ಮಾರ್ಗವಿಲ್ಲೆಂಬ ಮಾತು ಆತನ ಮನಸ್ಸಿಗೆ ಹೊಳೆಯಿತು. ಇಂಥ ಪ್ರಸಂಗದಲ್ಲಿ ಇಡಿಯ ರಜಪೂತಕುಲದ ನಿರಾಶೆಗೆ ಕಾರಣವಾಗುವದು ಅಶ್ಲಾಘ್ಯವೆಂದು ಆತನು ಭಾವಿಸಿದನು. ಆಗ ಆತನು ಉತ್ತೇಜಿತ ಸ್ವರದಿಂದ ತನ್ನ ವೀರ ಪರಿವಾರವನ್ನು ಕುರಿತು--ಎಲೈ ವೀರರೇ, ನಾಲ್ಕೂಕಡೆಗೆ ಮುಸುಕಿಕೊಂಡಿದ್ದ ಅಪವಿತ್ರತೆಯಲ್ಲಿ ಪ್ರತಾಪಸಿಂಹನು ರಜಪೂತಕುಲದ ಪವಿತ್ರತೆಯನ್ನು ರಕ್ಷಿಸುವನು. ಪ್ರಾಣಧಾರಣ ಮಾಡಿರುವವರೆಗೆ ಪ್ರತಾಪನು ಇದೊಂದೇ ಕಾರ್ಯವನ್ನು ಮಾಡುವನು. ಮೇವಾಡದಲ್ಲಿ ನಮಗೆ ನಿಲ್ಲಲಿಕ್ಕೆ ಸ್ಥಾನವು ದೊರೆಯದಿದ್ದರೆ, ಅದರ ತ್ಯಾಗಮಾಡಿ ಮರಭೂಮಿಯನ್ನು ದಾಟಿಹೋಗಿ ನಾವು ಎರಡನೆಯ ದೇಶದಲ್ಲಿ ಇರೋಣ; ಆದರೆ ಪವಿತ್ರವಾದ ಸಿಸೋದಿಯಾವಂಶಕ್ಕೆ ಕಲಂಕವನ್ನುಂಟುಮಾಡೋಣಬೇಡ, ಎನ್ನಲು, ಎಲ್ಲ ರಜಪೂತ ವೀರರೂ ಸಜೀವಗೊಂಡವರಂತೆ ತೇಜೋವಂತರಾಗಿ ತೋರಹತ್ತಿದರು. ಈ ಮೇರೆಗೆ ಪ್ರತಾಪನೂ, ಆತನ ಪರಿವಾರವೂ ಸತ್ವಸಂಪನ್ನವಾಗಿರಲು, ಸಾತ್ವಿಕೆಯು ತಪೋಧನನ ಕೈಯನ್ನು ಹಿಡಕೊಂಡು

ಪ್ರತಾಪನ ದರ್ಬಾರವನ್ನು ಅಕಸ್ಮಾತ್ತಾಗಿ ಪ್ರವೇಶಿಸಿದಳು. ಅದನ್ನು ನೋಡಿ ದರ್ಬಾರದ ವೀರಮಂಡಲವು ಚಕಿತವಾಯಿತು. ಪ್ರತಾಪನು ಸಿಂಹಾಸನದಿಂ ದಿಳಿದು ಆ ತೇಜೋಮೂರ್ತಿಗಳಾದ ಸಾತ್ವಿಕೆ-ತಪೋಧನರನ್ನು ವಂದಿಸಿ ಕೈ ಜೋಡಿಸಿ ನಿಂತುಕೊಂಡನು. ಆಗ ತಪೋಧನನು ಪ್ರತಾಪನನ್ನು ಕುರಿತು- ಸ್ವಾತಂತ್ರ್ಯರಕ್ಷಣಕ್ಕಾಗಿ ಪುನರ್ಜನ್ಮಹೊಂದಿದ ಪ್ರತಾಪರಾಣಾ, ರಜಪೂತ ಕುಲದ ಪಾವಿತ್ರ್ಯರಕ್ಷಣದ ವಿಷಯವಾಗಿ ನೀನು ಈಗ ಮಾಡಿದ ನಿಶ್ಚಯ ವನ್ನು ನೋಡಿ ನಮಗೆ ಬಹಳ ಸಮಾಧಾನವಾದದ್ದರಿಂದ, ನಿನ್ನನ್ನು ಅಭಿ ನಂದಿಸುವದಕ್ಕಾಗಿ ನಾವಿಬ್ಬರು ಬಂದಿರುತ್ತೇವೆ. ಮಹಾತ್ಮನಾದ ಪುತ್ರಾ, ನಿನ್ನ ತಪಸ್ಸಿದ್ಧಿಯ ಕಾಲವು ಸಮೀಪಿಸಿರುವದರಿಂದ, ತಪಸ್ಸಿನ ಕೊನೆಯ ಭಾಗದಂತೆ ಇರುವ ಸ್ವದೇಶತ್ಯಾಗರೂಪವಾದ ತಪಸ್ಸನ್ನಾಚರಿಸಲಿಕ್ಕೆ ನೀನು ಹಿಂಜರಿಯಬೇಡ. ನೀನೂ ನಿನ್ನ ಈ ವೀರಪರಿವಾರವೂ ರಜಪೂತರ ಸತ್ವ ಸಾರವನ್ನು ಜಗತ್ತಿಗೆ ತೋರಿಸಿ, ನಿಶ್ಚಯವಾಗಿ ಕೀರ್ತಿಶೇಷರಾಗುವಿರಿ! ಪ್ರತಾಪಾ, ನಾನು ದರಿದ್ರನಾದೆನೆಂದು ಹತಾಶನಾಗಬೇಡ. ತಪಸ್ಸಿನಿಂದ ಕಾರ್ಯವಾಗುತ್ತದಲ್ಲದೆ ದುಡ್ಡಿನಿಂದ ಕಾರ್ಯವಾಗುವದಿಲ್ಲೆಂದು ನಾನು ಹಿಂದೆ ಹೇಳಿದ್ದನ್ನು ಯಾವಾಗಲೂ ಸ್ಮರಿಸುತ್ತಲಿರು. ರಾಜ್ಯಪದ, ಐಶ್ವರ್ಯ ಮೊದಲಾದ ಐಹಿಕ ಸುಖಗಳು ತಪಸ್ಸಿನ ಕ್ಷುದ್ರ ಫಲಗಳಾಗಿರುವವು; ಆದ್ದ ರಿಂದ ನೀನು ತಪೋಮಯನಾಗು. ನಿನ್ನ ತಪಸ್ತೇಜವು ಜಗತ್ತಿನಲ್ಲಿ ಸ್ಥಿರ ವಾಗಿ ಉಳಿಯುವದು! ಚಿತೋಡವಂಶದ ಹೊರತು ಉಳಿದ ಯಾವತ್ತು ರಜಪೂತರು ತಪೋಭ್ರಷ್ಟರಾಗಿ ಸತ್ವವನ್ನು ಕಳಕೊಂಡದ್ದರಿಂದ, ಹತವೀ ರ್ಯರೂ, ನಿಸ್ತೇಜರೂ ಆಗಿರುವರೆಂಬದನ್ನು ಪೃಥ್ವೀರಾಜನ ಸುಂದರವಾದ ಪತ್ರದಿಂದ ನೀನು ಅರಿತುಕೊಂಡಿರಬಹುದು. ಗುಣಜ್ಞನಾದ ಶೂರ ಪೃಥ್ವೀ ರಾಜ ಕವಿಯು ತನ್ನ ಪತ್ರದಲ್ಲಿ—"ರಜಪೂತರ ಮರ್ಯಾದೆಯನ್ನೂ, ಅವರ ಸ್ತ್ರೀಯರ ಪಾತಿವ್ರತ್ಯವನ್ನೂ ಅಕಬರನು ಕೊಂಡುಕೊಂಡನು, ಬಲಾತ್ಕಾರ ದಿಂದ ಹರಣಮಾಡಿದನು. ನೌರೋಜದ ಉರುಸಿನಲ್ಲಿ ನಮ್ಮ ಮಾನಮರ್ಯಾ ದೆಗಳು ಮಾರಲ್ಪಟ್ಟವು, ಎಂದು ಬರೆದಿರುವನಲ್ಲ, ಅದನ್ನಿಷ್ಟು ನಿನಗೆ ವಿವರಿಸಿ ಹೇಳುತ್ತೇನೆ ಕೇಳು. ಅಂದರೆ ನೀನು ಬಾದಶಹನಿಗೆ ಶರಣು ಹೋಗಲಿಕ್ಕೆ ಜನ್ಮಜನ್ಮಾಂತರದಲ್ಲಿಯೂ ಇಚ್ಛಿಸಲಿಕ್ಕಿಲ್ಲ!

ಪುತ್ರಾ, ಹಲವು ಸದ್ಗುಣಗಳಿಂದೊಪ್ಪುವ ಅಕಬರ ಬಾದಶಹನಂಥ
ಅಲೌಕಿಕ ಪುರುಷನಲ್ಲಿರುವ ಒಂದು ದುಷ್ಟ ಗುಣವನ್ನು ಹೇಳಲಿಕ್ಕೆ ನನಗೆ
ನಾಚಿಕೆ ಬರುತ್ತದೆ; ಆದರೆ ಈ ಪ್ರಸಂಗದಲ್ಲಿ ಅದನ್ನು ನಿನ್ನ ಮುಂದೆ ಹೇಳು
ವದು ಅವಶ್ಯವಾಗಿರುವದರಿಂದ ಹೇಳುತ್ತೇನೆ ಕೇಳು; ನೌರೋಜವೆಂಬ
ಜಾತ್ರೆಯು ಮೇಷ ಸಂಕ್ರಮಣದಲ್ಲಿ (ಚೈತ್ರಮಾಸದಲ್ಲಿ) ನೆರೆಯುತ್ತಿರುವದು.
ಹಿಂದೂ ಜನರ ಯುಗಾದಿ ಪ್ರತಿಪದೆಯ ದಿವಸ ಈ ಉರುಸಿನ ಆರಂಭವಾಗಿ,
ಒಂಬತ್ತು ದಿವಸ ನಡೆಯುವದು. ಅದರಿಂದಲೇ ಇದಕ್ಕೆ "ನಉರೋಜ"
ಅಥವಾ "ನೌರೋಜ" ಎಂಬ ಹೆಸರು ಬಂದಿರುತ್ತದೆ. ಅಕಬರನು ಹಿಂದೂ
ಸ್ತ್ರೀಯರ ಪಾತಿವ್ರತ್ಯದ ನಾಶಕ್ಕೆ ಕಾರಣವಾಗಿರುವ ಇಂಥ ಉರುಸುಗಳನ್ನು
ಹಲವುಸಾರೆ ಕೂಡಿಸುತ್ತಿದ್ದರೂ, ಅವುಗಳಲ್ಲಿ ಈ ನೌರೋಜದ ಉರುಸು
ಮುಖ್ಯವಾಗಿರುವದರಿಂದ ಅದನ್ನೇ ಪೃಥ್ವೀರಾಜನು ತನ್ನ ಪತ್ರದಲ್ಲಿ ಕಾಣಿಸಿ
ರುವನು. ನೌರೋಜದ ಒಂಬತ್ತನೆಯ ದಿವಸವನ್ನೂ, ಅದರಂತೆ ಮುಖ್ಯ
ಮುಖ್ಯ ಹಬ್ಬಗಳ ನೆವದಿಂದ ಕೂಡಿಸುವ ಉರುಸನ್ನೂ, "ಖುಷ್‌ರೋಜ"
ಅಂದರೆ "ಆನಂದದದಿವಸ" ಎಂದು ಕರೆಯುವರು. ಈ ಖುಷ್‌ರೋಜ
ವೆಂಬ ಹೆಸರಿನ ಜಾತ್ರೆಗೆ ಯಾವತ್ತು ಜಾತಿಯ, ಹಾಗು ಹುದ್ದೆಯ ಜನರ
ಹೆಂಗಸರು ಬರುತ್ತಿರುವರು. ಬಹಳವೇಕೆ, ಬಾದಶಹನ ಪ್ರತ್ಯಕ್ಷ ರಾಣಿಯೂ,
ಆತನ ಎಲ್ಲ ಜನಾನಖಾನೆಯೂ, ಉಳಿದ ಯಾವತ್ತು ಅಧಿಕಾರಸ್ಥರ, ಹಾಗು
ಸರದಾರರ ಹೆಂಡಿರೂ, ಸೊಸೆಯಂದಿರೂ, ಹೆಣ್ಣುಮಕ್ಕಳೂ ಬರುತ್ತಿರುವರು.
ಅಂಥ ಎಲ್ಲ ಹೆಂಗಸರು ಉತ್ಸವಕ್ಕೆ ಬರಲೇಬೇಕೆಂದು ಬಾದಶಹನ ಪ್ರತಿಬಂಧ
ವಿರುವದು! ಈ ಸ್ತ್ರೀಯರ ಹಿಂಡಿನಲ್ಲಿ ವ್ಯಾಪಾರಸ್ಥರ ಹೆಂಡಿರಿದ್ದವರು
ಮಾರಾಟದ ಹಲವು ತರದ ಪದಾರ್ಥಗಳನ್ನು ಮಾರಲಿಕ್ಕೆ ಇಡುತ್ತಿದ್ದರು.
ಅವನ್ನು ಬಾದಶಹನ ಜನಾನಖಾನೆಯೊಳಗಿನ ರಾಣಿಯರೂ, ಬಾದಶಹನ
ಅಂಕಿತರಾದ ರಜಪೂತರಾಜರ, ಹಾಗು ಸರದಾರರ ಹೆಂಡಿರೂ ಕೊಂಡುಕೊ
ಳ್ಳುವದಕ್ಕಾಗಿ ಹೋಗುತ್ತಿರುವರು. ಈ ಖುಷ್‌ರೋಜದ ಉರುಸಿಗೆ ಹೋಗ
ಲಿಕ್ಕೆ ಪುರುಷರಿಗೆ ಪ್ರತಿಬಂಧವಿರುತ್ತಿದ್ದರೂ, ಅಕಬರ ಬಾದಶಹನು ಈ
ಯೋಷಿತೆಯರ ಸಮಾಜವನ್ನು ನೋಡುವದಕ್ಕಾಗಿಯೂ, ಅವರ ಸವಿಯಾದ
ಸಂಭಾಷಣಗಳನ್ನು ಕೇಳುವದಕ್ಕಾಗಿಯೂ ಸ್ತ್ರೀ ವೇಷದಿಂದ ಹೋಗಿ ನಿಷ್ಪ್ರತಿ

ಬಂಧವಾಗಿ ಸಂಚರಿಸುತ್ತಿರುವನು. ಈ ಪ್ರಸಂಗದಲ್ಲಿ ಆತನು ತನ್ನ ಮನಸ್ಸಿಗೆ ಬಂದ ಸ್ತ್ರೀಯರನ್ನು ಉಪಾಯಾಂತರದಿಂದ ಏಕಾಂತ ಸ್ಥಳಕ್ಕೆ ಬರಮಾಡಿಕೊಂಡು, ಅವರ ಪಾತಿವ್ರತ್ಯ ಭಂಗಮಾಡುವನು; ಪುತ್ರೀ, ಬಾದಶಹನ ಈ ನೀಚತನದಕೃತ್ಯವನ್ನು ಮರ್ಯಾದಶೀಲರು ಬಾಯಿಂದ ನುಡಿಯತಕ್ಕದ್ದಲ್ಲ; ಆದರೆ ಪವಿತ್ರ ಸಿಸೋದಿಯಾಕುಲದ ರಾಣಾನನ್ನು ಎಚ್ಚರಗೊಳಿಸುವದಕ್ಕಾಗಿ ನಾಚಿಕೆ ತೊರೆದು ನಾನು ಅದನ್ನು ಬಾಯಿಬಿಟ್ಟು ಆಡುತ್ತಿರುವೆನು. ಹಮ್ಮೀರ ವಂಶೋದ್ಭವನಾದ ರಾಣಾ, ನಿನಗೆ ಇದನ್ನು ಕೇಳಿ ಸಂತಾಪವು ಉತ್ಪನ್ನವಾಗುವದಿಲ್ಲವೆ? ಇಂಥ ಅಧಮ ಕೃತ್ಯದಿಂದ ದೂಷಿತನಾದ ಬಾದಶಹನಿಗೆ ಶರಣುಹೋಗಲಿಕ್ಕೆ ನಿನಗೆ ನಾಚಿಕೆ ಬರುವದಿಲ್ಲವೆ? ಬಾದಶಹನ ಈ ದುಷ್ಕೃತಿಗೆ ನಿನ್ನ ಪವಿತ್ರವಂಶದ ಸ್ತ್ರೀಯರು ಬಲಿಯಾಗದಂತೆ ಮಾಡಲು ಪ್ರಾಣವನ್ನಾದರೂ ಅರ್ಪಿಸುವ ಮನಸ್ಸು ನಿನಗೆ ಆಗುವದಿಲ್ಲವೇ?

ಪುತ್ರೀ, ಅಕಬರ ಬಾದಶಹನ ಮಿತ್ರನೂ, ಇತಿಹಾಸಕಾರನೂ ಆದ ಅಬುಲ್‌ಫಜಲನೆಂಬ ವಿದ್ವಾಂಸನು ಅಕಬರನ ಈ ಹುಳಕನ್ನು ಮುಚ್ಚಲಿಕ್ಕೆ ಯತ್ನಿಸಿಗುವದನ್ನು ನಿನಗೆ ಹೇಳುತ್ತೇನೆ. ಸದ್ಗುಣಸಂಪನ್ನನಾದ ಬಾದಶಹನಂಥ ಅಲೌಕಿಕ ಪುರುಷನ ಪಕ್ಷವನ್ನು, ಆತನ ಆಶ್ರಿತ ವಿದ್ವಾಂಸನು ಕಟ್ಟಿದ್ದೇನೂ ಆಶ್ಚರ್ಯವಲ್ಲ. ಬಾದಶಹನು ರಾಜ್ಯದ ಸತ್ಯಸ್ಥಿತಿಯನ್ನೂ, ಅರಸನ ಸಂಬಂಧದ ಪ್ರಜೆಗಳ ಮತವನ್ನೂ, ಅಧಿಕಾರಿಮಾರ್ಗದ ಕಾರ್ಯಕೌಶಲ್ಯವನ್ನೂ, ಪದಾರ್ಥಗಳ ಭಾವವನ್ನೂ ಅರಿತುಕೊಳ್ಳುವದಕ್ಕಾಗಿ ವೇಷಾಂತರದಿಂದ ಸ್ತ್ರೀಯರ ಸಮೂಹದಲ್ಲಿ ಬಾದಶಹನು ಹೋಗುತ್ತಿದ್ದನೆಂದು ಅಬುಲ್‌ಫಜಲನು ಬರೆದಿರುತ್ತಾನೆ; ಆದರೆ ಈ ಸಂಗತಿಗಳ ಸತ್ಯಸ್ವರೂಪವನ್ನು ತಿಳಿಯಲಿಕ್ಕೆ ವಿಷಯಾಸಕ್ತ ಪ್ರಮದೆಯರ ಹಿಂಡು ಅನುಕೂಲವಲ್ಲೆಂದು ಯಾರಾದರೂ ಹೇಳಬಹುದು. ಇದಲ್ಲದೆ ಪರಸ್ತ್ರೀಯರ ಹಿಂಡಿನಲ್ಲಿ ಬಾದಶಹನಿಗೆ ಹೋಗಲಿಕ್ಕೆ ಏನು ಅಧಿಕಾರವಿರುವದು? ಹರಹರ! ಮುನಿಗಳ ಮನಸ್ಸನ್ನು ಹುರಪಳಿಸಿಬಿಡುವ, ಪರಮಹಂಸಯತಿಗಳ ವೃತ್ತಿಯನ್ನು ವಿಕೃತವಾಗಿ ಮಾಡುವ, ಇಂದ್ರಿಯ ನಿಗ್ರಹದ ಪುರುಷರನ್ನು ಭ್ರಷ್ಟಗೊಳಿಸುವ ಜಗನ್ಮೋಹಿನಿಯರ ಹಿಂಡಿನಲ್ಲಿ ಬಾದಶಹನ ಮನಸ್ಸು ಚಂಚಲವಾಗದಿರ

ಬಹುದೋ? ನೀಲಿ, ಕೆಂಪು, ಬಿಳಿದು, ಹಳದಿ ಮೊದಲಾದ ಬಗೆಬಗೆಯ ಬಣ್ಣದ ಬೆಲೆಯುಳ್ಳ ಸೂಕ್ಷ್ಮ ವಸ್ತ್ರಗಳನ್ನುಟ್ಟುಕೊಂಡು, ಬಗೆಬಗೆಯ ಅಲಂಕಾರಗಳಿಂದ ಅಲಂಕೃತರಾಗಿ, ಮಹಾಧೀರವಾದ ಮಂದಗಮನದಿಂದ ರಜಪೂತ ಸ್ತ್ರೀಯರು ಅಲ್ಲಿ ಇತ್ತಿಂದತ್ತ ಸಂಚರಿಸುತ್ತಿರುವರು. ಅವರ ಸೂಕ್ಷ್ಮವಾದ ಪಾರದರ್ಶಕ ವಸ್ತ್ರಗಳೊಳಗಿಂದ ಅವರ ದೇಹಕಾಂತಿಯು ವ್ಯಕ್ತವಾಗುತ್ತಿರುವದು. ಅವರು ಮೈಗೆ ಹಚ್ಚಿಕೊಂಡಿದ್ದ ಸುಗಂಧ ದ್ರವ್ಯಗಳ ಮಿಶ್ರಗಂಧವು ಸುತ್ತುಮುತ್ತು ಇಡಿಗಿರುವದು. ಇಂಥ ಸ್ಥಿತಿಯಲ್ಲಿ ಸುವಾಸಿಕತಾಂಬೂಲಸೇವನದಿಂದ ಕೆಂಪಾದ ಸುಂದರಿಯರ ಕೆಳದುಟಿಯೂ, ಸುಗಂಧ ಪುಷ್ಪಗಳಿಂದ ಅಲಂಕೃತವಾಗಿದ್ದ ಅವರ ಮನೋಹರ ಕೇಶಕಲಾಪವೂ, ಉನ್ನತವಾದ ವಕ್ಷಸ್ಥಲವೂ, ಚಂಚಲ ಕಟಾಕ್ಷವೂ, ದಿವ್ಯವಾದ ಮುಖಕಾಂತಿಯೂ ಬಾದಶಹನ ಚಿತ್ತವನ್ನು ವಿಕಾರಗೊಳಿಸುತ್ತಿರಲಿಕ್ಕಿಲ್ಲವೆ? ಹ್ಯಾಗೆ ಇರಲಿ, ನಿನ್ನ ಮನೆತನದ ಹೆಣ್ಣುಮಗಳಾದ ಜೋಧಬಾಯಿಯೆಂಬ ಪತಿವ್ರತೆಯ ಉಜ್ವಲ ತೇಜವು ಬಾದಶಹನನ್ನು ಗದಗುಟ್ಟಿ ಹ್ಯಾಗೆ ನಡುಗಿಸಿತೆಂಬದನ್ನು ಹೇಳಿ, ಬಾದಶಹನ ಮೋಸದ ಈ ವರ್ಣನವನ್ನು ಮುಗಿಸುವೆನು.

ಪುತ್ರಾ, ನಿನ್ನ ತಮ್ಮನ ಮಗಳಾದ ಜೋಧಬಾಯಿಯು, ಈಗ ಪ್ರಖ್ಯಾತಿ ಬರೆದಿರುವ ಪೃಥ್ವೀರಾಜನೆಂಬ ವೀರನ ಹೆಂಡತಿಯೆಂಬದನ್ನು ನೀನು ಬಲ್ಲೆಯಷ್ಟೆ? ಆಕೆಯು ಉಳಿದ ರಜಪೂತ ಸ್ತ್ರೀಯರೊಡನೆ ಖುಷ್‌ರೋಜದ ಜಾತ್ರೆಗೆ ಹೋಗಿದ್ದಳು. ತನಗೆ ಅಂಕಿತರಾದ ರಜಪೂತ ಅರಸರ, ಹಾಗು ಸರದಾರರ ಹೆಂಡಿರು ಖುಷ್‌ರೋಜದ ಉತ್ಸವಕ್ಕೆ ಬರಲೇಬೇಕೆಂದು ಬಾದಶಹನ ನಿರ್ಬಂಧವಿದ್ದದ್ದರಿಂದ ಜೋಧಬಾಯಿಯು ನಿರ್ವಾಹವಿಲ್ಲದೆ ಉತ್ಸವಕ್ಕೆ ಬರಬೇಕಾಗುತ್ತಿತ್ತು. ಜೋಧಬಾಯಿಯು ಲಾವಣ್ಯವತಿಯಿದ್ದದ್ದರಿಂದ ಆಕೆಯ ಮೇಲೆ ಬಾದಶಹನು ಕಣ್ಣು ಇಟ್ಟಿದ್ದನು. ಅನೇಕ ರಜಪೂತ ಸ್ತ್ರೀಯರೂ, ಕನ್ಯೆಯರೂ ಆಗಾಗ್ಗೆ ಖುಷ್‌ರೋಜದ ಜಾತ್ರೆಯಲ್ಲಿ ಬಾದಶಹನ ದುಷ್ಟ ಕಾಮವಾಸನೆಯನ್ನು ಪೂರ್ಣಮಾಡುತ್ತ ಬಂದದ್ದರಿಂದ, ಅದರ ಮದವು ಬಾದಶಹನ ತಲೆಗೇರಿ ಆತನು ವಿವೇಕಭ್ರಷ್ಟನಾಗಿ ಮನಬಂದಂತೆ ಆಚರಿಸುತ್ತಿದ್ದನು. ಈವೊತ್ತಿನವರೆಗೆ ಸಿಸೋದಿಯಾ ಕುಲದ ಹೆಣ್ಣುಮಕ್ಕಳು ಮೊಗಲರ ಬಲೆಗೆ ಬೀಳದ್ದರಿಂದ, ಅವರನ್ನು ಎಲ್ಲರ ಡಾವಣಿಯಲ್ಲಿ

ಕಟ್ಟುವ ಮಹತ್ವಾಕಾಂಕ್ಷೆಯನ್ನು ಬಾದಶಹನು ಹಿಡಿದು, ಅಂಥ ಪ್ರಸಂಗವು ಯಾವಾಗ ಬಂದೀತೆಂದು ಎದುರು ನೋಡುತ್ತಿದ್ದನು. ಹೀಗಿರುವಾಗ ಜೋಧ ಬಾಯಿಯು ಎಲ್ಲ ಸ್ತ್ರೀಯರೊಡನೆ ನಿರ್ವಾಹವಿಲ್ಲದೆ ಜಾತ್ರೆಯಲ್ಲಿ ತಿರುಗಾಡಿ ಮನೆಗೆ ಹೋಗುವದಕ್ಕಾಗಿ ಹೊರಟಳು. ಬಾದಶಹನು ಆಕೆಯ ಮೇಣೆ ಹೊರುವ ಬೋವಿಗಳನ್ನು ಬುದ್ಧಿಪೂರ್ವಕವಾಗಿ ಹೊರಗೆ ಹಾಕಿಸಿ ಆಕೆಯ ಪ್ರಯಾಣಕ್ಕೆ ಪ್ರತಿಬಂಧ ಮಾಡಿದನು. ಹೊತ್ತಾದದ್ದರಿಂದ ಯಾವತ್ತು ಸ್ತ್ರೀಯರು ತಮ್ಮ ತಮ್ಮ ಮನೆಗಳ ಹಾದಿಯ ಹಿಡಿದರು. ಈ ಲಕ್ಷಣವನ್ನು ಪತಿವ್ರತೆಯಾದ ಜೋಧಬಾಯಿಯು ತಿಳಿದು ಬೆದರಿದಳು. ಹೊತ್ತು ಮುಣುಗಿ ಕತ್ತಲಾಗಹತ್ತಿತು. ಅಂಗಡಿ ಹೂಡಿದ ಹೆಣ್ಣುಮಕ್ಕಳೆಲ್ಲ ಮನೆಗೆ ಹೋದರು. ಜೋಧಬಾಯಿಯ ಹೃದಯವು ಕಂಪಿಸಹತ್ತಿತು. ಅಪಮಾನ, ಕೋಪ, ಕುಶಂಕೆ ಮೊದಲಾದವುಗಳ ಯೋಗದಿಂದ ಆಕೆಯು ಕಣ್ಣೀರು ಸುರಿಸಹತ್ತಿ ದಳು. ಆ ಸಾಧ್ವಿಯು ಮನಸ್ಸಿನಲ್ಲಿ ಪತಿಯನ್ನು ಕುರಿತು—ಪ್ರಾಣನಾಥರೇ, ಇಂದು ನನ್ನ ಮನಸ್ಸು ಇಷ್ಟು ಯಾಕೆ ಬೆದರುತ್ತಿರುವದು? ನಾನು ತಮ್ಮ ಚರಣಸೇವೆಯಲ್ಲಿ ಏನಾದರೂ ತಪ್ಪಿರುವೆನೇ? ಅವ್ವಯ್ಯಾ! ಇದೇನು, ಒಮ್ಮಿಂದೊಮ್ಮೆ ನನ್ನ ಬಲಗಣ್ಣು ಹಾರಹತ್ತಿತಲ್ಲ! ನಾಥ! ನೀವು ನನ್ನ ಪ್ರಾಣಾಧಾರವು. ಎಂಥ ಸಂಕಟಗಳೊದಗಿದರೂ ತಮ್ಮ ಸ್ಮರಣದಿಂದ ಅವು ದೂರವಾಗಲೇಬೇಕು. ಹೀಗಿದ್ದು ನನ್ನ ದಾಸಿಯು ಮೇಣೆಯನ್ನು ತಕ್ಕೊಂಡು ಇನ್ನೂ ಬರಲಿಲ್ಲವಲ್ಲ! ಜಗನ್ಮಾತೇ, ಭವಾನೀ, ನೀನೇ ನನ್ನ ಮರ್ಯಾದೆಯನ್ನು ಕಾಯಬೇಕು! ನಿನ್ನ ಹೊರತು ನನಗೆ ಈಗ ಬೇರೆ ಆಧಾರವಿಲ್ಲ, ಎಂದು ಬೇಡಿಕೊಳ್ಳುತ್ತಿರಲು, ಶಸ್ತ್ರಗಳನ್ನು ಮಾರುವ ಒಬ್ಬ ಸ್ತ್ರೀಯು ಜೋಧಬಾಯಿಯ ಬಳಿಗೆ ಬಂದಳು. ಆಕೆಯನ್ನು ನೋಡಿ ಜೋಧ ಬಾಯಿಗೆ ಬಹಳ ಸಮಾಧಾನವಾಯಿತು. ಶಸ್ತ್ರಹೀನಳಾಗಿ ಬಂದಿದ್ದ ಆ ಪತಿ ವ್ರತೆಯು ಆ ಸ್ತ್ರೀಯ ಬಳಿಯಲ್ಲಿ ತೀಕ್ಷ್ಣಧಾರೆಯ ಒಂದು ಕಠಾರಿಯನ್ನು ಕೊಂಡು ಕೊಂಡಳು. ಎಂಟು ಆಣೆಯ ಬೆಲೆಯ ಕಠಾರಿಗೆ ಒಂದು ಮೋಹರು ಕೊಟ್ಟದ್ದನ್ನು ನೋಡಿ, ಆ ಬಡ ಸ್ತ್ರೀಯು—ಅವ್ವನವರೇ, ನೀವು ಸಾಕ್ಷಾತ್ ಅನ್ನಪೂರ್ಣಾ ದೇವಿಯ ಅವತಾರವಿರುತ್ತೀರಿ! ಪರಮೇಶ್ವರನು ಯಾವಾ ಗಲೂ ನಿಮ್ಮ ಕಲ್ಯಾಣವನ್ನು ಮಾಡುವನು. ಇದು ನನ್ನ ಪೂರ್ಣಾಶೀರ್ವಾ

ದವು, ಎಂದು ಹರಿಸಿ ಜೋಧಬಾಯಿಯನ್ನು ನಮಿಸಿ ಹೊರಟು ಹೋದಳು. ಅಷ್ಟರಲ್ಲಿ ಜೋಧಬಾಯಿಯ ಬಳಿಗೆ ಅಪರಿಚಿತಜನರು ಮೇಣೆಯನ್ನು ತಂದು ನಿಲ್ಲಿಸಿಲು, ಆಕೆಯು ಮಹಾಧೈರ್ಯದಿಂದ ಅದನ್ನು ಹತ್ತಿದಳು. ಆಕೆಯು ಮನಸ್ಸಿನಲ್ಲಿ—ಇನ್ನು ಹೆದರುವದೇಕೆ? ಭವಾನೀ ಮಾತೆಯೇ ಈ ಕಠಾರಿಯನ್ನು ನನಗೆ ಕೊಟ್ಟು ಹೋಗಿರುವಳು. ಇದೇ ನನ್ನ ಪಾತಿವ್ರತ್ಯವನ್ನು ರಕ್ಷಿಸುವದು! ಶಸ್ತ್ರವಾಗಲಿ, ಅಸ್ತ್ರವಾಗಲಿ ಬಳಿಯಲ್ಲಿದ್ದ ಬಳಿಕ, ರಜಪೂತ ಸ್ತ್ರೀಯು ಹೆದರುವದೇಕೆ? ಮಾತೇ, ಭವಾನೀ, ಶಸ್ತ್ರಮಾರುವವಳ ರೂಪದಿಂದ ನೀನು ದರ್ಶನಕೊಟ್ಟಾಗ, ಮೂಢಳಾದ ನಾನು ನಿನ್ನ ಗುರುತು ಹಿಡಿಯಲಿಲ್ಲ. ಭವಾನಿಯೇ, ಇಂದು ನಿನ್ನ ಕೃಪೆಯಿಂದಲೇ ಸಂಕಟದ ನಿವಾರಣವಾಗುವದು!

ಈ ಮೇರೆಗೆ ಜೋಧಬಾಯಿಯು ಮನಸ್ಸಿನಲ್ಲಿ ದೇವಿಗೆ ಶರಣು ಹೋಗುತ್ತಿರಲು, ಆಕೆಯ ಮೇಣೆಯು ಒಂದು ವಿಲಾಸಮಂದಿರದಲ್ಲಿ ಇಳಿಸಲ್ಪಟ್ಟಿತು. ಬೋವಿಗಳು ಹೊರಟು ಹೋದರು. ಮೇಣೆಯಲ್ಲಿ ಜೋಧಬಾಯಿಯು ಆತ್ಮಹತ್ಯ ಮಾಡಿಕೊಳ್ಳಬೇಕೆಂದು ಮಾಡಿದ್ದಳು; ಆದರೆ ಅದರಿಂದ ಪತಿಗೆ ಬಹಳ ದುಃಖವಾಗುವದರಿಂದ ಹಾಗೆ ಮಾಡುವದು ಪತಿವ್ರತೆಯರ ಧರ್ಮವಲ್ಲೆಂದು ತಿಳಿದು, ಆಕೆಯು ಅದರ ಗೊಡವಿಗೆ ಹೋಗಲಿಲ್ಲ. ಆಕೆಯು ಧೈರ್ಯದಿಂದ ಮೇಣೆಯಿಂದ ಹೊರಗೆ ಬರಲು, ಅಕಬರ ಬಾದಶಹನು ಆಕೆಯ ಎದುರಿಗೆ ನಿಂತುಕೊಂಡನು. ಆತನನ್ನು ನೋಡಿದಕೂಡಲೆ ಜೋಧಬಾಯಿಯ ಕಣ್ಣುಗಳು ಕೆಂಡದಂತಾದವು. ಕೆಳದುಟಿಯು ನಡಗಹತ್ತಿತು. ಆಕೆಯು ಬಾದಶಹನನ್ನು ಕುರಿತು—ಹಿಂದಕ್ಕೆ ಸರಿ, ಎಲೈ ನರರಾಕ್ಷಸನೇ ಹಿಂದಕ್ಕೆ ಸರಿ, ಎಂದು ಗರ್ಜಿಸಲು, ಕಾಮವಿಕಾರದಿಂದ ಪಶುತ್ವವನ್ನು ಹೊಂದಿದ್ದ ಆ ಅಲೌಕಿಕ ಪುರುಷನು ಆಕೆಯ ಎದುರಿಗೆ ಮೊಣಕಾಲೂರಿ ಕುಳಿತು, ಕೈ ಜೋಡಿಸಿ ವಿನಯದಿಂದ—ಸುಂದರೀ, ಇನ್ನು ನನ್ನ ಅಳವು ನೋಡಬೇಡ. ನಾನು ನಿನ್ನ ರೂಪವನ್ನು ನೋಡಿ ಮೂಢನಾಗಿದ್ದೇನೆ. ನಿನ್ನ ವಿಯೋಗವಹ್ನಿಯಿಂದ ನನ್ನ ಶರೀರವು ದಗ್ಧವಾಗುತ್ತಿರುವದು; ಆದ್ದರಿಂದ ಪ್ರಾಣೇಶ್ವರೀ, ನಿನ್ನ ಸ್ನೇಹಜಲದಿಂದ ಆ ವಹ್ನಿಯನ್ನು ಶಾಂತಗೊಳಿಸು. ಸಾರ್ವಭೌಮನಾದ ದಿಲ್ಲೀಶ್ವರನು ನಿನ್ನನ್ನು ಕೈ ಜೋಡಿಸಿ

ಬೇಡಿಕೊಳ್ಳುತ್ತಿರುವನು, ಎಂಬ ದುರ್ಭಾಷಣಗಳು ಬಾದಶಹನ ಮುಖ ದಿಂದ ಹೊರಡುತ್ತಿರಲು, ಜೋಧಬಾಯಿಯ ಜಾಜ್ವಲ್ಯವಾದ ಮುಖಕಾಂತಿ ಯಲ್ಲಿ ದೀಪದ ಪ್ರಕಾಶವು ಮಂದವಾಯಿತು. ಅಕಬರನಿಂದ ಆ ಕಾಂತಿ ಯನ್ನು ನೋಡುವದಾಗಲೊಲ್ಲದು. ಆ ವಿಲಾಸ ಗೃಹವೂ, ಅದರೊಳಗಿನ ಭೋಗ್ಯವಸ್ತುಗಳೂ, ಬಾದಶಹನೂ ಅತ್ಯಂತ ಮಲೀನವಾಗಿ ತೋರಹತ್ತಿ ದರು! ಒಮ್ಮೆಂದೊಮ್ಮೆ ದೀಪಗಳ ಜ್ವಾಲೆಗಳು ಕಂಪಿಸಹತ್ತಿದವು. ಸಾಧ್ವಿ ಯಾದ ಜೋಧಬಾಯಿಯು ಸಿಂಹವಾಹಿನಿಯಾದ ದೇವಿಯ ರೂಪವನ್ನು ಧರಿಸಿದಳು! ಆಕೆಯು ಬಚ್ಚಿಟ್ಟಿದ್ದ ಕಠಾರಿಯನ್ನು ಕೈಯಲ್ಲಿ ಹಿಡಿದು ಪಾಷಾಣ ಮೂರ್ತಿಯಂತೆ ಸ್ಥಿತ ಮುದ್ರೆಯಿಂದ ಬಾದಶಹನ ಎದುರಿಗೆ ನಿಂತುಬಿಟ್ಟಳು! ಹೀಗೆ ತನ್ನ ಮುಂದೆ ನಿಂತಿರುವ ಆ ಭೈರವ ರುದ್ರಮೂರ್ತಿ ಯನ್ನು ನೋಡಿ ಅಕಬರನು ಗಡಗಡನೆ ನಡುಗಿದನು. ಆತನ ಕಾಮವಾಸ ನೆಯು ಅಳಿದು ಹೋಗಿ, ಅದರ ಸ್ಥಳದಲ್ಲಿ ಭಯ-ಭಕ್ತಿಗಳ ಉತ್ಪತ್ತಿಯಾ ಯಿತು! ಆ ಸಿಂಹವಾಹಿನಿಯ ಮೂರ್ತಿಯು ಕೋಪಸಂತಪ್ತವಾಗಿ ಬಾದಶ ಹನನ್ನು ಕುರಿತು—ಪಾಪಿಯೇ, ಇಂದಿನಿಂದ ಪರನಾರಿಯರ ವಿಷಯದ ಪಾಪವಾಸನೆಯನ್ನು ಬಿಡುವೆನೆಂತಲೂ, ಯಾವ ಸ್ತ್ರೀಯರ ಪಾತಿವ್ರತ್ಯ ವನ್ನೂ ಕೆಡಿಸುವದಿಲ್ಲೆಂತಲೂ ಆಣೆಮಾಡಿದರೆ, ಪ್ರಾಣದಿಂದ ಉಳಿಯುವೆ; ಇಲ್ಲದಿದ್ದರೆ ಈ ಕಠಾರಿಯಿಂದ ನಿನ್ನ ಹೃದಯವನ್ನು ಸೀಳಿ ಪ್ರಾಣಹರಣ ಮಾಡುವೆನು. ದುಷ್ಟ ಬಾದಶಹನೇ, ಈ ಕಠಾರಿಯ ಧಾರೆಯ ಮೇಲೆ ನಿನ್ನ ಸಾರ್ವಭೌಮಾಧಿಕಾರವು ಈಗ ಜೋಲಿ ಹೊಡೆಯುತ್ತಿರುವದೆಂಬದನ್ನು ಚನ್ನಾಗಿ ನೆನಪಿನಲ್ಲಿಡು, ಎಂದು ಗರ್ಜಿಸಿದಳು. ಧರ್ಮದ ಪ್ರಬಲ ಪ್ರತಾಪದ ಮುಂದೆ ಅಧರ್ಮವು ಹ್ಯಾಗೆ ನಿಲ್ಲಬೇಕು? ಕೂಡಲೆ ಅಕಬರನ ಹೃದಯವು ಕರಗಿ ಆತನು—"ಮಾತೆಯೇ! ಮಾತೆಯೇ, ಎಂದು ಆ ಪತಿವ್ರತೆಯ ಚರಣ ಗಳ ಮೇಲೆ ಮಸ್ತಕವನ್ನಿಟ್ಟು ಆಕೆ ಹೇಳಿದಂತೆ ಪ್ರತಿಜ್ಞೆ ಮಾಡಿ, ಪ್ರಾಣ ಸಂಕಟದಿಂದ ಪಾರಾದನು! ಜೋಧಬಾಯಿಯು ನಿಷ್ಕಲಂಕಳಾಗಿ ಪತಿಯ ಬಳಿಗೆ ಬಂದಳು! ಪುತ್ರೂ, ಇಂಥ ಮಹಾ ಸತಿಯನ್ನು ಭಾಟರೂ, ಚಾರ ಣರೂ, ಕವಿಗಳೂ, ಇತಿಹಾಸಕಾರರೂ ರಾಜರಾಜೇಶ್ವರಿಯೆಂತಲೂ, ಆರ್ಯ ಕುಲ ಲಕ್ಷ್ಮಿಯೆಂತಲೂ, ಸಾಕ್ಷಾತ್ ದೇವಿಯ ಅವತಾರವೆಂತಲೂ ಸ್ತುತಿಸಿ,

ಆಕೆಯ ಅಖಂಡ ಯಶಸ್ಸನ್ನು ವರ್ಣಿಸಿದ್ದರಲ್ಲಿ ಆಶ್ಚರ್ಯವೇನು? ಸಿಸೋದಿಯಾ ವಂಶದ ಸ್ತ್ರೀಯರ ಪಾತಿವ್ರತ್ಯವನ್ನು ರಕ್ಷಿಸುವದಕ್ಕಾಗಿ ಮೇವಾಡದ ಉಗ್ರಸ್ವರೂಪಿಯಾದ ಮಾತೃದೇವತೆಯು, ವ್ಯಾಘ್ರಾರೂಢಳಾಗಿ ಕೈಯಲ್ಲಿ ಶಸ್ತ್ರವನ್ನು ಹಿಡಕೊಂಡು ಸಿದ್ಧಳಾಗಿರಲು, ಆ ವೀರಯೋಷಿತೆಯರ ಪಾತಿವತ್ಯವ ಭಂಗಮಾಡಲಿಕ್ಕೆ ಯಾರು ಸಮರ್ಥರಾದಾರು? ರಾಣಾ, ವಿಚಾರ ಮಾಡು. ದೇವತೆಗಳು ಕೂಡ ನಿನ್ನ ಮನೆತನದ ಗೌರವವನ್ನು ಕಾಯುವದಕ್ಕಾಗಿ ಸಿದ್ಧರಾಗಿರಲು, ನನ್ನ ಮಾತನ್ನು ನಿರಾಕರಿಸದೆ ತಪಸ್ಸನ್ನಾಚರಿಸು. ಫಲಪ್ರಾಪ್ತಿಯ ಕಾಲವು ಸಮೀಪಿಸಿರಲು, ತಪೋಭಂಗದ ದೋಷದಿಂದ ನಿನ್ನ ಚರಿತ್ರವನ್ನು ಕಲಂಕಿತವಾಗಿ ಮಾಡಬೇಡ. ನಿನ್ನ ಪವಿತ್ರಮನೆತನದ ಪ್ರಭಾವವೇ ಹಾಗಿರುವದು. ಪೃಥ್ವೀರಾಜನ ಹೆಂಡತಿಯು ತನ್ನ ಪಾತಿವ್ರತ್ಯವನ್ನು ಕಾಯ್ದುಕೊಂಡು ಅಕಬರನಿಗೆ ಚನ್ನಾಗಿ ಕೈತೋರಿಸಿ ಪಾರಾಗಿ ಬಂದಂತೆ, ಪೃಥ್ವೀರಾಜನ ಅಣ್ಣನಾದ ರಾಯಸಿಂಗನ ಹೆಂಡತಿಯು ಪಾರಾಗಿ ಬರಲಿಲ್ಲ. ಆಕೆಯು ಒಂದು ದಿನ ಖುಷ್‌ರೋಜದ ಜಾತ್ರೆಗೆ ಹೋದಾಗ ಬಾದಶಹನು ಆಕೆಯ ಪಾತಿವ್ರತ್ಯದ ಭಂಗಮಾಡಿ, ಆಕೆಯನ್ನು ಅಮೂಲ್ಯ ವಸ್ತ್ರಾಭರಣಗಳಿಂದ ಅಲಂಕರಿಸಿ ಕಳಿಸಿದನು! ಹರಹರ! ಪುತ್ರಾ, ಹೀಗೆ ಎಷ್ಟು ರಜಪೂತ ಸ್ತ್ರೀಯರ ಪಾತಿವ್ರತ್ಯ ಭಂಗವಾಯಿತೆಂಬದನ್ನು ನಾನೇನು ಹೇಳಲಿ? ಈ ನೌರೋಜದ ಉರುಸಿನ ಉಲ್ಲೇಖವನ್ನು ಪೃಥ್ವೀರಾಜನು ತನ್ನ ಪತ್ರದಲ್ಲಿ ಮಾಡಿದ್ದನ್ನು ನೆನಪಿಗೆ ತಂದುಕೊಂಡರೆ, ಒಡಂಬಡಿಕೆಗೆ ನಿನ್ನ ಮನಸ್ಸು ಹೇಸದೆಯಿರಲಿಕ್ಕಿಲ್ಲ. ಭೋಗಿಸುವಕಾಲಕ್ಕೆ ರಾಜ್ಯಭೋಗವನ್ನು ಭೋಗಿಸದ ನೀನು, ಉತ್ತರವಯಸ್ಸಿನಲ್ಲಿ ಬಹುಜನ ರಜಪೂತ ವೀರರನ್ನು ರಣಭೂಮಿಗೆ ಬಲಿಕೊಟ್ಟಬಳಿಕ ನೀನು ಸುಖವನ್ನು ಬಯಸಬಹುದೇ? ಪುತ್ರಾ, ಬಹಳ ಮಾತುಗಳಿಂದೇನು? ಈ ಜಗತ್ತಿನಲ್ಲಿ ಮನುಷ್ಯಜೀವನವೂ, ಧನವೂ, ಯೌವನವೂ ಅಸ್ಥಿರವಿದ್ದು, ಧರ್ಮ-ಕೀರ್ತಿಗಳೆರಡು ಮಾತ್ರ ಸ್ಥಿರವಾಗಿರುತ್ತವೆಂಬ ಮಾತನ್ನು ಮತ್ತೂ ಮತ್ತೂ ಹೇಳಿ ನಾನು ಸುಮ್ಮನಾಗುವೆನು!

೧೭ ನೆಯ ಪ್ರಕರಣ

# ಪುನರ್ಘಟನೆ.

ಈ ಮೇರೆಗೆ ತಪೋಧನನು ಪ್ರತಾಪನನ್ನು ಬೋಧಿಸಿ ಸಾತ್ವಿಕೆಯೊಡನೆ ಅದೃಶ್ಯವಾದನು. ಆತನ ಬೋಧದಿಂದ ಪ್ರತಾಪನು ದೃಢಮನಸ್ಕನಾಗಿ ಮೇವಾಡದ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಲು ನಿಶ್ಚಯಿಸಿದನು. ದರ್ಬಾರದೊಳಗಿನ ವೀರರಾದರೂ ಏಕಸಮಯಾವಚ್ಛೇದದಿಂದ ಹಾಗೆಯೇ ನಿಶ್ಚಯಿಸಿದರು. ಕೆಲಹೊತ್ತಿನವರೆಗೆ ದರ್ಬಾರದಲ್ಲಿ ಸ್ತಬ್ಧತೆಯು ನೆಲೆಗೊಂಡಿತ್ತು. ಪ್ರತಿ ಒಬ್ಬನು ಮುಂದೆ ಏನು ಮಾಡಬೇಕೆಂಬ ವಿಚಾರದಲ್ಲಿ ಮಗ್ನನಾದನು. ಆಗ ಪ್ರತಾಪನು ಸಭೆಯವರನ್ನುದ್ದೇಶಿಸಿ—ವೀರರೇ, ಹುಟ್ಟಿದವನು ಎಂದಾದರೊಂದುದಿನ ಸಾಯಬೇಕಲ್ಲವೆ? ಇಡಿಯ ಭರತಖಂಡವು ನಿಮ್ಮ ಸಾಹಸವನ್ನು ನೋಡಿ ಬೆರಗಾಗಿ, ಮದೋನ್ಮತ್ತರಾದ ಮೊಗಲರ ಮದವು ನಿಮ್ಮಿಂದಲೇ ಇಳಿದರೆ ಇಳಿಯಬೇಕೆಂದು ಎದುರು ನೋಡುತ್ತಿರಲು, ನಾವು ಹೇಡಿಗಳಂತೆ ವೈರಿಗಳಿಗೆ ಶರಣುಹೋಗುವದು ಹ್ಯಾಗೆ ಯೋಗ್ಯವಾಗಬಹುದು? ಶತ್ರುಗಳು ಮೇವಾಡವನ್ನು ಕಸಿದುಕೊಂಡರೇನಾಯಿತು, ಅವರು ನಮ್ಮ ಕೈಯೊಳಗಿನ ಖಡ್ಗಗಳನ್ನು ಕಸಿದುಕೊಂಡಿರುವದಿಲ್ಲವಷ್ಟೆ? ಮೇವಾಡದಲ್ಲಿ ರಾಣಾನಿಗೆ ನಿಲ್ಲಲಿಕ್ಕೆ ಸ್ಥಳ ದೊರೆಯದಿದ್ದರೆ, ಆತನು ಮೇವಾಡದ ಆಚೆಗಿರುವ ಮರುಭೂಮಿಯನ್ನು ದಾಟಿ ಬೇರೆ ದೇಶದಲ್ಲಿ ಹೋಗಿ ನಿಂತುಕೊಂಡಾನು! ಆದರೆ ಪವಿತ್ರವಾದ ಸಿಸೋದಿಯಾ ಕುಲವನ್ನು ಎಂದೂ ಕಲಂಕಿತವಾಗಿ ಮಾಡಲಿಕ್ಕಿಲ್ಲ, ಎಂದು ನುಡಿದು, ಪ್ರತಾಪನು ಆಸನದಿಂದ ಎದ್ದು ನಿಲ್ಲಲು, ಯಾವತ್ತು ವೀರರು ಎದ್ದು ನಿಂತು ರಾಣಾನಿಗೆ ತಲೆಬಾಗಿಸಿ ವಂದಿಸಿ

ದರು. ಅಂದಿನ ಸಭಾಕಾರ್ಯವು ಸೆರವೇರಿತು. ಯಾವತ್ತು ವೀರರು ತಮ್ಮ ತಮ್ಮ ಸ್ಥಳಗಳಿಗೆ ಹೋದರು. ಪ್ರತಾಪಸಿಂಹನು ಹೀಗೆ ಎಷ್ಟು ಉತ್ಸಾಹ ಗೊಂಡರೂ, ಬರಿಯ ಉತ್ಸಾಹದಿಂದ ಏನೂ ಕಾರ್ಯವಾಗುವಹಾಗಿದ್ದಿಲ್ಲ. ದ್ರವ್ಯಬಲ–ಮನುಷ್ಯಬಲಗಳಿಲ್ಲದವನ ಪ್ರೋತ್ಸಾಹದಿಂದ ಯಾವ ಕಾರ್ಯ ವಾಗುವದು? ಬಾದಶಹನ ಬಲಿಷ್ಠವಾದ ಸೈನ್ಯವು ರಾಣಾನನ್ನು ಎಲ್ಲಕಡೆ ಯಿಂದ ಮುತ್ತಿ ಹಣ್ಣು ಹಣ್ಣು ಮಾಡಿತ್ತು. ಆತನು ವಾಸಿಸುತ್ತಿದ್ದ ಜಬರಾ ಆರಣ್ಯವೂ ಆತನಿಗೆ ಇನ್ನು ಸುರಕ್ಷಿತವಾಗಿ ತೋರಲಿಲ್ಲ. ಪ್ರತಾಪಸಿಂಹನು ಕಳಿಸಿದ ಸಂಧಿ ಪ್ರಾರ್ಥನೆಯ ಪತ್ರದಲ್ಲಿ ಏನೂ ಅರ್ಥವಿರದೆ, ಆತನ ದೂತನು ಎಲ್ಲರ ಕಣ್ಣುಗಳಲ್ಲಿ ಮಣ್ಣುಹಾಕಿ ಪಾರಾಗಿ ಹೋದನೆಂಬದನ್ನು ಕೇಳಿದ ಬಳಿ ಕಂತು ಬಾದಶಹನು ಸಿಟ್ಟುಬೆಂಕಿಯಾದನು. ಆತನ ದ್ವೇಷಾಗ್ನಿಯು ಇಮ್ಮಡಿ ಯಾಗಿ ಪ್ರಜ್ವಲಿಸಿತು. ಆತನು ತನ್ನ ಸೈನಿಕರನ್ನು ಕುರಿತು—ಬೇಕಾದದ್ದು ಮಾಡಿರಿ; ಆದರೆ ಆ ಕಾಫರನಾದ ಪ್ರತಾಪನು ಇರುವ ಸ್ಥಳವನ್ನು ಗೊತ್ತು ಹಚ್ಚಿ ನನ್ನ ಬಳಿಗೆ ಆತನನ್ನು ಸೆರೆಹಿಡಕೊಂಡು ಬರ್ರಿ. ಈ ಕಾರ್ಯವನ್ನು ಮಾಡಿಕೊಂಡು ಬಂದವರಿಗೆ ನನ್ನ ಆವಾಢವ್ಯ ರಾಜ್ಯದ ಹತ್ತರಲ್ಲಿಯ ಒಂದು ಪಾಲನ್ನು ಉಚಿತವಾಗಿ ಕೊಡುವೆನು, ಎಂದು ಆಜ್ಞಾಪಿಸಿದನು. ಬಾದ ಶಹನ ಈ ಅಪ್ಪಣೆಯನ್ನು ಕೇಳಿ ರಾಜ್ಯಲೋಭದಿಂದ ಎಷ್ಟೋ ಮೊಗಲ ವೀರರುತಮ್ಮ ಶಕ್ತಿಮೀರಿ ಪ್ರಯತ್ನಮಾಡಿದರು; ಆದರೆ ಅವರಿಗೆ ಪ್ರತಾಪನ ಗೊತ್ತು ಹತ್ತಲಿಲ್ಲ. ಕಡೆಗೆ ಮೊಗಲರದೊಂದು ಸಣ್ಣ ಗುಂಪು ಇನಾಮಿನ ಆಶೆ ಯಿಂದ ಪ್ರತಾಪನನ್ನು ಹುಡುಕುತ್ತ ಹುಡುಕುತ್ತ ಜಬರಾರಣ್ಯದ ಸನಿಯಕ್ಕೆ ಬಂದಿತು. ಅಲ್ಲಿ ಇಬ್ಬರು ಭಿಲ್ಲರು ತಮ್ಮತಮ್ಮೊಳಗೆ ಮಾತಾಡುತ್ತಲಿದ್ದರು. ಅದನ್ನು ಕೇಳಿ ಮೊಗಲಸೈನಿಕರು, ಇದೇ ಅರಣ್ಯದಲ್ಲಿ ರಾಣಾನು ಇರು ತ್ತಾನೆಂದು ನಿಶ್ಚಯಿಸಿದರು. ಇನಾಮಿನ ಆಶೆಯಿಂದ ಅಂಧವಾದ ಮೊಗಲರ ಆ ಚಿಕ್ಕ ಪರಿವಾರವು, ತಮ್ಮಬಲಾಬಲದ ವಿಚಾರಮಾಡದೆ ಒಮ್ಮೆಲೆ ಪ್ರತಾಪ ನನ್ನು ಮುತ್ತಿ ಸೆರೆಹಿಡಕೊಂಡು ಹೋಗಬೇಕೆಂದು ನಿಶ್ಚಯಿಸಿತು. ಆ ಇಬ್ಬರು ಭಿಲ್ಲರಲ್ಲಿ ಒಬ್ಬನು ಮೊಗಲರ ಖಡ್ಗಕ್ಕೆ ಆಹುತಿಯಾದನು. ಇನ್ನೊಬ್ಬನು ಓಡಿಹೋಗಿ ಪ್ರತಾಪಸಿಂಹನಿಗೆ ಮೊಗಲರು ಬಂದ ಸುದ್ದಿಯನ್ನು ಹೇಳಿದನು.

ಈ ಕೆಟ್ಟಸುದ್ದಿಯನ್ನು ಕೇಳಿ ಪ್ರತಾಪನು ಉತ್ಕಂಠಿತನಾದನು. ತನ್ನ

ಸಾಧನ ಸಾಮುಗ್ರಿಗಳನ್ನೆಲ್ಲ ಒಟ್ಟುಗೂಡಿಸಿ ಮೊಗಲರೊಡನೆ ಯುದ್ಧಮಾಡ ಬೇಕೆಂದು ನಿಶ್ಚಯಿಸಿದನು. ಆತನಿಗೆ ಸಹಾಯ ಮಾಡುವದಕ್ಕಾಗಿ ಭಿಲ್ಲರು ಧನುರ್ಬಾಣಗಳನ್ನು ತಕ್ಕೊಂಡು ಸಿದ್ಧರಾದರು. ಸರದಾರರಲ್ಲಿ ಚಂದಾವತ ಕೃಷ್ಣನೆಂಬವನೊಬ್ಬನು ಮಾತ್ರ ಈಗ ಪ್ರತಾಪನ ಬಳಿಯಲ್ಲಿದ್ದನು. ಪ್ರತಾಪನು ಚಂದಾವತಕೃಷ್ಣನನ್ನೂ, ತನ್ನ ಮಗನಾದ ಅಮರಸಿಂಹನನ್ನೂ ಕರಕೊಂಡು ತನ್ನ ಅಲ್ಪ ಸೈನ್ಯದೊಡನೆ ಮೊಗಲರನ್ನು ಹೊಡೆದೋಡಿಸುವದಕ್ಕಾಗಿ ವೇಗದಿಂದ ಸಾಗಿದನು. ಮೊಗಲ ಸೈನಿಕರು ದೀನ ದೀನ ಶಬ್ದಮಾಡುತ್ತ ಅರಣ್ಯವನ್ನು ನಾಲ್ಕೂಕಡೆಯಿಂದ ಮುತ್ತಿಬಿಟ್ಟರು. ಅಲ್ಪ ವೇಳೆಯಲ್ಲಿ ಖಡ್ಗಯುದ್ಧಕ್ಕೆ ಆರಂಭವಾಯಿತು. ಈ ಕಾಲದಲ್ಲಿ ಪ್ರತಾಪನ ಹೆಂಡಿರು-ಮಕ್ಕಳು ಶತ್ರುಗಳಿಂದ ಮುತ್ತಲ್ಪಟ್ಟ ಅರಣ್ಯದೊಳಗಿನದೊಂದು ಗಿಡದ ಬುಡದಲ್ಲಿ ಕುಳಿತುಕೊಂಡಿದ್ದರು. ಉಭಯ ಪಕ್ಷದಲ್ಲಿಯೂ ಕೆಲವು ಜನರು ಗಾಯಪಟ್ಟರು, ಕೆಲವರು ಮರಣಹೊಂದಿದರು. ತಮ್ಮ ಸ್ವಾಭಾವಿಕ ಧರ್ಮದಂತೆ ರಜಪೂತರು ತಮ್ಮ ಅತುಲ ಪರಾಕ್ರಮವನ್ನು ವ್ಯಕ್ತಮಾಡಿದರು. ರಾಣಾನ ಕುಟುಂಬದ ಜನರು ಶತ್ರುಗಳ ಕೈಸೇರುವ ಸಂಭವವಿದ್ದದ್ದರಿಂದ, ರಜಪೂತರು ಜೀವದ ಹಂಗುದೊರೆದು ಕಾದುತ್ತಲಿದ್ದರು. ಅವರನ್ನು ಒಂದು ಹೆಜ್ಜೆ ಸಹ ಹಿಂದಕ್ಕೆ ಸರಿಸುವದು ಮೊಗಲರಿಂದಾಗಲಿಲ್ಲ. ಬರಬರುತ್ತ ಮೊಗಲರ ಆವೇಶವು ಕುಗ್ಗಹತ್ತಿತು. ಅವರು ಉಚಿತದ ಆಶೆಯಿಂದ ಎಷ್ಟು ಶೌರ್ಯದಿಂದ ಕಾದಿದರೂ ಸ್ವಾಮಿಭಕ್ತ ರಜಪೂತರ ಹೊಡತಕ್ಕೆ ಈಡಾಗಲಿಲ್ಲ. ಅವರು ರಣಭೂಮಿಯಲ್ಲಿ ಪಟಪಟ ಬೀಳಹತ್ತಿದರು. ಅವರು ರಜಪೂತರ ಕೈಯೊಳಗಿಂದ ಪಾರಾಗಿಹೋಗುವಂತೆ ಯಿದ್ದಿಲ್ಲ. ರಜಪೂತರಾದರೂ ಅವರನ್ನು ಸಮೂಲ ನಾಶಮಾಡುವ ನಿಶ್ಚಯವನ್ನು ಮಾಡಿದ್ದರು. ಇನಾಮಿನ ಆಶೆಯಿಂದ ಬಂದಿದ್ದ ಆ ಮೊಗಲರ ಗುಂಪಿನಲ್ಲಿ ಒಬ್ಬಿಬ್ಬರು ಪಾರಾಗಿ ಹೋಗಬೇಕಾದರೆ ಸಾಕುಬೇಕಾಯಿತು. ಅವರು ಟಲ್ಲಿಗೆ ಹೋಗಿ ಬಾದಶಹನನ್ನು ಕುರಿತು--ಖುದಾವಂತ, ಬಹಳ ಅಸಮಾಧಾನದ ಸಂಗತಿಯು! ನಾವು ಬಹು ಪ್ರಯತ್ನದಿಂದ ಪ್ರತಾಪಸಿಂಹನ ಗೊತ್ತು ಹಚ್ಚಿದೆವು; ಆದರೆ ನಮ್ಮ ಗುಂಪಿನಲ್ಲಿ ಜನರ ಸಂಖ್ಯೆಯು ಅಲ್ಪವಿದ್ದದ್ದರಿಂದ ರಾಣಾನನ್ನು ಸೆರೆ ಹಿಡಿಯುವದಾಗಲಿಲ್ಲ. ಪ್ರತಾಪನೊಡನೆ ಕಾದುವಾಗ ನಮ್ಮವರು ಸಂಪೂರ್ಣ

ನಾಶಹೊಂದಿದರು. ಖಾವಿಂದರವರಿಗೆ ಸುದ್ದಿಯನ್ನು ತಿಳಿಸುವದಕ್ಕಾಗಿ ಬಹು ಕಷ್ಟದಿಂದ ನಾವು ಪಾರಾಗಿ ಬಂದೆವು, ಎಂದು ಹೇಳಿದರು. ಪ್ರತಾಪನ ಗೊತ್ತು ಹತ್ತಿದ್ದನ್ನು ಕೇಳಿ ಬಾದಶಹನಿಗೆ ಸಂತೋಷವಾದರೂ, ಒಬ್ಬೊಬ್ಬ ರಜಪೂತನು ನೂರು ನೂರುಜನ ಮೊಗಲರೊಡನೆ ಕಾದುವದನ್ನು ನೋಡಿ ಆತನು ಚಕಿತನಾದನು. ಪ್ರತಾಪನನ್ನು ಸೆರೆಹಿಡಕೊಂಡು ಬರಲೇ ಬೇಕೆಂಬ ಹಟದಿಂದ ಬಾದಶಹನು ಪುನಃ ಒಂದುಸಾವಿರಜನ ಶೂರ ಮೊಗಲರನ್ನು ಪ್ರತಾಪನ ಮೇಲೆ ಕಳಿಸಿದನು. ಇನಾಮಿನ ಆಶೆಯನ್ನಂತು ಬಾದಶಹನು ಮೊದಲೇ ತೋರಿಸಿದ್ದನು. ಮೊಗಲ ಸೈನಿಕರು ರಾಣಾನನ್ನು ಸೆರೆ ಹಿಡಕೊಂಡೇ ಬರುವೆವೆಂಬ ಉಬ್ಬಿನಿಂದ ಜಬರಾ ಆರಣ್ಯದಮೇಲೆ ರಭಸದಿಂದ ಸಾಗಿ ಬರಹತ್ತಿದರು.

ಇತ್ತ ಪ್ರತಾಪನು ಮೊಗಲರ ಚಿಕ್ಕ ಗುಂಪನ್ನು ತುಂಡರಿಸಿ ಚಲ್ಲಿದರೂ, ದಿಲ್ಲೀಶ್ವರನ ಹಟಮಾರಿತನದ ಮುಂದೆ ತನ್ನ ಪರಿಣಾಮವಾಗದೆಂತಲೇ ಆತನು ತಿಳಿದಿದ್ದನು. ಬಾದಶಹನು ದೊಡ್ಡ ಸೈನ್ಯವನ್ನು ಕಳಿಸುವ ಮೊದಲೇ ಕುಟುಂಬದವರೊಡನೆ ದೇಶತ್ಯಾಗವನ್ನು ಮಾಡಿ ಹೊರಟು ಹೋಗಬೇಕೆಂದು ನಿಶ್ಚಯಿಸಿ, ಆತನು ಚಂದಾವತ ಕೃಷ್ಣನನ್ನು ಕುರಿತು—ಸರದಾರಶ್ರೇಷ್ಠನೇ, ಈ ನಿಬಿಡವಾದ ಅರಣ್ಯದಲ್ಲಿಯೂ ಮೊಗಲರು ನನ್ನ ಗೊತ್ತು ಹಚ್ಚಿದ್ದರಿಂದ, ಇನ್ನು ಮೇವಾಡದೇಶದಲ್ಲಿರಲಿಕ್ಕೆ ನನಗೆ ಸ್ಥಳವು ಉಳಿಯಲಿಲ್ಲ. ಪ್ರಿಯ ಮಿತ್ರನೇ, ನಡೆಯಿನ್ನು, ಮೇವಾಡ ದೇಶವನ್ನು ಬಿಟ್ಟು ನಾವು ಸಿಂಧೂ ನದಿಯ ತೀರವನ್ನು ಸೇರೋಣ. ಅಲ್ಲಿ ಇರುವದೊಂದು ಸಣ್ಣ ನಡುಗಡ್ಡೆಯಲ್ಲಿದ್ದು ಶೇಷಾಯುಷ್ಯವನ್ನು ಹ್ಯಾಗಾದರೂ ಕಳೆದರಾಯಿತು.! ಅಲ್ಲಿಗೆ ಮೊಗಲರು ಬರಲಿಕ್ಕಿಲ್ಲ. ವೀರಶ್ರೇಷ್ಠನೇ, ನನ್ನ ಎಲ್ಲ ವಿಚಾರಗಳೂ, ದೊಡ್ಡ ದೊಡ್ಡ ಆಶೆಗಳೂ ಮೃಗಜಲದಂತೆ ನಿರರ್ಥಕವಾದವು. ರಜಪೂತರ ಸರ್ವಸುಖ ಸೌಭಾಗ್ಯದ ಸಂಹಾರವನ್ನು ನಿಚನಾದ ನಾನೇ ಮಾಡಿದೆನು, ಅನ್ನಲು, ಚಂದಾವತಕೃಷ್ಣನು—ಪ್ರಭುಗಳೇ, ಶಾಂತರಾಗಿರಿ! ಶಾಂತರಾಗಿರಿ! ಇಷ್ಟು ನಿರಾಶೆಪಡುವ ಕಾರಣವಿಲ್ಲ. ನೆರೆದ ದರ್ಬಾರದಲ್ಲಿ ತಪೋಧನರು ಹೇಳಿದಂತೆ ದೇಶತ್ಯಾಗವನ್ನು ಮಾಡಿ ತಪಸ್ಸಿನ ಪರಿಸಮಾಪ್ತಿಯನ್ನಂತು ಮಾಡೋಣ. ತಪಸ್ಸಿನ ಫಲವು ಸಿಗುವದು ಬಿಡುವದು ಈಶ್ವರಾಧೀ

ನವು, ಎಂದು ಸಮಾಧಾನಪಡಿಸಿದನು. ಬಳಿಕ ಪ್ರತಾಪನು ತನ್ನ ಚಿಕ್ಕ ಪರಿವಾರದೊಡನೆ ದೇಶಾಂತರಕ್ಕೆ ಹೊರಟನು. ಜನ್ಮಭೂಮಿಯನ್ನು ಬಿಟ್ಟು ಹೊರಡುವಾಗ ಆ ಸ್ವದೇಶಭಕ್ತರಿಗೆ ಎಷ್ಟು ವ್ಯಸನವಾಗಿರಬಹುದೆಂಬದನ್ನು ವಾಚಕರೇ ತರ್ಕಿಸಬಹುದು. ಅವರು ದುಃಖದಿಂದ ಮಾರ್ಗವನ್ನು ಕ್ರಮಿಸುತ್ತ ಕ್ರಮಿಸುತ್ತ ಮೇವಾಡವನ್ನು ಬಿಟ್ಟು ಅರವಲೀ ಪರ್ವತವನ್ನು ದಾಟಿ ಹೋದರು. ಮರುಭೂಮಿಯ ತೀರದಲ್ಲಿ ಅವರ ತಳವು ಊರಿತು. ಮಾರ್ಗಾಯಾಸವನ್ನು ಕಳಕೊಳ್ಳುವದಕ್ಕಾಗಿ ರಾಣಾನು ಒಂದು ದಿನ ಆ ಸ್ಥಳದಲ್ಲಿ ನಿಲ್ಲುವದನ್ನು ನಿಶ್ಚಯಿಸಿದ್ದನು. ಪಶ್ಚಿಮ ದಿಕ್ಕಿನಲ್ಲಿ ಸಂಧಿಪ್ರಕಾಶದೊಳಗೆ ರುಕ್ಷವಾದ ಆ ಮರುಭೂಮಿಯು ರಣಗುಟ್ಟುತ್ತ ಕಾಣುತ್ತಲಿತ್ತು. ತಮ್ಮ ಶಿಬಿರದ ಹಿಂಬದಿಯಲ್ಲಿ ಪೂರ್ವಕ್ಕೆ ಅರವಲೀ ಪರ್ವತವೂ, ತಮ್ಮ ಪರಮ ಪ್ರಿಯವಾದ ಮೇವಾಡದೇಶವೂ ಇದ್ದವು. ಆರವಲೀ ಪರ್ವತದ ಉತ್ತುಂಗ ಶಿಖರಶ್ರೇಣಿಗಳು ಅವರಿಗೆ ಇನ್ನೂ ಸ್ಪಷ್ಟವಾಗಿ ಕಾಣುತ್ತಲಿದ್ದವು! ವನ್ನು ನೋಡಿ ರಜಪೂತರ ದುಃಖವು ಒತ್ತರಿಸುತ್ತಿತ್ತು! ಮೇವಾಡದೊಳಗಿನ ಪ್ರತಿ ಒಂದು ಪರ್ವತ ದುರ್ಗವೂ, ಪ್ರತಿ ಒಂದು ಅರಣ್ಯವೂ, ದೇಶವೂ, ಪ್ರತಿ ಒಂದು ಖಿಂಡಿಯೂ ಆ ವೀರ ಪರಿವಾರದ ಕಣ್ಣಿಗೆ ಕಟ್ಟಿದಂತಾಗಿದ್ದವು. ಯಾವತ್ತು ರಜಪೂತರು ಕಣ್ಣೀರು ಸುರಿಸುತ್ತಲಿದ್ದರು. ಅವರು ಮೇಲಿಂದ ಮೇಲೆ ಅರವಲೀ ಪರ್ವತದ ಕಡೆಗೆ ಶೂನ್ಯ ದೃಷ್ಟಿಯಿಂದ ನೋಡಿ ಉಸುರ್ಗಳೆಯುತ್ತಲಿದ್ದರು. ಶಿಬಿರಗಳಲ್ಲಿ ಅಲ್ಲಲ್ಲಿ ರಜಪೂತ ರಮಣಿಯರು ತಮ್ಮ ಕೂಸುಗಳನ್ನು ತೊಡೆಯ ಮೇಲೆ ಮಲಗಿಸಿಕೊಂಡು ಅರವಲೀ ಪರ್ವತದ ಕಡೆಗೆ ನೋಡಿ ಮೌನದಿಂದ ಬಳಬಳ ಕಂಣೀರು ಸುರಿಸುತ್ತಲಿದ್ದರು. ರಜಪೂತರ ಕುದುರೆಗಳು ಸಹ ಕರುಣಾಸ್ವರದಿಂದ ಹೇಕರಿಸುತ್ತಲಿದ್ದವು! ಹೀಗೆ ಪ್ರತಾಪನ ಶಿಬಿರದಲ್ಲಿ ನೋಡಿದತ್ತ ಶೋಕದ ಚಿನ್ಹಗಳೇ ತೋರುತ್ತಲಿದ್ದವು. ಆಗ ರಾಣಾನು—ಹಾಯ್ ಹಾಯ್! ಕಡೆಗೆ ಸಿಸೋದಿಯಾವಂಶಕ್ಕೆ ದೇಶತ್ಯಾಗಮಾಡುವ ಪ್ರಸಂಗವು ಬಂದಿತಲ್ಲವೆ? ಸುಂದರವಾದ ಮೇವಾಡ ದೇಶದಲ್ಲಿ, ರಾಣಾನ ವಂಶಜರಿಗೆ ನಿಲ್ಲಲಿಕ್ಕೆ ಸ್ಥಳವು ಉಳಿಯಲಿಲ್ಲ! ಎಂದು ನುಡಿದು ಚಂದಾವತಕೃಷ್ಣನನ್ನು ಕುರಿತು—ವೀರವರ್ಯನೇ, ನೀನು ಇವರೆಲ್ಲರೊಡನೆ ಸ್ವಲ್ಪ ಹೊತ್ತು ಇಲ್ಲಿ ಇರು. ಈಗ ನಾನು ಸಮೀಪದ ಆ ಪರ್ವತ

ವನ್ನು ಏರಿ ಒಮ್ಮೆ ಚಿತ್ತೂರ ಕಟ್ಟಕಡೆಯ ದರ್ಶನ ತಕ್ಕೊಂಡು ಬರುತ್ತೇನೆ. ಚಿತ್ತೂರನ್ನು ಉದ್ಧರಿಸುವ ನನ್ನ ಆಶೆಗಳೆಲ್ಲ ಇಂದು ಸಮೂಲ ನಷ್ಟವಾದವು, ಎಂದು ಹೇಳಿ, ಆತನು ಪರ್ವತವನ್ನು ಏರಿ ಚಿತ್ತೂರ ದರ್ಶನಮಾಡಿಕೊಂಡು ಒಮ್ಮೆ ಉಶ್ಶೆಂದು ಉಸುರ್ಗಳೆದು—"ಹೇ ಮಾತೇ, ಜನ್ಮಭೂಮಿ! ಇಂದು ನಾನು ನಿನ್ನನ್ನು ಬಿಟ್ಟು ಹೋಗುತ್ತೇನೆ. ಈ ಜನ್ಮದ ನನ್ನ ಆಶೆಗಳೆಲ್ಲ ನಷ್ಟವಾದವು! ಸುದೈವದಿಂದ ಎರಡನೆಯ ಜನ್ಮದಲ್ಲಿ ನಿನ್ನ ದರ್ಶನದ ಯೋಗವು ಒದಗಿದರೆ, ಮತ್ತೆ ನಿನ್ನ ಸೇವೆಯನ್ನು ಮಾಡುವೆನು. ಹೇ ಪುಣ್ಯಮಯಿ, ಪರಮೇಶ್ವರೀ!" ಎಂದು ದುಃಖಾಶ್ರುಗಳನ್ನು ಸುರಿಸುತ್ತ ಆತನು ತನ್ನ ಜನ್ಮ ಭೂಮಿಯನ್ನು ವಂದಿಸಿದನು. ಪ್ರಿಯವಾಚಕರೇ, ಜನನಿಯೂ-ಜನ್ಮ ಭೂಮಿಯೂ-ಜಾಹ್ನವಿಯೂ-ಜನಾರ್ದನನೂ-ಜಾಮಾತೃವೂ ಮನುಷ್ಯನಿಗೆ ಅತ್ಯಂತ ಪ್ರಿಯರೆಂದು ಸುಭಾಷಿತ ಕಾರರು ಹೇಳುವ ಮಾತು ಸುಳ್ಳಲ್ಲ!

ಪ್ರತಾಪನು ಕಣ್ಣೀರು ಸುರಿಸುತ್ತ ಗುಡ್ಡದಿಂದ ಇಳಿದು ಚಂದಾವತ ಕೃಷ್ಣನ ಬಳಿಗೆ ಬಂದನು. ಯಾವತ್ತು ಪರಿವಾರವು ಆತನನ್ನು ಅನುಸರಿಸಿ ಬರಲು, ಮಹಾತಪಸ್ವಿಯಾದ ರಾಣಾನು ಸಿಂಧೂತೀರದ ದೂರದ ಪ್ರದೇಶಕ್ಕೆ ಹೋಗುವದಕ್ಕಾಗಿ ಆ ಮರುಭೂಮಿಯನ್ನು ದಾಟಬೇಕೆಂದು ಮಾರ್ಗವನ್ನು ಕ್ರಮಿಸಹತ್ತಿದನು. ಆಗ ಗ್ರೀಷ್ಮಋತುವಿದ್ದದ್ದರಿಂದ ಪ್ರಬಲವಾಯುವಿನಿಂ ಪೆದ್ದ ಧೂಲಿಯು ನಾಲ್ಕೂ ದಿಕ್ಕಿಗೆ ಮುಸುಕಿತ್ತು. ಆ ಮರುಭೂಮಿಯಲ್ಲಿ ಮಳೆಯು ಅಪರೂಪ. ಬಿಸಿಲ ತಾಪದಿಂದ ರಾಣಾನ ಪರಿವಾರವು ತಳಮಳಿಸಹತ್ತಿತು. ಮಾರ್ಗವು ಬಹು ಕಠಿಣವಾದದ್ದು. ಯಾವ ಸಾಧನಗಳೂ ಇಲ್ಲದ್ದರಿಂದ ರಾಜಪರಿವಾರವು ನಿರ್ವಿಘ್ನವಾಗಿ ಮರುಭೂಮಿಯನ್ನು ಹ್ಯಾಗೆ ದಾಟಿಹೋದೀತೆಂದು ಚಂದಾವತಕೃಷ್ಣನೇ ಮೊದಲಾದವರು ಚಿಂತಿಸತೊಡಗಿದ್ದರು. ಪ್ರತಾಪನು ಅಸಹ್ಯವಾದ ಚಿಂತೆಯಲ್ಲಿ ಮುಳುಗಿ ತನ್ನ ಹೆಂಡಿರು-ಮಕ್ಕಳ ಕೈಯನ್ನು ಹಿಡಕೊಂಡು ಮರುಭೂಮಿಯಲ್ಲಿ ನಿಂತುಕೊಂಡಿದ್ದನು. ಆ ರುಕ್ಷ ಪ್ರದೇಶದಲ್ಲಿ ಗಿಡಗಳ ಸುದ್ದಿಯಿದ್ದಿಲ್ಲ. ಮೇಲೆ ಬಿಸಿಲಿನ ತಾಪ, ಕೆಳಗೆ ಕಾದ ನೆಲದ ತಾಪ, ಹೊಟ್ಟೆಯಲ್ಲಿ ಸ್ವದೇಶತ್ಯಾಗ ದುಃಖರೂಪವಾದ ಅಗ್ನಿಯ ತಾಪ, ಹೀಗಾಗಿ ಪ್ರತಾಪನೂ ಆತನ ಪರಿವಾರವೂ ತಾಪತ್ರಯ

ವಿಂದ ತೀರ ನಿರಾಶೆಪಟ್ಟು ಮಾರ್ಗವನ್ನು ಕ್ರಮಿಸುತ್ತಲಿದ್ದರು. ಇಲ್ಲಿಗೆ ಪ್ರತಾಪನ ತಪಶ್ಚರ್ಯದ ಪರಿಸಮಾಪ್ತಿಯಾಯಿತೆಂಬಂತೆ ತೋರಿತು. ಆತನು ಇಂಥ ಘೋರ ತಪಶ್ಚರ್ಯವನ್ನು ಮಾಡದಿದ್ದರೆ, ವಿಷಯಭೋಗದ ಮದದಿಂದ ಕಣ್ಣು ಮುಚ್ಚಿದ್ದ ರಜಪೂತರಿಗೆ ನಿಜವಾದ ಕ್ಷಾತ್ರತೇಜಸ್ಸು ಕಾಣುತ್ತಿದ್ದಿಲ್ಲ; ಆದ್ದರಿಂದಲೇ ದೇವರು ಪ್ರತಾಪನ ಕಷ್ಟಕ್ಕೆ ಬೇಗನೆ ಕಣ್ಣುತೆರೆಯಲಿಲ್ಲ! ಬಹು ಜನರ ಕಲ್ಯಾಣ ಮಾಡಲಿಚ್ಛಿಸುವವನು ಹೀಗೆ ಕಷ್ಟವನ್ನು ಸಹಿಸಲೇ ಬೇಕಾಗುವದು. ಇರಲಿ. ಈ ಮಾರ್ಗಕ್ರಮಣದಲ್ಲಿ ದೇಹದ ಪರ್ಯವಸಾನವಾಗಲೆಂಬ ನಿಶ್ಚಯದಿಂದ ಪ್ರತಾಪನು ಮುಂದಕ್ಕೆ ಸಾಗುತ್ತಿರಲು, ಈಶ್ವರನೇ ತನ್ನ ದೂತನನ್ನು ಕಳಿಸಿದಂತೆ ಒಬ್ಬ ಪುರುಷನು ಒಮ್ಮಿಂದೊಮ್ಮೆ ರಾಣಾನ ಕಣ್ಣಿಗೆ ಬಿದ್ದನು. ರಾಣಾನಿಗೆ ಆ ಪುರುಷನ ಗುರುತು ಹತ್ತಿದಂತಾಗುತ್ತಿತ್ತು. ಪ್ರತಾಪಸಿಂಹನನ್ನು ನೋಡಿದ ಕೂಡಲೆ ಆ ಪುರುಷನು ವೇಗದಿಂದ ಓಡುತ್ತ ಬಂದು, ಮಹಾರಾಣಾನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿದನು. ಹೀಗೆ ತನ್ನನ್ನು ಭಕ್ತಿಯಿಂದ ನಮಿಸಿದವನು ತನ್ನ ವೃದ್ಧ ಮಂತ್ರಿಯಾದ ಭಾಮಾಶಹನೆಂದು ಪ್ರತಾಪನು ಗೊತ್ತುಹಿಡಿದನು. ಮೇವಾಡದ ಮಂತ್ರಿಪದವನ್ನು ಎಷ್ಟೋ ತಲೆಗಳಿಂದ ಭಾಮಾಶಹನ ವಂಶದವರೇ ಸಾಗಿಸುತ್ತ ಬಂದಿದ್ದರು. ಭಾಮಾಶಹನು ಪ್ರತಾಪನ ಕಾರ್ಯಕ್ಕೆ ದ್ರವ್ಯವನ್ನು ಕೂಡಿಸುವದಕ್ಕಾಗಿ ಈಗ ಕೆಲವು ತಿಂಗಳುಗಳಿಂದ ದೇಶದಲ್ಲಿ ಸಂಚರಿಸುತ್ತಿದ್ದನು. ಅಷ್ಟರಲ್ಲಿ ರಾಣಾನು ತನ್ನ ಪರಿವಾರದೊಡನೆ ದೇಶತ್ಯಾಗ ಮಾಡಿದನೆಂಬ ಸುದ್ದಿಯು ಆತನಿಗೆ ಹತ್ತಿತು. ಅದನ್ನು ಕೇಳಿ ವೃದ್ಧ ಭಾಮಾಶಹನು ದುಃಖಪಟ್ಟು, ಈಗಲೇ ತನ್ನ ಪ್ರಭುವನ್ನು ಕಂಡು, ಆತನ ಮಹಾಕಾರ್ಯಕ್ಕೆ ತನ್ನ ಸರ್ವಸ್ವವನ್ನು ಅರ್ಪಿಸಬೇಕೆಂದು ನಡುವೆ ಎಲ್ಲಿಯೂ ನಿಲ್ಲದೆ ಅವಸರದಿಂದ ಅಲ್ಲಿಗೆ ಬಂದಿದ್ದನು. ಆತನು ಪ್ರತಾಪಸಿಂಹನನ್ನು ಕುರಿತು ವಿನಯದಿಂದ--

ಭಾಮಾಶಹಾ—ಮಹಾಪ್ರಭೋ, ಇಷ್ಟರಲ್ಲಿ ದೇಶತ್ಯಾಗಮಾಡಲವಶ್ಯವಿಲ್ಲ. ಇನ್ನೂ ಮೇವಾಡದಲ್ಲಿ ಸಿಸೋದಿಯಾವಂಶದವರಿಗೆ ಇರಲಿಕ್ಕೆ ಸ್ಥಳವಿರುತ್ತದೆ; ಯುದ್ಧದ ಯಾವತ್ತು ಉಪಾಯಗಳು ಇನ್ನೂ ನಿಷ್ಫಲವಾಗಿರುವದಿಲ್ಲ; ಆದ್ದರಿಂದ ಮಹಾರಾಣಾನವರು ಹಿಂದಕ್ಕೆ ತಿರುಗಬೇಕು!

ಪ್ರತಾಪಸಿಂಹ—(ಆಶ್ಚರ್ಯದಿಂದ) ಮಂತ್ರಿಶ್ರೇಷ್ಠರೇ! ನಿಮ್ಮ ಮುಖದಿಂದ ವ್ಯರ್ಥಶಬ್ದಗಳು ಹೊರಡುವದಿಲ್ಲವೆಂಬದನ್ನು ನಾನು ಬಲ್ಲೆನು! ಅಂದಬಳಿಕ ಈಗ ನೀವು ಯುದ್ಧೋಪಾಯಗಳು ನಿಷ್ಫಲವಾಗಿಲ್ಲವೆಂದು ಹೇಳುವದರ ಅರ್ಥವೇನು? ರಾಣಾನು ನಿರ್ಧನನಾಗಿರುವದರಿಂದ ಆತನ ಯಾವತ್ತು ಉಪಾಯಗಳು ನಿಂತಹಾಗೆಯೇ ಸರಿ.

ಭಾಮಾಶಹಾ—ಮಹಾತ್ಮರ ತೇಜಸ್ಸಿಗೆ ಜಗತ್ತೇ ವಶವಾಗುತ್ತಿರಲು, ಕ್ಷುದ್ರ ಧನವು ಅವರ ಕೈಸೇರುವದೇನಾಶ್ಚರ್ಯವು? ಪ್ರಭುವೇ, ಈ ವೃದ್ಧ ಭಾಮಾಶಹನು ತನಗೆ ಶಕ್ಯವಾಗಿರುವ ಮಾರ್ಗದಿಂದ ತನ್ನ ದೇಶಕಾರ್ಯಕ್ಕೆ ಯಥಾಶಕ್ತಿ ಸಹಾಯ ಮಾಡಲು ಇಚ್ಛಿಸುತ್ತಾನೆ. ನಮ್ಮ ವಂಶಜರು ಸಂಪಾದಿಸಿದ ವಿಪುಲ ಸಂಪತ್ತು ಮಲೆತು ಕೆಡಹತ್ತಿದೆ. ಅದನ್ನು ದೇಶೋದ್ಧಾರದ ಕಾರ್ಯದಲ್ಲಿ ವಿನಿಯೋಗಿಸಿ, ನಮ್ಮ ಕುಲಕೋಟಿಯನ್ನೇ ಕೃತಕೃತ್ಯವಾಗಿ ಮಾಡಬೇಕು. ನನ್ನಲ್ಲಿರುವ ಧನದಿಂದ ೨೫೦೦೦ ಸೈನ್ಯದ ಯೋಗಕ್ಷೇಮವು ಹನ್ನೆರಡುವರ್ಷಗಳವರೆಗೆ ಸಾಗಬಹುದು!

ಪ್ರತಾಪ—ಉದಾರಾಂತಃಕರಣದ ಮಂತ್ರಿವರನೇ, ಕಾರ್ಯಾರ್ಥಿಯಾದ ಈ ರಾಣಾನಿಗೆ ನಿನ್ನ ಅಮೃತೋಪಮವಾದ ಮಾತುಗಳನ್ನು ಕೇಳಿ ಬಾಯಲ್ಲಿ ನೀರು ಒಡೆಯುತ್ತವೆ; ಕಂಠವು ಸಂದಟಿತವಾಗುತ್ತದೆ; ಆನಂದಾಶ್ರುಗಳು ಉದುರುತ್ತವೆ; ದೇಶವನ್ನು ಉದ್ಧರಿಸುವದಕ್ಕೆ ಮನಸ್ಸು ಪುನಃ ಹಾತೊರೆಯುತ್ತದೆ; ಆದರೆ ಪ್ರಿಯ ಸ್ವಾಮಿಭಕ್ತನೇ, ಪ್ರತಾಪರಾಣಾನು ದತ್ತಾಪಹಾರಮಾಡಿ ನರಕಕ್ಕೆ ಇಳಿಯಲಾರನು. ಮೇವಾಡದ ಸೇವೆಮಾಡಿದ್ದಕ್ಕಾಗಿ ನಿನ್ನ ವಂಶಜರಿಗೆ ರಾಣಾನ ವಂಶಜರಿಂದ ದೊರೆತ ಧನವನ್ನು ನಾನು ತಿರುಗಿ ಇಸುಕೊಳ್ಳಲಾ! ಇದು ನನಗೆ ಕೃತಘ್ನತೆಯ ಲಕ್ಷಣವಾಗಿ ತೋರುತ್ತದೆ! ಭಾಮಾಶಹಾ! ಪ್ರತಾಪಸಿಂಹನು ಇಂದು ಬಡವನಾಗಿರುವನೆಂಬದು ನಿಜವು; ಆದರೆ ಆತನು ತನ್ನ ಸ್ವಾಮಿಭಕ್ತ ಸೇವಕರ ಧನವನ್ನು ಎಂದೂ ಅಪಹರಿಸಲಾರನು!!

ಭಾಮಾಶಹಾ—(ಕಣ್ಣೀರು ಸುರಿಸುತ್ತ ರಾಣಾನನ್ನು ನಮಿಸಿ) ಮಹಾರಾಣಾಪ್ರತಾಪಸಿಂಹ, ನಿಮ್ಮ ವಂಶಪರಂಪರಾಗತವಾದ ಪಾಪಭೀರುತ್ವವನ್ನೂ, ಸೇವಕವಾತ್ಸಲ್ಯವನ್ನೂ, ಉದಾರಾಂತಃಕರಣವನ್ನೂ ನಾನು

ಬಲ್ಲೆನು-ನನ್ನ ತಂದೆಯು ಬಲ್ಲನು-ಅಜ್ಜ-ಮುತ್ತಂದಿರು ಬಲ್ಲರು! ಅಂತೇ ನಿಮ್ಮ ವಂಶವು ಜಗದ್ವಂದ್ಯವಾಗಿರುತ್ತದೆ! ಮಹಾಪ್ರಭು, ಈ ವೃದ್ಧ ಭಾಮಾಶಹನು ನಿನ್ನ ಪ್ರಜೆಯಲ್ಲವೇ? ಅರಸನು ಪ್ರಜೆಗಳ ತಂದೆಯಲ್ಲವೇ? ಹೀಗಿರಲು ತಂದೆಯು ತಾನು ಆರಂಭಿಸಿದ ಸ್ವದೇಶೋದ್ಧಾರದ ಮಹಾಕಾರ್ಯಕ್ಕೆ ಮಕ್ಕಳಿಂದ ಸಹಾಯಪಡೆಯಲು ಸಂಕೋಚಪಟ್ಟಬಳಿಕ, ಮಕ್ಕಳ ಕೃತಘ್ನತೆಯನ್ನು ತೋರಿಸಲಿಕ್ಕೆ ಬೇರೆ ಸಾಕ್ಷಿಗಳೇತಕ್ಕೆ ಬೇಕು? ಮಹಾರಾಣಾಜೀ, ನನ್ನ, ಅಥವಾ ನನ್ನ ವಂಶಜರ ಯಾವ ಅಪರಾಧಕ್ಕಾಗಿ ನೀವು ನನ್ನ ಧನವನ್ನು ಧಿಕ್ಕರಿಸಿ ನನ್ನನ್ನು ಅಧಮಕೋಟಿಯಲ್ಲಿ ಸೇರಿಸುವಿರಿ? ತಂದೆಯು ಮಕ್ಕಳ ಸಹಾಯವನ್ನು ಪಡೆಯಲಿಕ್ಕೆ ಇಷ್ಟು ಸಂಕೋಚಪಡಬಹುದೆ? ತಂದೆಯ ಉಪಯೋಗಕ್ಕೆ ತಕ್ಕದ್ದಲ್ಲದ ಈ ಧನವು ಅನ್ಯರ ಉಪಯೋಗಕ್ಕೆ ಹ್ಯಾಗೆ ತಕ್ಕದ್ದಾಗಬೇಕು? ಅಂದಬಳಿಕ ಸದ್ವಿನಿಯೋಗಕ್ಕೆ ಪಾತ್ರವಲ್ಲದ ಬಚ್ಚಲದರೊಜ್ಜಿನಂತೆ ಇದ್ದ ಈ ಧನವನ್ನು ಯಾರು ಉಪಯೋಗಿಸಿದ ಭಾಗ್ಯವೇನು-ಬಿಟ್ಟ ಭಾಗ್ಯವೇನು? ಪ್ರಭು, ನಿನ್ನ ವೃದ್ಧ ಮಂತ್ರಿಯ ನಿರ್ಧಾರದ ವಚನವನ್ನು ಕೇಳುವ ಕೃಪೆಮಾಡಬೇಕು; ಈ ಧನವು ನನ್ನದಲ್ಲ, ಮೇವಾಡದೇಶದ್ದು; ಅದರ ಉಪಯೋಗವನ್ನು ಮೇವಾಡಾಧಿಪತಿಯಾದ ರಾಣಾನು ಬೇಕಾದರೆ ಮಾಡಿಕೊಳ್ಳಲಿ, ಸಾಕಾದರೆ ಅದನ್ನು ಚಲ್ಲಿಕೊಡಲಿ!!

ಸ್ವಾಮಿನಿಷ್ಠ ಭಾಮಾಶಹನ ಈ ನಿಸ್ಪೃಹೋಕ್ತಿಯನ್ನು ಕೇಳಿ ಮಹಾರಾಣಾನ ಅಂತಃಕರಣವು ಉಕ್ಕಿಬಂದು, ಆತನ ಕಣ್ಣೊಳಗಿಂದ ಅಶ್ರುಗಳು ಧಾರಾಳವಾಗಿ ಸುರಿಯಹತ್ತಿದವು. ಆತನು ಆನಂದದಿಂದ ಭಾಮಾಶಹನನ್ನು ಅಪ್ಪಿಕೊಂಡು, ಅದರದಿಂದ ಧನವನ್ನು ಸ್ವೀಕರಿಸುವದಕ್ಕಾಗಿ ತನ್ನ ಶಾಲನ್ನು ಭಾಮಾಶಹನ ಮುಂದೆ ಹಾಸಿದನು! ಆಗ ಆ ವೃದ್ಧ ಮಂತ್ರಿಗಾದ ಆನಂದವನ್ನು ವರ್ಣಿಸಲಾಸಲ್ಲ. ಆ ಸ್ವಾಮಿ-ಸೇವಕರಿಬ್ಬರು ಪರಸ್ಪರರ ಗುಣೋತ್ಕರ್ಷದಿಂದ ಆನಂದಪರವಶರಾಗಿದ್ದರು. ಪ್ರತಾಪನು ಆನಂದದ ಭರವು ಕುಗ್ಗಿದ ಮೇಲೆ ಭಾಮಾಶಹನನ್ನು ಕುರಿತು—ಮಂತ್ರಿವರ, ನಾನು ನಿಮ್ಮ ಪ್ರಭುವಿದ್ದರೂ ಈ ನಿಮ್ಮ ಮಾತನ್ನು ಆಜ್ಞೆಯೆಂದು ತಿಳಿದು, ಅದನ್ನು ಆದರದಿಂದ ಮನ್ನಿಸುವೆನು. ನಿಮ್ಮ ಔದಾರ್ಯವನ್ನು ವರ್ಣಿಸುವದು ಯಾರಿಂದಲೂ ಆಗದು! ನಿಮ್ಮಂಥ ಸ್ವದೇಶಾನುರಾಗಿಗಳಾದ ಪುರುಷ

ಪುಂಗವರು ಪೃಥ್ವಿಯಲ್ಲಿ ಯಾರೂ ಇರಲಿಕ್ಕಿಲ್ಲ. ನೀವು ಸ್ವದೇಶೋದ್ಧಾರಕ್ಕಾಗಿ ಕೊಡುವ ಧನವನ್ನು ಕೃತಜ್ಞತೆಯಿಂದ ನಾನು ಸ್ವೀಕಾರಮಾಡುವೆನು. ಈ ದ್ರವ್ಯದ ಬಲದಿಂದ ನಾನು ಮೇವಾಡದ ಉದ್ಧಾರಕ್ಕಾಗಿ ಇನ್ನೊಮ್ಮೆ ಯತ್ನಮಾಡುವೆನು. ನನ್ನ ಆ ಯತ್ನವು ಸಫಲವಾಗಿ ಮೇವಾಡದ ಉದ್ಧಾರವು ಆಗುವದೋ ಇಲ್ಲವೋ ನೋಡಿಬಿಡುವೆನು! ಸನ್ಮಾನನೀಯರಾದ ಮಂತ್ರಿಗಳೇ, ನಿಮ್ಮ ಪುಣ್ಯದಿಂದಾದರೂ ಮೇವಾಡದ ಸ್ವಾತಂತ್ರ್ಯರಕ್ಷಣವಾಗಲಿ! ಎಂದು ನುಡಿದನು. ಭಾಮಾಶಹನ ವಿಲಕ್ಷಣವಾದ ಈ ಔದಾರ್ಯದಿಂದ ಎಲ್ಲ ರಜಪೂತರು ಸ್ಫೂರ್ತಿಗೊಂಡರು. ಪ್ರತಾಪನು ಉಲ್ಲಸಿತವೃತ್ತಿಯಿಂದ ತನ್ನ ಸೈನ್ಯದೊಡನೆ ಮೇವಾಡಕ್ಕೆ ತಿರುಗಿದನು. ಭಾಮಾಶಹನ ದ್ರವ್ಯಬಲದಿಂದ ಪ್ರತಾಪನು ಮತ್ತೆ ಸೈನ್ಯವನ್ನು ಕೂಡಿಸಿ ಮೊಗಲರೊಡನೆ ಯುದ್ಧಕ್ಕೆ ಅಣಿಯಾದನು. ಯಾವತ್ತು ಮಾಂಡಲಿಕರೂ, ಸರದಾರರೂ ಪ್ರತಾಪನನ್ನು ಕೂಡಿದರು. ಶಕ್ತಿಸಿಂಹನೆಂಬ ಪ್ರತಾಪನ ಬಂಧುವೂ ಅಣ್ಣನ ಸಹಾಯಕ್ಕೆ ಬಂದನು.

ಪ್ರತಾಪನ ಈ ಪ್ರಯತ್ನಕ್ಕೆ ದೊರೆತ ಯಶಸ್ಸನ್ನು ಇತಿಹಾಸದಲ್ಲಿ ವರ್ಣಿಸಿರುತ್ತದೆ. ದೇವೀರದ ಯುದ್ಧದಲ್ಲಿ ಪ್ರತಾಪನು ಜಯಶಾಲಿಯಾದನು. ಮೊಗಲ ಸೇನಾಪತಿಯಾದ ಶಹಾಬಾಜಖಾನನು ದೇವೀರದ ವಿಸ್ತಾರವಾದ ಬೈಲಲ್ಲಿ ಬೀಡುಬಿಟ್ಟು ಸ್ವಸ್ಥವಾಗಿ ಕುಳಿತುಕೊಂಡಿದ್ದನು. ಮೊಗಲ ಸೈನ್ಯವನ್ನು ನೋಡಿ ಪ್ರತಾಪನು ಹೆದರಿ ದೇಶತ್ಯಾಗ ಮಾಡಿದ್ದರಿಂದ, ತಾನು ಜಯಶಾಲಿಯಾದೆನೆಂಬ ಉಬ್ಬಿನಿಂದ ಆತನು ವಿಶ್ರಾಂತಿಯನ್ನು ಹೊಂದುತ್ತಿದ್ದನು. ಅಷ್ಟರಲ್ಲಿ ಪ್ರತಾಪಸಿಂಹನ ಸೈನ್ಯವು ಪ್ರಬಲವಾದ ಝುಂಝಾವಾತದಂತೆ ನಾಲ್ಕೂಕಡೆಯಿಂದ ಮೊಗಲರನ್ನು ಮುತ್ತಿತು. ಇದನ್ನು ನೋಡಿ ಶಹಾಬಾಜಖಾನನು ಬೆದರಿ, ಯಾರ ಸೈನ್ಯವು ತನ್ನನ್ನು ಮುತ್ತಿತೆಂದು ವಿಚಾರಮಾಡುತ್ತಿರಲು, ಪ್ರತಾಪಸಿಂಹನ ಉಗ್ರಮೂರ್ತಿಯು ಅವನ ಕಣ್ಣಿಗೆ ಬಿದ್ದಿತು! ಆಕಸ್ಮಿಕ ಮುತ್ತಿಗೆಯಿಂದ ಮೊದಲೇ ಕೈಕಾಲು ಬಿಟ್ಟಿದ್ದ ಶಹಾಬಾಜಖಾನನು, ಪ್ರತಾಪನ ಉಗ್ರಮೂರ್ತಿಯನ್ನು ನೋಡಿ ಗಡಗಡನೆ ನಡುಗಿದನು. ಈ ಯುದ್ಧದಲ್ಲಿ ಶಹಾಬಾಜಖಾನನಿಂದ ಸಹಿತವಾಗಿ ಎಲ್ಲ ಮೊಗಲರನ್ನು ರಜಪೂತರು ತುಂಡರಸಿ ಚೆಲ್ಲಿದರು. ಒಬ್ಬ ಮೊಗಲನೂ ತಿರುಗಿ

ದಿಲ್ಲಿಗೆ ಹೋಗಲಿಲ್ಲ! ಆ ಮೇಲೆ ಪ್ರತಾಪಸಿಂಹನು "ಅಮಾಯಿತ" ಎಂಬ ಪರ್ವತ ದುರ್ಗದ ಮೇಲೆ ಏರಿಹೋಗಿ ಅಲ್ಲಿದ್ದ ಮೊಗಲರನ್ನು ತುಂಡರಿಸಿ ಆ ದುರ್ಗವನ್ನು ಕೈವಶಮಾಡಿಕೊಂಡನು. ಆ ಮೇಲೆ ಪ್ರತಾಪನು ಕಮಳನೇರದ ಮೇಲೆ ಸಾಗಿಹೋದನು. ಆಗ ಅಲ್ಲಿ ಅಬ್ದುಲ್ಲಾ ಎಂಬ ಮೊಗಲ ಸರದಾರನು ಅಧಿಕಾರಿಯಾಗಿದ್ದನು. ಪ್ರತಾಪನ ಅಸಹ್ಯವಾದ ತೇಜಸ್ಸಿಗೆ ಅಬ್ದುಲ್ಲಾನು ತಡೆಯಲಿಲ್ಲ. ಆತನು ಸಸೈನ್ಯವಾಗಿ ಪ್ರತಾಪನ ತೀಕ್ಷ್ಣ ಖಡ್ಗಧಾರೆಗೆ ಬಲಿಯಾದನು! ತೀವ್ರವೇ ಉದಯಪುರವೂ ಪ್ರತಾಪನ ಕೈವಶವಾಯಿತು. ಈ ಮೇರೆಗೆ ಪ್ರತಾಪನು ಒಂದುವರ್ಷದಲ್ಲಿ ಮೂವತ್ತೆರಡು ಕೋಟೆಗಳನ್ನು ಕೈವಶಮಾಡಿಕೊಂಡನು. ಮತ್ತೆ ಝಂಝಾವಾತದಂತೆ ಪ್ರತಾಪನ ಸೈನ್ಯವು ಮುಗಿಬಿದ್ದು ಮೇವಾಡದೊಳಗಿನ ಒಂದೊಂದೇ ಸ್ಥಳಗಳನ್ನು ಕೈವಶಮಾಡಿಕೊಳ್ಳಹತ್ತಿತು. ಆಗ ಒಬ್ಬ ಮೊಗಲ ದೂತನು ದಿಲ್ಲಿಗೆ ಹೋಗಿ ಅಕಬರ ಬಾದಶಹನಿಗೆ ಕಂಪಿತ ಸ್ವರದಿಂದ—ಖಾವಿಂದ, ಇಪ್ಪತ್ತುವರ್ಷಗಟ್ಟಲೆ ಸತತ ಪ್ರಯತ್ನಪಟ್ಟು, ನೀರಿನಂತೆ ದುಡ್ಡುವೆಚ್ಚಮಾಡಿ, ಅಸಂಖ್ಯ ಮೊಗಲರ ರಕ್ತದ ಕಾಲಿವೆ ಹರಿಸಿ, ಮಹಾಪ್ರತಾಪಶಾಲಿಗಳಾದ ಬಾದಶಹರು ಸಂಪಾದಿಸಿದ ಜಯವನ್ನು, ಪ್ರತಾಪಸಿಂಹನು ಒಂದುವರ್ಷದಲ್ಲಿ ನಾಮಶೇಷ ಮಾಡಿ, ಸಂಪೂರ್ಣ ಮೇವಾಡದೇಶವನ್ನು ಗೆದ್ದನೆಂದು ಹೇಳಬಹುದು! ಚಿತ್ತೂರು, ಅಜಮೀರ, ಮಂಡಳಗಡ ಎಂಬ ಮೂರು ಸ್ಥಳಗಳು ಮಾತ್ರ ಪ್ರತಾಪನ ಕೈಸೇರಿರುವದಿಲ್ಲ, ಎಂದು ಹೇಳಿದನು. ಯಾವ ಕಾರಣದಿಂದಲೋ ಅಕಬರಬಾದಶಹನು ಪುನಃ ಮೇವಾಡದ ಮೇಲೆ ಸೈನ್ಯವನ್ನು ಕಳಿಸಲಿಲ್ಲ. ಪ್ರತಾಪನು ಇಷ್ಟಕ್ಕೆ ಸಮಾಧಾನಪಡಲಿಲ್ಲ; ಆತನ ಯುದ್ಧದ ಮೂಲ ಕಾರಣನಾದ ಮಾನಸಿಂಗನ "ಅಂಬರವೆ"ಂಬ ಪ್ರದೇಶದ ಮೇಲೆ ದಾಡು ಮಾಡಿ, ಅದನ್ನು ಸುಟ್ಟು ಬೂದಿಮಾಡಿದ್ದಲ್ಲದೆ, ಆ ಮಾನಸಿಂಗನ ವಶದಲ್ಲಿರುವ "ಮಲ್ಲಪುರ"ವೆಂಬ ಹೆಸರಿನ ಪ್ರಮುಖ ವ್ಯಾಪಾರಸ್ಥಳವನ್ನು ಸುಲಿದು ಸೂರೆಮಾಡಿದನು. ಅಲ್ಲಿಯ ವಿಪುಲ ಸಂಪತ್ತಿಯು ಪ್ರತಾಪನ ಕೈಸೇರಿತು! ಈ ಮೇರೆಗೆ ಪ್ರತಾಪನು ಅಲ್ಪಾವಕಾಶದಲ್ಲಿ ತನ್ನ ಯಾವತ್ತು ಮೇವಾಡ ದೇಶವನ್ನು ವಶಮಾಡಿಕೊಂಡನು; ಆದರೆ ಚಿತ್ತೂರು ವಶವಾಗದ್ದರಿಂದ ಅವನ ವ್ರತವು ಪೂರ್ಣವಾಗಲಿಲ್ಲ. ಒಂದೊಂದರಂತೆ ಕೈಬಿಟ್ಟು ಹೋಗಿದ್ದ

ಮೇವಾಡ ದೇಶದ ಭಾಗಗಳ ಪುನರ್ಘಟನೆಯಾಗಿ ರಾಣಾನು ಬಹುತರ ತನ್ನ ಮೊದಲಿನ ರಾಜ್ಯವನ್ನೂ, ವೈಭವವನ್ನೂ ಪಡೆದನು; ಆದರೆ ಆತನ ಪೂರ್ವಜರ ಕೀರ್ತಿಸ್ಥಾನವಾದ ಚಿತ್ತೂರು ವಶವಾಗದ್ದರಿಂದ, ಆ ಪ್ರತಾಪಿಯು ತಾಪಶಮನವಾಗಲಿಲ್ಲ!

---

೧೮ ನೆಯ ಪ್ರಕರಣ

# ಪರಿಸಮಾಪ್ತಿಯು.

ಮೇಲೆ ಹೇಳಿದಂತೆ ಅಲ್ಪಾವಕಾಶದಲ್ಲಿ ಪ್ರತಾಪನ ಎಲ್ಲ ಆಶೆಗಳು ಸಫಲವಾದರೂ ಚಿತ್ತೂರ ಕೋಟೆಯೊಂದು ವಶವಾಗದ್ದರಿಂದ ಆತನ ವ್ರತ ಸಮಾಪ್ತಿಯಾಗಲಿಲ್ಲ. ಇನ್ನೂ ಆತನು ಬ್ರಹ್ಮಚಾರಿಯ ವೇಷವನ್ನೂ, ಕಾಷಾಯವಸ್ತ್ರವನ್ನೂ ಬಿಟ್ಟದ್ದಿಲ್ಲ. ಆತನು ಎಲೆಯಲ್ಲಿಯೇ ಉಣ್ಣುತ್ತಿದ್ದನು. ಹುಲ್ಲುಹಾಸಿಗೆಯ ಮೇಲೆ ಮಲಗುತ್ತಿದ್ದನು. ಯಾವತ್ತು ಮೇವಾಡದೇಶವು ಆತನ ಕೈಸೇರಿದರೂ, ಆತನ ಔದಾಸೀನ್ಯವು ನಷ್ಟವಾಗಲಿಲ್ಲ. ಚಿತ್ತೂರು ವಶವಾಗಲಿಲ್ಲೆಂಬ ಚಿಂತೆಯಿಂದ ಆತನು ದಿನದಿನಕ್ಕೆ ಕೃಶವಾಗಹತ್ತಿದನು. ಆತನು ಚಿತ್ತೂರ ಸಂಬಂಧದಿಂದ ಯಾವಾಗಲೂ ಅನ್ನುತ್ತಿದ್ದದ್ದೇನಂದರೆ— "ಬಾಪ್ಪಾರಾವಳನಿಂದ ಇಲ್ಲಿಯವರೆಗೆ, ಅಂದರೆ ೮೦೦ ವರ್ಷಗಳಲ್ಲಿ ಸಾವಿರಾರು ಜನ ರಜಪೂತರು ಶೌರ್ಯದಿಂದ ಕಾದಿ ಚಿತ್ತೂರನ್ನು ತಮ್ಮ ಕೈಯಲ್ಲಿ ಇಟ್ಟುಕೊಂಡಿರುವರು. ದಿಲ್ಲಿಯ ಪೃಥ್ವಿರಾಜಚಹ್ವಾಣನ ಸಂಗಡ ಚಿತ್ತೂರ ಸಮರಸಿಂಗನು ಮರಣ ಹೊಂದಿದನಂತರ ರಜಪೂತರ ಕ್ಷಾತ್ರಧರ್ಮವು ಲುಪ್ತವಾಗುವ ಪ್ರಸಂಗವು ಬಂದಿತ್ತು; ಆದರೆ ಅದನ್ನು ತಪ್ಪಿಸಿ ಚಿತ್ತೂರ ಸಂರಕ್ಷಣ ಮಾಡಿಕೊಳ್ಳುವಾಗ ಲಕ್ಷಾವಧಿ ರಜಪೂತರ ಸಂಹಾರವಾಯಿತು! ಬಾಪ್ಪಾನ

ವಂಶಜರಲ್ಲಿ ಊರುಸಿಂಗನ ಹನ್ನೆರಡು ಮಂದಿ ಮಕ್ಕಳು ಚಿತ್ತೂರ ಸಲುವಾಗಿ ಒಬ್ಬರಹಿಂದೆ ಒಬ್ಬರಂತೆ ಸಾಲಾಗಿ ಪ್ರಾಣವನ್ನು ಕೊಟ್ಟರು. ಚಿತ್ತೂರ ಸಮರ ದೇವತೆಗೆ ದೇವಲಾ ಠಾಕೂರನೂ, ಜಯಮಲ್ಲನೂ, ಪಟ್ಟಾರಾ ಜನೂ ಬಲಿಯಾದರು. ಚಿತ್ತೂರ ಸಲುವಾಗಿ ಮೂರುಸಾರೆ ಜೋಹಾರ ವಾಗಿ ಸಾವಿರಾರು ಜನ ರಜಪೂತ ಸ್ತ್ರೀಯರು ತಮ್ಮ ಗಂಡಂದಿರಿಗೂ, ಮಕ್ಕ ಳಿಗೂ ಆವೇಶವು ಉತ್ಪನ್ನವಾಗುವದಕ್ಕಾಗಿ ಅಗ್ನಿಪ್ರವೇಶ ಮಾಡಿದರು; ಮತ್ತು ಸಾವಿರಾರು ಜನರ ಆತ್ಮಹತ್ಯವೂ, ವಧೆಯೂ ಆಗಿ, ಚಿತ್ತೂರು ಯಾವಾಗಲೂ ರಜಪೂತರ ವಶದಲ್ಲಿಯೇ ಇತ್ತು. ಇಂಥ ಪೂಜ್ಯವೂ, ಅಭಿಮಾನಾಸ್ಪದವೂ ಆದ ಚಿತ್ತೂರು ಪರಕಿಯರ ಕೈಸೇರಿದ್ದು ಲಾಂಛನವ ಲ್ಲವೆ? ನನ್ನ ಬಾಳಿಕೆಗೆ ಇದಕ್ಕೂ ಹೆಚ್ಚಿನ ಕುಂದು ಯಾವದಿರುವದು? ಉದಯಸಿಂಗನು ಚಿತ್ತೂರಿಂದ ಓಡಿ ಹೊದಬಳಿಕ ಆತನು ಪುನಃ ಅದರಲ್ಲಿ ಕಾಲು ಊರಿ ನಿಲ್ಲಲಿಕ್ಕೆ ಆಸ್ಪದ ದೊರೆಯಲಿಲ್ಲೆಂದಬಳಿಕ, ಸಿಸೋದಿಯಾ ವಂಶದ ಅಭಿಮಾನ-ಪರಾಕ್ರಮಗಳೇನು ಉಳಿದಹಾಗಾದವು? ಆ ಉದಯ ಸಿಂಗನ ಉದರದಲ್ಲಿಜನಿಸಿದ ನನ್ನಿಂದಲೂ ಆ ಮಹತ್ವದ ಕಾರ್ಯವು ಸಾಧಿಸ ಲಿಲ್ಲೆಂದಮೇಲೆ, ನನ್ನ ಪ್ರತಾಪಸಿಂಹನೆಂಬ ಹೆಸರನ್ನು ತಕ್ಕೊಂಡು ಮಾಡು ವದೇನು? ಇದರಿಂದ ನನಗೆ ಬಹಳ ನಾಚಿಕೆ ಬರುತ್ತದೆ; ಇಲ್ಲಿಯುವರೆಗೆ ನಾನು ಕಷ್ಟಪಟ್ಟದ್ದು ವ್ಯರ್ಥವಾಯಿತೆಂತಲೇ ತಿಳಿಯುವೆನು"

ಈ ಪ್ರಕಾರ ಚಿತ್ತೂರು ತನಗೆ ವಶವಾಗಲಿಲ್ಲೆಂಬ ಚಿಂತೆಯಲ್ಲದೆ, ಇನ್ನೊಂದರ ಚಿಂತೆಯು ಪ್ರತಾಪನನ್ನು ಬಾಧಿಸುತ್ತಿತ್ತು. ನಾನು ಇಲ್ಲಿಯು ವರೆಗೆ ಅಭಿಮಾನದಿಂದಲೂ, ಒಗರಿನಿಂದಲೂ, ಡೌಲಿನಿಂದಲೂ ಕಾಲಕ್ರ ಮಣ ಮಾಡಿದಂತೆ, ನನ್ನ ಮುಂದಿನವರು ಮಾಡುವರೋ ಇಲ್ಲವೊ ಎಂಬ ಶಂಕೆಯು ಅವನನ್ನು ಬಾಧಿಸುತ್ತಿತ್ತು. ಅದರಂತೆ ತನ್ನ ತರುವಾಯ ತನ್ನ ಮಕ್ಕಳು ತನ್ನ ಸ್ವಾತಂತ್ರ್ಯರಕ್ಷಣದ, ಹಾಗು ಮನೆತನದ ಪಾವಿತ್ರ್ಯರಕ್ಷಣದ ಕುಲವ್ರತವನ್ನು ನಡಿಸುವರೋಇಲ್ಲವೋ ಎಂದು ಆತನು ಆಲೋಚಿಸುತ್ತಿ ದ್ದನು. ಇದಲ್ಲದೆ, ತಾನು ಈ ವರೆಗೆ ಹಲವು ಬಗೆಯ ಕಷ್ಟಗಳನ್ನು ಅನು ಭವಿಸಿ ಪ್ರಯತ್ನಪಟ್ಟರೂ ಪೂರ್ಣವಾಗದ ತನ್ನ ಮನೋದಯಗಳನ್ನು, ಮುಂದಿನವರು ಸಫಲಗೊಳಿಸುವರೋ ಇಲ್ಲವೋ ಎಂಬ ಅಪನಂಬಿಗೆಯು

ಆತನ ಹೃದಯದಲ್ಲಿ ಕುದಿಯುತ್ತಿತ್ತು. ಇವೆಲ್ಲ ಮಾನಸಿಕ ತಾಪಗಳಿಂದ ಆತನ ಬೇನೆಯು ಹೆಚ್ಚಾಗುತ್ತ ಹೋಯಿತು. ತಮ್ಮ ಮಹಾರಾಣಾನು ಈ ಬೇನೆಯಿಂದ ಪಾರಾದಾನೆಂಬ ಆಶೆಯು ಯಾರಿಗೂ ಉಳಿಯಲಿಲ್ಲ. ಶೂರನೂ, ಧೀರನೂ, ಗಂಭೀರನೂ ಆದ ಈ ಪುರುಷನ ಮರಣಕಾಲದ ಸ್ಥಿತಿಯನ್ನು ಭಾಟರು ಬಹು ಹೃದಯದ್ರಾವಕವಾಗಿ ವರ್ಣಿಸಿರುತ್ತಾರೆ. ಈ ಅದ್ವಿತೀಯ ಪುರುಷನು ಮರಣೋನ್ಮುಖನಾಗಿ ಹಾಸಿಗೆಯ ಮೇಲೆ ಮಲಗಿಕೊಂಡಿರುವಾಗ, ಆತನ ಸುತ್ತು ಮುತ್ತು ಆತನ ಪರಮವಿಶ್ವಾಸದ, ಹಾಗು ಪ್ರಾಣಕ್ಕೆ ಪ್ರಾಣಕೊಡುವ, ಆದರಂತೆ ಆತನ ಆಶಾ-ವೈಭವಗಳ ಆಧಾರ ಸ್ತಂಭದಂತೆಯಿದ್ದ, ಎಷ್ಟೋ ಶೂರ ಸರದಾರರೂ—ಮಿತ್ರರೂ ಕುಳಿತಿದ್ದರು. ತಮ್ಮಸ್ವಾಮಿಯ ಈ ದೇಹಾವಸಾನದ ಸ್ಥಿತಿಯನ್ನುನೋಡಿ ಅವರಿಗೆ ಬಹಳ ದುಃಖವಾಗಿತ್ತು; ಆದರೆ ಅವರು ತಮ್ಮ ರಾಣಾನಿಗೆ ಕ್ಲೇಶವೂ—ದುಃಖವೂ ಆಗಬಾರದೆಂದು ತಮ್ಮ ದುಃಖವನ್ನೆಲ್ಲ ನುಂಗಿಕೊಂಡು ಬಹು ಗಾಂಭೀರ್ಯದಿಂದ ರಾಣಾನಕಡೆಗೆ ನೋಡುತ್ತ ಸುಮ್ಮನೆ ಕುಳಿತುಕೊಂಡಿದ್ದರು; ಆದರೂ ರಾಣಾನು ಸಮಾಧಾನಪಡದೆ ತಳಮಳಿಸುತ್ತಲಿದ್ದನು. ಆತನ ಜೀವಕ್ಕೆ ಸಮಾಧಾನವಾಗದೆ ಆತನ ಚಿತ್ತವೃತ್ತಿಯು ಉಕ್ಕಿಬಂದು, ಪುನಃ ಆತನು ಕೈನ್ಯದಿಂದ ಬಿದ್ದುಕೊಳ್ಳುತ್ತಿದ್ದನು.

ಹೀಗೆ ಕೆಲವು ಹೊತ್ತಿನವರೆಗೆ ರಾಣಾನು ವ್ಯಥೆಪಡುವದನ್ನು ನೋಡಿ ಸಾಳುಂಬ್ರ್ಯದ ಠಾಕೂರನು ಮುಂದಕ್ಕೆ ಬಂದು ರಾಣಾನನ್ನು ಕುರಿತು—"ಮಹಾರಾಜರೇ, ಜೀವಕ್ಕೆ ಯಾಕೆ ಕ್ಲೇಶವಾಗುತ್ತದೆ? ಸಮಾಧಾನದಿಂದ ಪ್ರಾಣವು ಯಾಕೆ ಹೋಗಲೊಲ್ಲದು?" ಎಂದು ಕೇಳಲು, ಪ್ರತಾಪನು ಕುಗ್ಗಿದ ದನಿಯಿಂದ—ನನ್ನ ತರುವಾಯ ನನ್ನ ದೇಶವು ಮೊಗಲರ ಕೈಸೇರಬಾರದು. ಈ ಮಾತಿನ ನಂಬಿಗೆಯನ್ನು ಯಾರಾದರೂ ಮಾಡಿಕೊಟ್ಟರೆ, ನಾನು ಸುಖದಿಂದ ಪ್ರಾಣಬಿಡುವೆನು. ಮಗನು ತಂದೆಯ ಇಚ್ಛೆಯನ್ನು ಪೂರ್ಣಮಾಡುವದರಿಂದ ಪಿತೃಋಣದಿಂದ ಮುಕ್ತನಾಗುವನು; ಆದರೆ ನನ್ನ ಮಗನಾದ ಅಮರಸಿಂಹನು ನನ್ನಂತೆ ಕಷ್ಟವನ್ನನುಭವಿಸಿ ನನ್ನ ಬಯಕೆಯನ್ನು ಪೂರ್ಣಮಾಡುವನೆಂಬ ನಂಬಿಗೆಯು ನನಗಿಲ್ಲ. ಇದಕ್ಕೆ ಕಾರಣವುಂಟು. ಕೈಬಿಟ್ಟು ಹೋಗಿದ್ದ ರಾಜ್ಯವು ನನಗೆ ದೊರೆತರೂ ನಾನು ಗುಡಿಸಿ

ಲಿನಲ್ಲಿಯೇ ಇಗುತ್ತಿರುವೆನಷ್ಟೇ? ನಮ್ಮ ಅಮರಸಿಂಹನು ಒಮ್ಮೆ ಬಗ್ಗಿ ಗುಡಿಸಿಲಿನೊಳಗೆ ಬಾರದೆ, ಸೆಟಕೊಂಡು ಬಂದದ್ದರಿಂದ ಆತನ ಮುಂಡಾಸವು ಗಳಕ್ಕೆ ತಾಕಿ ಕೆಳಗೆ ಬೀಳಲು, ಆತನಿಗೆ ಸಂತಾಪವಾಯಿತು; ಆತನು ಮರುದಿವಸ ಆ ಗುಡಿಸಲು ಕಿತ್ತು, ಅಲ್ಲಿ ಅರಮನೆ ಕಟ್ಟಿಸಲಿಕ್ಕೆ ನನ್ನ ಅನುಮತಿಯನ್ನು ಕೇಳಿದನು! ಹೊತ್ತು ಬಂದಹಾಗೆ ಹೋಗುವದನ್ನು ನಮ್ಮ ಅಮರನು ಅರಿಯನು; ಅಂದಬಳಿಕ ಆತನು ನನ್ನ ಬಯಕೆಯನ್ನು ಹ್ಯಾಗೆ ಪೂರ್ಣಮಾಡ್ಯಾನು? ನನ್ನ ಕೈಸೇರದೆ ಉಳಿದಿದ್ದ ಚಿತ್ತೂರನ್ನು ಆತನು ಹ್ಯಾಗೆ ಕೈವಶಮಾಡಿಕೊಂಡಾನು? ನಮ್ಮ ಪ್ರಿಯ ಠಾಕೂರರೇ, ಸರದಾರರೇ, ಮಿತ್ರರೇ, ಚಂದಾವತಕೃಷ್ಣ, ಹೀಗಿರಲು ನಿಮ್ಮ ರಾಣಾನ ಜೀವವು ಸಮಾಧಾನದಿಂದ ಹೋಗಬಹುದೋ? ಎಂದು ಕೇಳಿದನು. ಇಷ್ಟು ಮಾತಾಡುವದರೊಳಗೆ ರಾಣಾನಿಗೆ ಆಯಾಸವಾಗಿ ಆತನು ಕಣ್ಣುಗಳನ್ನು ಮುಚ್ಚಿದನು. ಆತನಿಗೆ ಗ್ಲಾನಿಯು ಬಂದಂತಾಯಿತು. ಅದನ್ನು ನೋಡಿ ಎಲ್ಲರೂ ಅಸಮಾಧಾನಪಡುತ್ತಿರಲು, ರಾಣಾನು ಚೇತರಿಸಿ ಕಣ್ಣು ತೆರೆದು ಎಲ್ಲರನ್ನು ನೋಡಹತ್ತಿದನು. ಘೋರ ಸಮರದಲ್ಲಿ ದೀನನಾಗದ ಆ ವೀರನ ಮುಖದಲ್ಲಿ ಇಂದು ದೈನ್ಯವು ತೋರುತ್ತಿತ್ತು. ಅದನ್ನು ನೋಡಿ ವೃದ್ಧ ಚಂದಾವತನು—ಮಹಾಪ್ರಭುವೇ? ತಮ್ಮ ಸೇವಕರಾದ ನಾವೆಲ್ಲರು ಜೀವದಿಂದಿರಲು, ತಮಗೆ ಚಿಂತೆಯೇಕೆ? ತಮ್ಮ ಕುಲವ್ರತವನ್ನು ಮುಂದಕ್ಕೆ ಸಾಗಿಸದಂಥ ಕೃತಘ್ನರು ತಮ್ಮ ಸೇವಕರಲ್ಲಿ ಯಾರೂ ಇರುವದಿಲ್ಲ. ಪ್ರಭುಗಳು ಶಾಂತರಾಗಬೇಕು!

ಪ್ರತಾಪಸಿಂಹ—ಪ್ರಿಯ ಚಂದಾವತಕೃಷ್ಣ! ಶಾಂತಿಯನ್ನು ತಾಳಬೇಕೆಂಬದು ನನಗೆ ತಿಳಿಯುತ್ತದೆ; ಆದರೆ ಶಾಂತವಾಗಲಿಕ್ಕೆ ನನಗೆ ಬರಲೊಲ್ಲದು. ನನ್ನ ಹೃದಯವು ಶಾಂತವಾಗಬೇಕಾದರೆ ಅಂಥ ಶಾಂತಮೂರ್ತಿಯ ದರ್ಶನವೂ ಸದ್ಬೋಧವೂ ನನಗೆ ಆಗಲಿಕ್ಕೆ ಬೇಕು; ಲೋಕಮಾತೆಯಾದ ಸಾತ್ವಿಕೆಯೂ, ಲೋಕ ಪಿತೃವಾದ ತಪೋಧನನೂ ಕಷ್ಟಕಾಲದಲ್ಲೆಲ್ಲ ನನ್ನನ್ನು ಸಮಾಧಾನಗೊಳಿಸುತ್ತ ಬಂದಿರುವರು; ಆದರೆ ದುರ್ದೈವಿಯಾದ ಪ್ರತಾಪನು ಮರಣೋನ್ಮುಖನಾಗಿರಲು, ಅವರು ದರ್ಶನಕೊಡಲೊಲ್ಲರಲ್ಲ! ಹಾ! ಹತಭಾಗ್ಯನಾದ ಪ್ರತಾಪಾ! ಮರಣವು ಸಹ ನಿನಗೆ ಸುಖದಿಂದ ಬರು

ವಂತೆಯಿಲ್ಲವೇ? ಅಂತೇ ಆ ಮಹಾತ್ಮರ ದರ್ಶನವು ಅಂತ್ಯಕಾಲದಲ್ಲಿ ನಿನಗೆ ಆಗಲೊಲ್ಲದು! ಚಂದಾವತಕೃಷ್ಣ, ಅಂದು ದರ್ಬಾರದಲ್ಲಿ ದರ್ಶನಕೊಟ್ಟು ಸದ್ಬೋಧಮಾಡಿ ಆ ದೈವೀ ದಂಪತಿಗಳು ಈಗ ಯಾಕೆ ದರ್ಶನಕೊಡಲೊಲ್ಲರು! ಅವರ ದರ್ಶನದ ಹೊರತು ನನಗೆ ಶಾಂತಿಯು ಪ್ರಾಪ್ತವಾಗದು! ಹಾಯ್! ಹಾಯ್! ಮಹಾತ್ಮರಾದ ಸಾತ್ವಿಕಾ—ತಪೋಧನರೇ, ಎತ್ತ ಅಡಗಿದಿರಿ!

ಈ ಮೇರೆಗೆ ನುಡಿದು, ಪ್ರತಾಪನು ಆಯಾಸದಿಂದ ಮತ್ತೆ ಕಣ್ಣು ಮುಚ್ಚಿದನು! ಬಿಮ್ಮನೆ ದಣಿದವನಂತೆ ಅವನ ಮೋರೆಯು ಬೆವತಿತು. ಕೆಲಹೊತ್ತಿನ ಮೇಲೆ ಆ ಮರಣೋನ್ಮುಖನು ಉಶ್ಶೆಂದು ಉಸುರ್ಗರೆದು, ಕಣ್ದೆರೆದು ನೋಡಲು, ಸಾತ್ವಿಕಾ—ತಪೋಧನರ ಮೂರ್ತಿಗಳು ಆತನ ಕಣ್ಣಿಗೆ ಬಿದ್ದವು. ಕೂಡಲೆ ಪ್ರತಾಪನಿಗೆ ಹೊಸ ಜೀವಬಂದಂತಾಗಿ ಆತನು ಆವೇಶದಿಂದ ಎದ್ದು ಕುಳಿತು, ಆ ಪುಣ್ಯಮೂರ್ತಿಗಳನ್ನು ಭಕ್ತಿಯಿಂದ ವಂದಿಸಿದನು. ಯಾವ ಆಪ್ತರನ್ನು ನೋಡಿದರೂ ಆಗದ ಸಮಾಧಾನವು, ಆ ದಂಪತಿಗಳನ್ನು ನೋಡಿ ಪ್ರತಾಪನಿಗೆ ಆಯಿತು! ಇಲ್ಲಿಯವರೆಗೆ ಪ್ರತಾಪನ ಕಣ್ಣೊಳಗಿಂದ ಸುರಿಯುತ್ತಿದ್ದ ದುಃಖಾಶ್ರುಗಳು ಈಗ ಆನಂದಾಶ್ರುಗಳ ರೂಪವನ್ನು ಹೊಂದಿದವು! ಆತನ ಕಂಠವು ಬಿಗಿದು ಮಾತುಗಳು ಹೊರಡದಾದವು. ಅಲ್ಲಿ ನೆರೆದವರ ಲಕ್ಷವನ್ನು ಆ ಪುಣ್ಯಮೂರ್ತಿಗಳು ಎಳಕೊಂಡರು. ದುಃಖದ ಭಾವನೆಯು ಯಾರ ಹೃದಯದಲ್ಲಿಯೂ ಉಳಿದಿದ್ದಿಲ್ಲ. ಶಾಂತಿಯ ಸಾಮ್ರಾಜ್ಯವು ಅಲ್ಲಿ ನೆಲಿಸಿದಂತಾಗಿತ್ತು! ಪ್ರಿಯವಾಚಕರೇ, ಸತ್ಪುರುಷರ ದರ್ಶನದಿಂದ ಸ್ವಾಭಾವಿಕವಾಗಿ ಆಗುವ ಸತ್ಪರಿಣಾಮವನ್ನು ಕುರಿತು ನೀವು ವಿಚಾರಿಸತಕ್ಕದು. ಇಷ್ಟು ಜನ ಆಪ್ತರಿಷ್ಟರಿದ್ದರೂ ಅವರಿಂದ ಪ್ರತಾಪನಿಗೆ ಸಮಾಧಾನವಾಗಿದ್ದಿಲ್ಲ. ಅಂಥ ಮಹತ್ವದ ಯೋಗ್ಯತೆಯ ರಾಣಾನಾದರೂ ತನ್ನ ಪರಿವಾರಕ್ಕೆ ಸಮಾಧಾನವನ್ನುಂಟು ಮಾಡಲು ಸಮರ್ಥನಾಗಲಿಲ್ಲ. ಹೀಗಿರಲು, ಪ್ರತಾಪನಿಗೂ—ಆತನ ಪರಿವಾರಕ್ಕೂ ಕೂಡಿಯೇ ದರ್ಶನಮಾತ್ರದಿಂದ ತತ್‌ಕ್ಷಣ ಶಾಂತಿಪ್ರದಾನಮಾಡಿದ ಸತ್ಪುರುಷರ ಆಪದ್ಬಂಧುತ್ವವನ್ನೇನೆಂದು ವರ್ಣಿಸಬೇಕು? ಆ ತೇಜೋಮೂರ್ತಿಗಳ ಆಕಸ್ಮಿಕಾಗಮನದಿಂದ ಎಲ್ಲರ ಆಧಿವ್ಯಾಧಿಗಳು ಲಯಹೊಂದಿದವು. ಪರವಶತೆಯು ಎಲ್ಲರನ್ನು ಆವರಿಸಿತು.

ಯಾರ ಮುಖದಿಂದಲೂ ಸಿಟ್ಟಿಂದು ಶಬ್ದಗಳು ಹೊರಡಲಿಲ್ಲ. ಒಂದು ಕ್ಷಣವೇ ಆಗಲೊಲ್ಲದೇಕೆ, ಸತ್ಸಮಾಗಮದ ಯೋಗದಿಂದ ವಿಕಾರರಹಿತ ವಾದ ಆನಂದವನ್ನು ಎಲ್ಲರೂ ಅನುಭವಿಸಿದರು. ಅಷ್ಟರಲ್ಲಿ ಸಾತ್ವಿಕೆಯು ಪ್ರತಾಪನ ಬಳಿಯಲ್ಲಿ ಕುಳಿತು ಆತನ ಮೈ ಮೇಲೆ ಕೈಯಾಡಿಸಿ ಕರುಣಾರ್ದ್ರ ಹೃದಯದಿಂದ—ಪುತ್ರಾ, ಘನತರವಾದ ಯೋಗ್ಯತೆಯ ಮಹಾರಾಣಾ, "ಜಾತಸ್ಯಮರಣಂ ಧ್ರುವಂ" ಎಂಬಂತೆ ಎಂದಾದರೊಂದುದಿನ ಪ್ರಾಣಿಮಾತ್ರ ರಿಗೆ ಸಿದ್ಧವಾಗಿದ್ದ ಮರಣವು ಇಂದು ನಿನಗೆ ಬಂದಿತೇ? ಧನ್ಯನು, ನೀನು ಪರಮಧನ್ಯನು! ಕರ್ತವ್ಯತತ್ಪರನಾಗಿ, ಸತ್ವಕ್ಕೆ ಭಂಗವನ್ನು ತಂದುಕೊ ಳ್ಳದೆ ಇಹಲೋಕದ ಯಾತ್ರೆಯನ್ನು ಮುಗಿಸಿ, ಕರ್ತವ್ಯದ ಪರಿಸಮಾಪ್ತಿ ಯಾಗಲಿಲ್ಲೆಂದು ತಳಮಳಿಸುತ್ತ ಮರಣೋನ್ಮುಖನಾಗಿರುವ ನೀನು, ಪರಮ ಧನ್ಯನು ಕಂಡೆಯಾ! ನೀನು ಅಂಥ ಧನ್ಯನಾದದ್ದರಿಂದಲೇ ನಾವು ಇದ್ದ ಲ್ಲಿಂದ ನಿನಗೆ ಅಂತ್ಯಕಾಲದಲ್ಲಿ ದರ್ಶನಕೊಡಬೇಕಾಯಿತು. ಪ್ರಾಣಿಗಳು ಏನಾದರೂ ಮಾಡಿ ಹುಟ್ಟಿ, ಏನಾದರೂ ಮಾಡುತ್ತ ಜೀವಿಸಿ, ಏನಾದರೂ ಮಾಡುವದಕ್ಕಾಗಿ ಮರಣಹೊಂದುವದೇ ಬಹಳ: ಆದರೆ ಭಾಗ್ಯಶಾಲಿಯಾದ ಪುತ್ರಾ, ನೀನು ಈ ಸಾಮಾನ್ಯ ನಿಯಮಕ್ಕೆ ಹೊರಗಾದ ಅಲೌಕಿಕ ಪುರುಷ ನಿರುತ್ತೀ. ನೀನು ಮೇವಾಡದ ಸ್ವಾತಂತ್ರ್ಯರಕ್ಷಣ ಮಾಡಲಿಕ್ಕೆ ಅನುಕೂಲ ವಾದ ಕರ್ಮವನ್ನು ಮಾಡಿ ಹುಟ್ಟಿ, ಮೇವಾಡದ ಸ್ವಾತಂತ್ರ್ಯವನ್ನು ಕಾಯ್ದು ಕೊಳ್ಳುತ್ತ ಜೀವಿಸಿ, ಮೇವಾಡದ ಸ್ವಾತಂತ್ರ್ಯದ ಕಾರ್ಯವು ಪೂರ್ಣವಾಗ ಲಿಲ್ಲೆಂದು ಮರುಗುತ್ತ, ಮುಂದೆ ಕಾರ್ಯವು ಹ್ಯಾಗಾದೀತೆಂಬ ಯೋಚನೆ ಯಿಂದ ಪ್ರಾಣಬಿಡುತ್ತಿರುವೆಯಲ್ಲ! ಅಹಹ! ಪುತ್ರಾ, ನಿನ್ನ ಈ ಭೂತ- ವರ್ತಮಾನ-ಭವಿಷತ್ಕಾಲದ ಏಕಕ್ರಿಯೆಯು, ನಿಜವಾಗಿ ನಿನ್ನ ಉದ್ಧಾರಕ್ಕೆ ಕಾರಣವಾಗುವದು. ನಿನ್ನಂಥ ಕ್ರಿಯಾವಂತರೇ ಸದ್ಗುರುವಿನ ಕೃಪೆಗೆ ಅಥವಾ ಈಶ್ವರ ಕೃಪೆಗೆ, ಪಾತ್ರರಾಗುವರು. ಮಹಾತ್ಮನಾದ ಪುತ್ರಾ, ನಿನಗೆ ಶಾಶ್ವತಶಾಂತಿಯು ದೊರಕುವ ಕಾಲವು ತೀರ ಸಮೀಪಿಸಿರುತ್ತದೆ, ಅದಕ್ಕಾಗಿಯೇ ಮಹಾಪುರುಷರಾದ ತಪೋಧನರು ನಿನ್ನಬಳಿಗೆ ಬಂದಿದ್ದಾರೆ. ಅವರ ಸದ್ಬೋಧ ಶ್ರವಣದಿಂದ ನೀನು ಧನ್ಯನಾಗು! ಕೃತಕೃತ್ಯನಾಗು!! ಮುಕ್ತನಾಗು!!!

ಸಾತ್ವಿಕೆಯು ಈ ಮಾತುಗಳನ್ನು ಕೇಳಿ ಪ್ರತಾಪನ ಅಂತಃಕರಣವು ಪ್ರಫುಲ್ಲಿತವಾಯಿತು. ಆತನ ಅಂತ್ಯಕಾಲದ ವೇದನೆಗಳು ಇಲ್ಲವಾದವು, ಆತನು ಸಶಕ್ತನಂತೆ ಎದ್ದುಕುಳಿತು, ಸಾತ್ವಿಕೆಯನ್ನು ವಂದಿಸಿ—ಜಗನ್ಮಾತೇ, ಮರಣದ ಪಂಥವನ್ನು ಹಿಡಿದಿದ್ದ ಪ್ರತಾಪನ ಸಂಜೀವನವು ನಿನ್ನ ಬೋಧಾಮೃತದಿಂದ ಆಯಿತು. ನಾನು ಧನ್ಯನೇ ಸರಿ; ಆದರೆ ತಾಯಿ, ನಾನು ಮಾಡಿದ ಮಹತ್ಕೃತ್ಯವೇನು? ಮೇವಾಡವನ್ನು ಹಾಳುಗೆಡವಿದೆನು, ಪ್ರಜೆಗಳಿಗೆ ತಾಪಕೊಟ್ಟೆನು, ಆಪ್ತೇಷ್ಟರನ್ನು ಕಷ್ಟಪಡಿಸಿದೆನು, ನನ್ನ ಹೆಂಡಿರು ಮಕ್ಕಳನ್ನು ಬಳಲಿಸಿದೆನು, ನಾನು ಕಟಕಟ ಕಂದಿದೆನು, ಭೂತದಯೆಗೆ ವಿರುದ್ಧವಾಗಿ ರಕ್ತದ ಕಾಲಿವೆಯನ್ನು ಹರಿಸಿದೆನು. ತಾಯಿ, ಅಧಮನಾದ ನಾನು ದೇವ–ಬ್ರಾಹ್ಮಣರನ್ನು ಸೇವಿಸಲಿಲ್ಲ; ಪರೋಪಕಾರವನ್ನು ಮಾಡಲಿಲ್ಲ; ಸಾತ್ವಿಕವೃತ್ತಿಯನ್ನು ತಾಳಿ ಶತ್ರು–ಮಿತ್ರ ಸಮಭಾವದಿಂದ ಸಾಧುವೆನಿಸಿಕೊಳ್ಳಲಿಲ್ಲ. ಇಂಥ ನೀಚನು ನಾನು ತಪೋಧನರ ಬೋಧಗ್ರಹಣಕ್ಕೆ ಹ್ಯಾಗೆ ಯೋಗ್ಯನಾಗುವೆನು? "ನನ್ನ ಕರ್ತವ್ಯ ನನ್ನ ಕರ್ತವ್ಯವೆಂ"ದು ಹಂಬಲಿಸುತ್ತ ಕರ್ತವ್ಯದಕ್ಷತೆಯ ನೆವದಿಂದ ಕೊಡಬಾರದ ತಾಪವನ್ನು ಮಂದಿಗೆ ಕೊಟ್ಟೆನು, ನಾನೂ ಅನುಭವಿಸಿದೆನು. ಹೀಗೆ ಕರ್ತವ್ಯಮೂಢನಾದ ನನಗೆ ಏನೂ ತಿಳಿಯಲೊಲ್ಲದು. ಕರುಣಾಳುಗಳಾದವರು ಅನುಗ್ರಹಿಸಿ, ಯೋಗ್ಯ ಬೋಧದಿಂದ ನನಗೆ ಶಾಶ್ವತ ಶಾಂತಿಯನ್ನುಂಟು ಮಾಡಿದರೆ ಮಾಡಬೇಕು, ಎಂದು ಪ್ರಾರ್ಥಿಸಿ, ಆತನು ಅತ್ಯಂತ ದೈನ್ಯದಿಂದ ಕೈ ಜೋಡಿಸಿ ತಲೆಬಾಗಿಸಿ ಕುಳಿತುಕೊಂಡನು. ಆಗ ತಪೋಧನನು ಪ್ರತಾಪಸಿಂಹನನ್ನು ಕುರಿತು ಗಾಂಭೀರ್ಯದಿಂದ—ಪ್ರತಾಪಾ, ನಿನ್ನ ಯಥಾರ್ಥವಾದ ವಿಚಾರಸರಣಿಯನ್ನೂ, ಸತ್ಯನಿರೂಪಣವನ್ನೂ ಕೇಳಿ ನನಗೆ ಬಹಳ ಸಮಾಧಾನವಾಗಿದೆ. ಪುತ್ರಾ, ನೀನು ಈವೊತ್ತಿನವರೆಗೆ ಮಾಡಿದ ತಪಶ್ಚರ್ಯವನ್ನು ಹಳಿದುಕೊಂಡು, ದೇವಬ್ರಾಹ್ಮಣರ ಸೇವೆಮಾಡಲಿಲ್ಲೆಂತಲೂ, ಸಾಧುವೃತ್ತಿಯವನಾಗಲಿಲ್ಲೆಂತಲೂ ಮರುಗುವದನ್ನು ನೋಡಿ ನನಗೆ ಕೌತುಕವಾಗುತ್ತದೆ! ಇದು ಕೇಳಿಕೆಯ ಮಾತಿನ ಚೇಷ್ಟೆಯು; ಯಾಕಂದರೆ ದೇವರ ಸೇವೆಯನ್ನು ಮಾಡಲಿಕ್ಕೆ ದೇವರ ಗುರುತೂ, ಬ್ರಾಹ್ಮಣರ ಸೇವೆಮಾಡಲಿಕ್ಕೆ ಬ್ರಾಹ್ಮಣರ ಗುರುತೂ ಇರಬೇಕಾಗುತ್ತದೆ. ಆವೆರಡರ ಗುರುತೂ ನಿನಗೆ ಇದ್ದಂತೆ

ತೋರುವದಿಲ್ಲ; ಇದ್ದರೆ ಮರಣಕಾಲದಲ್ಲಿ ನಿನಗೆ ಅಸಂತುಷ್ಟತೆಯ ಈ ತಾಪವು ಆಗುತ್ತಿದ್ದಿಲ್ಲ. ಅಪ್ಪಾ, ಸರ್ವತ್ರ ಸಮಭಾವವು ಸಾಧುತ್ವದ ಲಕ್ಷಣವಾದದ್ದರಿಂದ, ಸಾಧುತ್ವವು ಹಾದಿಯ ಮೇಲೆ ಬಿದ್ದಿಲ್ಲ. "ಶುನಿಚೈವಶ್ವಪಾಕೇಚಪಂಡಿತಾಃ ಸಮದರ್ಶಿನಃ" ಎಂಬ ಭಗವಂತನ ಉಕ್ತಿಯಂತೆ, ಬ್ರಹ್ಮನಿಷ್ಠನಾಗಲಿಕ್ಕೆ ಸರ್ವತ್ರ ಸಮಭಾವವು ಬೇಕಾಗುತ್ತದೆ. ಆ ಸಮಭಾವವು ನಿನಗೆ ಎಲ್ಲಿ ಅದೆ? ಅಕಬರಬಾದಶಹನನ್ನು ನೀನು ಶತ್ರುವೆಂದು ತಿಳಿಯುವೆ; ಚಂದಾವತಕೃಷ್ಣನನ್ನು ಮಿತ್ರನೆಂದು ತಿಳಿಯುವೆ; ಆದರೂ ನಾನು ನಿನ್ನನ್ನು ಮಹಾತ್ಮನೆಂತಲೇ ತಿಳಿಯುವೆನು. ಮಾತಿನಿಂದ ಮರವೇದಾಂತವನ್ನು ಬೊಗಳುವ ಅಧಮಾಧಮರಿಗಿಂತ ನಿನ್ನ ಯೋಗ್ಯತೆಯು ಬಹು ದೊಡ್ಡದಿರುತ್ತದೆ. ಪುತ್ರಾ, ಬ್ರಹ್ಮನಿಷ್ಠೆಯ ಯೋಗ್ಯತೆಯ ಪಾವಟಿಗೆಯನ್ನು ಏರಿ ಹೋಗಲಿಕ್ಕೆ ಸ್ವನಿಷ್ಠೆ, ಸ್ವಕರ್ತವ್ಯ ನಿಷ್ಠೆ, ಸನ್ನಿಷ್ಠೆ ಎಂಬ ಮೂರು ಪಾವಟಿಗೆಯನ್ನು ಏರಿ ಹೋಗಬೇಕಾಗುತ್ತದೆ. ನಾಲ್ಕನೆಯ ಪಾವಟಿಗೆಯೇ ಬ್ರಹ್ಮನಿಷ್ಠೆಯು, ಅಂದರೆ ಸರ್ವತ್ರ ಸಮಭಾವವು. ಂಥ ಭಾವನೆಯುಳ್ಳ ಪ್ರಲ್ಹಾದನಂಥ ಭಗವದ್ಭಕ್ತರೇ "ಸರ್ವಂ ವಿಷ್ಣುಮಯಂ ಜಗತ್" ಎಂಬ ತಮ್ಮ ಅನುಭವದ ಮಾತನ್ನು ಒಡನುಡಿದು ತೋರಿಸಿರುವರು! ಅಂಥ ಬ್ರಹ್ಮಾನುಭವವಿಲ್ಲದ ನಿನಗೆ, ವೇದಾಂತಿಗಳ ಮಾತಿನಿಂದಾಗುವ ಪ್ರಯೋಜನವೇನು? ಆದರೂ ನೀನು ಆರಂಭದ ಸ್ವನಿಷ್ಠೆ, ಸ್ವಕರ್ತವ್ಯನಿಷ್ಠೆಯೆಂಬ ಎರಡು ಮಹತ್ವದ ಪಾವಟಿಗೆಗಳನ್ನು ಏರಿರುತ್ತೀ; ಅಂದರೆ ನೀನು ಮಾಡತಕ್ಕ ಕೆಲಸವನ್ನು ಮಾಡಿರುತ್ತೀ. ಇನ್ನು ಮುಂದಿನ ಎರಡು ಪಾವಟಿಗೆಗಳನ್ನೇರುವ ಕೆಲಸವು ನಿನ್ನದಲ್ಲ; ಸದ್ಗುರುವಿನದು. ಮೊದಲಿನ ಎರಡು ಪಾವಟಿಗೆಗಳನ್ನು ಏರಿದವರಿಗೇ ಸದ್ಗುರುವಿನ ದರ್ಶನವಾಗಿ ಅವರಲ್ಲಿ ಸನ್ನಿಷ್ಠೆಯು ಉತ್ಪನ್ನವಾಗುವದು. ಆ ಮೇಲೆ ಸದ್ಗುರು ಕೃಪೆಯಿಂದ ಸರ್ವತ್ರ ಸಮಭಾವವು, ಅಥವಾ ಬ್ರಹ್ಮನಿಷ್ಠೆಯು ಪ್ರಾಪ್ತವಾಗುವದು!

ಪುತ್ರಾ, ಇನ್ನು ನಾನು ನಿನಗೆ ಈ ನಾಲ್ಕೂಪ್ರಕಾರದ ನಿಷ್ಠೆಗಳ ವಿವೇಚನವನ್ನು ಸ್ವಲ್ಪದರಲ್ಲಿ ಮಾಡುವೆನು, ಕೇಳು. ಸ್ವನಿಷ್ಠೆಯೆಂದರೆ ತನ್ನಲ್ಲಿ ತನ್ನ ನಂಬಿಗೆಯು, ಅಂದರೆ ನಾನು ಕರ್ತೃತ್ವಶಾಲಿಯೆಂಬ ಭಾವನೆಯು; ಅಥವಾ ನಿಜವಾದ ಅಹಂಕಾರವು. ನಾನು ಕಃಪದಾರ್ಥವು, ನನ್ನಲ್ಲಿ ಯಾವ

ಯೋಗ್ಯತೆಯೂ ಇಲ್ಲ, ನನ್ನಿಂದ ಯಾವ ಕೆಲಸವೂ ಆಗುವದಿಲ್ಲ, ಇಂಥ ಹೇಡಿಯಾದ ನನಗೆ ಒಣ ಉಸಾಬರಿಯು ಯಾಕೆ ಬೇಕು, ಅನ್ನುವವರು ಸ್ವನಿಷ್ಠೆಯುಳ್ಳವರಲ್ಲ. ಇವರು ತೀರ ಅಧಮರು! ಇವರ ಮನುಷ್ಯ ಜನ್ಮವು ನಿರರ್ಥಕವಾದದ್ದು. ಮೂರ್ತಿಮಂತ ಪ್ರತಾಪಾ, ಇಂಥ ಹೇಡಿತನವು ನಿನ್ನ ಆಯುಷ್ಯದಲ್ಲಿ ನಿನ್ನ ಅನುಭವಕ್ಕೆ ಬಾರದ್ದರಿಂದಲೇ, ಅಕಬರನಂಥ ಅಲೌಕಿಕ ಸಾಮರ್ಥ್ಯವುಳ್ಳ ಸಮರ್ಥ ಸಾರ್ವಭೌಮನ ಸಂಗಡನೀನು ಇಪ್ಪತ್ತೈದು ವರ್ಷ ಒಂದೇಸವನೆ ಕಾದಿದೆ! ಈ ಸ್ವನಿಷ್ಠೆಯು, ಅಥವಾ ಸ್ವಾವಲಂಬನವು ನಿನ್ನಲ್ಲಿ ಇದ್ದದ್ದರಿಂದಲೇ ನಿನ್ನಲ್ಲಿ ಸ್ವಕರ್ತವ್ಯ ನಿಷ್ಠೆಯು ಉತ್ಪನ್ನವಾಯಿತು. ಪುಣ್ಯಶಾಲಿಯಾದ ನೀನು, ಮೇವಾಡದ ಸ್ವಾತಂತ್ರ್ಯರಕ್ಷಣ ರೂಪವಾದ ಆಸ್ವ ಕರ್ತವ್ಯವನ್ನು ಮಾಡುವಾಗ ನಿನ್ನನ್ನು, ಅಂದರೆ ಸ್ವನಿಷ್ಠೆಯನ್ನು ಮರೆತುಬಿಟ್ಟೆ; ಅಂದರೆ ನಿನ್ನ ಸುಖದ-ಅದೇಕೆ, ನಿನ್ನ 'ಜೀವಿತದ ಹಂಗನ್ನು ಸಹ ಬಿಟ್ಟುಬಿಟ್ಟೆ! ಧನ್ಯ ಪುರುಷನೇ, ದೇಹಪಾತವಾದರೂ ಅಕಬರನಿಗೆ ಶರಣುಹೋಗಲಿಕ್ಕಿಲ್ಲೆಂಬ ಹಟವನ್ನು ಮರಣಪರ್ಯಂತರ ನಡಿಸಿದ ನೀನು ಸಾಮಾನ್ಯ ಕರ್ತವ್ಯನಿಷ್ಠನೇ! ಇನ್ನು ಮೇಲೆ ಸದ್ಗುರುವಿನ ದೃಷ್ಟಿಯು ನಿನ್ನ ಮೇಲೆ ಬಿದ್ದು "ಮಂತ್ರಮೂಲಂ ಗುರೋರ್ವಾಕ್ಯಂ ಮೋಕ್ಷಮೂಲಂ ಗುರೋಃ ಕೃಪಾ" ಎಂಬಂತೆ ಗುರುವಚನದಲ್ಲಿ ಶ್ರದ್ಧೆಯನ್ನು ಇಟ್ಟು ಸ್ವಕರ್ತವ್ಯ ನಿಷ್ಠೆಯನ್ನು ನೀನು ಮರೆತರೆ, ಸ್ವನಿಷ್ಠೆ-ಸ್ವಕರ್ತವ್ಯ ನಿಷ್ಠೆಗಳೆರಡೂ ನಿನ್ನಲ್ಲಿ ನಷ್ಟವಾದಂತಾಗಿ, ಅವುಗಳ ಸ್ಥಳದಲ್ಲಿ ಸನ್ನಿಷ್ಠೆಯು ಉತ್ಪನ್ನವಾಗುವದು; ಆ ಮೇಲೆ ಶ್ರೀ ಗುರುಕೃಪೆಯಿಂದ ಬ್ರಹ್ಮನಿಷ್ಠೆಯು, ಅಂದರೆ ಸರ್ವತ್ರ ಸಮಭಾವನೆಯು, ಉತ್ಪನ್ನವಾಗುವದು; ಒಟ್ಟಿಗೆ, ಸ್ವನಿಷ್ಠೆಯು ನಷ್ಟವಾಗದೆ, ಸ್ವಕರ್ತವ್ಯನಿಷ್ಠೆಯೂ, ಸ್ವಕರ್ತವ್ಯನಿಷ್ಠೆಯು ನಷ್ಟವಾಗದೆ, ಸನ್ನಿಷ್ಠೆಯೂ, ಸನ್ನಿಷ್ಠೆಯು ನಷ್ಟವಾಗದೆ ಸರ್ವತ್ರನಿಷ್ಠೆ ಅಂದರೆ ಬ್ರಹ್ಮನಿಷ್ಠೆಯು ಉತ್ಪನ್ನವಾಗುವದಿಲ್ಲ. ಬ್ರಹ್ಮನಿಷ್ಠನಿಗೆ ಮಾತ್ರ ಸರ್ವತ್ರ ಸಮಭಾವವು! ಉಳಿದವರಿಗೆ ಆದರ ಸುದ್ದಿಯೇಕೆ? ಪುತ್ರಾ, ಇದನ್ನರಿಯದ ಅಧಮಾಧಮರಿಗೆ ಚಂಚಲ ವೃತ್ತಿಯ ಮರವೇದಾಂತಿಗಳ ಮಾತನ್ನು ಕೇಳಿ, ನಿನ್ನನ್ನು ಹಳಿದುಕೊಳ್ಳುತ್ತೀಯಲ್ಲ! ಕೃತಿಯಿಲ್ಲದೆ ಬರಿಯ ಬಾಯಿಂದ ವೇದಾಂತ ಹೇಳುವವರು, ಕೈಲಾಗದವರೂ, ಚಂಚಲರೂ, ವಂಚಕರೂ, ದುರಾಚಾರಿಗಳೂ ಇರುತ್ತಾರೆ;

ಅವರ ಮಾತನ್ನು ನಂಬಲಾಗದು. ಅವರಲ್ಲಿ ಸ್ವನಿಷ್ಠೆ-ಸ್ವಕರ್ತವ್ಯ ನಿಷ್ಠೆಗಳೆ ರಡೂ ಇರುವದಿಲ್ಲ. ಆದರ ಹುಳಕನ್ನು ಮುಚ್ಚಿಕೊಳ್ಳುವದಕ್ಕಾಗಿ ಅವರು ಸಾಧುಗಳ ಸೋಗು ಹಾಕಿಕೊಂಡು, "ನನಗೇನು ಸ್ವಾತಂತ್ರ್ಯವಿದೆ? ಸರ್ವ ತಂತ್ರಸ್ವತಂತ್ರನು ಈಶ್ವರನಿದ್ದಾನೆ. ನಾನು ಮಾಡುತ್ತೇನೆನ್ನುವದು ಅಹಂ ಕಾರವು, ವೃಥಾಭಿಮಾನವು; ಜಗತ್ತು ಮೋಹವಶವಾದದ್ದರಿಂದ ಇದು ನನ್ನದು, ಇದನ್ನು ನಾನು ಮಾಡುತ್ತೇನೆ, ಎಂದು ದುಡಿದು ದುಡಿದು ವ್ಯರ್ಥ ವಾಗಿ ದಣಿದು ಬಂಧನಕ್ಕೊಳಗಾಗುವದು." ಇತ್ಯಾದಿ ಒಂದಲ್ಲ-ಎರಡಲ್ಲ ನೂರಾರು ಹಾಳ ವೇದಾಂತದ ಮಾತುಗಳನ್ನಾಡುತ್ತ, ದುಡಿಯಲಾರದೆ, ಹೆಚ್ಚಾಗಿದ್ದಲ್ಲಿ ಮೇದು-ಬೆಚ್ಚಗಿದ್ದಲ್ಲಿ ಮಲಗುತ್ತ, ವಿಧಿನಿಷೇಧಗಳಿಲ್ಲದೆ ಮನ ಸ್ಸಿಗೆ ಬಂದ ಹಾಗೆ ನಡೆಯುತ್ತ, ನಾಚಿಕೆಯಿಲ್ಲದೆ ಬಾಯಿಗೆ ಬಂದ ಹಾಗೆ ಬೊಗಳುತ್ತ, ಯಾವ ನಿಷ್ಠೆಯ ಗಂಧವೂ ಇಲ್ಲದೆ, ಕ್ರಿಮಿ-ಕೀಟಕಗಳಂತೆ ಕಾಲಹರಣಮಾಡುವವರ ಮಾತುಗಳನ್ನು ನೆನಿಸಿ, ಮುಮುಕ್ಷ ಮಾರ್ಗವನ್ನ ವಲಂಬಿಸಲು ಅಧಿಕಾರಿಯಾದ ನೀನು ವ್ಯರ್ಥ ಕ್ಲೇಶಪಡಬೇಡ! ಪುತ್ರಾ, ಸಂಪೂರ್ಣ ಮೇವಾಡವನ್ನು ಜಯಿಸಿದ ನಿನಗೆ, ಚಿತ್ತೂರನ್ನು ತಕ್ಕೊಳ್ಳು ವದು ಅಸಾಧ್ಯವಿದ್ದಿಲ್ಲ; ಆದರೆ ಸಂಪೂರ್ಣ ಕಾರ್ಯವನ್ನು ನೀನೇ ಮಾಡಿ ಬಿಟ್ಟರೆ, ನಿನ್ನ ಮಗನಾದ ಅಮರಸಿಂಹನು ಮಾಡುವದೇನು? ನೀನು ಬಿತ್ತಿದ ಸ್ವಾತಂತ್ರ್ಯಪ್ರೀತಿಯ ವೃಕ್ಷವು ನಿನ್ನ ಕಾಲಕ್ಕೆ ಫಲಿಸಿ ಹೋಗ ಬೇಕೋ? ನಿನ್ನ ಮಗನಾದ ಈ ಅಮರಸಿಂಹನೂ ಕೀರ್ತಿಶಾಲಿಯಾ ಗಬೇಕೆಂಬ ಉದ್ದೇಶದಿಂದಲೇ ಚಿತ್ತೂರು ನಿನ್ನ ಕೈಸೇರಿರುವದಿಲ್ಲ! ಯಾಕೆ ಅಮರಸಿಂಹ, ಮರಣೋನ್ಮುಖನಾದ ನಿನ್ನ ತಂದೆಗೆ ಏನೆಂದು ಹೇಳುವೆ, ಹೇಳು!

ಈ ಮೇರೆಗೆ ನುಡಿದು ತಪೋಧನನು ಅಮರಸಿಂಹನನ್ನು ನೋಡಲು, ಆತನು ತಪೋಧನನನ್ನು ಭಕ್ತಿಯಿಂದ ವಂದಿಸಿ, ವೀರಾಸನ ಹಾಕಿ ಕೈಜೋ ಡಿಸಿ ತಂದೆಯನ್ನು ಕುರಿತು—ಪೂಜ್ಯನಾದ ಮಹಾರಾಣಾಜೀ, ತಂದೆಯ ಮರಣಕಾಲದ ಇಚ್ಛೆಯನ್ನು ಪೂರ್ಣಮಾಡಲಾರದ ಮಗನು ಅಧಮಾಧಮ ನಲ್ಲವೆ? ನನ್ನ ಮಾತಿನಲ್ಲಿ ವಿಶ್ವಾಸವಿಡಬೇಕು, ಪ್ರತಿಜ್ಞಾ ಪೂರ್ವಕವಾಗಿ ಹೇಳುತ್ತೇನೆ, ನಾನು ಮರಣಪರ್ಯಂತವಾಗಿ ಚಿತ್ತೂರನ್ನು ಉದ್ಧರಿಸಲು

ಯತ್ನಮಾಡುವೆನು! ಈ ಮಾತನ್ನು ಧರ್ಮಸಾಕ್ಷಿಯಾಗಿ ಹೇಳುವೆನು. ನಿಮ್ಮ ಆತ್ಮಬಲವು ನನಗೆ ಸಹಾಯ ಮಾಡಲಿ, ಎಂದು ನುಡಿಯುತ್ತಿರಲು, ತಪೋಧನನು ಪ್ರತಾಪನ ತಲೆಯ ಮೇಲೆ ಕೈಯಿಟ್ಟು ಕೃಪಾದೃಷ್ಟಿಯಿಂದ ಆತನನ್ನು ನೋಡಿದನು!! ಆಗ ಮಹಾರಾಣಾನ ಆತ್ಮವು ಶಾಂತವಾಯಿತು. ಆತನ ಮುಖದ ಮೇಲಿನ ಪ್ರೇತಕಳೆಯು ಹೋಗಿ ದೈವೀತೇಜಸ್ಸು ಮಿನುಗಹತ್ತಿತು. ಪುಣ್ಯಶಾಲಿಯಾದ ಆ ಅಲೌಕಿಕ ಪುರುಷನು ಅಮರಸಿಂಹನೇ ಮೊದಲಾದ ತನ್ನ ಎಲ್ಲ ಪರಿವಾರವನ್ನು ಪ್ರಸನ್ನ ಮುದ್ರೆಯಿಂದ ನೋಡಿ ಸಮಾಧಾನದಿಂದ ಕಣ್ಣುಗಳನ್ನು ಮುಚ್ಚಿದನು! ಕೂಡಲೆ ಯಾವದೋ ಒಂದು ವಿಧದ ಆನಂದದಿಂದ ಎಲ್ಲರ ಹೃದಯದಲ್ಲಿ ಕಂಪವು ಉಂಟಾಗಿ, ಒಂದು ಕ್ಷಣ ಎಲ್ಲರೂ ವಿಸ್ಮೃತಿಯನ್ನು ಹೊಂದಿರಲು, ಸಾತ್ವಿಕಾ-ತಪೋಧನರಿಬ್ಬರೂ ಪ್ರತಾಪನ ಪವಿತ್ರವಾದ ಆತ್ಮವನ್ನು ತಮ್ಮ ಅಖಂಡಾತ್ಮದಲ್ಲಿ ಐಕ್ಯಮಾಡಿಕೊಂಡರು! ಪ್ರತಾಪನ ಹಾಸ್ಯಮುಖದ ಪ್ರಸನ್ನತೆಯನ್ನು ನೋಡಿದರೆ, ಆತನು ಮರಣಹೊಂದಿರುವನೆಂಬದು ಯಾರೂ ಅನ್ನುವಹಾಗಿದ್ದಿಲ್ಲ. "ದೇಹತ್ಯಾಗಿತಾ ಕೀರ್ತಿಮಾಗೇ ಉರಾವೀ" ಎಂಬ ರಾಮದಾಸೋಕ್ತಿಯಂತೆ, ಸತ್ವಸಾರವಾದ ಪ್ರತಾಪನುಕೀರ್ತಿಶೇಷನಾದದ್ದರಿಂದ, ಆತನ ಜಡ ದೇಹ–ವ್ಯಾಪಾರದ ಪರಿಸಮಾಪ್ತಿಯಾದರೂ, ಆತನು ಕೀರ್ತಿರೂಪದಿಂದ ಈಗಲೂ ಜೀವಿಸಿರುವನೆಂತಲೇ ಹೇಳಬೇಕಾಗುವದು!!

—— ಸಮಾಪ್ತ. ——

# ಶೌರ್ಯ--ಸಂಜೀವ

ಅಥವಾ

# ಸತ್ತ್ವಸಾರ.

ಇದೊಂದು ಸುಂದರವಾದ ರಜಪೂತರ ಐತಿಹಾಸಿಕ ಕ
ಮೇವಾಡದ ಸುಪ್ರಸಿದ್ಧ ಮಹಾರಾಣಾ—ಪ್ರತಾಪಸಿಂಹನು
ರಿಯ ನಾಯಕನಾಗಿದ್ದಾನೆ. ಮಹಾತ್ಮರ ಸತ್ವದಿಂದಲ್ಲದೆ ಕೇ
ಉಪಕರಣಗಳಿಂದ ಮಹಾಕಾರ್ಯಗಳು ಆಗುವದಿಲ್ಲವೆಂತಲೂ
ಯನ್ನು ದ್ರವ್ಯವು ತಾನಾಗಿ ಹೊಂದುವದೆಂತಲೂ ಈ ಕಾದ
ಸುವದು. ಇದನ್ನು ಕನ್ನಡಿಗರು ಈ ಕಾಲದಲ್ಲಿ ಓದಿಯೇ
ಆಗ್ರಹದಿಂದ ಹೇಳುವೆನು.

— ಬೆಲೆ ೧-೮-೦ —

ಲೇಖಕರು— ವೆ. ತಿ. ಗಳಗನಾ

FROM—

**S. M. JOSHI**

*Galaganath Surasa Grantha*

Jawali Peth DHARWAR